ಬಿ.ಎಂ.ಶ್ರೀ. ೧೨೫ನೇ ಜನ್ಮದಿನದ ಸ್ಮರಣೆ

ಬಿ.ಎಂ.ಶ್ರೀಕಂಠಯ್ಯ

ಜೀವನ–ಸಾಧನೆ

ಸಂಪಾದಕರು

ಡಾ॥ ನಾ. ಗೀತಾಚಾರ್ಯ

ಪ್ರೊ॥ ಕೆ. ಎಸ್. ದೇಶಪಾಂಡೆ



ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

'ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ'ವನ್ನು ಪ್ರೊ॥ ಎಂ.ವಿ. ಸೀತಾರಾಮಯ್ಯನವರು ದಿನಾಂಕ ೬ ಮೇ ೧೯೭೯ರಲ್ಲಿ ಸ್ಥಾಪಿಸಿದರು. ರಾಷ್ಟ್ರಕವಿ ಕುವೆಂಪು ಅವರು ೧೦ ಮಾರ್ಚ್ ೧೯೮೦ರಂದು ಉದ್ಘಾಟಿಸಿದರು. ಕರ್ನಾಟಕ ಸರ್ಕಾರ. ಬೃಹತ್ ಬೆಂಗಳೂರು ನಗರಪಾಲಿಕೆ, ದಾನಿಗಳ ಮತ್ತು ಸಾರ್ವಜನಿಕರ ಸಹಕಾರ ಸಹಾಯಗಳಿಂದ ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿ ಮೂರು ಮಹಡಿಗಳ 'ಬಿ.ಎಂ.ಶ್ರೀ. ಕಲಾಭವನ' ನಿರ್ಮಾಣವಾಗಿದೆ. ಇಲ್ಲಿ 'ಆಕರ ಗ್ರಂಥಾಲಯ' ಮತ್ತು 'ಪ್ರಾಚೀನ ಹಸ್ತಪ್ರತಿ ಸಂಗ್ರಹಾಲಯ'ಗಳನ್ನು ನಿರ್ವಹಿಸಲಾಗುತ್ತಿದೆ. ಪ್ರತಿಷ್ಠಾನದ 'ಪ್ರೊ॥ ಎಂ.ವಿ. ಸೀತಾರಾಮಯ್ಯ ಸ್ನಾತಕೋತ್ತರ ಸಂಶೋಧನ ಕೇಂದ್ರ'ದಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆಯನ್ನು ಪಡೆದ ಪಿಎಚ್.ಡಿ ಹಾಗೂ ಎಂ.ಫಿಲ್., ಅಧ್ಯಯನಗಳು ನಡೆಯುತ್ತಿವೆ. ಪ್ರತಿಷ್ಠಾನ ಅಪರೂಪದ ಪ್ರಾಚೀನ ಹಸ್ತಪ್ರತಿಶಾಸ್ತ್ರ, ಹಸ್ತಪ್ರತಿ ಅಧ್ಯಯನ, ಹಳಗನ್ನಡ ಅಧ್ಯಯನ ತರಗತಿಗಳನ್ನು-ಶಿಬಿರಗಳನ್ನು ಹಾಗೂ ದತ್ತಿ ಉಪನ್ಯಾಸ, ವಿಚಾರಗೋಷ್ಠಿಗಳನ್ನು ನಡೆಸುತ್ತಿದೆ. ಪ್ರತಿಷ್ಠಾನ ತ್ರೈಮಾಸಿಕ 'ವಾರ್ತಾಪತ್ರ'ವನ್ನು ಹಾಗೂ ಅರ್ಧವಾರ್ಷಿಕ ವಿದ್ವತ್‌ಪತ್ರಿಕೆ 'ಕರ್ನಾಟಕ ಲೋಚನ'ವನ್ನೂ ವಿದ್ವತ್‌ಪೂರ್ಣ ಗ್ರಂಥಗಳನ್ನೂ ಪ್ರಕಟಿಸುತ್ತಿದೆ. ನಿರಂತರವಾಗಿ ಸಂಶೋಧನಾತ್ಮಕ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ. ೨೦೦೪ರಲ್ಲಿ ಪ್ರತಿಷ್ಠಾನ ರಜತಮಹೋತ್ಸವವನ್ನು ಆಚರಿಸಿತು. ಮಂಡ್ಯ ಜಿಲ್ಲೆಯ ಬಿ.ಎಂ.ಶ್ರೀ.ಯವರ ಊರಾದ ಬೆಳ್ಳೂರಿನಲ್ಲೂ ಪ್ರತಿಷ್ಠಾನದ ಶಾಖೆಯಿದೆ. ಅವರ ಮನೆಯಿದ್ದ ಸ್ಥಳದಲ್ಲಿ ನಿರ್ಮಿಸಿರುವ 'ಆಚಾರ್ಯ ಬಿ.ಎಂ.ಶ್ರೀ. ಶತಮಾನ ಭವನ'ದಲ್ಲಿ ಮತ್ತು ಬೆಂಗಳೂರಿನ ಬಿ.ಎಂ.ಶ್ರೀ. ಕಲಾಭವನದ 'ಎಂ.ವಿ.ಸೀ. ಸಭಾಂಗಣ'ದಲ್ಲಿ ಪ್ರತಿಷ್ಠಾನದ ಮತ್ತು ಸಂಘ ಸಂಸ್ಥೆಗಳ ಸಾಹಿತ್ಯ-ಸಾಂಸ್ಕೃತಿಕ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿರುತ್ತವೆ. ಕನ್ನಡ ಸಾಹಿತ್ಯ ಸಂಸ್ಕೃತಿಯ ಉನ್ನತಮಟ್ಟದ ಸಂಶೋಧನ ಸಂಸ್ಥೆಯಾಗಿ ಪ್ರತಿಷ್ಠಾನ ಮಾನ್ಯವಾಗಿದೆ.

ಬಿ.ಎಂ.ಶ್ರೀ. ೧೨೫ನೇ ಜನ್ಮವರ್ಷದ ಸ್ಮರಣೆ

ಬಿ.ಎಂ.ಶ್ರೀಕಂಠಯ್ಯ : ಜೀವನ-ಸಾಧನೆ

(ಶತಮಾನೋತ್ಸವ ವಿಚಾರಸಂಕಿರಣದ ಲೇಖನಸಂಗ್ರಹ)

ಸಂಪಾದಕರು

ಡಾ|| ನಾ. ಗೀತಾಚಾರ್ಯ

ಪ್ರೊ|| ಕೆ.ಎಸ್. ದೇಶಪಾಂಡೆ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಎಂ.ವಿ.ಸೀ. ಸಂಶೋಧನ ಕೇಂದ್ರ

ಬಿ.ಎಂ.ಶ್ರೀ. ಕಲಾಭವನ

೩ನೆಯ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ,

ಬೆಂಗಳೂರು – ೫೬೦೦೧೯.

B.M. SRIKANTAIA: JEEVANA - SAADHANE (Centenary Seminar Papers on Life and contributions of B.M. Srikantaia pioneer of Modern Kannada literature.) Edited by Dr. N. Geethacharya, Prof. K.S. Desha Pande and published by B.M.Sri. Smaraka Pratishtana, M.V.Si. Research Centre, B.M.Sri. Kalabhavan, N.R. Colony, Bangalore - 560 019. Karnataka, India, 2009.

ಪುಟಗಳು : xiv + ೧೫೮

Price : **Rs. : 100/-**

ಬೆಲೆ : ನೂರು ರೂಪಾಯಿ

ಪ್ರಕಟನ ಸಮಿತಿ

ಪ್ರೊ॥ ಎಲ್.ಎಸ್.ಶೇಷಗಿರಿರಾವ್
ಪ್ರೊ॥ ಅ.ರಾ. ಮಿತ್ರ
ಪ್ರೊ॥ ಎಂ.ಎಚ್.ಕೃಷ್ಣಯ್ಯ
ಪ್ರೊ॥ ಜಿ. ಅಶ್ವತ್ಥನಾರಾಯಣ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಪದಾಧಿಕಾರಿಗಳು

ನಾಡೋಜ ಡಾ. ಜಿ. ನಾರಾಯಣ
ಗೌರವ ಅಧ್ಯಕ್ಷರು

ಡಾ. ಪಿ.ವಿ. ನಾರಾಯಣ
ಅಧ್ಯಕ್ಷರು

ಡಾ. ನಾ. ಗೀತಾಚಾರ್ಯ
ಗೌ. ಕಾರ್ಯದರ್ಶಿ

ಶ್ರೀ ಎಸ್.ವಿ. ಶ್ರೀನಿವಾಸರಾವ್
ವ್ಯ. ಕಾರ್ಯದರ್ಶಿ

ಶ್ರೀ ಎಸ್.ಟಿ. ರಾಧಾಕೃಷ್ಣ
ಕೋಶಾಧಿಕಾರಿ

ಡಿಟಿಪಿ : ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ

ಮುದ್ರಣ

ಇಳಾ ಮುದ್ರಣ
ನಂ. 36, 40 ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - 560 026
ದೂರವಾಣಿ : 26757159

ಅರ್ಪಣೆ



ರಾ.ಹ. ದೇಶಪಾಂಡೆ

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪಕರು

ಅಧ್ಯಕ್ಷರ ಮಾತು

ಸಂಶೋಧನೆ ಎಂದರೆ ಹುಡುಕಾಟ. ಕಣ್ಣ ಮುಂದಿಲ್ಲದಿರುವುದರ ಸುಳುಹು ಹಿಡಿದು ಅದನ್ನು ಹೊರತೆಗೆಯುವುದು. ಅದರ ಒಳಗನ್ನು ಬಗೆಯುವುದು. ಬಗೆದದ್ದು ಎಷ್ಟರಮಟ್ಟಿಗೆ ಸಮಕಾಲೀನತೆಗೆ ಪ್ರಸ್ತುತವೆಂಬುದರ ಬಗ್ಗೆ ವಿವೇಚಿಸುವುದು ಇವು ಸಂಶೋಧನೆಯ ವಿವಿಧ ಆಯಾಮಗಳು. ಕಾಲದ ಮಹಿಮೆಗೆ ಒಳಗಾಗಿ ಎದ್ದು ಕಾಣುವುದು, ಅಡಗುವುದು, ಹೊಸತೆನಿಸುವುದು, ಪ್ರಾಮುಖ್ಯಕ್ಕೆ ಬರುವುದು ನಡೆಯುತ್ತಲೇ ಇರುತ್ತದೆ. ಹಿಂದೆ ಪ್ರಸ್ತುತವಾದದ್ದು ಹೊಸ ಸಮಕಾಲೀನತೆಗೆ ಅಪ್ರಸ್ತುತವೆನಿಸಬಹುದು. ಅಂತೆಯೇ ಅಪ್ರಸ್ತುತವೆನಿಸಿದ್ದು ಅಥವಾ ನಮ್ಮ ಊಹೆಗೆ ಬಾರದ್ದು ಬಹು ಪ್ರಮುಖವೆನಿಸಬಹುದು. ಹೀಗಾಗಿ ಮೂಲದ್ರವ್ಯ ಒಂದೇ ಆದರೂ ಬದುಕಿನ ಸ್ವರೂಪ ಬದಲಾಗುತ್ತಲೇ ಹೋಗುತ್ತದೆ. ಅದನ್ನು ನಮ್ಮ ಕನ್ನಡಿಯಲ್ಲಿ ಹಿಡಿದಿಡುವ ಪ್ರಯತ್ನವೇ ಸಂಶೋಧನೆ.

ಇದು ಸಾಹಿತ್ಯಕ್ಕೂ ಅನ್ವಯಿಸುವ ಮಾತು. ಸಾಹಿತ್ಯದ ಮೂಲಕ ವ್ಯಕ್ತವಾಗುವ ಬದುಕಿನ ಅಸಂಖ್ಯ ಮಗ್ಗುಲುಗಳನ್ನು ಅನಾವರಣಗೊಳಿಸುವ ಪ್ರಯತ್ನದಲ್ಲಿ ಅಧ್ಯಯನಶೀಲವ್ಯಕ್ತಿ ತೊಡಗಿಕೊಳ್ಳುತ್ತಾನೆ. ಸಾಹಿತ್ಯದ ಹೊರರೂಪ ಬದಲಾಗುವುದೂ ಜೀವಂತ ಬದುಕಿನ ಚಲನಶೀಲತೆಗೆ ಅನುಗುಣವಾಗಿ ಅಲ್ಲಿ ಎದ್ದು ತೋರುವ ಪ್ರವೃತ್ತಿಗಳು ವ್ಯತ್ಯಾಸಗೊಳ್ಳುವುದೂ ಸಹಜ. ಆದರೆ ಇವೆಲ್ಲದರ ಹಿಂದಿನ ಅನುಭವದ್ರವ್ಯ ಒಂದೇ. ಅಂದರೆ ಸಾಹಿತ್ಯ ನಿರಂತರ. ಅದರ ಹೊರರೂಪ ಬದಲಾಗುವಂಥದು. ಸಂಶೋಧನೆ ಮಾಡಬಯಸುವವನಿಗೆ ಒಳಗೇನಿದೆ ಎಂಬ ಸಹಜ ಕುತೂಹಲ, ಅದರ ಆಂತರ್ಯವನ್ನು ವಿಶ್ಲೇಷಿಸುವ ಸೂಕ್ಷ್ಮತೆ ಹಾಗೂ ಬದುಕಿನೊಂದಿಗೆ ಅದು ಪಡೆಯುವ ಸಂಬಂಧ ಇವುಗಳನ್ನು ಅನ್ವೇಷಿಸುವ ಬುದ್ಧಿ ಇವುಗಳು ಅವಶ್ಯಕ.

ಈ ಕಾರಣದಿಂದಲೇ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನವು ಸಂಶೋಧನೆಯನ್ನು ತನ್ನ ಮುಖ್ಯ ಚಟುವಟಿಕೆಯನ್ನಾಗಿ ಹೊಂದಿರುವುದು. ಕಂಡುಕೊಂಡ ವಾಸ್ತವದ ಹೊಸ ಮಗ್ಗುಲನ್ನು ಪುಸ್ತಕರೂಪದಲ್ಲಿ ಪ್ರಕಟಿಸುವ, ಅಂಥವುಗಳ ಬಗ್ಗೆ ಚರ್ಚೆ-ಸಂವಾದಗಳನ್ನೇರ್ಪಡಿಸುವ ಕಾರ್ಯವನ್ನು ಪ್ರತಿಷ್ಠಾನವು ಮೊದಲಿನಿಂದ ಮಾಡುತ್ತ ಬಂದಿದೆ. ಯುವಜನತೆಯನ್ನು ಸಂಶೋಧನೆಯ ಕ್ಷೇತ್ರಕ್ಕೆ ಸಿದ್ಧಗೊಳಿಸುವ ಸಲುವಾಗಿ ಹಳಗನ್ನಡ ತರಗತಿಗಳು, ಹಸ್ತಪ್ರತಿ ಅಧ್ಯಯನದಂತಹ ಕಾರ್ಯಗಳ ಜೊತೆಗೆ, ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆಯನ್ನು ಪಡೆದು ಎಂ.ಫಿಲ್. ಮತ್ತು ಪಿಎಚ್.ಡಿ ಪದವಿಗಳಿಗೆ ಅಭ್ಯರ್ಥಿಗಳನ್ನು ಸಿದ್ಧಗೊಳಿಸುವ ಮೂಲಕ ಯುವ ಸಂಶೋಧಕರ ಪಡೆಯನ್ನು ಕಟ್ಟುವ ಕಾರ್ಯಕ್ಕೂ ಈಗ ತೊಡಗಿದೆ.

ಪ್ರತಿಷ್ಠಾನದಿಂದ ಪ್ರಕಟಗೊಳ್ಳುತ್ತಿರುವ ಪ್ರಸ್ತುತ 'ಬಿ.ಎಂ.ಶ್ರೀಕಂಠಯ್ಯ - ಜೀವನ ಸಾಧನೆ' ಗ್ರಂಥವು ೧೯೮೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಬಿ.ಎಂ.ಶ್ರೀ. ಅವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ಧಾರವಾಡದಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಮಂಡಿತವಾದ ಲೇಖನಗಳ ಸಂಕಲನ. ನಾಡಿನ ಹಿರಿಯ ಸಾಹಿತಿಗಳು ಕನ್ನಡ ನವೋದಯದ ಪ್ರಮುಖ ರೂವಾರಿಯಾದ ಶ್ರೀ ಅವರಿಗೆ ಸಲ್ಲಿಸಿದ ವಿಚಾರಾತ್ಮಕ ನುಡಿನಮನ ಇದು; ಶ್ರೀ ಅವರ ನಾಡು-ನುಡಿ ಸೇವೆಯ ವಿವಿಧ ಮಗ್ಗುಲುಗಳನ್ನೂ, ಅವರ ಸಾಹಿತ್ಯ ಕೃತಿಗಳನ್ನೂ ಸ್ವೋಪಜ್ಞವಾಗಿ ವಿವೇಚಿಸುವ ಈ ಲೇಖನಗಳು ಶ್ರೀಸಾಹಿತ್ಯ ಹಾಗೂ ಕನ್ನಡ ನವೋದಯದ ಅಧ್ಯಯನಗಳ ಮೇಲೆ ಹೊಸ ಬೆಳಕು ಚೆಲ್ಲುವಂತಹವು. ಅಕಾಡೆಮಿಯೇ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಯೋಜನೆಯು ಕಾರಣಾಂತರಗಳಿಂದ ಆಗುಗೊಳ್ಳಲಿಲ್ಲ. ಅಂದಿನ ವಿಚಾರ ಸಂಕಿರಣದ ಸಂಚಾಲಕರಾಗಿದ್ದ ಪ್ರೊ. ಕೆ.ಎಸ್. ದೇಶಪಾಂಡೆ ಅವರು ಕೆಲ ತಿಂಗಳ ಹಿಂದೆ ಪ್ರತಿಷ್ಠಾನವನ್ನು ಸಂಪರ್ಕಿಸಿ ಈ ಲೇಖನಗಳನ್ನು ಪ್ರಕಟಿಸಲು ಸಾಧ್ಯವೇ ಎಂದು ವಿಚಾರಿಸಿದರು, ಅದನ್ನೊಪ್ಪಿದ ಪ್ರತಿಷ್ಠಾನವು ಈ ಗ್ರಂಥವನ್ನೀಗ ಹೊರತರುತ್ತದೆ. ಶ್ರೀ ಅವರ ಹುಟ್ಟಿದ ೧೨೫ನೇ ವರ್ಷದಲ್ಲಿ ಇದು ಪ್ರಕಟವಾಗುತ್ತಿರುವುದು ಸಂತಸದ ವಿಷಯ. ಪ್ರತಿಷ್ಠಾನದ ಮೇಲಿನ ವಿಶ್ವಾಸದಿಂದ ಈ ಕೆಲಸವನ್ನು ನಮಗೆ ಒಪ್ಪಿಸಿದ ಪ್ರೊ. ಕೆ.ಎಸ್. ದೇಶಪಾಂಡೆ ಅವರಿಗೂ, ಲೇಖನಗಳನ್ನು ಆಮೂಲಾಗ್ರವಾಗಿ ಓದಿ, ಜೋಡಿಸಿ, ಅನುಬಂಧಗಳನ್ನು ಸೇರಿಸಿ ಅಚ್ಚುಕಟ್ಟಾದ ಸಂಪಾದನ ಕಾರ್ಯವನ್ನು ನೆರವೇರಿಸಿದ ಡಾ. ನಾ. ಗೀತಾಚಾರ್ಯ ಅವರಿಗೂ ಪ್ರತಿಷ್ಠಾನವು ಆಭಾರಿಯಾಗಿದೆ.

■ ಡಾ.ಪಿ.ವಿ. ನಾರಾಯಣ
ಅಧ್ಯಕ್ಷ

ಸಂಪಾದಕರ ಮಾತು

ಆಧುನಿಕ ಕನ್ನಡ ಸಾಹಿತ್ಯದ ಯುಗಪ್ರವರ್ತಕ ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರ ಸ್ಮಾರಕವಾಗಿ ಕರ್ನಾಟಕದಲ್ಲಿರುವ ಏಕೈಕ ಸಂಸ್ಥೆ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ. ಇವರ ಅನೇಕ ಶಿಷ್ಯರಲ್ಲಿ ಒಬ್ಬರಾದ ಪ್ರೊ|| ಎಂ.ವಿ. ಸೀತಾರಾಮಯ್ಯನವರ ದೂರದೃಷ್ಟಿಯ ಫಲವಾಗಿ ಇಂದು ಈ ಸಂಸ್ಥೆ ಕನ್ನಡನಾಡಿನ ಪ್ರತಿಷ್ಠಿತ ಸಂಶೋಧನ ಕೇಂದ್ರವೆನಿಸಿದೆ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಕ್ಷೇತ್ರಗಳಿಗೂ ಮೊದಲಿಗರಾದವರು, ಎಲ್ಲದಕ್ಕೂ ನಾಂದಿ ಹಾಡಿದವರು ಬಿ.ಎಂ.ಶ್ರೀಯವರು. ಯುಗದ ಕವಿ ಕುವೆಂಪು ಆದಿಯಾಗಿ ಎಲ್ಲ ಪ್ರಮುಖ ಸಾಹಿತಿ–ವಿದ್ವಾಂಸರ ಮಹಾಗುರುಗಳಾದ 'ಬಿ.ಎಂ.ಶ್ರೀಯವರ ಸ್ಮಾರಕ, ಈ ಹೊತ್ತಿನವರೆಗೂ ಈ ಸಂಸ್ಥೆಯನ್ನು ಬಿಟ್ಟರೆ ಇನ್ನೊಂದಿಲ್ಲ. ಇವರ ಶಿಷ್ಯರ ಹೆಸರುಗಳಲ್ಲಿ ಅಧ್ಯಯನ ಕೇಂದ್ರಗಳಿವೆ. ಪ್ರಾಧ್ಯಾಪಕ ಪೀಠಗಳಿವೆ. ಆದರೆ ಇವರ ಹೆಸರಿನಲ್ಲಿ ಯಾವೊಂದು ವಿಶ್ವವಿದ್ಯಾನಿಲಯದಲ್ಲೂ ಒಂದು ಪ್ರಾಧ್ಯಾಪಕ ಪೀಠವೂ ಇಲ್ಲದಿರುವುದೊಂದು ಚೋದ್ಯ. ಕರ್ನಾಟಕ ಸರ್ಕಾರ ಕವಿಗಳ ಹುಟ್ಟೂರುಗಳಲ್ಲಿ ಅವರ ಸ್ಮಾರಕ ಭವನ ಕಟ್ಟಿ ಅವರುಗಳ ಹೆಸರಿನಲ್ಲಿ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸಿದೆ. ಆದರೂ ಬಿ.ಎಂ.ಶ್ರೀಯವರ ಹೆಸರಿನಲ್ಲಿಲ್ಲ. ಎಂ. ವಿ. ಸೀತಾರಾಮಯ್ಯನವರೇ ಬಿ.ಎಂ.ಶ್ರೀ ಶತಮಾನೋತ್ಸವ ಸಂದರ್ಭದಲ್ಲಿ ಬಿ.ಎಂ.ಶ್ರೀಯವರ ಊರಾದ ಬೆಳ್ಳೂರಿನಲ್ಲಿ ಸ್ಮಾರಕ ಭವನವನ್ನು ಸರ್ಕಾರದ ನೆರವಿನಿಂದಲೇ ಸ್ಥಾಪಿಸಿದರು. ಈಚೆಗೆ ಅವರ ಹುಟ್ಟೂರಾದ ಸಂಪಿಗೆಯಲ್ಲೂ ಸರ್ಕಾರವೇ ಸ್ಮಾರಕ ಭವನ ನಿರ್ಮಿದೆ. ಆದರೂ ಸರ್ಕಾರ ಸಂಶೋಧನ ಕೇಂದ್ರ

ರೂಪಿಸಿಲ್ಲ. ಇನ್ನು ಮುಂದಾದರೂ ಇವರ ಹೆಸರಿನಲ್ಲಿ ಸರ್ಕಾರ ಸಂಶೋಧನ ಕೇಂದ್ರ ಸ್ಥಾಪಿಸುವ ಮತ್ತು ವಿ.ವಿ.ಗಳು ಪ್ರಾಧ್ಯಾಪಕ ಪೀಠ ಆರಂಭಿಸುವ ಮೂಲಕ ಈ ಲೋಪವನ್ನು ಅಳಿಸಿಹಾಕಬೇಕಾಗಿದೆ. ಅವರ ಶಿಷ್ಯರುಗಳಿಗೆ ಸ್ಮಾರಕಗಳನ್ನು ಮಾಡಿ ಅವರಿಗೆ ಮಾಡದಿದ್ದರೆ ಅದು ಅವರಿಗೆ ನಷ್ಟವಲ್ಲ, ನಮಗೆ ಕರ್ತವ್ಯ ಲೋಪ. ನಾವು ಬಿ.ಎಂ.ಶ್ರೀಯವರಿಗೆ ಸ್ಮಾರಕ ಮಾಡಲಿ ಬಿಡಲಿ ಅವರ ಹೆಸರು ಕನ್ನಡ ಸಾಹಿತ್ಯ ಲೋಕದಲ್ಲಿ ಶಾಶ್ವತವಾಗಿರುತ್ತದೆ. ಆಗಲ್ಲ ಈ ಕೊರತೆ ಕನ್ನಡಿಗರನ್ನು ಕಾಡುತ್ತಿರುತ್ತದೆ.

೧೯೮೪ರಲ್ಲಿ ರಾಜ್ಯಾದ್ಯಂತ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಬಿ.ಎಂ.ಶ್ರೀ. ಶತಮಾನೋತ್ಸವ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ನಡೆಸಿತು. ನಾಡು–ಹೊರನಾಡುಗಳಲ್ಲಿ ನೂರಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಸಂಘಟಿಸಿತ್ತು. ಹತ್ತಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿತ್ತು. ಅವುಗಳಲ್ಲಿ 'ಶ್ರೀನಿಧಿ' ಸಂಸ್ಮರಣ ಸಂಪುಟ ಮತ್ತು 'ಬಿ.ಎಂ.ಎಸ್. ದಿ ಮ್ಯಾನ್ & ಹಿಸ್ ಮಿಷನ್' ಎಂಬ ಇಂಗ್ಲೀಷ್ ಪುಸ್ತಕ ಹಾಗೂ 'ಶ್ರೀಗಂಧ' ಸ್ಮರಣ ಸಂಚಿಕೆಗಳು ಮುಖ್ಯವಾದವು. ಪ್ರತಿಷ್ಠಾನದೊಂದಿಗೆ ಸೇರಿ ಮತ್ತು ಸ್ವತಂತ್ರವಾಗಿ ಅನೇಕ ಸಂಘ ಸಂಸ್ಥೆಗಳೂ ಉಪಯುಕ್ತ ಕಾರ್ಯಕ್ರಮಗಳನ್ನು ನಡೆಸಿದವು. ಮೈಸೂರು ವಿಶ್ವವಿದ್ಯಾಲಯ 'ಶ್ರೀಸಾಹಿತ್ಯ' ಸಮಗ್ರ ಸಂಪುಟ ಪ್ರಕಟಿಸಿತು. ಕನ್ನಡ ಸಾಹಿತ್ಯ ಪರಿಷತ್ತು 'ಶ್ರೀಉತ್ಸವ' ಸ್ಮರಣ ಸಂಪುಟವನ್ನು ಪ್ರಕಟಿಸಿತು. ಶ್ರೀಯವರ ಹೆಸರಿನಲ್ಲಿ ಅನೇಕ ಕಡೆ ರಸ್ತೆ, ವೃತ್ತಗಳು ನಾಮಕರಣವಾದವು. ಸಾಹಿತಿಗಳ ಕಲಾವಿದರ ಬಳಗ ಬೆಂಗಳೂರಿನಲ್ಲಿ ಬಿ.ಎಂ.ಶ್ರೀ. ಪ್ರತಿಮೆ ಯನ್ನು ಸ್ಥಾಪಿಸಿತು.

ಬಿ.ಎಂ.ಶ್ರೀ ಯವರ ಕೊನೆದಿನಗಳ ಕಾರ್ಯಕ್ಷೇತ್ರವಾಗಿದ್ದ ಧಾರವಾಡದಲ್ಲಿ ಜನವರಿ ೩, ೧೯೮೪ ರಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಶತಮಾನೋತ್ಸವ ವಿಚಾರ ಗೋಷ್ಠಿಯನ್ನು ನಡೆಸಿತ್ತು. ಆ ಗೋಷ್ಠಿಯ ಪ್ರಬಂಧಗಳಿಗೆ ಇದೀಗ ಮೋಕ್ಷ ಕೂಡಿ ಬಂದಿದೆ. ಆ ವಿಚಾರಗೋಷ್ಠಿಯ ಸಂಚಾಲಕರಾಗಿದ್ದ ಪ್ರೊ॥ ಕೆ. ಎಸ್. ದೇಶಪಾಂಡೆಯವರಿಂದ 'ಹಿಂದೆ ನಡೆದ ವಿಚಾರಗೋಷ್ಠಿಯ ಪ್ರಬಂಧಗಳು ಪ್ರಕಟವಾಗಿಲ್ಲ. ಅದರ ಹಸ್ತಪ್ರತಿಯ ಒಂದು ಪ್ರತಿ ನನ್ನಲ್ಲಿ ನಾಶವಾಗುವ ಸ್ಥಿತಿಯಲ್ಲಿದೆ. ನೀವಾದರೂ ಪ್ರಕಟಿಸಲು ಸಾಧ್ಯವೇ' ಎಂದು ಪತ್ರ ಬಂದಾಗ ನಮಗೆ ಆಶ್ಚರ್ಯವೂ ಸಂತೋಷವೂ ಒಟ್ಟಿಗೇ ಆಯಿತು. ಆಶ್ಚರ್ಯವೆಂದರೆ ಏಕೆ ಈವರೆಗೆ ಈ ಅಮೂಲ್ಯ ಪ್ರಬಂಧಗಳು ಪ್ರಕಟವಾಗಲಿಲ್ಲವೆಂದು, ಸಂತೋಷವೆಂದರೆ ನಮಗೆ ಪ್ರಕಟಿಸುವ ಯೋಗ ದೊರೆಯಿತೆಂದು. ಕೂಡಲೆ ಪ್ರಕಟನ ಸಮಿತಿಯ ಅಭಿಪ್ರಾಯ ಕೇಳಲಾಗಿ ಅವರೆಲ್ಲ ಸಂತೋಷದಿಂದ ಒಪ್ಪಿ ಪ್ರಕಟಿಸಲು ಅನುಮತಿಯಿತ್ತರು. ಈ ವಿಷಯವನ್ನು ದೇಶಪಾಂಡೆಯವರಿಗೆ ತಿಳಿಸಿದಾಗ ಅವರೂ ತುಂಬ ಸಂತೋಷ

ಪಟ್ಟರು. ಇದೀಗ ಯೋಗಾಯೋಗವೆಂಬಂತೆ ಬಿ.ಎಂ.ಶ್ರೀ ಅವರ ೧೨೫ನೇ ವರ್ಷದ ನೆನಪಿನ ಪ್ರಕಟಣೆಯಾಗಿ ನಿಮ್ಮ ಕೈಯಲ್ಲಿದೆ.

ಈ ಗ್ರಂಥದಲ್ಲಿ ಸಿದ್ಧ ಪ್ರಸಿದ್ಧರ ಅಮೂಲ್ಯ ಲೇಖನಗಳಿವೆ. ಅವರುಗಳಲ್ಲಿ ಕೆಲವರು ನಮ್ಮನ್ನು ಗಲಿದ್ದಾರೆ. ಕೆಲವು ಲೇಖನಗಳು ಅವರವರ ಲೇಖನ ಸಂಕಲನಗಳಲ್ಲಿ ಈಗಾಗಲೆ ಪ್ರಕಟವಾಗಿ ಸಾಹಿತ್ಯವಲಯದಲ್ಲಿ ಚರ್ಚಿತವಾಗಿವೆ. ಇನ್ನು ಕೆಲವು ಈ ಗ್ರಂಥದ ಮೂಲಕವೇ ಬೆಳಕು ಕಾಣುತ್ತಿವೆ. ಈ ಮೂಲಕ ವಿಚಾರಗೋಷ್ಠಿಯ ಸಂಕಲನವಾಗಿ ಇಲ್ಲಿ ಇಡಿಯಾಗಿ ಮೂಡಿಬಂದಿದೆ. ಹಸ್ತಪ್ರತಿಯಲ್ಲಿರುವಂತೆಯೇ ಲೇಖನಗಳನ್ನು ಮುದ್ರಿಸಲಾಗಿದ್ದು, ಬಿ.ಎಂ.ಶ್ರೀ ಸಾಹಿತ್ಯವನ್ನು ಪುನರ್‌ಮೌಲ್ಯೀಕರಣ ಗೊಳಿಸಿರುವ ಇನ್ನೊಂದು ಮುಖ್ಯ ಕೃತಿಯಾಗಿ ಈ ಗ್ರಂಥ ಹೊರಹೊಮ್ಮಿದೆ. ಇಂತಹ ಆಕರ ಗ್ರಂಥದ ಪ್ರಕಟನೆಗೆ ಕಾರಣರಾದ ಈ ಗ್ರಂಥದ ಎಲ್ಲ ಮಾನ್ಯ ಲೇಖಕ ವಿದ್ವಾಂಸರನ್ನು ಮತ್ತು ಸಾಹಿತ್ಯ ಅಕಾಡೆಮಿಯನ್ನು ಬಿ.ಎಂ.ಶ್ರೀ ಪ್ರತಿಷ್ಠಾನ ಅತ್ಯಂತ ಕೃತಜ್ಞತೆಯಿಂದ ನೆನೆಯುತ್ತದೆ.

ಇಂಥ ಅಮೂಲ್ಯ ಗ್ರಂಥವನ್ನು ಪ್ರತಿಷ್ಠಾನದ ಮೂಲಕ ಪ್ರಕಟಿಸಲು ಅವಕಾಶ ಕಲ್ಪಿಸಿದ ಪ್ರೊ॥ ದೇಶಪಾಂಡೆಯವರಿಗೆ ವಿಶೇಷವಾಗಿ ಪ್ರತಿಷ್ಠಾನ ಆಭಾರಿಯಾಗಿದೆ. ಇದರ ನೈಜ ಸಂಪಾದಕರು ಅವರೇ ಆದರೂ ಮುದ್ರಣಕ್ಕೆ ಅಣಿಮಾಡುವ ಹೊಣೆಯಿತ್ತು ಅವರೊಂದಿಗೆ ನನ್ನನ್ನೂ ಸಂಪಾದಕನನ್ನಾಗಿಸಿದ ಪ್ರಕಟನ ಸಮಿತಿಯವರಿಗೂ ಅಧ್ಯಕ್ಷರಾದ ಡಾ॥ ಪಿ.ವಿ. ನಾರಾಯಣ ಮತ್ತು ಪದಾಧಿಕಾರಿಗಳಿಗೂ ನಾನು ಆಭಾರಿಯಾಗಿದ್ದೇನೆ. ಈ ಗ್ರಂಥದಲ್ಲಿ ಬರುವ ಇಂಗ್ಲಿಷ್ ಉಲ್ಲೇಖಗಳನ್ನು ತಿದ್ದಿ ಬೆನ್ನುಡಿಯನ್ನೂ ಬರೆದು ಸಹಕರಿಸಿರುವ ಪ್ರೊ॥ ಎಲ್.ಎಸ್.ಶೇಷಗಿರಿರಾವ್ ಅವರಿಗೆ ನನ್ನ ನಮಸ್ಕಾರಗಳು ಸಲ್ಲುತ್ತವೆ. ಡಿ.ಟಿ.ಪಿ. ಮಾಡಿದ ಪ್ರತಿಷ್ಠಾನದ ಕುಮಾರಿ ಸವಿತ ಅವರಿಗೂ ಕರಡಚ್ಚು ತಿದ್ದಿ ಸಹಕರಿಸಿದ ಗೆಳೆಯ ಡಾ॥ ಮುದ್ದುವೀರಪ್ಪ ಅವರಿಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿದ ಇಳಾ ಮುದ್ರಣದವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಜನವರಿ ೩, ೨೦೦೯ ■ ಡಾ. ನಾ. ಗೀತಾಚಾರ್ಯ

ನನ್ನ ಮಾತು

ಜನವರಿ ೩, ೧೯೮೮ರಂದು, ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರ ಜನ್ಮಶತಮಾನೋತ್ಸವ ವರ್ಷದ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ವತಿಯಿಂದ ಅದರ ಅಧ್ಯಕ್ಷರಾಗಿದ್ದ ಸನ್ಮಾನ್ಯರಾಗಿದ್ದ ಡಾ. ಹಾ.ಮಾ.ನಾಯಕರ ಸೂಚನೆಯ ಮೇರೆಗೆ ಶ್ರೀಯವರ ಅಂತಿಮ ಕಾರ್ಯಕ್ಷೇತ್ರವಾಗಿದ್ದ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಈ ವಿಚಾರಗೋಷ್ಠಿಯನ್ನು ನಡೆಸಲಾಗಿತ್ತು. ಅದರ ಸಂಪೂರ್ಣ ಹೊಣೆಯನ್ನು ನನಗೆ ವಹಿಸಿದ್ದರು. ಕಾರ್ಯಕ್ರಮದ ನಂತರ ಅದರ ಪ್ರಬಂಧಗಳನ್ನೂ ಸಂಗ್ರಹಿಸಿಕೊಡಲು ನಾಯಕರು ನನಗೇ ಸೂಚಿಸಿದ್ದರು. ಅದರಂತೆ ಸಂಗ್ರಹಿಸಿ ಟೈಪ್ ಮಾಡಿಸಿದ ಒಂದು ಪ್ರತಿಯನ್ನು ಅವರಿಗೆ ಕಳುಹಿಸಿಕೊಟ್ಟಿದ್ದೆ. ಪ್ರಕಟಿಸುವುದಾಗಿಯೂ ಹೇಳಿದ್ದರು. ಆದರೆ ಏನು ಕಾರಣವೋ ಅದು ಹೊರಬರಲೇ ಇಲ್ಲ. ಆ ಕಾರ್ಯ ಹಾಗೇ ಉಳಿಯಿತು. ನನ್ನ ಬಳಿ ಇನ್ನೊಂದು ಕಾರ್ಬನ್ ಪ್ರತಿಯಿತ್ತು, ಪ್ರಕಟಿಸುವ ಬಗ್ಗೆ ಯೋಚಿಸುತ್ತಲೇ ಇದ್ದೆ.

ಬೆಂಗಳೂರಿನ ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನದ ಕಾರ್ಯ ಚಟುವಟಿಕೆಗಳನ್ನು ಗಮನಿಸುತ್ತಿದ್ದೆ. ಒಳ್ಳೆಯ ಕೆಲಸಗಳನ್ನು ಮಾಡುತ್ತಿರುವ ಬಗ್ಗೆ ಮೆಚ್ಚುಗೆಯೂ ಇತ್ತು. ಏಕೆ ಇವರನ್ನು ಕೇಳಬಾರದೆಂದು ಯೋಚಿಸಿ ಒಂದು ಪತ್ರ ಬರೆದೆ. ಕೂಡಲೆ ಸ್ಪಂದಿಸಿ ಉತ್ತರಿಸಿದರು. ಆಗ ನನಗಾದ ಆನಂದ ಅಷ್ಟಿಷ್ಟಲ್ಲ. ನನ್ನ ಮೇಲಿದ್ದ ಭಾರವೊಂದು ಕಳೆದಂತಾಗಿ ಮನಸ್ಸು ನಿರಾಳವಾಯಿತು. ಕೂಡಲೇ ಜೀರ್ಣ ಸ್ಥಿತಿಯಲ್ಲಿದ್ದ ಹಸ್ತಪ್ರತಿಯನ್ನು ಕಳುಹಿಸಿದೆ. ಇಷ್ಟು ಬೇಗ

ಮಸ್ತಕ ಮಾಡುತ್ತಾರೆಂದು ನಿರೀಕ್ಷಿಸಿರಲಿಲ್ಲ. ಪ್ರತಿಷ್ಠಾನದ ಗೌ॥ ಕಾರ್ಯದರ್ಶಿಗಳೂ ಆದ ಡಾ. ನಾ. ಗೀತಾಚಾರ್ಯರು ಅತ್ಯಂತ ಸುಂದರವಾಗಿ ಮುದ್ರಿಸಿ ಸೂಕ್ತವಾದ ಉಪಶೀರ್ಷಿಕೆಗಳನ್ನು ಕೊಟ್ಟು ತಪ್ಪಿಲ್ಲದಂತೆ ಪುಸ್ತಕವನ್ನು ಚಂದಗಾಣಿಸಿದ್ದಾರೆ, ಅವರೇ ಇದರ ನೈಜ ಸಂಪಾದಕರು. ನಾನೇನಿದ್ದರೂ ಸಂಕಲನಕಾರನಷ್ಟೇ. ಅವರ ಈ ಸಂಪಾದನೆಯ ಶ್ರದ್ಧೆ ನನಗೆ ಸಂತೋಷವನ್ನುಂಟು ಮಾಡಿದೆ. ಅವರಿಗೂ ಪುಸ್ತಕವನ್ನು ಮುದ್ರಿಸಿ ಪ್ರಕಾಶಿಸಲು ಒಪ್ಪಿ ಸಹಕರಿಸಿದ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಪಿ. ವಿ. ನಾರಾಯಣರಿಗೂ ಪ್ರಕಟನ ಸಮಿತಿಯ ಸನ್ಮಿತ್ರರಿಗೂ ಮತ್ತು ಪ್ರತಿಷ್ಠಾನದ ಉಳಿದೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ನನ್ನ ಅಪಾರ ಗೌರವಕ್ಕೆ ಪಾತ್ರರಾಗಿರುವ 'ಶ್ರೀ' ಅವರ ಹೆಸರಿನಲ್ಲಿ ಅತ್ಯುತ್ತಮವಾದ ಕಾರ್ಯಮಾಡುತ್ತಿರುವ ಮತ್ತು ಕರ್ನಾಟಕದಲ್ಲೇ ಏಕೈಕವಾದ ಸ್ಮಾರಕ ಸಂಸ್ಥೆಯನ್ನು ಸ್ಥಾಪಿಸಿ 'ಶ್ರೀ' ಅವರ ಹೆಸರನ್ನೂ ಉಳಿಸುತ್ತಿರುವ ಪ್ರತಿಷ್ಠಾನದ ಸಂಸ್ಥಾಪಕರಾದ ಪ್ರೊ. ಎಂ.ವಿ. ಸೀತಾರಾಮಯ್ಯನವರನ್ನು ನಾನು ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಅವರ ಆಶಯದಂತೆ ಸಂಸ್ಥೆಯನ್ನು ಮುನ್ನಡೆಸಿಕೊಂಡು ಬರುತ್ತಿರುವ ಎಲ್ಲ ಮಾನ್ಯರಿಗೂ ನನ್ನ ಗೌರವಪೂರ್ವಕ ನಮನಗಳು ಸಲ್ಲುತ್ತವೆ. ಕರ್ನಾಟಕದಲ್ಲಿ 'ಶ್ರೀ'ಯವರ ಹೆಸರನ್ನುಳಿಸುತ್ತಿರುವ ಈ ಸಂಸ್ಥೆ ಚಿರಾಯುವಾಗಲಿ ಎಂದು ಹಾರೈಸುತ್ತೇನೆ.

■ *ಕೆ.ಎಸ್. ದೇಶಪಾಂಡೆ*

ಪರಿವಿಡಿ

'ಶ್ರೀ ಪ್ರಸ್ತಾವ'

೧. 'ಶ್ರೀಕಂಠ'

■ *ಪ್ರೊ. ಕೆ.ಎಸ್. ದೇಶಪಾಂಡೆ*

ಕನ್ನಡದ ಕಣ್ವ ಎಂದು ಖ್ಯಾತಿವೆತ್ತ 'ಶ್ರೀ' ಅವರ ಜನ್ಮ ಶತಮಾನೋತ್ಸವದ ಪರ್ವ ಪ್ರಸಂಗದಂದು ನಿಮಗೆಲ್ಲ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪರವಾಗಿ ತುಂಬು ಹೃದಯದ ಸ್ವಾಗತ ಕೋರುತ್ತೇನೆ.

ಸುಮಾರು ಎರಡು ತಿಂಗಳುಗಳ ಹಿಂದೆ ಸನ್ಮಿತ್ರ ಡಾ. ನಾಯಕ ಅವರು ದೂರವಾಣಿಯ ಮೂಲಕ ಈ ಸಮಾರಂಭದ ಏರ್ಪಾಟಿನ ಭಾರ ವಹಿಸಬೇಕೆಂದು ನನ್ನನ್ನು ಕೇಳಿಕೊಂಡಾಗ ಸಂತೋಷದಿಂದ ಒಪ್ಪಿಕೊಂಡೆ. ಅದಕ್ಕೆ ಕಾರಣ 'ಶ್ರೀ' ಅವರ ಬಗ್ಗೆ ನಾನು ಹೊಂದಿದ್ದ ಅಪಾರ ಗೌರವ, ಆದರ, ಭಕ್ತಿ.

ದಿ.ಶ್ರೀ ಅವರು ನನ್ನ ಜೀವನದಲ್ಲಿ ತ್ರಿವಿಧವಾಗಿ ಕಾಣಿಸಿಕೊಂಡು ನನ್ನ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದಾರೆ.

'ಶ್ರೀ' ಅವರನ್ನು ನಾನು ಮೊಟ್ಟಮೊದಲ ಸಲ ನೋಡಿದ್ದು ಹಾಗೂ ಅವರ ಅಸ್ಖಲಿತ ವಾಣಿಯ ಅಮೃತವನ್ನೀಂಟಿದ್ದು ಏಪ್ರಿಲ್ ೧೪, ೧೯೪೦ ರಂದು. ಈ ಸಮಸ್ತ ಕನ್ನಡ ಕುಲಕ್ಕೇ ಹಿರಿಯ ಸ್ಥಾನದಲ್ಲಿರುವ, ಕನ್ನಡ ಸಾಹಿತ್ಯ ಪರಿಷತ್ತಿಗೆ ತಾಯಿಯಂತಿರುವ ಕರ್ನಾಟಕ ವಿದ್ಯಾವರ್ಧಕ ಸಂಘ, ನಾಡಿನ ಏಕೀಕರಣ ಸಾಧಿಸಿದ ಆ ವರುಷ ತನ್ನ ಸಂಸ್ಥಾಪಕರಾದ ದಿ॥ ರಾ.ಹ. ದೇಶಪಾಂಡೆ ಅವರ ಭಾವಚಿತ್ರದ ಅನಾವರಣ ಸಮಾರಂಭವನ್ನು ಇಲ್ಲಿಯ ನಗರಸಭೆಯಲ್ಲಿ ಹಮ್ಮಿಕೊಂಡಿತ್ತು. ರಾ.ಹ. ದೇಶಪಾಂಡೆ ಅವರ ಭಾವಚಿತ್ರದ ಅನಾವರಣ ಸಮಾರಂಭ ಸಂಘದ ಸುವರ್ಣ

ದಿನಾಂಕ ಜನವರಿಗ ೩, ೧೯೮೪ರಂದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ನಡೆದ ಬಿ.ಎಂ.ಶ್ರೀ. ಜನ್ಮಶತಮಾನೋತ್ಸವ ವಿಚಾರಗೋಷ್ಠಿಯ ಸ್ವಾಗತಭಾಷಣ

ಮಹೋತ್ಸವಕ್ಕೆ ನಾಂದಿಯಾಗಿತ್ತು. 'ಶ್ರೀ' ಅವರು ತಮ್ಮ ಶುಭ ಹಸ್ತದಿಂದ ದಿ.ರಾ.ಹ. ದೇಶಪಾಂಡೆ ಅವರ ಭಾವಚಿತ್ರದ ಅನಾವರಣ ನೆರವೇರಿಸಲಿದ್ದರು. ಆಗ ಆ ಸಭೆಯಲ್ಲಿ ಉಪಸ್ಥಿತನಿದ್ದ ನಾನಿನ್ನು ಹದಿನಾರು ವರುಷದ ಎಳೆಯ. ಅನಾವರಣ ಸಮಾರಂಭ ನೆರವೇರಿಸುತ್ತ 'ಶ್ರೀ' ಅವರು ರಾ.ಹ.ದೇಶಪಾಂಡೆ ಅವರನ್ನೇ "ಕನ್ನಡದ ಕಾರಣ ಪುರುಷ" ಎಂದು ಬಣ್ಣಿಸಿ, ಕನ್ನಡದಲ್ಲಿಯೇ ಪತ್ರ ವ್ಯವಹಾರ ಮಾಡಲು ತಮಗೆ ಹೇಗೆ ರಾ.ಹ. ದೇಶಪಾಂಡೆ ಅವರು ಪ್ರಚೋದನೆ ಹಾಗೂ ಮಾರ್ಗದರ್ಶನ ಮಾಡಿದರೆಂಬುದನ್ನು ವಿವರಿಸಿದರು. (ಈ ವಿಷಯದ ಬಗ್ಗೆ ಅವರು ರಾ.ಹ. ದೇಶಪಾಂಡೆ ಅವರಿಗೆ ಬರೆದ ಪತ್ರವೊಂದನ್ನು ಆ ದಿನ 'ಶ್ರೀ' ಸಾಹಿತ್ಯ ಕುರಿತಾದ ಪ್ರದರ್ಶನ ದಲ್ಲಿರಿಸಲಾಗಿತ್ತು.) ಅವರ ಧೀರ, ಗಂಭೀರ, ಸುಂದರ, ವ್ಯಕ್ತಿತ್ವಕ್ಕೆ ಅಂದಿನ ಅವರ ಸವಿನಯದ ಮಾತುಗಳಿಗೆ ನಾನು ತಟ್ಟನೆ ಮಾರುಹೋದೆ. ಅವರ ವಾಗ್ಝರಿ ಗಮನಿಸಿ, ಅವರು ನಿಜವಾಗಿಯೂ 'ಶ್ರೀಕಂಠಯ್ಯ' ಅಂದುಕೊಂಡೆ. ನನ್ನ ಅಜ್ಜ ರಾ.ಹ. ದೇಶಪಾಂಡೆಯವರನ್ನು ಗೌರವದಿಂದ ನೆನೆಸಿಕೊಂಡರು. ಮನೆಗೆ ಮರಳುವಾಗ ಹ್ಯಾಮಲೆಟ್ ನಾಟಕದಲ್ಲಿ ಸ್ವತಃ ಹ್ಯಾಮಲೆಟ್, ದೇವರ ಮೇರುಕೃತಿಯಾದ ಮನುಷ್ಯನ ಬಗ್ಗೆ ಆಡಿದ ಈ ಮಾತುಗಳನ್ನು ಗುಣಗುಣಿಸುತ್ತಾ ಬಂದಿದ್ದೆ.

'What a piece of work is a man'
How noble in reason !
How infinite in faculty!
In form and moving !
How express and admirable!
In action how like on angel!
In apprehension how like a god !
The beauty of the world !
The paragon of animals!"

Set II Se.2

ಇದಾದ ೬-೭ ವರುಷಗಳು ಉರುಳಿ ಹೋಗುವಷ್ಟರಲ್ಲಿಯೇ 'ಶ್ರೀ' ಅವರು ಧಾರವಾಡಕ್ಕೆ ಬಂದು ನೆಲಸಿದರು. ನನಗೆ ಒಳ್ಳೆಯ ಮಟ್ಟದ ಮಾಧ್ಯಮಿಕ ಶಿಕ್ಷಣ ಸೌಲಭ್ಯ ಒದಗಿಸಿಕೊಡುವುದಕ್ಕೆ ಈ ಜೋರ್ಡಿನ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ 'ಶ್ರೀ' ಅವರು ನೇಮಕಗೊಂಡಿದ್ದರು. ಎಳೆಯ ಆಪ್ತೇಷ್ಟರೊಬ್ಬರ ಪ್ರವೇಶದ ನಿಮಿತ್ತ ಶ್ರೀ ಅವರನ್ನು ಕಾಣುವ ಪ್ರಸಂಗ ಒದಗಿತ್ತು. 'ಶ್ರೀ' ಅವರು ಹೊಸ ಕಾಲೇಜಿನ ಸ್ಥಾಪನೆಯ ಸಾಕಷ್ಟು ಕೆಲಸಗಳ ಒತ್ತಡದಲ್ಲಿದ್ದರೂ ಕೂಡ, ಚಿಕ್ಕವನಾದ ನನ್ನನ್ನು ಕೂಡಿಸಿಕೊಂಡು ಸಮಾಧಾನವಾಗಿ ಕೆಲವು ಹಿತನುಡಿಗಳನ್ನು ಹೇಳಿದರು. ಅದರಿಂದ ಸಂತೃಪ್ತಿ, ಚೈತನ್ಯ ಪಡೆದುಕೊಂಡು ನಾನು ಹಿಂದಿರುಗಿದ್ದೆ.

ಮುಂದೆ ೨ ವರುಷಗಳ ನಂತರ ಜ್ಯೂನಿಯರ್ ಎಂ.ಎ., ಓದುತ್ತಿರುವಾಗ ಇಲ್ಲಿಯ ಆರ್.ಎಲ್.ಎಸ್. ಹೈಸ್ಕೂಲಿನಲ್ಲಿ ಶಿಕ್ಷಕನಾಗಿ ಕೆಲಸ ಮಾಡುವ ಸುಯೋಗ ಒದಗಿತ್ತು. ಅವರನ್ನು ಶಾಲೆಯ ಒಂದು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳನ್ನಾಗಿ ಕರೆಸಿಕೊಳ್ಳಬೇಕೆಂದು ಹವಣಿಕೆಯಲ್ಲಿದ್ದಾಗಲೇ ಜನವರಿ ೫, ೧೯೪೬ರಂದು 'ಶ್ರೀ' ಅವರು ದೈವಾಧೀನರಾದ ವಾರ್ತೆ ಬಂದು ನಮಗೆಲ್ಲ ದೊಡ್ಡ ಆಘಾತವಾಯಿತು! ಶಾಲೆಯ ಆವರಣದಲ್ಲಿ ಲಿಂಗಾಯತ ನಗರಸಭಾ ಭವನದಲ್ಲಿ ಸಂತಾಪಸೂಚಕ ಸಭೆ ಸೇರಿಸಿ, ಸಂತಾಪಸೂಚಕ ಗೊತ್ತುವಳಿ ಮಂಡಿಸಿ ಮುಖ್ಯಾಧ್ಯಾಪಕರೊಡನೆ ಶ್ರೀ ಅವರ ನಿವಾಸಕ್ಕೆ ಧಾವಿಸಿ ಅವರ ಅಂತ್ಯದರ್ಶನ ಪಡೆದೆ.

ಈ ನನ್ನ ಕೆಲವು ಸಿಹಿ ಕಹಿ ನೆನಪುಗಳನ್ನು ಧೃಡೀರಕರಿಸಿ ಶ್ರೀ ಅವರ ಬಗ್ಗೆ ಇದ್ದ ನನ್ನ ಅಭಿಮಾನ ಗೌರವಗಳನ್ನು ಇಮ್ಮಡಿ ಮುಮ್ಮಡಿಗೊಳಿಸಿದವರು ನನ್ನ ಚಿಕ್ಕಮ್ಮ – ಶ್ರೀಮತಿ ಡಿ. ಚಂಪಾಬಾಯಿಯವರು. 'ಶ್ರೀ' ಅವರ ಪಟ್ಟದ ಶಿಷ್ಯೆಯರಾದ ಅವರು ಇವತ್ತಿನವರೆಗೂ ಶ್ರೀ ಅವರ ಪಾಂಡಿತ್ಯ, ಪ್ರೌಢಿಮೆ, ಉನ್ನತ ಮಟ್ಟದ ಪ್ರವಚನದ ರೀತಿ, ಕೊಂಡಾಡುತ್ತಾರೆ. ಅವರ ಬಗ್ಗೆ ತಾವು ತಳೆದಿರುವ ಭಕ್ತಿ, ವಿಶ್ವಾಸ, ಶ್ರದ್ಧೆ, ವ್ಯಕ್ತಪಡಿಸುತ್ತಾರೆ. ತಮ್ಮ ನಾಜೂಕಾದ ಆರೋಗ್ಯ, ವಯಸ್ಸು–೮೫–ಗಮನಿಸದೆ, ತಮ್ಮ ಗುರುಗಳ ಪಾವನಚೇತನಕ್ಕೆ ನಮನ ಸಲ್ಲಿಸಲು ಹಟಹಿಡಿದು, ಈ ಸಭೆಗೆ ಆಗಮಿಸಿದ್ದಾರೆ.

ಪ್ರಾಪಂಚಿಕ ಜೀವನದಲ್ಲಿ ಶ್ರೀ ಅವರು ಬರೀ ದುಃಖವನ್ನೇ ಉಂಡರು. ಆದರೆ ಅದರಿಂದ ಮನಸ್ಸನ್ನು ಕಹಿ ಮಾಡಿಕೊಳ್ಳಲಿಲ್ಲ. ಕಷ್ಟ, ದುಃಖ, ತಮ್ಮ ಮೇಲೆ ಅಡರಿ ಬಂದಾಗ ಬಹುಶಃ ಅವರು ತಮ್ಮ ಪ್ರೀತಿಯ ಇಂಗ್ಲೀಷ್ ಕವಿಪುಂಗವ ಶೆಲ್ಲಿಯ 'Prometheus Unbound' ಮಹಾಕಾವ್ಯದಲ್ಲಿ ಬರುವ ಈ ಸಾಲುಗಳನ್ನು ತಮ್ಮೆದುರು ಇಟ್ಟುಕೊಂಡಿದ್ದರೇನೋ ಎನ್ನಿಸುತ್ತದೆ.

To suffer woes which Hope thinks infinite,
To forgive wrongs darker than death or night;
To defy Power which seems omnipotent;
To love and bear; to hope till Hope creates
From its own wreck the thing it contemplates
Neither to change; nor falter nor repent !
This, like thy glory, Titan, is to be
Good, great and joyous, beautiful and free;
This is alone Life, Joy, Empire and Victory.

ಶ್ರೀಕಂಠಯ್ಯರವರು ತಮ್ಮ ದುಃಖವನ್ನೆಲ್ಲ ನುಂಗಿಕೊಂಡು, 'ನೀಲಕಂಠರಾಗಿ', ಚಿತ್ತದ ಸಮತೋಲ ಕಾಯ್ದುಕೊಂಡು ಕನ್ನಡದ ಕೆಲಸಕ್ಕೆ ತಮ್ಮನ್ನು ತಾವಾಗಿಯೇ ಸಮರ್ಪಿಸಿಕೊಂಡರು. ಒಂದು ರೀತಿಯಿಂದ ಕನ್ನಡವನ್ನು ಅವರು ಸಂರಕ್ಷಿಸಿದಂತೆ, ಕನ್ನಡ ಅವರ ರಕ್ಷಣೆಗೆ ಧಾವಿಸಿತು. ಈ ಹಿನ್ನೆಲೆಯಲ್ಲಿ ಅವರ ಕನ್ನಡ ಕೃತಿಗಳನ್ನು ಓದಿ, ಇವರೊಬ್ಬ ಅಲೌಕಿಕ ಪುರುಷಪುಂಗವ ಎಂದುಕೊಂಡೆ. ಅವರ ಸಾಹಿತ್ಯದ ಕೃತಿಗಳನ್ನು ವೀಕ್ಷಿಸಿದಾಗೆಲ್ಲ, ಅವರ ಜೀವನದ ಘಟನೆಗಳನ್ನು ನೆನೆದಾಗೆಲ್ಲ ಆಂಗ್ಲ ಕವಿಯೊಬ್ಬ ಹೇಳಿದ ಈ ಕೆಳಗಿನ ಮಾತುಗಳು ನನ್ನ ನೆನಪಿಗೆ ಬರುತ್ತವೆ.

"Unless you have chaos within you cannot produce a dancing star"
(ನಿಮ್ಮ ಹೃದಯದಲ್ಲಿ ತಳಮಳವಿಲ್ಲದೇ ನೀವು ಥಳಥಳಿಸುವ ನಕ್ಷತ್ರಗಳನ್ನು ನಿರ್ಮಿಸಲಾರಿರಿ.)

ಹೀಗೆ ಜೀವನ ಅಗ್ನಿಕುಂಡದಲ್ಲಿ ಪುನೀತರಾಗಿ, ಕನ್ನಡಕ್ಕೆ ಅಪಾರ, ನಿಸ್ಸೀಮ ಸೇವೆ ಸಲ್ಲಿಸಿದ, ಕನ್ನಡ ಉದ್ಧಾರಕ್ಕಾಗಿ ತಪಸ್ಸು ಗೈದ ವರಪುಂಗವರಾದ ಶ್ರೀ ಅವರ ಶುದ್ಧ ನೆನಪಿಗೆ ನಮ್ಮ ನಮನಗಳನ್ನು ಸಲ್ಲಿಸಿ, ಅವರಿಗೆ ಅತ್ಯಂತ ಪ್ರಿಯವಾದಂಥ ಕನ್ನಡದ ಕೆಲಸವನ್ನು ಮುಂದುವರಿಸಿಕೊಂಡು ಹೋಗುವ ಸಂಕಲ್ಪವನ್ನು ಈ ಪುಣ್ಯ ಪ್ರಸಂಗದಂದು ನಾವು ಮಾಡಿಕೊಳ್ಳೋಣ!

ಇಂದಿನ ಈ ಉತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಮಗೆ ಸಂತಸ ನೀಡಬೇಕೆಂದು ಕೇಳಿಕೊಂಡುದು, ವಿದ್ವಾಂಸ ಸನ್ಮಿತ್ರರಿಗೆ ಕಾಗದ ಹಾಕಿದಾಗ, ಎಲ್ಲರೂ ಏಕಕಾಲಕ್ಕೆ ಮರುಟಪಾಲಿಗೇ ಒಪ್ಪಿಕೊಂಡುದು ನಮ್ಮ ಸಂತೋಷಕ್ಕೆ ರೆಕ್ಕೆ ಮೂಡಿಸಿದೆ. ಅವರೆಲ್ಲರಿಗೂ ನಮ್ಮ ಕೃತಜ್ಞತೆಯ ವಂದನೆಗಳು.

* * *

ಈ ಸಮಾರಂಭವನ್ನು ಉದ್ಘಾಟಿಸಬೇಕೆಂದು ಕೇಳಿಕೊಂಡಾಗ, ತಮ್ಮ ಎಡಬಿಡದ ಅವಿರತ ಕಾರ್ಯಕ್ರಮಗಳಲ್ಲಿ, ಸಂತೋಷದಿಂದ ಒಪ್ಪಿಕೊಂಡು, ನಮ್ಮ ಸಂತಸವನ್ನು ನೂರ್ಮಡಿಗೊಳಿಸಿದ್ದಾರೆ ಡಾ. ನಂಜುಂಡಪ್ಪನವರು. ಚಿಕ್ಕಂದಿನಲ್ಲಿ ರಾಮಕೃಷ್ಣ ವಿವೇಕಾನಂದರ ಕೃತಿಗಳಿಂದ ಪ್ರಭಾವಿತರಾಗಿ, ಪ್ರತಿಭಾನ್ವಿತ ಕಾಲೇಜು ವಿದ್ಯಾರ್ಥಿಯಾಗಿ, ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಅನೇಕ ಪದಕಗಳನ್ನು ಗಿಟ್ಟಿಸಿ, ತದನಂತರ ಇಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ, ಶ್ರೇಷ್ಠ ಶಿಕ್ಷಕರಾಗಿ, ಕರ್ನಾಟಕ ರಾಜ್ಯದ ಆರ್ಥಿಕ ಏಳ್ಗೆಯ ರೂವಾರಿಗಳಾಗಿ, ಭಾರತದ ಕೆಲವೇ ಕೆಲವು ಮೇಧಾವಿ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾಗಿ, ಶಿಸ್ತಿನ ಸಾಕಾರ ಮೂರ್ತಿಯಾಗಿ, ನಮ್ಮ ವಿಶ್ವವಿದ್ಯಾಲಯದ ಧೀಮಂತ ಕುಲಪತಿಗಳಾಗಿ, ನಾಡಿಗೇ ಭೂಷಣರಾಗಿ, ಸಮಸ್ತ ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ನಮ್ಮ ಡಾ. ನಂಜುಂಡಪ್ಪನವರು.

ಶ್ರೀ ಅವರನ್ನು ಕುರಿತಾದ ಗ್ರಂಥಗಳ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಾಗ ಡಾ. ಆರ್.ಸಿ. ಹಿರೇಮಠ ಅವರು ಉತ್ಸಾಹದಿಂದ ಒಪ್ಪಿಕೊಂಡರು. ಹೈಸ್ಕೂಲ್, ಕಾಲೇಜುಗಳಲ್ಲಿ ಕುಶಾಗ್ರಮತಿ ವಿದ್ಯಾರ್ಥಿ ಎಂದು ಖ್ಯಾತಿ ಪಡೆದ ಡಾ. ಹಿರೇಮಠರು ಎಳೆಯವರಿದ್ದಾಗ ಕಡುಬಡತನದ ಜೀವನ ನಡೆಸಿದರು. ತಮ್ಮ ಬೆವರು ಹನಿಗಳ ತೆರೆಗಳ ಮೇಲೆ ತೇಲಿ ಯಶಸ್ಸಿನ ದಡವನ್ನು ಕಂಡರು. ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಪ್ರಥಮಸ್ಥಾನ ಗಳಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಶಿಲ್ಪಿಗಳಾಗಿ, ನಂತರ ದಿಟ್ಟ ಕುಲಪತಿಗಳಾಗಿ, ಅಂತರರಾಷ್ಟ್ರೀಯ ದ್ರಾವಿಡ ಭಾಷಾ ಸಂಸ್ಥೆಯ ನಿರ್ದೇಶಕರಾಗಿ, ನಾಡಿಗೆ ಅನುಪಮ ಸೇವೆ ಸಲ್ಲಿಸಿದ ಖ್ಯಾತಿ ಅವರದಾಗಿದೆ.

ಇಂದು ಬಿಡುಗಡೆಯಾಗಲಿರುವ ಶ್ರೀ ಅವರನ್ನು ಕುರಿತಾದ ಗ್ರಂಥಗಳ ಕರ್ತೃಗಳಾದ ಪ್ರೊ. ಇನಾಂದಾರ ಅವರು ಉತ್ತಮ ದರ್ಜೆಯ ಇಂಗ್ಲೀಷ್ ಪ್ರಾಧ್ಯಾಪಕರಾಗಿ, ಶ್ರೇಷ್ಠ ಕಾದಂಬರಿಕಾರರಾಗಿ, ಸೂಕ್ಷ್ಮ ಸಾಹಿತ್ಯ ವಿಮರ್ಶಕರಾಗಿ ನಾಡ ತುಂಬೆಲ್ಲ ಹೆಸರುವಾಸಿ ಯಾಗಿದ್ದಾರೆ.

ಇಂದಿನ ಸಭೆಯ ಅಧ್ಯಕ್ಷರಾದ ಡಾ. ನಾಯಕರನ್ನು ನಾನು ಮೈಸೂರಿನಲ್ಲಿ ಪ್ರಥಮ ಸಲ ಕಂಡಿದ್ದು, ಎರಡು ದಶಕಗಳ ಹಿಂದೆ. ಅವರಂಥ ಸ್ಫುರದ್ರೂಪಿ, ಚೈತನ್ಯಮಯ, ಅಚ್ಚುಕಟ್ಟಾದ ತರುಣ ಪ್ರಾಧ್ಯಾಪಕರನ್ನೇ ನಾನು ಇಲ್ಲಿಯವರೆಗೆ ಕಂಡಿದ್ದಿಲ್ಲ. Handsome is that handsome does ಎಂಬ ಇಂಗ್ಲೀಷ್ ನಾಣ್ಣುಡಿಯಂತೆ ಡಾ. ಹ್ಯಾಂಡಸಮ್. ಮಾ. ನಾಯಕ ಅವರು ಮುಟ್ಟಿದ್ದೆಲ್ಲ ಚಿನ್ನವೇ. ಕನ್ನಡ ವಿಶ್ವಕೋಶ ವಾಗಲೀ, ಕನ್ನಡ ಸಾಹಿತ್ಯ ಚರಿತ್ರೆಯ ಯೋಜನೆಯಾಗಲಿ, ಎಪಿಗ್ರಾಫಿಯಾ ಕರ್ನಾಟಕದ ಪುನರ್ಮುದ್ರಣದ ಕಾರ್ಯವಾಗಲೀ, ಸಾಹಿತ್ಯ ಅಕಾಡೆಮಿಯ ವೈವಿಧ್ಯಮಯ, ವರ್ಣಮಯ, ಕೆಲಸಗಳಾಗಲೀ ಎಲ್ಲ ಕಡೆಯಲ್ಲೂ ಯಶೋಲಕ್ಷ್ಮಿ ಅವರ ಕೊರಳಿಗೆ ಮಾಲೆ ಹಾಕುತ್ತಲೇ ಬಂದಿದ್ದಾಳೆ!

'ಶ್ರೀ' ಅವರು "ಕನ್ನಡ ಮಾತು ತಲೆಎತ್ತುವ ಬಗೆ" ಎಂಬ ವಿಷಯ ಕುರಿತು ೧೯೧೧ರಷ್ಟು ಪೂರ್ವದಲ್ಲಿಯೇ ಕನ್ನಡದ ಭವಿತವ್ಯ ಕುರಿತು ಚಿಂತನಶೀಲ ಭಾಷಣ ಮಾಡಿದ್ದು ಧಾರವಾಡದಲ್ಲಿ, ಅದೂ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ. ಅವರ ಕೊನೆಯ ಕಾರ್ಯಕ್ಷೇತ್ರವಾದದ್ದು ಧಾರವಾಡ. ಹೀಗಾಗಿ ಇಂದು ಅವರ ಈ ಜನ್ಮ ಶತಮಾನೋತ್ಸವ ಇಲ್ಲಿ ಜರುಗುವದು ಬಹಳ ಸೂಕ್ತ, ಸೂಚ್ಯ. ಈ ನಿರ್ಧಾರ ಕೈಗೊಂಡ ಅಕಾಡೆಮಿಯ ಅಧ್ಯಕ್ಷ ಡಾ. ನಾಯಕರಿಗೆ ನಮ್ಮೆಲ್ಲರ ಅಭಿನಂದನೆಗಳು ಸಲ್ಲಲೇ ಬೇಕು.

ಈ ಉತ್ಸವ ಇಷ್ಟೊಂದು ಅಂದವಾಗಿ, ವ್ಯವಸ್ಥಿತವಾಗಿ, ರೂಪುಗೊಳ್ಳುವಲ್ಲಿ

ಮೊದಲಿನಿಂದ ಇಲ್ಲಿಯವರೆಗೆ ಸಲಹೆ ಸಹಕಾರ ನೀಡಿದವರು ಡಾ.ಎಸ್.ಎಚ್. ರಿತ್ತಿ ಅವರು. ಅದರಂತೆಯೇ ಪ್ರಾ. ಹುನಗುಂದ, ಡಾ. ಇಜಾರಿ, ಶ್ರೀ ಎಸ್.ಆರ್. ಶೆಟ್ಟಿ, ಪ್ರಾ. ಗಾಳಿ, ಶ್ರೀ ಅನಂತಸುಬ್ಬರಾವ್ ಹಾಗೂ ಭಾರತೀಯ ಕುಟುಂಬ ಯೋಜನಾ ಸಂಘ, ಕರ್ನಾಟಕ ಯೋಜನೆಯ ಉಳಿದ ಸಿಬ್ಬಂದಿಯವರು, ಕರ್ನಾಟಕ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು ಇದೊಂದು ತಮ್ಮದೇ ಸ್ವಂತದ ಕೆಲಸ ಎಂದು ಬಗೆದು ನೆರವು ನೀಡಿದರು. ಪತ್ರಕರ್ತರೂ ಆಕಾಶವಾಣಿಯವರೂ ಕಾಲಕಾಲಕ್ಕೆ ನಾವು ಕೊಟ್ಟ ಪ್ರಕಟನೆಗಳನ್ನು ಸರಿಯಾಗಿ ಪ್ರಸಾರ ಮಾಡಿದರು.

ಪ್ರಾರ್ಥನೆಯನ್ನು ಹಾಗೂ 'ಶ್ರೀ' ಅವರ ಜನಮನ ತಟ್ಟಿದ ಹೃದಯ ಕಲಕಿದ 'ಮೊದಲು ತಾಯ' ಕವನವನ್ನು ಸುಂದರವಾಗಿ ಸುಶ್ರಾವ್ಯವಾಗಿ ನಿವೇದಿಸಿ ನಮ್ಮ ಮನಸ್ಸು ಹೃದಯಗಳನ್ನು ಸೂರೆಗೊಂಡಿದ್ದಾರೆ ಶ್ರೀಮತಿ ಕಮಲಾ ಸಿಡೇನೂರ ಹಾಗೂ ಸಂಗಡಿಗರು.

ಇವರೆಲ್ಲರಿಗೂ, ಸಭೆಗೆ ಸಂಭ್ರಮದಿಂದ ಆಗಮಿಸಿದ ತಮಗೆಲ್ಲರಿಗೂ ಮತ್ತೊಮ್ಮೆ ಸ್ವಾಗತ ಬಯಸುತ್ತೇನೆ ಹಾಗೂ ಕೃತಜ್ಞತೆ ಸಲ್ಲಿಸುತ್ತೇನೆ.

ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ!

❒

೨. 'ಶ್ರೀ ಸಂಸ್ಕೃತಿ'

■ *ಡಾ. ಡಿ.ಎಂ. ನಂಜುಂಡಪ್ಪ*

ಇದೊಂದು ವಿಶೇಷ ದಿನ. ಜೀವನದಲ್ಲಿ ಪುಣ್ಯ ಸನ್ನಿವೇಶಗಳು ಬಹಳ ಬರುವುದಿಲ್ಲ. ಅಂತಹ ವಿರಳ ಪುಣ್ಯ ಸನ್ನಿವೇಶ ಈ ದಿನ.

ಕನ್ನಡದ ಕಣ್ವರೆಂದು ಕೀರ್ತಿಗಳಿಸಿದ ಕರ್ನಾಟಕ ಏಕೀಕರಣ ಚಳವಳಿಯ ಮುಂಚೂಣಿಯಲ್ಲಿ ನಿಂತ, ಆಧುನಿಕ ಕನ್ನಡ ಸಾಹಿತ್ಯಕ್ಕೆ ನಾಂದಿ ಹಾಡಿದ, ಬಿ.ಎಂ.ಶ್ರೀಕಂಠಯ್ಯನವರ ಜನ್ಮ ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರ ನೆನಪಿಗೆ ನಂದಾದೀಪವನ್ನು ಹಚ್ಚುವುದು ನನ್ನ ಜೀವನದ ಒಂದು ಪುಣ್ಯಕಾರ್ಯವೆಂದು ಭಾವಿಸುತ್ತೇನೆ. ಕುಲಪತಿಗೆ ಇಂತಹ ಸನ್ನಿವೇಶಗಳು ಬರುವುದು ತೀರ ವಿರಳ. ಇಂಥಹ ಒಂದು ವಿರಳ ಅವಕಾಶವನ್ನು ನನಗೆ ಕಲ್ಪಿಸಿಕೊಟ್ಟಿದ್ದಕ್ಕಾಗಿ ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಿಗೆ ಮತ್ತು ಇತರ ಅಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಮಿತ್ರರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶ್ರೀ ಅವರ ಜನ್ಮಶತಮಾನೋತ್ಸವ ಸಮಾರಂಭವನ್ನು ಉದ್ಘಾಟನೆ ಮಾಡುವ ಈ ಸಂದರ್ಭದಲ್ಲಿ ಅವರಿಗೆ ಗೌರವವನ್ನು ಅರ್ಪಿಸುವದೇ ನನ್ನ ಮುಖ್ಯ ಉದ್ದೇಶ. ಉದ್ಘಾಟನಾ ಭಾಷಣ ಅಮೂಲ್ಯವೆಂದು ಭಾವಿಸಿದ್ದೇನೆ. ಏಕೆಂದರೆ ಶ್ರೀ ಅವರ ಬಗ್ಗೆ ಹೆಚ್ಚು ಓದಿಕೊಂಡ ಮತ್ತು ಶ್ರೀ ಅವರನ್ನು ಹೆಚ್ಚು ಅರ್ಥಮಾಡಿಕೊಂಡ ವಿದ್ವಾಂಸರು ಇಲ್ಲಿಗೆ ಬಂದಿದ್ದಾರೆ ಮತ್ತು ಶ್ರೀ ಅವರ ಬಗ್ಗೆ ಶ್ರೀ ಇನಾಂದಾರ ಅವರು ಬರೆದ ಒಂದು ಹೊಸ ಕೃತಿಯ ಬಿಡುಗಡೆ ಕೂಡ ಈಗ ಆಗಲಿದೆ.

ವಿಚಾರಗೋಷ್ಠಿಯ ಉದ್ಘಾಟನಾ ಭಾಷಣ.

ನಾನು ಮಹಾರಾಜ ಕಾಲೇಜಿಗೆ ವಿದ್ಯಾರ್ಥಿಯಾಗಿ ಹೋಗುವ ಹೊತ್ತಿಗೆ ಶ್ರೀ ಅವರು ಇರಲಿಲ್ಲ. ೧೯೪೬ರ ನಂತರ ಅವರು ಸುದ್ದಿಯಾಗಿ ಉಳಿದಿದ್ದರು. ಅವರ ಉಪನ್ಯಾಸಗಳು ವಿದ್ಯಾರ್ಥಿಗಳನ್ನೂ, ಸಾರ್ವಜನಿಕರನ್ನೂ ಬಡಿದೆಬ್ಬಿಸಿವೆ. ಅವರ ಕವಿತೆಗಳು ಒಂದು ಕ್ರಾಂತಿಯನ್ನೇ ಉಂಟು ಮಾಡಿವೆ ಎಂಬ ಮಾತನ್ನು ನಾನು ಕೇಳಿದ್ದೆ. ಅವರ ವರ್ಗದಲ್ಲಿ ಕುಳಿತು ಪಾಠ ಕಲಿಯುವ ಅವಕಾಶ ಸಿಗಲಿಲ್ಲ. ಆದರೆ ಅವರ ಶಿಷ್ಯರಲ್ಲಿ ಒಬ್ಬರಾದ ಎಸ್.ವಿ. ರಂಗಣ್ಣ ನನಗೆ ಪ್ರಾಧ್ಯಾಪಕರಾಗಿದ್ದರು. ನನಗೆ ಅವರ ಮುಖಾಂತರ ಶ್ರೀ ಅವರ ಕೃತಿಗಳ, ಅವರ ಜೀವನದ ಹೆಚ್ಚಿನ ಪರಿಚಯ ಆಯಿತು.

ವಿದ್ಯಾರ್ಥಿಯಾಗಿ ಅವರ ಕೃತಿಗಳನ್ನು ಓದಿದಾಗ, ತದನಂತರ ಅನುಸಂದಾನ ಮಾಡಿದಾಗ ನನ್ನಲ್ಲಿ ಮೂಡಿದ ಕೆಲವು ಭಾವನೆಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮೊದಲನೆಯದಾಗಿ ನಾನು ಶ್ರೀ ಅವರನ್ನು ಒಬ್ಬ ಆದರ್ಶ ಶಿಕ್ಷಕನೆಂದು ತಿಳಿದುಕೊಂಡಿದ್ದೇನೆ. ಶ್ರೀ ಅವರು ಶಿಕ್ಷಕರಾದುದು ಹೊಟ್ಟೆಪಾಡಿಗಾಗಿ ಅಲ್ಲ, ಕಿರ್ತಿಗೂ ಅಲ್ಲ. ಆಗಿನ ಕಾಲಕ್ಕೆ ಕನ್ನಡ ಅಧ್ಯಾಪಕರಿಗೆ ಅಂದಿನ ಮಹಾರಾಜ ಕಾಲೇಜಿನಲ್ಲಿಯೂ ಗೌರವ ಕಡಿಮೆ. ನಾನು ಮಹಾರಾಜ ಕಾಲೇಜಿಗೆ ಹೋದಾಗಲೂ ಹೆಚ್ಚು ಕಡಿಮೆ ಅದೇ ಸ್ಥಿತಿ ಇತ್ತು. ಹೀಗಿದ್ದೂ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದ ಶ್ರೀಯವರು ಕನ್ನಡದ ಸೇವೆಗೆ ಸಿದ್ಧರಾದರು. ಇಂಗ್ಲೀಷ್ ಮುಖಾಂತರ ನಾವು ಕನ್ನಡಕ್ಕೆ ಉತ್ಕೃಷ್ಟ ಸೇವೆ ಸಲ್ಲಿಸುವುದು ಇಂದಿನ ಅಗತ್ಯವೆಂಬ ಅರಿವನ್ನು ಮೂಡಿಸಿಕೊಂಡು ಅವರು ಇಂಗ್ಲೀಷ್ ಶಿಕ್ಷಕರಾಗಿ ಅದರ ಮುಖಾಂತರ ಕನ್ನಡಕ್ಕೆ ಶಾಶ್ವತ ಸೇವೆ ಸಲ್ಲಿಸಿದುದು ಜ್ಞಾಪಿಸಿಕೊಳ್ಳುವಂಥ ವಿಷಯ. ಅವರ ಶಿಕ್ಷಣ ಪ್ರಜ್ಞೆ, ಪಾಠ ಕಲಿಸುವ ವಿಧಾನ, ಪಾಠದ ಪ್ರಗಾಢ ಪರಿಣಾಮ ಇತ್ಯಾದಿಗಳು ಅಂದು ಜನಜನಿತವಾಗಿದ್ದವು. ಅವರು ಒಮ್ಮೆ ಡಾ. ಅರ್ನಾಲ್ಡ್ ಅವರ ಕೃತಿಗಳ ಬಗ್ಗೆ ಚರ್ಚೆ ಮಾಡುತ್ತ ತರಗತಿಯಲ್ಲಿ 'ಜಾಣ್ಮೆಗಳಿಂದ ನಡೆದಿರತಕ್ಕಂತ' ಎಂಬ ವಾಕ್ಯದಲ್ಲಿ In him will be a worthy ಅನ್ನುವ ಪದ ಬಂದಾಗ ಅದನ್ನ ಕಲಿಸಿದ, ಅದರ ರಸವನ್ನು ಅವರು ಜೀವನದಲ್ಲಿ ಉಂಡವರಾಗಿ, ಅದರ ಪ್ರತೀಕವಾಗಿ ಮೈಮರೆತು ನಿಂತು ಪಾಠ ಮಾಡುವಾಗ, ಅಂದರೆ ಶಿಕ್ಷಕರು ಪಾಠವನ್ನು ಮಾಡುವಾಗ ಯಾವ ಒಂದು ದಿಕ್ಕಿನಲ್ಲಿ ಹೋಗಬೇಕು ಅದನ್ನ ಹೇಗೆ ಅನುಭವಿಸುತ್ತೇವೆ ಎಂಬ ನೆನಪನ್ನು ದೇಶಪಾಂಡೆ ಅವರು ಒಮ್ಮೆ ಹೇಳಿದಾಗ ಅಂತಹ ಒಂದು ಮಹತ್ವದ ಹೆಜ್ಜೆಯನ್ನು ಇಟ್ಟ ಶಿಕ್ಷಕರಿಗೆ ದಿಗದಿಗಂತಗಳಲ್ಲಿ ಬಿ.ಎಂ.ಶ್ರೀ. ಒಂದು ಮಾದರಿಯಾಗಿದ್ದಾರೆ ಎನಿಸುತ್ತದೆ. ಬಿ.ಎಂ.ಶ್ರೀ ಅವರಲ್ಲಿ ಕಂಡಿದ್ದನ್ನೆಲ್ಲ ಅವರ ಶಿಷ್ಯರು ಬರೆದು ದಾಖಲಿಸಬೇಕು. ಅನೇಕ ಪ್ರತಿಗಳನ್ನು ಮಾಡಬೇಕು. ನೀವೆಲ್ಲ ಅವರ ಆಂತರಿಕ ಜೀವನವನ್ನು ಬರೆಯಿರಿ, ಗಾಂಧೀಜಿಯವರು ಬರೆದಂತೆ, ಅದರಿಂದ ಅವರ ಆಂತರಿಕ ಜೀವನದ ಭವ್ಯತೆ ಕಂಡು ಬರುತ್ತದೆ.

ಬಿ.ಎಂ.ಶ್ರೀ. ಅವರ ಕೌಟುಂಬಿಕ ಜೀವನ ದುರಂತಮಯವಾಗಿದ್ದಿತು. ನಡು ವಯಸ್ಸಿನಲ್ಲಿ ಅವರ ಹೆಂಡತಿ ಸತ್ತುಹೋಗಿದ್ದರು. ಮಗನಿಗೆ ಕಣ್ಣು ಬೇನೆ ಕಾರಣವಾಗಿ ಕಣ್ಣು ಕಳೆದುಕೊಂಡ. ಮಗಳ ಗಂಡ ಎಳೆ ವಯಸ್ಸಿನಲ್ಲಿ ಸಾವನ್ನಪ್ಪಿದ, ಆತನ ಶ್ರಾದ್ಧ ಮುಗಿದ ಮೂರನೇ ದಿನವೇ ಅವರ ತಾಯಿಯ ಮರಣ. ಹೀಗೆ ದುರಂತಗಳ ಸರಮಾಲೆಯ ಸಂದರ್ಭದಲ್ಲಿ ತಾಯಿಯ ಮರಣವಾದ ಮೂರನೇ ದಿನವಸವೇ ಅವರು ತರಗತಿಗೆ ಬಂದು ಪಾಠ ಮಾಡಿದ್ದಾರೆ. ಶಿಕ್ಷಕರಾದ ನಾವು ಈ ಕರ್ತವ್ಯ ನಿಷ್ಠೆಯನ್ನು ಇಂದು ನೆನಸಿಕೊಳ್ಳುವದು ಅವಶ್ಯ. ಬಿ.ಎಂ.ಶ್ರೀ ಅವರ ಪಾಂಡಿತ್ಯದ ಬಗ್ಗೆ ನನ್ನ ವಿದ್ವಾಂಸಮಿತ್ರರು ಮಾತನಾಡಿದ್ದಾರೆ. ಅವರ ಬರವಣಿಗೆಗಳನ್ನು, ಬದುಕನ್ನು ಗಮನಿಸಿದರೆ ಕನ್ನಡ ಸಾಹಿತ್ಯಕ್ಕಷ್ಟೇ ಅಲ್ಲ ಅವರು ನಮ್ಮ ನಾಡಿನ ಒಂದು ಹೊಸ ಸಂಸ್ಕೃತಿಗೆ ನಾಂದಿ ಹಾಡಿದ ಯುಗಪುರುಷರೆಂದು ಸ್ಪಷ್ಟವಾಗುತ್ತದೆ. ಇಂಗ್ಲೀಷಿನಲ್ಲಿದ್ದ ಅತ್ಯುತ್ತಮ ಸಂಸ್ಕೃತಿಯನ್ನು ಭಾರತೀಯ ಸಂಸ್ಕೃತಿಗೆ ಬೆಸೆಯುವ ಕೆಲಸದಲ್ಲಿ ಬಿ.ಎಂ.ಶ್ರೀ ವಹಿಸಿದ ಪಾತ್ರ ಅನನ್ಯವಾಗಿದೆ. ಒಂದು ರೀತಿಯಲ್ಲಿ ಶ್ರೀ ಅವರು ಕ್ರಾಂತಿಯನ್ನು ಮಾಡಿದರೆಂದು ಹೇಳಬೇಕು. ಅವರ ಈ ಕಾರ್ಯವನ್ನು ಅವರ ಶಿಷ್ಯರೂ ಇತರ ವಿದ್ವಾಂಸರೂ ಮುಂದುವರಿಸಿ ಒಂದು ಹೊಸ ಸಂಸ್ಕೃತಿ ಬೆಳೆದು ಬರುವುದಕ್ಕೆ ಪ್ರಯತ್ನಿಸಬೇಕು. ಶ್ರೀ ಅವರು ಮಾಡಿದ 'ಸಂಸ್ಕೃತಿ ಸಂಗಮ'ಕ್ಕೆ ಉದಾಹರಣೆಯಾಗಿ ಅವರ ಅಶ್ವತ್ಥಾಮನ್ ಕೃತಿಯನ್ನು ನಾವು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಇದನ್ನು ಪಾಶ್ಚಿಮಾತ್ಯ ನೆಲೆಯಿಂದ ಎತ್ತಿತಂದರೂ ಭಾರತೀಯ ಸಂಸ್ಕೃತಿಗೆ ಹೊಂದುವ ರೀತಿಯಲ್ಲಿ ಅದನ್ನು ಪರಿವರ್ತಿಸಿದ್ದಾರೆ. ಅಶ್ವತ್ಥಾಮನ್ ಕೃತಿಯಲ್ಲಿ ಬೇರೆ ದೋಷಗಳಿರಬಹುದು. ಆದರೆ ಒಂದು ಸಂಸ್ಕೃತಿಯ ಉತ್ತಮಾಂಶವನ್ನು ನಮ್ಮ ಸಂಸ್ಕೃತಿಯಲ್ಲಿ ಸಮನ್ವಯ ಮಾಡುವ ಪ್ರಥಮ ಪ್ರಯತ್ನ ನಡೆದುದು ಶ್ರೀ ಅವರ ಕಾಲದಲ್ಲೆ.

ದುರಂತ ನಾಟಕಗಳ ರಚನೆಯಲ್ಲಿ, ವಿಮರ್ಶೆಯಲ್ಲಿ ಬಿ.ಎಂ.ಶ್ರೀ. ಎತ್ತಿದ ಕೈ. ಬಹುಶಃ ಇದಕ್ಕೆ ಅವರ ಜೀವನದಲ್ಲಿ ಸಂಭವಿಸಿದ ದುರಂತ ಘಟನೆಗಳೇ ಪ್ರೇರಣೆ ನೀಡಿರಬಹುದು. ಅವರು ಗದಾಯುದ್ಧ ನಾಟಕವನ್ನು ಬರೆದಾಗ ಕನ್ನಡದಲ್ಲಿ ಪ್ರಪ್ರಥಮವಾಗಿ ಒಂದು ಹೊಸ ಸಾಹಿತ್ಯ ಪ್ರಕಾರವೇ ಬಿಚ್ಚಿಕೊಂಡು ನಿಂತಿತು. ನೈತಿಕತೆಯದಕ್ಕಿಂತ ಹೆಚ್ಚಾಗಿ ಮಾನವೀಯತೆಯನ್ನು ಇಂಥ ಕೃತಿಗಳಲ್ಲಿ ಪ್ರಧಾನ ಪಾತ್ರ ಮಾಡಿ, ಓದುಗನನ್ನು ಸೆರೆ ಹಿಡಿಯುವುದು ಒಂದು ಮಹತ್ವದ ಅಂಶವೆಂದು ಕಾಣುತ್ತದೆ. ಬಿ.ಎಂ.ಶ್ರೀ. ರಾಜಪ್ರಭುತ್ವ ಕಾಲದವರಾದರೂ ಮಾಡಿದುದು ಮಾತ್ರ ಪ್ರಜಾಪ್ರಭುತ್ವದ ಕಾರ್ಯ. ಪ್ರಜೆಗಳ ಭಾಷೆ ಸಂಸ್ಕೃತಿಗಳ ಪುನರುಜ್ಜೀವನ ಅವರ ಜೀವನದ ಮಹಾಮಣಿಹವಾಗಿದ್ದಿತು. ಈಗೇನೋ ಇಂಥ ಕೆಲಸ ಬಹಳ ಸುಲಭ. ಆಗಿನ ಕಾಲದಲ್ಲಿ ಜನಬಲವಾಗಲೀ, ಸರಕಾರದ ಬೆಂಬಲವಾಗಲೀ ಬಹಳ ಕಡಿಮೆ.

ಹೀಗಿದ್ದರೂ ಶ್ರೀಯವರು ತುಂಗಭದ್ರಾ ನದಿಯನ್ನು ದಾಟಿ ಈ ಕಡೆ ರಾಯಭಾರಿಯಂತೆ ಸಂಚರಿಸಿದರು. ಕರ್ನಾಟಕದ ಮೂಲೆ ಮೂಲೆಗಳನ್ನು ಸುತ್ತಿದರು. ತೊಂದರೆಗಳನ್ನು ಲಕ್ಷಿಸದೇ ನಡೆದುಕೊಂಡು ಹೋದರು. ಎತ್ತು, ಚಕ್ಕಡಿ ಹತ್ತಿದರು. ಕರ್ನಾಟಕ ಏಕೀಕರಣ ಆಗಬೇಕು, ಕನ್ನಡ ಜನತೆ ಒಂದಾಗಬೇಕು ಎಂದು ಘೋಷಿಸಿದರು. ೧೯೧೧ರಲ್ಲಿ ಇದೇ ವಿದ್ಯಾವರ್ಧಕ ಸಂಘದಲ್ಲಿ "ಕನ್ನಡ ಮಾತು ತಲೆ ಎತ್ತುವ ಬಗೆ" ಎಂದು ಐತಿಹಾಸಿಕ ಭಾಷಣ ಮಾಡಿದುದು, 'ಕನ್ನಡಕ್ಕೊಂದು ಬಾವುಟ ಬೇಕು' ಎಂದು ಆಲೋಚಿಸಿ ಅಂಥ ಬಾವುಟವನ್ನು ಎತ್ತಿ ಹಿಡಿದು ಧಾರವಾಡದಲ್ಲಷ್ಟೇ ಅಲ್ಲ, ಬೆಂಗಳೂರಿನಲ್ಲಷ್ಟೆ ಅಲ್ಲ ಕರ್ನಾಟಕದ ಒಳ ಹೊರಗೂ ಕನ್ನಡವನ್ನು ಬಿತ್ತಿದುದು ಸಣ್ಣ ಕೆಲಸವೇನಲ್ಲ. ಈಗ ಏಕೀಕರಣವೂ ಆಗಿದೆ, ಕನ್ನಡದ ಪ್ರಜ್ಞೆಯೂ ಮೂಡಿದೆ. ಆದರೆ ಅದಕ್ಕೆ ಶ್ರೀ ಅವರಂತೆ ಆಧುನಿಕ ಸತ್ವ ತುಂಬುವ ಕೆಲಸ ಇನ್ನೂ ನಡೆಯಬೇಕಾಗಿದೆ.

❐

೩. ಕನ್ನಡದ 'ಶ್ರೀ'

■ *ಡಾ॥ ಆರ್.ಸಿ. ಹಿರೇಮಠ*

ಶ್ರೀ ಅವರು ಈ ನಾಡಿನ ಒಬ್ಬ ಕಾರಣ ಪುರುಷರು, ಕನ್ನಡ ಸಾಹಿತ್ಯದ ಸೀಮಾ ಪುರುಷರು, ಎಲ್ಲಕ್ಕೂ ಮಿಗಿಲಾಗಿ ಮಾನವ ಜೀವನದ ಮಹಾಮೌಲ್ಯಗಳನ್ನು ಅರಿತು ಆಚರಿಸಿದವರು. ಅಂಥವರ ಜೀವನವನ್ನು ಕುರಿತು ಪ್ರೊ. ಇನಾಂದಾರರು ಅತ್ಯಂತ ಸುಂದರವಾದ ಗ್ರಂಥರಚನೆ ಮಾಡಿರುವರು. ನಮ್ಮ ಸಾಹಿತ್ಯ ಅಕಾಡೆಮಿಯವರೇ ಆ ಗ್ರಂಥಗಳನ್ನು ಪ್ರಕಟಮಾಡಿದ್ದಾರೆ. ಅವು ಈ ದಿವಸ ಬಿಡುಗಡೆಯಾಗುತ್ತಿವೆ. ಇವು ಬಹಳ ಉತ್ತಮ ಗ್ರಂಥಗಳು. ಅದಕ್ಕಾಗಿ ಪ್ರೊ. ಇನಾಂದಾರರವರಿಗೆ ನಾನು ಹಾರ್ದಿಕ ಅಭಿನಂದನೆ ಸಲ್ಲಿಸಬಯಸುತ್ತೇನೆ. ಅದರಂತೆ ಕನ್ನಡ ಸಾಹಿತ್ಯ ಅಕಾಡೆಮಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಇಂದು ನಮಗೆ ಶ್ರೀ ಅವರು ಅರ್ಥವಾಗಬೇಕಾದರೆ ನಾವು ಕಾಲಗರ್ಭದಲ್ಲಿ ಸ್ವಲ್ಪ ದೂರ ಸರಿದು ನೋಡಬೇಕಾಗುತ್ತದೆ. ಚಾಲುಕ್ಯ ಸಾಮ್ರಾಜ್ಯ ಒಡೆದು ಎರಡು ಹೋಳಾಗಿ ಒಂದು ದೇವಗಿರಿಯ ಯಾದವರು ಮತ್ತೊಂದು ಹೊಯ್ಸಳರು ಈ ರೀತಿ ವಿಭಾಗಗಳಾದಂದು ಕನ್ನಡದ ದುರ್ದೆಸೆ ಪ್ರಾರಂಭವಾಯಿತು. ಕನ್ನಡಪ್ರಜ್ಞೆ ಕುಂದುತ್ತ ಬಂದಿತು. ಕನ್ನಡಿಗರು ತಮ್ಮನ್ನೇ ಮರೆತು ಬಿಟ್ಟರು. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕನ್ನಡಪ್ರಜ್ಞೆ ಕುದುರಿದರೂ ಆ ಸಾಮ್ರಾಜ್ಯದ ಪತನಾನಂತರ ಬಂದ ಪೇಶ್ವೆಯರ ಕಾಲದಲ್ಲಿ ಕನ್ನಡಿಗರು ಕನ್ನಡತನವನ್ನೇ ಮರೆತರು. ಎಲ್ಲಿಯವರೆಗೆ ಮರೆತರೆಂದರೆ ತಮ್ಮ ರುಜು ಮಾಡುವಾಗ ಗೆರೆ ಎಳೆದು ಮೋಡಿ ಲಿಪಿಯಲ್ಲಿ ಸಹಿ ಮಾಡುವವರೆಗೂ

ವಿಚಾರಗೋಷ್ಠಿಯಲ್ಲಿ ಪ್ರೊ. ಇನಾಂದಾರರು ಶ್ರೀಅವರ ಬಗೆಗೆ ಬರೆದ ಪುಸ್ತಕವನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಮಾಡಿದ ಭಾಷಣ.

ಬಂದಿತು.ಇದು ಕೇವಲ ಉತ್ತರ ಕರ್ನಾಟಕದಲ್ಲಿಯೇ ಅಲ್ಲ, ದಕ್ಷಿಣ ಕರ್ನಾಟಕದಲ್ಲಿಯೂ ಅದೇ ಸ್ಥಿತಿ ಆಗಿದ್ದಿತು. ಮೈಸೂರ ಒಡೆಯರು ಬರುವವರೆಗೂ ಇದೇ ಸ್ಥಿತಿ ಇದ್ದಿತು. ಮೈಸೂರಲ್ಲಿಯೂ ಕನ್ನಡ ಭಾಷೆಗೆ ಅವನತಿ ಬಂದಿತ್ತು. ಬ್ರಿಟಿಷ್ ಸಾಮ್ರಾಜ್ಯ ಬಂದ ಮೇಲೆ ಕರ್ನಾಟಕ ಹರಿದು ಹಂಚಿಹೋಗಿ ೨೨ ರಾಜಕೀಯ ವಿಭಾಗಗಳಿಗೆ ಒಳಗಾಗಿತ್ತು. ಹೀಗಿದ್ದ ಕಾಲಕ್ಕೆ ಕನ್ನಡ ನಾಡು ಒಂದು, ನುಡಿ ಒಂದು, ಸಾಹಿತ್ಯ ಒಂದು ಎನ್ನುವ ದೃಷ್ಟಿ ತಪ್ಪಿ ಹೋಗಿತ್ತು ಕನ್ನಡಿಗರಲ್ಲಿ; ವಿಸ್ತಾರವಾಗಿರತಕ್ಕಂತಹ ಕನ್ನಡನಾಡಿನೊಳಗೆ ಕನ್ನಡ ಪ್ರಜ್ಞೆ ಕುಸಿದು ಹೋಗಿತ್ತು.

ನೆರೆಯ ಮರಾಠ ಮತ್ತು ತಮಿಳು ಭಾಷೆಯ ಜನರಿಗೆ ನಮಗಿಂತ ಪೂರ್ವದಲ್ಲಿ ಆಂಗ್ಲ ಸಾಹಿತ್ಯದ ಪರಿಚಯವಾಗಿತ್ತು. ಆ ಪ್ರಭಾವದಿಂದ ಸಾಹಿತ್ಯದ ರಚನೆಯೂ ಆಗಿದ್ದಿತು. ಆಂಗ್ಲ ಸಾಹಿತ್ಯದ ಪ್ರಭಾವ ಹಾಗೂ ಈ ಕನ್ನಡ ಜಾಗೃತಿ ಕರ್ನಾಟಕದಲ್ಲಿ ತಡವಾಗಿಯೇ ಆರಂಭವಾದವು. ಈ ಅವಧಿಯಲ್ಲಿ ಬಿ.ಎಂ.ಶ್ರೀಕಂಠಯ್ಯನವರು ಕನ್ನಡ ಕಾವ್ಯಕ್ಕೆ ಹೊಸ ಹಾದಿ ಹಾಕಿಕೊಟ್ಟರು. ಇದಕ್ಕಿಂತ ಪೂರ್ವದೊಳಗೆ ರಾ.ಹ. ದೇಶಪಾಂಡೆಯವರು ಅಂದರೆ ಈ ವಿದ್ಯಾವರ್ಧಕ ಸಂಘದ ಮೊದಲನೆಯ ಸ್ಥಾಪಕರು ಕನ್ನಡದಲ್ಲಿ ಸಾಹಿತ್ಯ ಹೇಗೆ ಬೆಳೆಯಬೇಕು, ಹೇಗೆ ಮುನ್ನಡೆಯಬೇಕು ಎಂಬುದನ್ನು ಸೂಚಿಸುವ ಲೇಖನಗಳನ್ನು ಬರೆದು ಪ್ರಕಟಿಸಿದರು. ಹೊಸಗನ್ನಡ ಗದ್ಯಕ್ಕೆ ಅದೇ ವೇದವಾಗಿದೆ. ಅಲ್ಲಿ ವಿವರಿಸಿದ ನಿಯಮಗಳನ್ವಯ ಸಮಗ್ರ ಕರ್ನಾಟಕದ ಗದ್ಯ ಸಾಹಿತ್ಯ ಬೆಳೆದು ಬಂದಿದೆ; ಇಂದಿಗೂ ಬೆಳೆಯುತ್ತಲಿದೆ.

ಈ ಕಾಲದಲ್ಲಿ ಕನ್ನಡ ಕಾವ್ಯಕ್ಕೆ ಹೊಸ ಮೆರುಗನ್ನು, ಹೊಸ ಹೆಜ್ಜೆಯನ್ನು ಗುರುತಿಸಿದವರು ಬಿ.ಎಂ.ಶ್ರೀ. ಅವರು. ಸಾಹಿತ್ಯದೊಳಗೆ ಯಾವಾಗಲೂ ಪರಂಪರೆ ಮತ್ತು ಪ್ರಗತಿ ಇವುಗಳ ನಡುವೆ ಘರ್ಷಣೆ ನಡೆದೇ ಇರುತ್ತದೆ. ಹಳೆಯದು ಹೋಗಿ ಅದರ ಸತ್ವವನ್ನು ಹೀರಿ ಹೊಸತು ಬೆಳೆದು ಬರುತ್ತಿದೆ. ಇಂತಹ ಕಾಲದಲ್ಲಿ ಒಬ್ಬ ಪಂಪ, ಒಬ್ಬ ಹರಿಹರ, ಒಬ್ಬ ಕುಮಾರವ್ಯಾಸ, ಒಬ್ಬ ಬಿ.ಎಂ.ಶ್ರೀ ಹುಟ್ಟುತ್ತಾರೆ. ಇವರು ಯುಗಪುರುಷರಾಗಿ ಹೊಸ ದರ್ಶನ, ಹೊಸ ಶೈಲಿಗಳನ್ನು ಕಂಡುಹಿಡಿಯುತ್ತಾರೆ. ಪಂಪ ತನ್ನ ಹಿಂದಿನ ಸಾಹಿತ್ಯವನ್ನು ಸಂಪೂರ್ಣವಾಗಿ ಅರಿತಿದ್ದ. ಮುಂದೆ ಈ ಸಾಹಿತ್ಯ ನಡೆಯಬೇಕಾದರೆ ಕನ್ನಡದಲ್ಲಿ ಮಹಾಕವಿಗಳು ಹುಟ್ಟಿಬರಬೇಕಾದರೆ ಯಾವ ಗತಿಯಲ್ಲಿ, ಯಾವ ಪಥದಲ್ಲಿ ನಡೆಯಬೇಕೆಂಬ ಪ್ರಜ್ಞೆಯನ್ನು ಕಂಡುಕೊಂಡಿದ್ದ ಪಂಪ. ಅದೇ ಪ್ರಕಾರವಾಗಿ ಹರಿಹರಾದಿಗಳೂ ಕಂಡುಕೊಂಡಿದ್ದರು. ಇಂಥವರ ಮಾಲಿಕೆಯಲ್ಲಿ ನಿಲ್ಲತಕ್ಕವರು ಆಚಾರ್ಯ ಬಿ.ಎಂ.ಶ್ರೀ. ಅವರು. ಅದಕ್ಕಾಗಿ ಅವರನ್ನು ನಾವು ಯಾವಾಗಲೂ 'ಶ್ರೀ' ಎನ್ನುವ ಅಭಿದಾನದಿಂದ ಗೌರವಿಸುತ್ತೇವೆ. ಹೊಸಗನ್ನಡದ

ಹೊಸ ಹಾದಿಯನ್ನು ಹುಡುಕಿಕೊಟ್ಟಿರತಕ್ಕಂತಹ ಶ್ರೀ ಅವರು ಇಂಗ್ಲೀಷ್ ಗೀತೆಗಳನ್ನು ಕನ್ನಡಿಸಿದರು. ಆಂಗ್ಲ ಭಾಷೆಯ ಮೇಲೆ ಅವರಿಗೆ ಅಪಾರವಾದ ಪ್ರಭಾವವಿದ್ದಿತು. ವರ್ಡ್ಸ್‌ವರ್ಥ್, ಷೇಕ್ಸ್‌ಪಿಯರ್ ಮುಂತಾದ ಕವಿಗಳನ್ನು ಕುರಿತು ಅವರ ಆಂಗ್ಲ ಭಾಷೆಯ ಭಾಷಣಗಳು ದೇಶ ವಿದೇಶಿಯರ ಮೆಚ್ಚಿಗೆ ಪಡೆದಿದ್ದವು. ಆಂಗ್ಲ ಸಾಹಿತ್ಯದ ಅಣಿಮುತ್ತುಗಳನ್ನು ಆಯ್ದು ಕನ್ನಡದ ಜಾಯಮಾನಕ್ಕೆ ಹೊಂದುವಂತಹ ಲಯದಲ್ಲಿ ಹಾಡಿದರು. ಅನುವಾದಗಳು ಮೂಲತಃ ಕನ್ನಡವೇ ಎನ್ನುವಷ್ಟು ಸತ್ವಶಾಲಿಯಾದುವು. 'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು' ಎಂಬುದು ಇಂಗ್ಲೀಷಿನ 'Lead Kindly Light' ಎಂಬುದರ ಭಾಷಾಂತರವೆಂದು ಯಾರಿಗೂ ಅನಿಸುವುದಿಲ್ಲ. ಕರುಣಾಳು ಬಾ ಬೆಳಕೆ ಎಂಬುದರ ಮುಂದೆ ಇಂಗ್ಲೀಷಿನ ಮೂಲ ಪದ್ಯವೇ ಸಪ್ಪೆಯಾಗಿ ಕಾಣುವಷ್ಟು ಪ್ರಭಾಪುಂಜವಾಗಿವೆ ಕನ್ನಡದ ಪದ್ಯ. ಶ್ರೀ ಅವರು ಇಂಗ್ಲೀಷ್ ಸಾಹಿತ್ಯವನ್ನು ಓದಿದರು, ಅರಿತರು, ಅರೆದು ಕುಡಿದರು, ಆಮೇಲೆ ಒಬ್ಬ ಕಾರಣಪುರುಷರಾಗಿ ಕನ್ನಡಕ್ಕೆ ಒಂದು ಹೊಸ ಜೀವಕಳೆಯನ್ನು ಕೊಟ್ಟರು. ಅವಳ ಉಡುಗೆ ಇವಳಿಗಿಟ್ಟರು.

ಅವಿರತ ಪರಿಶ್ರಮ, ಅಪೂರ್ವ ಕನ್ನಡಪ್ರಜ್ಞೆ ಇವುಗಳ ಮೂಲಕ ಹೊಸಗನ್ನಡ ಸಾಹಿತ್ಯ, ಭಾರತದ ಅನೇಕ ಸಾಹಿತ್ಯಗಳಿಗಿಂತ ಮುಂದೆ ನಿಂತು ಮೇಲ್ಮೆಯನ್ನು ಪಡೆಯಿತು. ಕೆಲ ವಿಮರ್ಶಕರು ಅಭಿಪ್ರಾಯಪಟ್ಟಂತೆ ಶ್ರೀ ಅವರು ಇನ್ನೂ ಬಹಳ ಬರೆಯಬೇಕಾಗಿತ್ತು. ಆದರೆ ಹತ್ತೇ ಹತ್ತು ಗ್ರಂಥಗಳನ್ನು ಬರೆದರು, ಅವು ಕನ್ನಡದ ಮುತ್ತು ರತ್ನವಾಗಿವೆ. ಇಂಗ್ಲೀಷ್ ಗೀತಗಳು ಹೊಸತಕ್ಕೆ ಹೊಸತು. ಅಶ್ವತ್ಥಾಮನ್ ಹಳತಕ್ಕೆ ಹಳೆಯದು. ಹೀಗಾಗಿ ಅವರು ಹತ್ತೇ ಗ್ರಂಥಗಳನ್ನು ಬರೆದರೂ ಒಂದೊಂದರಲ್ಲೂ ಹೊಸತನ ಇದೆ. ಹೊಸ ಚೈತನ್ಯ ಇದೆ. ಆ ಹೊಸ ಚೈತನ್ಯದ ಕೃತಿಗಳಿಂದ ಕನ್ನಡ ಸಾಹಿತ್ಯ ಕಣಜವನ್ನು ತುಂಬಿದರು. ಅದಕ್ಕಿಂತಲೂ ಮೇಲಾಗಿ ಶ್ರೀ ಅವರು ಕನ್ನಡ ಸಾಹಿತ್ಯವನ್ನು ನಿರ್ಮಿಸುವಂತಹ ಕನ್ನಡದ ಕವಿಗಳನ್ನು, ಕನ್ನಡದ ವಿದ್ವಾಂಸರನ್ನು, ಕನ್ನಡದ ಭಾಷಣಕಾರರನ್ನು, ಕನ್ನಡದ ಪ್ರಾಧ್ಯಾಪಕರನ್ನು ನಿರ್ಮಾಣ ಮಾಡಿದರು.

ಪ್ರೊ. ಕುಂದಣಗಾರ ಅವರು ಹರಿಹರ ದೇವ ಎಂಬಂತಹ ಗ್ರಂಥವನ್ನು ಆಗಲೇ ಸಂಪಾದನೆ ಮಾಡಿದ್ದರು, ಮತ್ತು ಮುಂದೆ ವೀರಶೈವ ಸಾಹಿತ್ಯದಲ್ಲಿ ಕೃಷಿ ಮಾಡುವ ಯೋಜನೆಯಲ್ಲಿದ್ದರು. ಶ್ರೀಕಂಠಯ್ಯನವರು ಅವರ ದೃಷ್ಟಿಯನ್ನು ಜೈನ ಸಾಹಿತ್ಯದ ಕಡೆಗೆ ತಿರುಗಿಸಿದರು. ಕನ್ನಡವನ್ನು ಬೆಳಗಿಸತಕ್ಕಂತಹ ಕನ್ನಡಿಗರನ್ನು ಮುಂದೆ ತರಬೇಕೆಂಬುದನ್ನು ಶ್ರೀ ಅವರು ತೀ[illegible]ಕೊಂಡಿದ್ದರು. ಕನ್ನಡ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಮೇಲೆ ಅವರಿಗೆ ಅಪಾರ ಅಂತಃಕರಣ. ನಾವು ಮುಂಬೈಗೆ ಪರೀಕ್ಷೆಗೆ

ಹೋಗಿದ್ದೆವು. ಎಲ್‌ಫಿನ್‌ಸ್ಟನ್ ಕಾಲೇಜದೊಳಗೆ ಪರೀಕ್ಷೆಯನ್ನು ಮುಗಿಸಿಕೊಂಡು ಹೊರಗೆ ಹೋಗುತ್ತಿರುವಾಗ ಮೆಟ್ಟಿಲು ಇಳಿಯುವಲ್ಲಿ ಶ್ರೀ ಅವರು ನಿಂತಿದ್ದರು. ಪರೀಕ್ಷೆ ನಡೆದಾಗ ವಿವಿಧ ವಿಷಯಗಳ ಪರೀಕ್ಷಾ ಮಂಡಲಗಳ ಚೇರಮನ್‌ರು ಪ್ರಶ್ನೆಪತ್ರಿಕೆಗಳನ್ನು ಅಚ್ಚು ಹಾಕಿಸಲೋ ಏನೋ ಮುಂಬಯಿಯಲ್ಲಿ ಇರಬೇಕಾಗಿರುತ್ತಿದ್ದಿತಂತೆ. ಆ ಕಾರ್ಯಕ್ಕಾಗಿ ಬಂದಿದ್ದ ಶ್ರೀಯವರು ನಾವು ಪರೀಕ್ಷೆ ಮುಗಿಸಿಕೊಂಡು ಹೊರಗೆ ಹೊರಟಾಗ ಸ್ವತಃ ಕಾಲೇಜ್‌ವರೆಗೆ ಬಂದು ನಿಂತಿದ್ದರು. ನಮ್ಮ ಕೈಯೊಳಗಿನ ಕನ್ನಡ ಪ್ರಶ್ನೆಪತ್ರಿಕೆ ನೋಡಿ ಮೆಲುದನಿಯಲ್ಲಿ ಮೃದುವಚನಗಳಿಂದ 'ಏನಯ್ಯ ಪ್ರಶ್ನೆಪತ್ರಿಕೆ ಹೇಗಿತ್ತು' ಎಂದು ಕೇಳಿದರು. ಸಾಸಿವೆಯ ಮೇಲೆ ಸಾಗರ ಹರಿದಂತಾಯಿತು. ನಮಗೆ ಇದು ಶ್ರೀಯವರ ಅಂತಃಕರಣ.

ಕನ್ನಡನುಡಿ ತಲೆಎತ್ತುವ ಬಗೆ ಹೇಗೆ ಎಂಬುದನ್ನು ಅವರು ಕಂಡುಕೊಂಡಿದ್ದರು. ಹೀಗೆ ಕನ್ನಡಕ್ಕಾಗಿ ಎಲ್ಲಿಗೆ ಬೇಕಾದರೂ ಪ್ರಯಾಣ ಮಾಡಲು ಶ್ರೀ ಅವರು ಸಿದ್ಧ. ಜಮಖಿಂಡಿಯೊಳಗೆ ಸಾಹಿತ್ಯ ಸಮ್ಮೇಳನ ಏರ್ಪಡುವಂತೆ ಮಾಡಿ ಆ ಸಮ್ಮೇಳನಕ್ಕೆ ಅವರು ಕಷ್ಟ ಪಟ್ಟು ಬಂದರು. ಇದನ್ನು ನೋಡಿದರೆ ಕನ್ನಡ ನುಡಿಯ ಮೇಲೆ ಕನ್ನಡ ನಾಡಿನ ಮೇಲೆ ಶ್ರೀ ಅವರಿಗೆ ಅಪಾರವಾದ ಪ್ರೀತಿ, ಗೌರವ, ಇದ್ದುದು ಸ್ಪಷ್ಟ. ಕನ್ನಡ ಬಾವುಟವನ್ನು ಹಿಡಿದುಕೊಂಡು ಎಲ್ಲಿಗೆ ಹೋಗುವ ಪ್ರಸಂಗ ಬಂದರೂ ಸದಾ ಸಿದ್ಧರಾಗಿರುತ್ತಿದ್ದರು. ಅದಕ್ಕಾಗಿ ಅವರು ತಮ್ಮ ವೈಯಕ್ತಿಕ ಜೀವನದಲ್ಲಿ ಬಂದ ಅನೇಕ ಕಷ್ಟ ಪರಂಪರೆಗಳನ್ನೆಲ್ಲ ಮರೆತು ಕನ್ನಡ ಸರಿ ಇದ್ದರೆ ಸಾಕು, ಕನ್ನಡ ಕಾವ್ಯ ಹಬ್ಬಿ ಬೆಳೆದರೆ ಸಾಕು ಅದೇ ನಮ್ಮ ಜೀವನದ ಪರಮ ಗುರಿ ಎಂದು ಅರಿತು, ಆ ತತ್ವವನ್ನು ಹಿಡಿದು ಮುನ್ನಡೆದರು. ಕನ್ನಡವೇ ಅವರಿಗೆ ಒಂದು ತತ್ವವಾಯಿತು. ಕನ್ನಡವೇ ಅವರಿಗೆ ತತ್ವಜ್ಞಾನವಾಯಿತು, ಕನ್ನಡವೇ ಅವರಿಗೆ ಸ್ಫೂರ್ತಿಯಾಯಿತು. ಇಂತಹ ಅಪೂರ್ವ ವ್ಯಕ್ತಿ ಅವರು. ಈ ನಾಡಿಗೆ ಹೊಸ ಚೈತನ್ಯವಾಗಿ ಬಂದು ಹೊಸ ಕಳೆ ಕೊಟ್ಟರು. ಇವರನ್ನು ಕುರಿತು ಪ್ರೊ. ಇನಾಂದಾರರವರು ಅತ್ಯಂತ ಸುಂದರವಾಗಿ ಕೃತಿ ರಚಿಸಿರುವರು. ಅವು ಇಂದು ಬಿಡುಗಡೆಯಾಗಿವೆ. ಗ್ರಂಥಗಳನ್ನು ಕೊಂಡು ಓದಿ ಶ್ರೀ ಅವರನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಳ್ಳಬೇಕೆಂದು ಪ್ರಾರ್ಥಿಸಿ ನನ್ನ ಮಾತು ಮುಗಿಸುತ್ತೇನೆ.

❐

‘ಶ್ರೀ ಜೀವನ’

೪. ಮುಳ್ಳಿನ ಮೇಲೆ ಅರಳಿದ ಮೈಸೂರು ಮಲ್ಲಿಗೆ
(ಶ್ರೀಯವರ ಜೀವನ –ವ್ಯಕ್ತಿತ್ವ)

■ ಎನ್.ಕೆ. ಕುಲಕರ್ಣಿ

ಐದಾರು ವರ್ಷಗಳ ಹಿಂದಿನ ಒಂದು ಸಂಗತಿ. ಒಬ್ಬ ನಿರುದ್ಯೋಗಿ ತರುಣ ಒಂದು ಖಾಸಗಿ ಪತ್ರದೊಂದಿಗೆ ಪಾಟೀಲ ಪುಟ್ಟಪ್ಪನವರ ಬಳಿಗೆ ಬಂದು ಪತ್ರವನ್ನು ಕೊಟ್ಟ. ಅದರ ಒಕ್ಕಣಿಕೆ ಹೀಗಿತ್ತು: 'ಈತ ಬಿ.ಎಂ.ಶ್ರೀಕಂಠಯ್ಯವರ ಮೊಮ್ಮಗ. ಎಲ್ಲಿಯೂ ನೌಕರಿ ಸಿಕ್ಕಲಿಲ್ಲ. ನಿಮ್ಮ ಬಳಿ ಬಂದರೆ ಸಿಕ್ಕೀತು ಎಂದು ನನಗೆ ಹೇಳಿದರು. ನಿಮ್ಮ ಬಳಿ ಕಳಿಸಿದ್ದೇನೆ'. ಅಯ್ತು, ಪಾಟೀಲ ಪುಟ್ಟಪ್ಪನವರು ಶ್ರೀ ಅವರನ್ನೂ ಅವರ ಮೊಮ್ಮಗನೆಂಬ ತರುಣನ ಪರಿಸ್ಥಿತಿಯನ್ನೂ ನೆನೆದು ಆತನಿಗೆ ನೌಕರಿ ಕೊಡಿಸಿದರು.

ಈಗ ಶ್ರೀ ಅವರ ಶತಮಾನೋತ್ಸವ ಕನ್ನಡಿಗರಲ್ಲಿ ಈ ಕಣ್ವರ ನೆನಪು ಮರುಕಳಿಸುತ್ತಿರುವುದು ಕನ್ನಡ ತಾಯಿಯ ಸುದೈವ.

ಶ್ರೀಯವರನ್ನು 'ಕನ್ನಡದ ಕಣ್ವ' ಎಂದು ಕರೆದಿರುವುದು ಆಲಂಕಾರಿಕವಾಗಿ ಸರಿಯೆನಿಸಿದರೂ ನನಗೇಕೋ ಸಮಂಜಸವಾಗಿ ಕಂಡಿಲ್ಲ. ಕಣ್ವಮುನಿಗೆ ಸಂಸಾರದ ಜಂಜಡವಿರಲಿಲ್ಲ. ಆದರೂ ಒಬ್ಬ ಮಗಳು–ಸಾಕುಮಗಳು–ಶಕುಂತಲೆ, ಆಕೆ ತನ್ನವರ ಸಹಾಯವಿಲ್ಲದೆ ತನ್ನ ವರನನ್ನು ತಾನೇ ಹುಡುಕಿಕೊಂಡಳು, ತಾನೇ ಮದುವೆಯೂ ಆದಳು. ಆದರೂ ಕಣ್ವರಿಗೆ ಈ ಸಾಕುಮಗಳನ್ನು ಅತ್ತೆಯ ಮನೆಗೆ ಕಳಿಸಿಕೊಡಲು ಸಾಕುಸಾಕಾಯಿತು. ವನವಾಸಿಯಾದ ತಾನೂ, ಸಾಕುಮಗಳನ್ನು ಅಗಲುವುದೆಂದರೆ ಕಳವಳಿಸಿ ಕಂಬನಿ ಕರೆಯಬೇಕಾದರೆ ಸಂಸಾರಿಗರ ಪಾಡೇನು ಎಂದು ಉದ್ಗಾರ ತೆಗೆದ. ಶ್ರೀಯವರು ಕನ್ನಡ ನುಡಿಗೆ ಸಾಕು ತಂದೆ ಎಂಬರ್ಥದಲ್ಲಿ ಕಣ್ವರೆಂಬುದು ಸಾರ್ಥಕವಾದೀತು, ಆದರೆ ಬದುಕಿನಲ್ಲಿ ಶ್ರೀಯವರಿಗೆ ಇಬ್ಬರು ಹೆಣ್ಣು ಮಕ್ಕಳು–

ಸಾಕಿದವರಲ್ಲ – ಸ್ವಂತ ಹೊಟ್ಟೆಯ ಮಕ್ಕಳು, ಒಬ್ಬ ಗಂಡು ಮಗ. ಮಗಳು ವಿಧವೆಯಾಗಿ, ತಂದೆಯ ಬಳಿಯೇ ಆಸರ ಪಡೆದು ನಿಂತಳು. ಆಜೀವ ದುಃಖದ ಧ್ವಜವಾಗಿ, ಯಾರ ಮುಖ ನೋಡಿ ಈ ತಂದೆ ಮಗಳ ದುಃಖ ಮರೆಯಬೇಕು? ಕೈ ಹಿಡಿದ ಪತ್ನಿ ಇದಕ್ಕೂ ಎಷ್ಟೋ ವರ್ಷ ಮುಂಚೆಯೇ ನಾಲ್ಕನೆಯ ಹೆರಿಗೆಯಲ್ಲಿ ಹುಟ್ಟಿದ ಗಂಡು ಮಗುವನ್ನು ಕಟ್ಟಿಕೊಂಡೇ ಇಹಲೋಕವನ್ನು ಬಿಟ್ಟು ಹೋಗಿದ್ದರು. ಆಗ ಶ್ರೀಯವರಿಗೆ ಸುಮಾರು ಮೂವತ್ತು ವರ್ಷಗಳೇನಾದರೂ ಇದ್ದರಿಬೇಕು. ಪತ್ನಿ ವಿಯೋಗಕ್ಕೆ ಮೊದಲು, ಪತಿ–ಪತ್ನಿಯರಿಬ್ಬರೂ ತಮ್ಮ ಕಣ್ಣ ಮುಂದೆಯೆ ಮಗ ತನ್ನ ಕಣ್ಣು ಕಳೆದುಕೊಂಡು ಕುರುಡನಾಗಿ ಕೊನೆಯುವರೆಗೂ ಕತ್ತಲೆಯಲ್ಲೆ ಬದುಕಿ ಬಾಳಬೇಕಾದುದನ್ನು ದಿನನಿತ್ಯ ನೋಡುವ ಪ್ರಸಂಗ. ಮಗನಿಗೆ ಕಣ್ಣುಬೇನೆ ಬಂದಾಗ ಅರ್ಜರಾಲ್ ಬದಲು ಅದರ ಮಗ್ಗುಲಿಗೇ ಇಟ್ಟಿದ್ದ ಟಿಂಚರ್ ಅಯೋಡಿನ್ ಹಾಕಿದರಂತೆ; ಆ ತಾಯಿಯ ಕಣ್ಣೊಳಗೆ ಸೂಜಿ ಚುಚ್ಚಿದ ವೇದನೆ ಆಗುತ್ತಿದ್ದಿರಬೇಕು. ಮಗನ ಆ ಕುರುಡುತನದ ನೋಟದಿಂದ ತಂದೆಯಾದ ಶ್ರೀಯವರು ತಮ್ಮ ವಂಶದ ಬೆಳಕು ಎಂದು ಬಗೆದ ಮಗನ ಜೀವನ ದುರಂತವಾಗಿದ್ದುದನ್ನು ನೋಡುವ ಪ್ರಸಂಗ ಎಂದರೆ ಯಾವ ಒಂದು ಅವರ್ಣನೀಯ, ಅವ್ಯಕ್ತ ನೋವನ್ನು ಮೂಕತನದಿಂದ ಅವರು ಅನುಭವಿಸುತ್ತಿರಬೇಕು? ಪತಿ–ಪತ್ನಿಯರಿಬ್ಬರೂ ಅನ್ಯೋನ್ಯ ಆಸರೆಯಲ್ಲಿ ತಮ್ಮ ಕಣ್ಣೀರು ಮರೆಯುತ್ತಿರಬೇಕು. ಹೀಗಿರುವಲ್ಲಿ ಆ ತಾಯಿ, ಮನೆಯ ದೀಪದ ಇನ್ನೊಂದು ಕುಡಿಯನ್ನು ಕಂಡು ತಂದೆಯೂ ಮಗನ ಕುರುಡುತನದ ವ್ಯಥೆಯನ್ನು ಮರೆಯ ಬಹುದಾದ ಪ್ರಸಂಗ ಒದಗಿತೆನ್ನುವಾಗಲೇ ತಟ್ಟನೆ ಕುಡಿಯೂ, ನಂದಾ ದೀಪವೂ ಕೂಡಿಯೇ ನಂದಿಹೋಗಿಬಿಡಬೇಕೆಂದರೆ? ಇಂತಹ ಒಬ್ಬ ಮಹಾವ್ಯಕ್ತಿಯ ಜೀವನ ಮುಳ್ಳಿನ ಹಾಸುಗೆಯಾಗಬೇಕೆಂದರೆ? ಜಿ. ಶಂಕರಯ್ಯ ಎಂಬ ಮಿತ್ರರು ಬರೆಯುತ್ತಾರೆ. "ಯಾವ ಪತ್ನಿಯ ಪ್ರೀತಿಯ ಆಸರೆಯಲ್ಲಿ ತಮ್ಮ ಬಾಳಿನ ಆದರ್ಶ ಆಕಾಂಕ್ಷೆಗಳನ್ನು ರೂಪಿಸಿಕೊಂಡರೋ, ಯಾರ ಸಹವಾಸದಲ್ಲಿ ತಮ್ಮ ಬಾಳಿನ ಹೊಂಗನಸುಗಳನ್ನು ಕಾಣಬಯಸಿದ್ದರೋ, ಆಕೆಯೆ ಇನ್ನಿಲ್ಲವೆನಿಸಿದಾಗ, ಅವರ ಸುಖದ ಸಂತೋಷದ, ಕನಸುಗಳ ಗೋಪುರವೆ ಕಳಚಿ ಬುಡಮೇಲಾಗಿ ಬಿತ್ತು. ಚಿಕ್ಕ ಪುಟ್ಟ ಮೂವರು ಮಕ್ಕಳ ಲಾಲನೆ, ಪಾಲನೆ ಅಷ್ಟೇನೂ ಆರೋಗ್ಯವಂತಳಲ್ಲದ ತಾಯಿಯ ಸೇವೆ, ಕುರುಡನಾದ ಮಗನ ಭವಿಷ್ಯದ ಬಗ್ಗೆ ಚಿಂತೆ, ಅವರ ಚೈತನ್ಯದ ಕುಡಿಯನ್ನು ಚಿವುಟಿದವು. ತಮ್ಮ ಆಕಾಂಕ್ಷೆ ಆದರ್ಶಗಳ ಸಂಬಂಧವಾದ ಸಹಜ ಅಧೀರತೆಯ ಜೊತೆಗೆ ಈ ಸಿಡಿಲೇಟುಗಳೂ ಬಡಿದು ಅವರು ಸ್ತಂಭೀಭೂತರಾದರು..." [ಬಿ.ಎಂ.ಶ್ರೀ. ಅವರ ಬದುಕು – ಬರೆಹ ಪು. ೧೩೧.]

ಆಗದೆ ಏನು? ನಿತ್ಯವೂ ಕುರುಡು ಮಗನ ದರ್ಶನವಾದಾಗಲೆಲ್ಲ ಆ ತಾಯಿಯ

ನೆನಪಾಗಿ, ನೋವು – ಅಳಲು ಆವರಿಸಿ ಬಂದಾಗ ಸ್ತಂಭೀಭೂತರಾಗದೆ ಇನ್ನೇನು ಮಾಡಲಿಕ್ಕೆ ಸಾಧ್ಯ? ಆದರೂ ಶ್ರೀಯವರ ಕರ್ತವ್ಯ ಪ್ರಜ್ಞೆ ಅವರ ಕಂಬನಿಯನ್ನು ಅಟ್ಟಿಸಿಬಿಟ್ಟಿತ್ತು. ವಿ.ಸೀ. ಅವರು ಹೇಳುತ್ತಾರೆ: "ಹೆಂಡತಿ ತೀರಿಕೊಂಡ ದಿನವೂ ಕೆಲಸಕ್ಕೆ ತಪ್ಪಿಸಿಕೊಳ್ಳದೆ ಎಂದಿನ ಶಿಸ್ತಿನಲ್ಲಿ ಬಂದು, ಯಾವ ನಷ್ಟವೂ ಸಂಭವಿಸದವರಂತೆ ನಡೆದುಕೊಂಡರೆಂಬಂತೆ – ಒಂದು ಆಕ್ಷೇಪಣೀಯ ಸುದ್ದಿ ಇತ್ತು." ಆಕ್ಷೇಪಣೆಗಳಿಗೇನು ಅಂತ್ಯವಿಲ್ಲ, ಪಾರವಿಲ್ಲ, 'ಅಂಬೋ ಜನ ಏನು, ಅಂತಾನೆ ಇರತಾರೆ' ಎಂದು ಕವಿ ಬೇಂದ್ರೆ ನುಡಿದಿಲ್ಲವೆ? ಶ್ರೀಯವರಲ್ಲಿ ನಾಡಿನ ದೊಡ್ಡ ಆದರ್ಶಗಳನ್ನು ನೆನೆದು ಸ್ವಂತದ ದುಃಖವನ್ನು ಮರೆಯುವ ಯೋಗಶಕ್ತಿ ಇದ್ದಿತೆಂದೆ ಹೇಳಬೇಕು.

ದೈವ ಮಾಡಿಸುತ್ತದೆ ಎಂದು ಒಮ್ಮೊಮ್ಮೆ ಹೇಳುತ್ತೇವೆ. ಗ್ರೀಕ್ ರುದ್ರ ನಾಟಕಗಳಲ್ಲಿ ದೈವ ತಂದೊಡ್ಡುವ ದುರಂತವೆ ಪ್ರಧಾನವಾಗಿರುತ್ತದೆ. ದುಃಖ, ಕಣ್ಣೀರಿನಿಂದಲೇ ನಾಟಕದ ಮುಕ್ತಾಯ. 'As flies to wanton boys are we to the gods; they kill us for their sport.' ಮುನಿದ ದೈವ ಮನುಷ್ಯನನ್ನು ಹುಳದಂತೆ ಹೊಸಕಿಹಾಕಿಬಿಡುತ್ತದೆ, ಮಕ್ಕಳು ಆಟವಾಡುತ್ತ ಹುಳಗಳನ್ನು ಕೊಲ್ಲುವಂತೆ. ಗ್ರೀಕ್ ಟ್ರ್ಯಾಜಿಡಿಯನ್ನು ಕನ್ನಡಕ್ಕೆ ತಂದ ಶ್ರೀಯವರ ಬದುಕೆ ಒಂದು ಗ್ರೀಕ್ ರುದ್ರ ನಾಟಕ – ಮಗನ ಕುರುಡು, ಕೈ ಹಿಡಿದ ಹೆಂಡತಿ ಬಾಣಂತಿಯಾಗಿ ಮಗುವಿನೊಂದಿಗೇ ಮರಣಾಧೀನವಾದುದು, ಮುದಿ ತಾಯಿಯ ಕಣ್ಮರೆ, ಅಳಿಯ ಅಳಿದು ಮಗಳು ವಿಧವೆಯಾಗಿ ತಾಯಿಯಿಲ್ಲದ ತವರು ಸೇರಿದುದು, ಕೊನೆಗೆ ಶ್ರೀಯವರೆ ರುದ್ರನಾಯಕರಾಗಿ ಧಾರವಾಡಕ್ಕೆ ಬಂದು, ಅನಾಥ ಪ್ರಜ್ಞೆಯಲ್ಲಿ ನಿಂತು, ಅಸಹಾಯ ದೆಸೆಯನ್ನು ಅನುಭೋಗಿಸಿ ಧಾರವಾಡದ ರುದ್ರಭೂಮಿಯನ್ನು ಸೇರಿಹೋದುದು; ಇದು ಶ್ರೀಯವರ ಬಾಳಿನ 'ಗ್ರೀಕ್ ಟ್ರ್ಯಾಜಿಡಿ'.

ಇಂತಹ ದಾರುಣ ಜೀವನವನ್ನು ಬದುಕಿಯೂ ಶ್ರೀಯವರು ತಮ್ಮ ಉತ್ತಮ ಸಂಸ್ಕಾರ ಬಲದಿಂದ, ಸುಸಂಸ್ಕೃತಿಯಿಂದ ಇಂಗ್ಲೀಷ್, ಕನ್ನಡ ಸಾಹಿತ್ಯಾಭ್ಯಾಸಬಲದಿಂದ, ನಡೆದ ಮೇಲ್ಮಟ್ಟದ ರಸಿಕತೆಯಿಂದ ಬಾಳಿನ – ಮುಳ್ಳು ದಾರಿಯ ಮೇಲೆ ಒಂದು ಮಲ್ಲಿಗೆಯಾಗಿ ಅರಳಿದರು; ಮೈಸೂರು ಮಲ್ಲಿಗೆ.

ನಾನು ಶ್ರೀಯವರನ್ನು ಪ್ರಥಮತಃ ನೋಡಿದುದು ೧೯೩೫ – ಶರತ್ಕಾಲದ ಶುಕ್ಲ ಪಕ್ಷದಲ್ಲಿ. ಅವರ ಗೌರವರ್ಣದ ಆ ತುಂಬಿದ ಮುಖ, ಆ ಠೀವಿಯ ಮೈಸೂರು ರುಮಾಲು; ಪೂರ್ಣ ಚಂದ್ರನನ್ನು ನೋಡಿದಾಗ ಆತನಿಗೆ ಕ್ಷಯ ಹಿಡಿದಿತ್ತು ಎಂದು ಯಾರಿಗಾದರೂ ಎನಿಸೀತೆ? ಶ್ರೀಯವರು ಕ್ರೂರ ದೈವದ ದವಡೆಯಲ್ಲಿ ಒದ್ದಾಡಿದ ಜೀವ ಎಂದು ನನಗೆ ಆಗ ತಿಳಿದಿರಲಿಲ್ಲ. ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ

ಕನ್ನಡ ಭಾಷಣವಾದ ಮೇಲೆ ಅಂದಿನ ಬೆಳ್ದಿಂಗಳ ಸಂಜೆಯಲ್ಲಿ ಶ್ರೀ ಅವರಿಂದ ಶೇಕ್ಸ್‌ಪಿಯರ್'; ಕಾಲೇಜಿನ ನ್ಯೂ ಬ್ಲಾಕ್‌ನ ಟೇನಿಸ್ ಕೋರ್ಟ್ ರೋಮಿಯೊ ಜುಲಿಯಟ್‌ರ ಕೋರ್ಟಿನ ಸೀನ್ ಆಗಿತ್ತು. ಊರ ರಸಿಕರು – ಯುವಕರು, ಮುದುಕರು ಕಿತ್ತುಬಂದಿದ್ದರು. ಹಾಸ್ಟೆಲ್ ಮೈದಾನದಲ್ಲಿ ಕಿಕ್ಕಿರಿದು ತುಂಬಿದ್ದರು. ಕಾಲೇಜಿನ ಮತ್ತೊಬ್ಬ ಕುಳ್ಳ ಶೇಕ್ಸ್‌ಪಿಯರ್ ಪ್ರೊ. ತಾಕಾಖಾವೆ ಅಧ್ಯಕ್ಷ ಕುರ್ಚಿಯ ಮೇಲೆ ಕುಣಿಯುತ್ತ ತುದಿಗಾಲ ಮೇಲೆ ಕುಳಿತಿದ್ದರು. ಆ ಶುಕ್ಲ ಪಕ್ಷದ ಸಂಜೆಯ ಜೋತ್ಸ್ನೆಯಾಗಿ ಸೋನಿತ್ತು ಶ್ರೀಯವರ ಶೇಕ್ಸ್‌ಪಿಯರ್ ಉಪನ್ಯಾಸ:

> The moon shines britht; in such a night as this
> When the sweet wind did gently kiss the trees.

Kiss ಶಬ್ದ ಕಿವಿಯ ಮೇಲೆ ಬಿತ್ತೋ ಇಲ್ಲವೊ ಹುಚ್ಚ ಯುವಕರು ಹೋ– ಎಂದು ಹರ್ಷೋದ್ಗಾರದಿಂದ ಗದ್ದಲ ಮಾಡಿದರು. ಶ್ರೀಯವರು ಹಾಗೇ ಮುಂದು ವರಿಸಿದರು.

> And they (i.e., the trees) did make no noise.

ಮರಗಳೇ ಸುಮ್ಮನಿದ್ದವೆಂದ ಮೇಲೆ ನಾವೇಕೆ ಸುಮ್ಮನಿರಬಾರದು ಎಂದು ಯುವಕ ರಸಿಕರೂ ಸುಮ್ಮನಾದರು. ಇಂದು ಆ ಹಾಸ್ಟೆಲ್ ಮೈದಾನದಲ್ಲಿ ಅಂದಿನ ಆ ಯುವಕರಿಲ್ಲ – ನಾನಿದ್ದೇನೆ. ಆದರೆ ಮುದುಕನಾಗಿ – ಆದರೆ ಅಂದಿನ ಮರಗಳಿವೆ ಅಮರವಾಗಿ. ಅಂದು ಆ ಮರಗಳು, ಆ ಮೈದಾನ, ಆ ಆವರಣ, ಆ ಒಟ್ಟಾದ ದೃಶ್ಯ Startford upon Avon ಆಗಿತ್ತು.

ಈಗ ಡಾ. ವಿ.ಕೃ. ಗೋಕಾಕರ ಸಮುದ್ರದಾಚೆಯಿಂದ ಪ್ರವಾಸ ಸಾಹಿತ್ಯದ ಕೆಲವು ಸಾಲು ನೆನಪಾಗುತ್ತವೆ. ಅವು ಶ್ರೀ ಮತ್ತು ಶೇಕ್ಸ್‌ಪಿಯರ್ ಅವರಿಗೆ ಸಂಬಂಧಿಸಿದುವು. ೨೬ ಏಪ್ರಿಲ್ ೨೬ರ ಓಲೆಯಲ್ಲಿ ಶೇಕ್ಸ್‌ಪಿಯರ್‌ನ ಜನ್ಮಸ್ಥಾನವಾದ ಸ್ಟ್ರಾಟ್‌ಪೋರ್ಡಿಗೆ ಹೋಗಿಬಂದ ಸಂದರ್ಭವನ್ನು ವರ್ಣಿಸುತ್ತ ಗೋಕಾಕರು ಸ್ಟ್ರಾಟ್‌ಪೋರ್ಡಿನಲ್ಲಿ ತಾವು ಕಂಡ ಶೇಕ್ಸ್‌ಪಿಯರ್‌ನ ಹುಟ್ಟಿದ ಮನೆ, ಆತ ಕಲಿತ ಪ್ರಾಥಮಿಕ ಶಾಲೆ, ಆತ ಕಟ್ಟಿಸಿದ ಮನೆ, ಆತ ಬೆಳೆದ ತೋಟಗಳನ್ನು ಬಣ್ಣಿಸುತ್ತ 'ಶೇಕ್ಸ್‌ಪಿಯರ್ ತನ್ನ ಆಯುಷ್ಯದ ಕೊನೆಯ ಭಾಗದಲ್ಲಿ ಬಹಳ ದುಡ್ಡನ್ನು ಸಂಪಾದಿಸಿದ. ಸಂಪಾದಿಸಿ ಇಡಿ ಹಳ್ಳಿಯಲ್ಲಿಯೆ ಹಿರಿದಾದ ಮನೆಯನ್ನೂ ಕಟ್ಟಿಸಿದ. ಇಲ್ಲಿ ತನ್ನ ಆಳಿಯ ಹಾಗೂ ಮಗಳೊಂದಿಗೆ ತನ್ನ ಕೊನೆಯ ದಿನಗಳನ್ನೂ ಕಳೆದ 'ನ್ಯೂ ಪ್ಲೇಸ್' ಹಿತ್ತಲಲ್ಲಿ, ತಾನಾಗಿ ಹಚ್ಚಿದ ಮಲಬೆರಿ ಗಿಡದ ಕಡೆಗೆ ತನ್ನ ಕಿಟಕಿಯೊಳಗಿಂದ ನೋಡುತ್ತ 'ಟೆಂಪೆಸ್ಟ್' ನಾಟಕ ಬರೆದನೆಂದು ದಂತೆ ಕಥೆಯಿದೆ..............ಇಲ್ಲಿಯ ಜನನಮರಣ ಪತ್ರಿಕೆಯಲ್ಲಿ

ಶೇಕ್ಸ್‌ಪಿಯರ್‌ನ ವಿಷಯ ಕಾಣಬಹುದು.........ಇದಕ್ಕೂ ಹೆಚ್ಚಾಗಿ ಅವನ ಗೋರಿ; ಶೇಕ್ಸ್‌ಪಿಯರ್‌ನ ವಿಷಯಕ್ಕೆ ಇದೊಂದೆ ದಿವ್ಯವಾದ ಸತ್ಯ. ಉಳಿದುದೆಲ್ಲ ದಂತಕಥೆ ಕೂಡಿದ ಐತಿಹ್ಯ. ಒಂದು ಸಣ್ಣ ಕಲ್ಲಿನ ಮೇಲೆ ಮೃತ್ಯು ಶ್ಲೋಕವನ್ನೂ ಕೊರೆದಿದ್ದಾರೆ. 'ಗೆಳೆಯ! ನನ್ನ ಎಲುವುಗಳನ್ನು ಅಲುಗಾಡಿಸಬೇಕು' ನಾಟಕವನ್ನು ಮುಗಿಸಿ ಸೂತ್ರಧಾರನು ಇಲ್ಲಿ ಬಂದು ಮಲಗಿದ್ದನೆ......ಶೇಕ್ಸ್‌ಪಿಯರ್‌ನ ಸಮಾಧಿಯನ್ನು ಕಂಡು ಕೈಮುಗಿದು ಬರುವುದು ತಮ್ಮ ಜೀವನದ ಮಹದಾಕಾಂಕ್ಷೆಯೆಂದು ತಮ್ಮ ಒಂದು ಭಾಷಣದಲ್ಲಿ ಸ್ಫೂರ್ತಿದಾಯಕವಾಗಿ ಶ್ರೀಯವರು ಹೇಳಿದರು. ಇನ್ನು ಮುಂದಾದರೂ ಅವರು ಬರಹುದು....." ಇಲ್ಲ ಅವರು ಬರಲಿಲ್ಲ. ಅಲ್ಲಿಂದ ಹೋಗಲಿಲ್ಲ ಶೇಕ್ಸ್‌ಪಿಯರ್‌ನಂತೆ ತಮ್ಮ ಜೀವನ ನಾಟಕವನ್ನು ಪೂರೈಸಿ ಧಾರವಾಡದ ರುದ್ರಭೂಮಿಯಲ್ಲಿಯೆ ಶಾಶ್ವತ ಶಯನ ಹಾಕಿದರು. ಪ್ರಥಮ ಪ್ರಾಚಾರ್ಯರಾಗಿ ತಾವು ಕಟ್ಟಿ ಬೆಳೆಸಿದ ಮಹಾವಿದ್ಯಾಲಯವೊಂದರ ಅಡಿಯಲ್ಲೆ ಸಮಾಧಿ ಹೊಂದಿದರು. ಇಂದು ಸರಸ್ವತಿಯ ವಿದ್ಯಾಗಿರಿ ನಿಂತಿರುವುದು ಶ್ರೀಯವರ ಸಮಾಧಿಯ ಮೇಲೆಯೆ.

ಶೇಕ್ಸ್‌ಪಿಯರ್‌ನ ಹಾಗೆ ಶ್ರೀಯವರೂ ಲಕ್ಷ್ಮಿಯನ್ನೂ ಸಂಪಾದಿಸಿದರು; ಸರಸ್ವತಿಯನ್ನೂ ಸಂಪಾದಿಸಿದರು. ಇಂಗ್ಲೀಷ್ ಕಾವ್ಯಶ್ರೀಗೆ ಕನ್ನಡ ನಾಡಿನ ಇಳಕಲ್ ಸೀರೆ ಉಡಿಸಿದರು. ಕನ್ನಡದ ಹರಿಕಾರರಾಗಿ ನಾಡಿನ ಮೂಲೆ ಮೂಲೆಯನ್ನು ಸಂಚರಿಸಿದರು. ಕನ್ನಡದ ಪ್ರಚಾರಕ್ಕೆ ಕಂಕಣ ತೊಟ್ಟು ನಿಂತರು. ಇಂಗ್ಲೀಷ್ ಸರಸ್ವತಿಯೂ ಅವರಿಗೆ ಪ್ರೀತಿ, ಕನ್ನಡ ಸರಸ್ವತಿಯೂ ಅವರಿಗೆ ಪ್ರೀತಿ, ಇಂಗ್ಲೀಷ್ ಕಾವ್ಯದ ಸೊಬಗನ್ನೂ, ಇಂಗ್ಲೀಷ್ ನಾಟಕಗಳ, ಗ್ರೀಕ್ ಟ್ರ್ಯಾಜಿಡಿಗಳ ರೂಪವನ್ನು ರೂಪಾಂತರಿಸಿ ಕನ್ನಡ ಕಣಜವನ್ನು ತುಂಬಿದರು. ಇದರಲ್ಲಿ 'ಅಶ್ವತ್ಥಾಮನ್' ಒಂದು. ಅಶ್ವತ್ಥಾಮನ್ ಗ್ರೀಕ್ ರುದ್ರನಾಯಕನಂತೆ ದುರಂತ ಸಾವನ್ನಪ್ಪುತ್ತಾನೆ. ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ; ಚಿರಂಜೀವಿಯಾದ ಈ ಮಹಾಭಾರತದ ಮಹಾಪುರುಷನನ್ನು ಹೀಗೆ ಕೊಲೆಗೈಯುವುದೆ? 'ಅಶ್ವತ್ಥಾಮನ್' ಕನ್ನಡದಲ್ಲಿ ಕೋಲಾಹಲವನ್ನೆಬ್ಬಿಸಿತು. ಇದು Sacrilege ಎಂದರು. ಶ್ರೀಯವರನ್ನು ಸನಾತನ ಭಾವುಕರು ತೆಗಳಿದರು. ಶ್ರೀಯವರಿಗೆ ಇನ್ನೊಂದು ಪೆಟ್ಟು. 'ಅಶ್ವತ್ಥಾಮನ್' ಹಳಗನ್ನಡದ ಕಬ್ಬಿಣದ ಕಡಲೆಯನ್ನು ನುರಿಸಲಾರದವರೂ ಈ ಕೋಲಾಹಲದಲ್ಲಿ ಸೇರಿಕೊಂಡು ಬಿರುಗಾಳಿ ಬಿರುಸಾಗುವಂತೆ ಮಾಡಿದರಂತೆ.

ಹೇಗಿದೆ? ಸ್ವಂತ ಬಾಳಿನಲ್ಲಿ ತಿಂದ ಸಾವು ನೋವುಗಳ ಪೆಟ್ಟುಗಳನ್ನು ಮರೆಯಲೆಂದು, ಕನ್ನಡ ತಲೆಯೆತ್ತುವ ಬಗೆಯೆಂದು ಅಶ್ವತ್ಥಾಮನನ್ನು ಗ್ರೀಕ್ ನಾಯಕನನ್ನಾಗಿ ಮಾಡಿ ಕನ್ನಡದಕ್ಕೆ ನೀಡಿದರೆ, ಅವರ ಜೋಳಿಗೆಯಲ್ಲಿ ಬಿದ್ದದ್ದು ಕಲ್ಲುಗಳು. ಸೇತುವೆ ಕಟ್ಟುವ ಹಗ್ಗ ಹಾವಾಗಿತ್ತು. ಸೃಜನ ಶೀಲ ಕಲ್ಪನೆಗೆ. ಶಿಲ್ಪಕ್ಕೆ ಘಜನಿಮಹಮ್ಮದನ ಕೊಡತಿಯ ಪೆಟ್ಟು. ಈ ಪೆಟ್ಟು ಬಿದ್ದದ್ದು ೧೯೩೦ರ ಸುಮಾರು. ಅದೇ ಹೊತ್ತಿಗೆ ಅವರಿಗ ಬೆಂಗಳೂರಿಗೆ ವರ್ಗಾವಣೆ.

೧೯೩೭ರ ಹೊತ್ತಿಗೆ ಶ್ರೀಯವರು ಮತ್ತೆ ಚೇತರಿಸಿಕೊಂಡರು. ಕರ್ನಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಕನ್ನಡ ನಾಡು ನುಡಿಗಳಿಗೆ ತಮ್ಮನ್ನೇ ಅರ್ಪಿಸಿಕೊಂಡರು. ಊರೂರಿಗೆ ವಸಂತ ಸಾಹಿತ್ಯೋತ್ಸವಗಳ ಉಪಕ್ರಮ. ಇದು ಶ್ರೀಯವರ ಕಲ್ಪನಾ ಶಿಶು. ಅದೇ ವರ್ಷ ಮೇ ತಿಂಗಳಲ್ಲಿ ಗದಗಿನಲ್ಲಿ ಜರುಗಿತು, ಈ ವಸಂತ ಸಾಹಿತ್ಯೋತ್ಸವ, ನಾನು ಅದೇ ಎಂ.ಎ. ಪರೀಕ್ಷೆ ಮುಗಿಸಿ ಬಂದಿದ್ದೆ. ಬಿ.ಎಂ.ಶ್ರೀಯವರು ನಮ್ಮ ಕನ್ನಡ ಪರೀಕ್ಷಕರಾಗಿದ್ದರು. ಶ್ರೀಯವರ ಪರಿಚಯ ಮಾಡಿಕೊಟ್ಟರು, ನಮ್ಮ ಗುರುಗಳಾದ ಮುಗಳಿ ಅವರು. ಶ್ರೀಯವರನ್ನು ಮನೆಗೆ ಚಹಕ್ಕಾಗಿ ಆಮಂತ್ರಿಸಿದೆ – ಅವರು ಎಂ.ಎ. ಪರೀಕ್ಷಕರೆಂದಲ್ಲ, ಕನ್ನಡ ಶಕುಂತಲೆಯನ್ನು ಸಾಕಿ ಬೆಳೆಸಿದ ಕಣ್ವರೆಂದು. ನನ್ನಂತಹ ಅಲ್ಪನೂ ಉಪಾಹಾರಕ್ಕಾಗಿ ಆಮಂತ್ರಿಸಿದಾಗ ಶ್ರೀಯವರು ಬಂದರಲ್ಲ, ಅದು ಅವರ ದೊಡ್ಡ ಗುಣ. ಫರ್ನೀಚರ್ ಇಲ್ಲದ ಒಂದು ಸಣ್ಣ ಕೋಣೆಯಲ್ಲಿ ಆ ಮಹಾವ್ಯಕ್ತಿ ಗಾದೆಗೆ ಆತುಕೊಂಡು ಕುಳಿತು ಚಹಾ ಸೇವಿಸಿದ ಚಿತ್ರ ಇನ್ನೂ ನನ್ನ ಕಣ್ಣ ಮುಂದಿದೆ. ಅವರ ಕಣ್ಣ ಮುಂದೆ ಗೋಡೆಗೆ ನೇತುಹಾಕಿದ್ದ ನಮ್ಮ ಕಾಲೇಜ್ ಕರ್ನಾಟಕ ಸಂಘದ ವಾರ್ಷಿಕೋತ್ಸವದ ಒಂದು ಫೋಟೊ. ಮುಖ್ಯ ಅತಿಥಿಯಾಗಿ ಬಂದಿದ್ದ ಎಸ್.ಎಸ್. ಸುಬ್ಬರಾಯರ, ಅವರ ಧರ್ಮ ಪತ್ನಿಯ ಚಿತ್ರಗಳನ್ನು ನೋಡಿದರು. ಕಾಲೇಜ್ ಸಮಾಚಾರ ಕೇಳಿಕೊಂಡರು. ಅವರ ಶೇಕ್ಸ್‌ಪಿಯರ್ ಭಾಷಣ ಧಾರವಾಡ ಊರಿಗೇ ಮಂತ್ರ ಹಾಕಿದಂತಾಗಿತ್ತು ಎಂದು ನಾನು ಹೇಳಿದಾಗ ನಕ್ಕಿದ್ದರು. ಗದಗ ಮಹಾಲಕ್ಷ್ಮೀ ಥಿಯೆಟರ್‌ನಲ್ಲಿ ನಡೆದ ವಸಂತೋತ್ಸವಕ್ಕೆ ಪೀಠಿಕಾ ರೂಪದಲ್ಲಿ ಶ್ರೀಯವರು ಮಾತನಾಡಲು ಎದ್ದಾಗ ಅವರ ನಾಟ್ಯಪೂರ್ಣ ನಿಲುವು ಸ್ಫೂರ್ತಿಪ್ರದವಾಗಿತ್ತು. ಮಗ್ಗುಲಿಗೇ ನೇತು ಹಾಕಿದ್ದ ಕನ್ನಡ ಭೂಪಟ ತೋರುತ್ತ – "ಇಕೊಳ್ಳಿ, ಈಕೆ ನಮ್ಮ ಕನ್ನಡ ತಾಯಿ. ಹಳೆಯ ಮುತ್ತೈದೆ, ಬಡವಾಗಿ ಹೋಗಿದ್ದಾಳೆ. ಎಷ್ಟೇ ಬಡವಾಗಿದ್ದರೂ ಮಕ್ಕಳು ಆಕೆಯನ್ನು ಕೀಳಾಗಿ ಕಾಣಬಾರದು" ಎಂದು ಎದೆದುಂಬಿದ ಭಾವನೆ, ಬಾಯಿ ತುಂಬಿದ ಮಾತು ನಮ್ಮನ್ನು ಮುಗ್ಧಗೊಳಿಸಿಬಿಟ್ಟಿದ್ದವು. ಎಲ್ಲೆಡೆಗೂ ಶ್ರೀಕಂಠಯ್ಯನವರ ಕಂಠಶ್ರೀ ವರ್ಣನೆಯೆ.

ಅದೇ ವರ್ಷದ ಡಿಸೆಂಬರ್‌ನಲ್ಲಿ ಬಳ್ಳಾರಿ ಸಾಹಿತ್ಯ ಸಮ್ಮೇಳನ. ಆ ಹೊತ್ತಿಗೆ ನಾನು ಗದಗಿನಿಂದ 'ವಸಂತ' ಎಂಬ ಮಾಸ ಪತ್ರಿಕೆಯೊಂದನ್ನು ಆರಂಭಿಸಿದೆ. ಪತ್ರಿಕೆಗಾಗಿ ಶ್ರೀಯವರಿಂದ ಆಶೀರ್ವಾದ ಬೇಡಿದೆ. ಶ್ರೀಯವರು ಕಳಿಸಿದ ಸಂದೇಶ ಇಂದಿಗೂ ಕನ್ನಡ ನುಡಿಗಾಗಿ ಅನ್ವಯಿಸುವ ಅವರಿತ್ತ, ಅವರ ಬಾಳಿನ ಮಂತ್ರದ, ಜಪದ ಸಂದೇಶವೇ ಆಗಿದೆ.

"ಶ್ರೀ ವೀರನಾರಾಯಣಸ್ವಾಮಿಯ ಕಿಂಕರನಾದ ಕುಮಾರವ್ಯಾಸ ಯೋಗೀಂದ್ರನಿಂದ ಕನ್ನಡಿಗರಿಗೆಲ್ಲಾ ಪವಿತ್ರ ಭೂಮಿಯಾದ ಗದುಗಿನಲ್ಲಿ ಮತ್ತೆ ಕನ್ನಡದ ಬೆಳಕು ಬೆಳಗುವುದು

ನ್ಯಾಯವಾಗಿದೆ. ಅಲ್ಲಿನ ಸಾಹಿತ್ಯ ಭಕ್ತರಾದ ಹಿರಿಯರೂ, ಕಿರಿಯರೂ ಒಳ್ಳೆಯ ಹುರುಪಿನಿಂದ ಕೆಲಸ ಮಾಡುತ್ತಿದ್ದಾರೆಂಬುದು ಕನ್ನಡ ನಾಡು ಬಲ್ಲ ವಿಷಯ. ಈ ಸಲ ವಸಂತೋತ್ಸವದಲ್ಲಿ ಉತ್ತರ ಕರ್ನಾಟಕಕ್ಕೆ ಆ ಭಕ್ತರು ಮಾರ್ಗದರ್ಶಿಗಳಾದರು. ಈಚೆಗೆ ಒಂದು ಸಂಘವನ್ನೇರ್ಪಡಿಸಿದರು. ಈಗ "ವಸಂತ" ಎಂಬ ಮಾಸ ಪತ್ರವನ್ನು ಹೊರಡಿಸುವವರಿದ್ದಾರೆಂದು ಕೇಳಿ ತುಂಬ ಸಂತೋಷವಾಗಿದೆ. ಕನ್ನಡಮ್ಮನ ಭಕ್ತಿಯ ಬೀಜ ಎಲ್ಲಾ ಕಡೆಯಲ್ಲಿಯೂ ಮೊಳೆತು ಚಿಗುರಿ ಹೂವಾಗುತ್ತಿರುವುದೂ ಕನ್ನಡಮರಿ ಕೋಗಿಲೆಗಳು ಎಲ್ಲೆಲ್ಲಿಯೂ ಮಾಗಿಯ ಕೊರಲನ್ನು ಸಡಿಲಿಸಿ ವಸಂತನನ್ನು ಬರಮಾಡಿ ಕೂಗುತ್ತಿರುವುದೂ ಯಾವ ಕನ್ನಡ ಪ್ರೇಮಿಗೆ ಆನಂದವನ್ನು ಉಕ್ಕಿಸದು?

ಕನ್ನಡದ ಬೆಲೆಯೂ, ಬೆಳೆಯೂ ಹೆಚ್ಚಬೇಕಾಗಿದೆ. ಕನ್ನಡದ ಚಿನ್ನದೆಳೆ ಕನ್ನಡ ನಾಡನ್ನೆಲ್ಲಾ ಮತ್ತೊಮ್ಮೆ ಕಟ್ಟಿ ಒಕ್ಕೂಟ ಮಾಡಬೇಕಾಗಿದೆ. ಕನ್ನಡದ ತೊಡಕುಗಳನ್ನೂ ಹಗೆಗಳನ್ನೂ ಮೆಟ್ಟಿ, ಬಿಡಿಸಿ ಕನ್ನಡದ ಬಳ್ಳಿಯನ್ನು ಹಬ್ಬಿಸಬೇಕಾಗಿದೆ. ನೂತನ ಯುಗದ, ನವೀನ ಜೀವನದ, ಹೊಸ ಧೀರತನದ, ಸಾಹಸ ಕಾರ್ಯಗಳನ್ನು ಕನ್ನಡಿಗರ ಎದೆಯಲ್ಲಿ ಹೊಮ್ಮಿಸಬೇಕಾಗಿದೆ. ಮಕ್ಕಳನ್ನು ಕನ್ನಡದಲ್ಲಿ ಕಲಿಸಿ, ಹೆಣ್ಮಕ್ಕಳನ್ನು ನಲಿಸಿ, ಗಂಡುಗಲಿಗಳನ್ನು ಕನ್ನಡದಲ್ಲಿ ಒಲಿಸಬೇಕಾಗಿದೆ. ಈ ದೊಡ್ಡ ಕೆಲಸಕ್ಕೆ ಎಷ್ಟು ಜನ ಸಾಹಿತಿಗಳು, ಎಷ್ಟು ಪತ್ರಿಕೆಗಳು, ಎಷ್ಟು ಉಪನ್ಯಾಸಗಳು, ಆದರೂ ಸಾಲದಾಗಿದೆ. ಶ್ರೀ ಎನ್.ಕೆ. ಕುಲಕರ್ಣಿಯವರು ಪ್ರಾರಂಭಿಸುತ್ತಿರುವ ಈ 'ವಸಂತ'ಕ್ಕೆ ಪರಿಷತ್ತಿನ ಪರವಾಗಿಯೂ, ನನ್ನ ಪರವಾಗಿಯೂ ಸ್ವಾಗತವನ್ನು ಬಯಸಿ, ಅದರ ಅಭಿವೃದ್ಧಿಗೆ ಕನ್ನಡಿಗರು ನೆರವಾಗಿ ನಿಲ್ಲುವರೆಂದು ಹಾರೈಸುತ್ತೇನೆ. ಸಿರಿಗನ್ನಡಂ ಗೆಲ್ಗೆ, ಕನ್ನಡ ತಾಯ್ ಬಾಳ್ಗೆ."

[–ಬಿ.ಎಂ. ಶ್ರೀಕಂಠಯ್ಯ]

ಬಳ್ಳಾರಿಯ ಸಾಹಿತ್ಯ ಸಮ್ಮೇಳನದಲ್ಲಿ 'ವಸಂತ' ಪತ್ರಿಕೆ ಅಂದಿನ ಅಧ್ಯಕ್ಷ ಶ್ರೀ ದಿವಾಕರ ರಂಗರಾಯರಿಂದ ಬಿಡುಗಡೆ ಆಯಿತು. ಆದರೆ ಅಂದಿನ ಸಮ್ಮೇಳನದಲ್ಲಿ ಉಪಾಧ್ಯಕ್ಷರಾಗಿದ್ದ ಶ್ರೀಯವರನ್ನು ಜರ್ಜರಿತಗೊಳಿಸಿದ್ದು 'ಕರ್ನಾಟಕ ಸಾಹಿತ್ಯ ಪರಿಷತ್ತೊ', 'ಕರ್ಣಾಟಕ ಸಾಹಿತ್ಯ ಪರಿಷತ್ತೋ' ಎಂಬ ನ–ಣವಾದ. 'ನೊಣ' ವಾದವೆಂದು ಅದು ಹೆಸರಾಯಿತು. ಶ್ರೀಯವರ ಒಲವು ಏನೇ ಇದ್ದರೂ ಅಂದಿನ ಬಿಸಿ ಚರ್ಚೆಯ ಅಂತಿಮ ನಿರ್ಣಯಕ್ಕೆ ಪರಿಷತ್ತು 'ಅಸ್ತು' ಎನ್ನಬೇಕಾಯಿತು–ಅದು 'ಕನ್ನಡ ಸಾಹಿತ್ಯ ಪರಿಷತ್ತು' ಎಂಬ ಠರಾವು. ಇಂತಹದೇ ತರ್ಕ, ವಾದ ವಿವಾದಗಳನ್ನು ವರುಷ ವರುಷವೂ ಶ್ರೀಯವರು ಎದುರಿಸಿ ಎದುರಿಸಿ ಹಣ್ಣಾದರು. ಆದರೂ ಬಹಿರಂಗದಲ್ಲಿ ತಮ್ಮ ಆಂತರಿಕ ವ್ಯಥೆಯನ್ನವರು ತೋರಗೊಡಲಿಲ್ಲ. ಆಪ್ತಮಿತ್ರರೆದುರಿಗೆ ಮಾತ್ರ ತೋಡಿಕೊಳ್ಳುತ್ತಿದ್ದರೆಂದು ತೋರುತ್ತದೆ.

೧೯೪೦ರ ಸಾಹಿತ್ಯ ಸಮ್ಮೇಳನ ಧಾರವಾಡದಲ್ಲಿ ಜರುಗಿತು. ಕಡಪಾ ಮೈದಾನದಲ್ಲಿ

ವಿಶಾಲವಾದ ಚಪ್ಪರ ತಲೆಯೆತ್ತಿತ್ತು. ಆ ಸಮ್ಮೇಳನದಲ್ಲಿ ನಾನು ಮತ್ತು ಎಂ.ಜಿ. ವಿರೂಪಾಕ್ಷನ್ ಎಂಬ ಮಿತ್ರರು ಕಾರ್ಯದರ್ಶಿಗಳಾಗಿ ಕಾರ್ಯಮಾಡಿದೆವು ಈ ಸಂದರ್ಭದಲ್ಲಿ ಶ್ರೀಯವರ ಇನ್ನಷ್ಟು ಸಮೀಪದ ಸಂಪರ್ಕ ನನಗೆ ಬಂತು. ಶ್ರೀಯವರು ಮಾಸ್ತಿಯವರು ಅಣ್ಣ ತಮ್ಮಂದಿರಂತೆ ಅನ್ಯೋನ್ಯವಾಗಿ ಕಾಣುತ್ತಿದ್ದರಲ್ಲದೆ, ಕೂಡಿ ಕೆಲಸ ಮಾಡುತ್ತಿದ್ದರು. ಮಹಿಳಾ ಗೋಷ್ಠಿಯ ಕಾರ್ಯಕ್ರಮದಲ್ಲಿ ಕೆಲವು ಜಾನಪದ ಗೀತೆಗಳನ್ನು ಸುವಾಸಿನಿಯರು ಸುಶ್ರಾವ್ಯವಾಗಿ ಹೇಳಿದಾಗ ಶ್ರೀಯವರು ಉತ್ಸಾಹವುಕ್ಕಿ ಬಂದು – 'ಚೆಲುವೆಯರಾದ ನಮ್ಮ ಮಹಿಳೆಯರಿಂದ ಚೆಲುವಾದ ಗರತಿಯ ಪದಗಳನ್ನು ಕೇಳಿದಿರಿ' ಎಂದು ಮುಕ್ತಾಯದಲ್ಲಿ ಮುಕ್ತ ಕಂಠದಿಂದ ಮೆಚ್ಚಿ ಮಾತನಾಡಿದಾಗ ಕಾರ್ಯದರ್ಶಿಯಾಗಿ ಮಗ್ಗುಲಲ್ಲೇ ಕುಳಿತ ನಾನುಶ್ರೀಯವರ ಮುಖಶ್ರೀಯನ್ನು ನೋಡಿ ಸಂತೋಷಪಟ್ಟೆ

ಪರಿಷತ್ತಿನ ಉಪಾಧ್ಯಕ್ಷ ಪದವಿ ಅವರಿಗೆ ನೆಮ್ಮದಿಯನ್ನು ತರಲಿಲ್ಲ. 'ಹೆಜ್ಜೆ ಹೆಜ್ಜೆಗೂ ಅವರು ವಿರೋಧವನ್ನು ಎದುರಿಸಬೇಕಾಯಿತು. ಅವರ ಜೀವಮಾನದ ಅತ್ಯಂತ ಜಯಪ್ರದವಾದ ಅವಧಿಯಲ್ಲಿಯೂ ಅವರು ನೋವಿನ ನಿಟ್ಟುಸಿರು ಬಿಡದೆ ಇರಲಾಗಲಿಲ್ಲ. ನೋವಿನ ನೆಳಲಿಲ್ಲದ ನಲಿವನ್ನು ಅವರು ಪಡೆದು ಬಂದಿರಲಿಲ್ಲ'. ಎಂದು ಶ್ರೀಯವರ ಸಹೃದಯರು ನುಡಿದಿದ್ದಾರೆ. (ಜಿ. ಶಂಕರಯ್ಯ – ಬಿ.ಎಂ.ಶ್ರೀಯವರ ಬದುಕು ಬರೆಹ – ಪು. ೧೩೩)

ಶ್ರೀಯವರು ೧೯೪೨ರಲ್ಲಿ ನಿವೃತ್ತಿ ಹೊಂದಿ ಪ್ರೊಫೆಸರರ ಗೌನ್ ಕಳಚಿಟ್ಟರು. ಆಗ ಎರಡು ವರ್ಷ ಅಜ್ಞಾತವಾಸ ಅನುಭವಿಸಿದರೆಂದು ಹೇಳಬೇಕು. ಒಮ್ಮೆಲೆ ಶ್ರೀಕಂಠವಾಣಿ ಮೂಕವಾಯಿತು. ಬದುಕಿನ ಒಂಟಿತನ ಅವರನ್ನು ತಿಕ್ಕಿಮುಕ್ಕಿತು. ಸೇವಾ ನಿವೃತ್ತಿಯೊಂದಿಗೆ ಪರಿಷತ್ತಿನ ಉಪಾಧ್ಯಕ್ಷ ಕುರ್ಚಿಯನ್ನೂ ಬಿಟ್ಟುಕೊಟ್ಟರು. ಮೈಸೂರು ರುಮಾಲನ್ನು ತೆಗೆದಿಟ್ಟು ಟೊಪ್ಪಿಗೆ ಧರಿಸತೊಡಗಿದರು.

೧೯೪೪ರಲ್ಲಿ ಶ್ರೀಯವರು ಧಾರವಾಡಕ್ಕೆ ಬಂದುಬಿಟ್ಟರು – ಹೊಸ ಕಾಲೇಜಿನ ಪ್ರಿನ್ಸಿಪಾಲ್ ಎಂದು. ೧೯೪೨ರಿಂದ ೪೪ರವರೆಗೆ ಏನೊ ಒಂದು ಉಪೇಕ್ಷಾಭಾವ, ಏನೊ ಒಂದು ಒಂಟಿತನ ಅನುಭವಿಸಿದ ಶ್ರೀಯವರು ಬದುಕಿನೊಂದು ಬದಲಾವಣೆ ಯೆಂದು ಕೆ.ಇ.ಬೋರ್ಡ್ ಕಾಲೇಜಿನ (ಮುಂದೆ ಜೆ.ಎಸ್.ಎಸ್. ಕಾಲೇಜ್) ಪ್ರಾಚಾರ್ಯ ಸ್ಥಾನವನ್ನು ಸ್ವೀಕರಿಸಿದ್ದರು. ಧಾರವಾಡದ ಮದಿಹಾಳದ ಮೂಲೆಯಲ್ಲಿ, ಮೊದಲು ಕಟ್ಟಿ ಕಾಲೇಜ್ ಕೆಲಕಾಲ ತಲೆಯೆತ್ತಿ ನಿಂತ ಸ್ಥಳದಲ್ಲಿಯೆ ಹೊಸ ಕಾಲೇಜು. ಕಟ್ಟಿಯವರ ಸ್ಥಾನದಲ್ಲಿ ಶ್ರೀಯವರು.

ಆಗಿನ ಶ್ರೀಯವರನ್ನು ಕಂಡಾಗ ಕೃಷ್ಣ ಪಕ್ಷದ ಚಂದ್ರನನ್ನು ಕಂಡಂತಾಗಿತ್ತು. ಚೈತನ್ಯವೆಲ್ಲಾ ಬಸಿದುಹೋಗಿಬಿಟ್ಟ ಮೂರ್ತಿ; ಬೇಂದ್ರೆ ಅವರ 'ನೀ ಹೀಂಗ ನೋಡಬ್ಯಾಡ

ನನ್ನ' ಎಂಬ ಕವಿತೆಯ – 'ಹುಣ್ಣಿವಿ ಚಂದಿರನ ಹೆಣಾ ಬಂತೊ ಮುಗಿಲಾಗ ತೇಲತ ಹಗಲ' ಎಂಬ ಸಾಲು ನೆನಪಿಗೆ ಬಂತು. ಧಾರವಾಡದಲ್ಲಿ ಶ್ರೀಯವರು ಸಾಹಿತ್ಯ ಸಮ್ಮೇಳನದ ಹೊತ್ತಿಗೆ ತೋರಿದ ಉತ್ಸಾಹ, ಉತ್ಸುಕತೆಗಳು ಈಗ ಕಾಣಲಿಲ್ಲ. ಸಾರ್ವಜನಿಕ ಚಟುವಟಿಕೆಗಳಲ್ಲಿ ಈಗ ಅವರು ಹೆಚ್ಚು ಬರೆಯುತ್ತಿರಲಿಲ್ಲ. ಅವರೇ ಆರಂಭಿಸಿದ್ದ ಕಾವ, ಜಾಣ ಪರೀಕ್ಷೆಯ ವರ್ಗಗಳು ವಿದ್ಯಾವರ್ಧಕ ಸಂಘದಲ್ಲಿ ಜರುಗುತ್ತಿದ್ದರೂ ಅದರಲ್ಲಿ ಅವರ ಸಕ್ರಿಯ ಆಸಕ್ತಿ ಒಡೆದು ಕಾಣುತ್ತಿರಲಿಲ್ಲ. ಕಾವ, ಜಾಣಗಳಿಗೆ ನಾನೂ ಆಗ ಪಾಠಹೇಳುತ್ತಿದ್ದೆ. ವಿದ್ಯಾವರ್ಧಕ ಸಂಘದ ಅಟ್ಟದ ಮೇಲೆ ಜರುಗಿದ ಕಾವ–ಜಾಣಕ್ಕೆ ಸಂಬಂಧಿಸಿದ ಒಂದೇ ಒಂದು ಸಮಾರಂಭಕ್ಕೆ ಅವರು ಅಧ್ಯಕ್ಷರಾಗಿದ್ದರು. ಅವರನ್ನು ಮದಿಹಾಳದಿಂದ ನಾನೇ ಟಾಂಗಾದಲ್ಲಿ ಕರೆತಂದಿದ್ದೆ. ಸಾದಾ ಕೋಟು–ಟೊಪ್ಪಿಗೆ ವೇಷದಲ್ಲಿ ಅವರು ಬಂದಿದ್ದರು. ರಾಜಸೇವಾಸಕ್ತರ ಚಿನ್ನದ ಬಿರುದುಬಾವಲಿಯ ಕೊರಳ ಸರ ಕಣ್ಮರೆಯಾಗಿತ್ತು. ಧಾರವಾಡದ ಸಾದಾ ನಾಗರಿಕನ ವೇಷದಲ್ಲಿ ಶ್ರೀಯವರ ಮುಖ ಏನೋ ಭಣಭಣ ಎನ್ನುತ್ತಿತ್ತು. ಅವರ ವಾಕ್‌ಶಕ್ತಿ, ಅವರ ಮುಖದ ತೇಜ, ಅವರ ವ್ಯಕ್ತಿತ್ವದ ಓಜ ಕಂದಿದ್ದವು. ಬಾಳಸಂಜೆಯಲ್ಲಿ, ಪಡುವಣದ ನೇಸರಿನಂತೆ ಪ್ರಖರತೆ ಉಡುಗಿ ಅವರ ಮುಖದಲ್ಲಿ ದೈನ್ಯತೆ ಮನೆಮಾಡಿಕೊಂಡಿತ್ತು. ಅಸಹಾಯಕತೆಯ ಉತ್ತರೀಯವನ್ನು ಹೊದ್ದುಕೊಂಡು ನಿಂತಂತೆ ತೋರುತ್ತಿತ್ತು. ಬ್ಯಾಟಿಂಗ್ ಸಾಮರ್ಥ್ಯ ಕಳೆದುಕೊಂಡ ನಿವೃತ್ತ ಕ್ರೀಡಾ ಪಟುವಿನಂತೆ, ಗಾಯನ ಶಾರೀರದ ಕಂಠಶ್ರೀ ಕಳೆದುಕೊಂಡ ಹಾಡುಗಾರನಂತೆ, ಸವ್ಯಸಾಚಿತ್ವವನ್ನು ಕಳೆದುಕೊಂಡ ಧನುರ್ವಿಧ್ಯಾವಿಶಾರದನಂತೆ, ಪಾರ್ಶ್ವನಾಥಮುನಿಗೆ ಪಕ್ಕಾದ ಒಬ್ಬ ನಟನಂತೆ ಅವರು ಕಂಡರು, ಆ ವಿರಕ್ತ ಸಂಸಾರಿ!

ಶ್ರೀಯವರು ಧಾರವಾಡಕ್ಕೆ ಬಂದುದು ತಮ್ಮ ನಾಟಕದ ಕೊನೆಯ ದೃಶ್ಯ ಮುಗಿಸಿ ಅಂಕ ಪರದೆಯನ್ನು ಇಳಿಬಿಡಲಿಕ್ಕೆಂಬುದು ಯಾರಿಗೆ ತಿಳಿದಿತ್ತು? ಶ್ರೀಯವರು ಧಾರವಾಡದಲ್ಲಿ ಎರಡು ವರ್ಷ ಮಾತ್ರ ಇದ್ದರು – ೧೯೪೪ ರಿಂದ ೧೯೪೬. ಕೇವಲ ಹತ್ತು ವರ್ಷಗಳ ಹಿಂದೆ ಧಾರವಾಡದಲ್ಲಿ ಹುಣ್ಣಿಮೆಯ ಮುಂದಿನ ಬೆಳ್ದಿಂಗಳಿನಲ್ಲಿ, ಶ್ರೀಯವರಿಂದ ಶೇಕ್ಸ್‌ಪಿಯರ್ ಜೀವಂತವಾದುದನ್ನು ಕಂಡಿದ್ದೆ. ಅದೇ ಧಾರವಾಡದಲ್ಲಿ ಹತ್ತು ವರ್ಷಗಳ ನಂತರ ಶ್ರೀ ಅವರು ಅಗ್ನಿ – ಸಮಾಧಿ ಹೊಂದುವುದನ್ನು ನೋಡಿದೆ. ಸ್ವಾತಂತ್ರ್ಯದ ಪೂರ್ವದಲ್ಲಿಯೆ ಈ ಸಾಹಿತ್ಯಶ್ರೀ ಕಣ್ಮರೆಯಾಯ್ತು. ಅದು ಜನವರಿ ೫, ೧೯೪೬. ಅಂದು ಮಧ್ಯಾಹ್ನ ಪ್ರೊ. ರಂ.ಶ್ರೀ. ಮುಗಳಿ, ಅವರನ್ನು ಕಾಣಲೆಂದು ಹೋಗಿದ್ದರು. ಪರಸ್ಪರ ಯೋಗಕ್ಷೇಮದ ಮಾತುಕತೆಯಾದ ಮೇಲೆ ತಾವು ಅದೇ ಬರೆದು ಪ್ರಕಟಿಸಿದ್ದ 'ರನ್ನನ ಕೃತಿ ರತ್ನ' ಎಂಬ ವಿಮರ್ಶಾ ಗ್ರಂಥವನ್ನು ಶ್ರೀಯವರ ಕಣ್ಣಿಗೆ ಹಾಕಿ ಹಿಂತಿರುಗಿದರು. ಇಲ್ಲ, ಹಿಂತಿರುಗಲಿಲ್ಲ, ಗೇಟಿನವರೆಗೂ ಬಂದಿದ್ದರೋ ಇಲ್ಲವೋ ಶ್ರೀಯವರ ಮಗಳು ಕೂಗಿಕೊಂಡರಂತೆ; ಮುಗಳಿ ಅವರು ಮತ್ತೆ ಒಳಗೆ

ಹಿಂತಿರುಗಿದರು. ನೋಡುತ್ತಾರೆ. ಕನ್ನಡ ನಾಡು-ನುಡಿಗಳ ದೊಡ್ಡ ಕಣ್ಣು ಮುಚ್ಚಿಕೊಂಡಿತು; ಶ್ರೀ ಜೀವನನಾಟಕದ ಇತಿಶ್ರೀ!

ಶ್ರೀ ಅವರ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡ ಪುಣ್ಯ ನನ್ನದು. ಅವರ ಪಾರ್ಥಿವ ದೇಹಕ್ಕೆ ಹೆಗಲು ಕೊಟ್ಟ ಹೆಮ್ಮೆ ನನ್ನದು. ಚಂದನದ ಚಿತೆಯಲ್ಲಿ ಶ್ರೀಯವರು 'ಶಾಶ್ವತ ಶಯನ' ಹಾಕಿದಾಗ ಆ ರುದ್ರಭೂಮಿಯ ಗಂಭೀರವಾದ ಕೊನೆಯ ದೃಶ್ಯದಲ್ಲಿ, ಈ ಟ್ರ್ಯಾಜಿಕ್ ಹೀರೋ ಕುರಿತು ನಾನೂ ಸೂತಕದ ಭಾಷಣದ ಭಾಷ್ಪಾಂಜಲಿಯನ್ನರ್ಪಿಸಿದ ಧನ್ಯತೆಯ ಭಾವ ನನ್ನಲ್ಲಿ ಮೂವತ್ತೆಂಟು ವರ್ಷಗಳ ನಂತರವೂ ಉಳಿದಿದೆ. ಚಿತೆಯಿಂದ ಹೊರಟ ಚಂದನದ ಪರಿಮಳ ಶ್ರೀಯವರ ಕೀರ್ತಿಯನ್ನು ಹರಡುವಂತಿತ್ತು. ಶ್ರೀ ಮುದವೀಡು ಕೃಷ್ಣರಾಯರೇ ಮೊದಲಿಗರಾಗಿ ಅನೇಕ ಹಿರಿಯರು ಶ್ರೀಯವರ ಕೀರ್ತಿಶ್ರೀಯನ್ನು ಕೊಂಡಾಡಿದರು. ತಮ್ಮ ಬಳಿ ನಿಂತವರಿಗೆ ಆ ಹೇಮಂತದ ಚಳಿತಾಗದಿರಲೆಂದು ಶ್ರೀಯವರ ಅಗ್ನಿಜ್ವಾಲೆ ಬೆಚ್ಚನೆ ವಾತಾವರಣವನ್ನು ನಿರ್ಮಿಸಿತ್ತು. ಶ್ರೀ ಅವರ ವ್ಯಕ್ತಿತ್ವವೇ ಅಂತಹದು. ಸಾವಿನಲ್ಲೂ ತಮಗಾಗಿ ಇನ್ನೊಬ್ಬರಿಗೆ ತೊಂದರೆ ಆಗಬಾರದು ಎಂಬ ಮನೋಭಾವ.

ಶ್ರೀಯವರ ದೇಹ ಕಣ್ಮರೆಯಾದರೂ ಅವರ ವ್ಯಕ್ತಿತ್ವ ಕಣ್ಮರೆಯಾಗುವಂತಿಲ್ಲ. ಅವರ ವಿನಯ, ಅವರ ಸೌಜನ್ಯ, ಅವರ ಭಾವುಕತೆಯ ಪೌರುಷ, ಅವರ ಗಾಂಭೀರ್ಯ, ಅವರ ಔದಾರ್ಯ, ಅವರ ಪ್ರಾಚಾರ್ಯ ಪೌರುಷ, ಅವರ ಅಧ್ಯಾಪನ ಶಕ್ತಿ, ಓಜ ತೇಜಗಳು, ಅವರ ವಾಕ್‌ಶ್ರೀ, ಅವರ ಕಂಠಶ್ರೀ, ಅವರ ವಾಗ್ಮೀಯತೆಯ ವೈಭವ ಇವು ಯಾವೂ ಕಣ್ಮರೆಯಾಗುವಂತಿಲ್ಲ.

ಶೇಕ್ಸ್‌ಪಿಯರ್ ತಾನು ಹುಟ್ಟಿದ ಸ್ಟ್ರಾಟ್‌ಫೋರ್ಡ್‌ನಲ್ಲೇ ಸಮಾಧಿ ಹೊಂದಿದ. ಅವನ ಪತ್ನಿ, ಅವನ ಕುಟುಂಬದವರೂ ಅಲ್ಲಿಯೆ ತಂತಮ್ಮ ಗೋರಿಗಳನ್ನು ಕಂಡರು. ಶ್ರೀಯವರು ತುಮಕೂರು ಜಿಲ್ಲೆಯ ಸಂಪಿಗೆಯಲ್ಲಿ ಜನ್ಮಿಸಿದರು. ಸಂಪಿಗೆಯಂತೆ ಬೆಳೆದರು. ಇವರ ಊರು ಮಂಡ್ಯ ಜಿಲ್ಲೆಯ ಬೆಳ್ಳೂರು. ಇವರ ಕಾರ್ಯಕ್ಷೇತ್ರ ಮೈಸೂರು, ಬೆಂಗಳೂರು – ಅಖಿಲ ಕರ್ನಾಟಕ ಕನ್ನಡ ನೆಲದ ಮಣ್ಣನ್ನು ತಲೆಗಿಟ್ಟು ಕೊಂಡರು. ಕೂಡಲ ಸಂಗಮ ತೀರ್ಥದಲ್ಲಿ ಸ್ನಾನ ಮಾಡಿದರು. ಕುಮಾರವ್ಯಾಸನಿಗೊಲಿದ ವೀರನಾರಾಯಣನ ದರ್ಶನ ಪಡೆದು ಪುಳಕಗೊಂಡರು. ಕೊನೆಗೆ ಧಾರವಾಡದ ನೆಲದಲ್ಲಿ ತಮ್ಮ ದೇಹ ಇಟ್ಟರು.

ಶ್ರೀಯವರು ಕನ್ನಡ ನೆಲದ, ಕನ್ನಡ ಜಲದ, ಕನ್ನಡ ಜನರ ಕಣ್ಣರೆಂಬುವುದಕ್ಕಿಂತ ಕಣ್ಣೇ ಆಗಿದ್ದರು ಎಂದರೆ ಹೆಚ್ಚು ಸಮರ್ಪಕವಾದೀತಲ್ಲವೆ.

❒

೫. ಶ್ರೀಯವರ ಕನ್ನಡ ಸೇವೆ

■ *ಪ್ರೊ. ಕೆ. ವೆಂಕಟರಾಮಪ್ಪ*

ಪ್ರೊಫೇಸರ್ ಬಿ.ಎಂ.ಶ್ರೀಕಂಠಯ್ಯನವರು ಕನ್ನಡದ ಕಾರ್ಯರಂಗಕ್ಕೆ ಇಳಿದಾಗ ಕನ್ನಡಿಗರ ಹೃದಯಗಳಲ್ಲಿಯೇ ಕನ್ನಡಕ್ಕೆ ಮಾನ್ಯ ಸ್ಥಾನವಿರಲಿಲ್ಲ. ಕನ್ನಡಿಗರ ಅಭ್ಯುದಯ ಇಂಗ್ಲೀಷ್‌ನಿಂದಲೇ ಸಾಧ್ಯವೆಂಬ ನಂಬಿಕೆ ಕನ್ನಡಿಗರಲ್ಲಿ ಮನೆಮಾಡಿಕೊಂಡಿತ್ತು. ಸರ್ಕಾರದ ಆಡಳಿತ ಭಾಷೆಯಂತು ಆಗ ಇಂಗ್ಲೀಷ್; ನ್ಯಾಯಾಂಗ, ಶಿಕ್ಷಣ, ವ್ಯಾಪಾರ ವಾಣಿಜ್ಯೋದ್ಯಮ ಕ್ಷೇತ್ರಗಳಲ್ಲಿಯೂ ಇಂಗ್ಲೀಷ್‌ಗೇ ಸರ್ವಾಧಿಪತ್ಯ. "ವಿಶ್ವವಿದ್ಯಾನಿಲಯ ದಲ್ಲಿ ಕನ್ನಡವನ್ನು ಇಂಗ್ಲೀಷ್‌ನಲ್ಲಿ ಕಲಿಸಬಹುದೆ?" ಎಂದು ಪ್ರಶ್ನಿಸಿದಾಗ ನನ್ನ ಮಾನ್ಯ ಸಹೋದ್ಯೋಗಿಗಳೊಬ್ಬರು, "The medium of instruction in this University is English. I have every Right to teach Kannada through English" ಎಂದು ಗುಡುಗಿದ್ದನ್ನು ಕೇಳಿದ್ದೇನೆ. ಪುಣ್ಯಕ್ಕೆ ಅವರು ಕನ್ನಡ ಪಾಠವನ್ನು ಕನ್ನಡದಲ್ಲಿ ಹೇಳುವುದು ನಿಯಮವಿರೋಧವೆಂದು ವಾದಿಸಲಿಲ್ಲ! ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ, ಎಲ್ಲ ಹಂತಗಳಲ್ಲಿಯೂ ಇಂಗ್ಲೀಷಿನದೇ ಅಧಿಪತ್ಯವಾಗಿ ಕನ್ನಡಕ್ಕೆ ಬಹಿಷ್ಕಾರ ಹಾಕಿದಂತೆಯೇ ಆಗಿತ್ತು. "ನಮ್ಮ ಕಾಲದಲ್ಲಿ ಕನ್ನಡ ಭಾಷೆಯ ವಿಷಯವಾಗಿ ಆಗಲಿ, ದೇಶದ ವಿಷಯವಾಗಿ ಆಗಲಿ, ಜನರಿಗೆ ಅಭಿಮಾನ ಇರಲಿಲ್ಲ. ಯಾವಾನಾದರೊಬ್ಬ ಬಿಳಿಯ ದೊಡ್ಡಮನುಷ್ಯ 'ಇವನು ಒಳ್ಳೆಯ ಮನುಷ್ಯ' ಎಂದು ಹೇಳದರೆ ಸಾಕು. ಆ ಮಾತು ವೈಕುಂಠಕ್ಕೇ ರಹದಾರಿ ಎಂದು ತಿಳಿದುಕೊಳ್ಳುತ್ತಿದ್ದ ಕಾಲ ಅದು, ಎಂದು

ಚ. ವಾಸುದೇವಯ್ಯನವರು ಹೇಳಿದ್ದಾರೆ. (ಸಂಭಾವನೆ ಪುಟ ೯) ಸ್ವಯಂ ಶ್ರೀಕಂಠಯ್ಯನವರೇ ಈ ಕೀಳರಿಮೆ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್)ಗೆ

ಗುರಿಯಾಗಿದ್ದರೆಂದು ತಿಳಿಯಬೇಕು. ಅವರು ಇಂಗ್ಲೀಷ್ ಅಧ್ಯಾಪಕರಾಗಲು ಇಷ್ಟಪಟ್ಟರೇ ಹೊರತು ಕನ್ನಡದ ಹಿರಿಯ ಅಧ್ಯಾಪಕರಾಗಲು ಒಪ್ಪಲಿಲ್ಲ. ಕನ್ನಡ ಉಪಾಧ್ಯಾಯರಿಗೆ ಆ ದಿನಗಳಲ್ಲಿ ಗೌರವ ಕಡಿಮೆ. ಅಲ್ಲದೇ ಶ್ರೀಕಂಠಯ್ಯನವರು ಅಂದು ಮಹಾರಾಜಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಆಂಗ್ಲರಿಗೆ ಸರಿಸಮವಾಗಿ ಪಾಠ ಹೇಳಿ 'ಸೈ' ಯೆನಿಸಿಕೊಳ್ಳಬೇಕೆಂಬ ಹಟ. ಇಂಗ್ಲೀಷ್ ಪಾಠ ಹೇಳಲು ಆಂಗ್ಲರೇ ಆಗಬೇಕೆಂದೂ ಆ ಕಾರ್ಯಕ್ಕೆ ಭಾರತೀಯರು ಅನರ್ಹರೆಂದೂ ಕಡೆಯ ಪಕ್ಷ ಇಂಗ್ಲೆಂಡಿಗೆ ಹೋಗಿ ಅಲ್ಲಿ ಶಿಕ್ಷಣ ಪಡೆದು ಬಂದವರಾದರೂ ಆಗಬೇಕೆಂದೂ ಜನ ವಾದಿಸುತ್ತಿದ್ದ ಕಾಲ, ಅದು. ಈ ವಾದಗಳೆಲ್ಲ ಹುರುಳಿಲ್ಲವೆಂಬುದನ್ನು ತಮ್ಮ ಸಾಧನೆಯಿಂದ ಸ್ಥಾಪಿಸುವ ಹಂಬಲದಲ್ಲಿದ್ದ ಶ್ರೀಯವರು ಪೂರ್ಣಾವಧಿಯ ಕನ್ನಡ ಅಧ್ಯಾಪಕರಾಗಲು ಒಪ್ಪಲಿಲ್ಲ. ಆದರೆ ಆ ವೇಳೆಗಾಗಲೇ ಶ್ರೀಯವರು ಸಮರ್ಥ ಇಂಗ್ಲೀಷ್ ಅಧ್ಯಾಪಕರೆಂಬ ಕೀರ್ತಿಯನ್ನು ಗಳಿಸಿಕೊಂಡಿದ್ದರು. ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳಿಗೆ ಅವರು ಆರಾಧ್ಯ ಮೂರ್ತಿಯೇ ಆಗಿದ್ದರು.

ಆದರೆ ಆಗ ಶ್ರೀಯವರು ಎಲ್ಲಿಯೂ ಬಹಿರಂಗವಾಗಿ ಕನ್ನಡದಲ್ಲಿ ಭಾಷಣ ಮಾಡಿದವರಲ್ಲ. ತರಗತಿಗಳಲ್ಲಿ ಇಂಗ್ಲೀಷ್ ಪಾಠ ಮಾಡುವಾಗಲಂತು ಎಂದೂ ಮರೆತು ಕೂಡ ಒಂದು ಕನ್ನಡಮಾತನ್ನು ಬಳಸಿದವರಲ್ಲ. ೧೯೨೦-೨೬ರ ಅವಧಿಯಲ್ಲಿ ಮೈಸೂರಿನ ಕಾಲೇಜು ವಿದ್ಯಾರ್ಥಿಗಳಿಗೆ ಶ್ರೀಕಂಠಯ್ಯನವರ ಕನ್ನಡ ಪಾಂಡಿತ್ಯದ ವಿಚಾರ ತಿಳಿಯುವುದಂತಿರಲಿ, ಅವರು ಕನ್ನಡಿಗರೇ ಅಲ್ಲವೇನೋ ಎಂಬ ಸಂಶಯ ಮೂಡುವಂತಿತ್ತು. ಅವರ ಆಪ್ತ ವರ್ಗದವರಿಗೆ ಮಾತ್ರ ಅವರು ಹಿಂದೆ ಕಾಲೇಜಿನಲ್ಲಿ ಕನ್ನಡವನ್ನೂ ಪಾಠ ಹೇಳಿದವರೆಂಬ ವಿಷಯ ತಿಳಿದಿರಬಹುದು. ಅವರ ವಾಙ್ಮಯ ತಪಸ್ಸು ಗುಪ್ತವಾಗಿಯೇ ನಡೆಯುತ್ತಿತ್ತು. ಕನ್ನಡಿಗರ ಕೀಳರಿಮೆಯನ್ನು ಕಳೆಯುವ ದೀಕ್ಷೆ ಅವರದಾಗಿತ್ತು. 'ಕನ್ನಡ ಮಾತು ತಲೆಯೆತ್ತುವ ಬಗೆ' ಯಾವುದೆಂಬ ವಿಚಾರದಲ್ಲಿ ಅವರು ಚಿಂತನ ಮಂಥನ ನಡೆಸಿದ್ದರು. ಆದ್ದರಿಂದಲೇ ಈ ಶತಾಬ್ದದ ಆರಂಭದಲ್ಲಿ ಅವರು ಧಾರವಾಡಕ್ಕೆ ಬಂದು ವಿದ್ವತ್ಸಭೆಯ ಮುಂದೆ ಆ ವಿಚಾರವಾಗಿ ಸಾರ್ವಜನಿಕ ಭಾಷಣ ಮಾಡಬಲ್ಲವರಾದರು. ಅದಾದ ಮೇಲೆ ಶ್ರೀಕಂಠಯ್ಯನವರು ೧೯೨೬ರವರೆಗೆ ತಮ್ಮ ಕನ್ನಡ ಕೃಷಿಯ ಸುದ್ದಿ ಹೊರಗೆಡವದೆ ಇದ್ದರು.

ಶ್ರೀಯವರು ತಮ್ಮ 'ಇಂಗ್ಲೀಷ್ ಗೀತಗಳು' ಎಂಬ ಪದ್ಯ ಕಾವ್ಯವನ್ನು ಪ್ರಕಟಿಸಿದಾಗ ತಮ್ಮ ಪೂರ್ತಿ ಹೆಸರನ್ನು ಹೇಳದೆ 'ಶ್ರೀ' ಎಂಬ ಕಾವ್ಯ ನಾಮವನ್ನು ಧರಿಸಿದರು. ಈ ಹೊಸಗನ್ನಡ ಕವಿತೆ ಸಂಪ್ರದಾಯದ ಕನ್ನಡ ವಿದ್ವಾಂಸರಿಗೆ ರುಚಿಸುವುದು ಕ್ಲೇಶವೆಂಬ ಅಳುಕು ಅವರಿಗಿತ್ತು. ಹದಿನಾಲ್ಕು ಆಶ್ವಾಸಗಳ ದೀರ್ಘ ಚಂಪೂ ಕಾವ್ಯಗಳೇ ಸರಿಯೆಂದು ನಂಬಿದವರು ಈ ಖಂಡಕಾವ್ಯಗಳನ್ನು ಮೆಚ್ಚಲಾರರೆಂದು ಅವರ ಭಾವನೆ. ಅದೇನು

ಸುಳ್ಳಾಗಲಿಲ್ಲ. ಪ್ರಾಸವಿಲ್ಲದ ಪದ್ಯಗಳೆಂದು ಆ ಕೃತಿಯನ್ನು ಹಲವರು ಹೀಗಳೆದರು; ಆದರೆ ಅದು ಕನ್ನಡ ನವೋದಯದ ಮೊದಲ ಗ್ರಂಥವೆನಿಸಿತು. ಇಂಗ್ಲೀಷ್ ಗೀತಗಳನ್ನು ಓದಿ ಮೆಚ್ಚಿದವರು, ಹಾಡಿ ಹರ್ಷಪಟ್ಟವರು ಇಂಗ್ಲೀಷ್ ಓದಿದ ತರುಣರು! ಆ ಪದ್ಯಗಳು ತರುಣರಿಗೆ ಪ್ರಿಯವಾದವು. ಇದರಲ್ಲಿ ಅಡಕವಾಗಿರುವ ದುಃಖ ಸೇತು, ಚೋಳ ಕನ್ನೆಯರು, ಮೊದಲಾದ ಕವನಗಳನ್ನು ಅಂದಿನ ಕಾಲೇಜು ವಿದ್ಯಾರ್ಥಿಗಳು ಸಭೆ ಸಮಾರಂಭಗಳಲ್ಲಿ ಸಂಭ್ರಮದಿಂದ ಹಾಡಿ, ಹಾಡಿಸಿ ಹರ್ಷಪಟ್ಟರು. ಆ ಕಾವ್ಯ ಕನ್ನಡ ತರುಣ ಪೀಳಿಗೆಗೆ ಬಹಳ ಮೆಚ್ಚುಗೆಯಾಯಿತು. 'ರಸಾತ್ಮಕ ಒಂದು ವಾಕ್ಯವೇ ಕಾವ್ಯ' ವೆಂದಾಗ ಹದಿನೆಂಟು ಕಾವ್ಯಾಂಗಗಳ ವರ್ಣನೆಯಿಂದ ಕೂಡಿದ ದೀರ್ಘ ಕಾವ್ಯವೇ ಏಕಾಗಬೇಕು? ಈ ಕೃತಿ ಅನೇಕರಿಗೆ ಸ್ಫೂರ್ತಿದಾಯಕವಾಯಿತು. ಶ್ರೀಯವರ ಶಿಷ್ಯರನೇಕರು ಈ ಮಾದರಿಯನ್ನು ಅನುಸರಿಸಿ ಕಾವ್ಯ ಕಟ್ಟಿದರು. 'ಕಿರಿಯ ಕಾಣಿಕೆ'ಯು ಈ ತರುಣ ಕವಿಗಳು ಕಟ್ಟಿದ ಹಲವು ಹೊಸ ಕವಿತೆಗಳ ಸಂಕಲನ. ಆ ತರುಣರ ಪೈಕಿ ಹಲವರು ಇಂದು ಪ್ರಸಿದ್ಧ ಕವಿಗಳಾಗಿದ್ದಾರೆ.

ಆ ತರುಣದಲ್ಲಿಯೇ ಶ್ರೀಯವರ 'ಗದಾಯುದ್ಧ ನಾಟಕ' ಪ್ರಕಟವಾಯಿತು. ಅದನ್ನು ವಿದ್ಯಾರ್ಥಿಗಳು ಕಾಲೇಜಿನ ರಂಗಭೂಮಿಯ ಮೇಲೆ ಆಡಿ ತೋರಿಸಿದರು. ಆ ಯುವ ನಟರಿಗೆ ಗದಾಯುದ್ಧ ನಾಟಕವನ್ನು ಓದಿ ಹೇಳಿ ಅರ್ಥ ವಿವರಿಸಿ ನಿರ್ದೇಶನ ಮಾಡಿದರು, ಶ್ರೀಯವರು; ಅಂದಿನಿಂದ ಶ್ರೀಯವರ ಕನ್ನಡದ ಅಭಿಮಾನದ ವಿಷಯದಲ್ಲಿ ಗುಟ್ಟು ಏನೂ ಉಳಿಯಲಿಲ್ಲ. ರನ್ನ ಕವಿಯ 'ಸಾಹಸ ಭೀಮವಿಜಯಂ' ಕಾವ್ಯದೊಳಗೆ ಅಡಕವಾಗಿದ್ದ ಈ ನಾಟಕವನ್ನು ಹೊರದೆಗೆದುಕೊಟ್ಟ ಕೀರ್ತಿ ಶ್ರೀಯವರದು.

ಈ ಎರಡು ಕೃತಿಗಳ ಪ್ರಕಟಣೆಯಿಂದ ಅಂದಿನ ಯುವ ಜನರಲ್ಲಿ ಅಭೂತ ಪೂರ್ವವಾದ ಕನ್ನಡದ ಅಭಿಮಾನ ಪ್ರಕಟವಾಯಿತು. ಹಳಗನ್ನಡದಲ್ಲಿ ರಚಿಸಿದ್ದಾದರೂ ಗದಾಯುದ್ಧ ನಾಟಕ ರಂಗದ ಮೇಲೆ ಬಹಳ ಯಶಸ್ವಿಯಾಯಿತು. ಮಹಾರಾಜಾ ಕಾಲೇಜಿನಲ್ಲಿಯೇ ಅಲ್ಲದೇ ಬೇರೆಡೆಗಳಲ್ಲಿಯೂ ಆ ನಾಟಕದ ಪ್ರದರ್ಶನ ಪಡೆದು ಜನರನ್ನು ವಿಶೇಷವಾಗಿ ರಂಜಿಸಿತು. ಈ ನಾಟಕದ ಯಶಸ್ಸಿನಿಂದ ರನ್ನ ಕವಿಯ ಮೂಲ ಕಾವ್ಯಕ್ಕೆ ಹೆಚ್ಚಿನ ಪ್ರಧಾನ್ಯತೆ ಬಂದು ಅನೇಕ ವಿದ್ವಾಂಸರು ರನ್ನನ ಕೃತಿಗಳನ್ನು ಕುರಿತು ವಿಮರ್ಶಾ ಪ್ರಬಂಧಗಳನ್ನು ಪರಿಚಯಾತ್ಮಕ ಲೇಖನಗಳನ್ನು ಬರೆದರು. ಅಂಥ ಬರಹಗಳ ಒಂದು ಶ್ರೇಷ್ಠ ಸಂಕಲನವೇ ರನ್ನ ಕವಿ ಪ್ರಶಸ್ತಿ: ಮೈಸೂರಿನ ವಿಶ್ವವಿದ್ಯಾನಿಲಯದ ಸಂಘದವರು ಅದನ್ನು ಪ್ರಕಟಿಸಿದರು. ಹೀಗೆ ಕನ್ನಡದ ವಿಚಾರವಾಗಿ ಕನ್ನಡಿಗರ ಮನಸ್ಸಿನಲ್ಲಿ ಮನೆಮಾಡಿಕೊಂಡಿದ್ದ ಅನಾದರ ಸ್ವಲ್ಪ ಮಟ್ಟಿಗೆ ಕರಗಿತು. ಆ ಸಮಯದಲ್ಲಿಯೇ ಮೈಸೂರು ಕಾಲೇಜು ಕರ್ನಾಟಕ ಸಂಘದವರು 'ಮುದ್ದಣ್ಣ' ಎಂಬ ಹೆಸರಿನಿಂದ ಮುದ್ದಣ ಕವಿ (ನಂದಳಿಕೆ ಲಕ್ಷ್ಮೀ ನಾರಣಯ್ಯ)ಯ ಪ್ರಶಸ್ತಿ ಗ್ರಂಥವನ್ನು ಹೊರತಂದಿತು. ಕನ್ನಡ ಕವಿಗಾನ ಸ್ಮರಣೆ, ಅವರ ಕಾವ್ಯಗಳ ವ್ಯಾಸಂಗ,

ಪ್ರಶಂಸೆ, ತೊಡಗಿ ಕನ್ನಡದಲ್ಲಿಯೂ ಉತ್ತಮ ಸಾಹಿತ್ಯವಿದೆ. ಸಾವಿರ ವರ್ಷಗಳಿಂದ ಬೆಳೆದುಬಂದ ಉತ್ತಮ ಕಾವ್ಯ ಪರಂಪರೆಯಿದೆ, ಎಂದು ತಿಳಿವಳಿಕೆ ಕನ್ನಡಿಗರಲ್ಲಿ ಉಂಟಾಗಿ ಕನ್ನಡದ ವಿಷಯದಲ್ಲಿ ಅಭಿಮಾನ ಹುಟ್ಟುವುದಕ್ಕೆ ದಾರಿಯಾಯಿತು. ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದ ಶ್ರೀಯವರು ಆಧುನಿಕ ಕನ್ನಡ ಸಾಹಿತ್ಯದ ಆದ್ಯ ಪ್ರವರ್ತಕರಲ್ಲಿ ಅಗ್ರಮಾನ್ಯರಾದರು. ಕನ್ನಡ ಭಾಷಾ ಸಾಹಿತ್ಯಗಳ ವಿಷಯದ ಅಸಡ್ಡೆ ಹೋಗಿ ಆಸಕ್ತಿ ಕುತೂಹಲಗಳು ಮೂಡಿದವು.

ಈ ತರುಣದಲ್ಲಿಯೇ ಶ್ರೀಯವರು ಮೈಸೂರು ವಿಶ್ವವಿದ್ಯಾನಿಯದ ರಿಜಿಸ್ಟ್ರಾರ್ ಪದವಿಗೆ ಏರಿದರು. ಆಗ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಲರ್ ಆಗಿದ್ದ ಶ್ರೀ ಬ್ರಜೇಂದ್ರನಾಥ ಶೀಲರೊಡನೆ ಆಲೋಚನೆ ಮಾಡಿ ಅವರ ನೆರವಿನಿಂದ ಮೈಸೂರಿನಲ್ಲಿ ಕನ್ನಡದಲ್ಲಿ ಎಂ.ಎ. ತರಗತಿಯನ್ನು ಆರಂಭಿಸಿದರು. "ಎಂ.ಎ. ಪರೀಕ್ಷೆಗೆ ಓದುವಂಥ ಗ್ರಂಥ ಏನಿದೆ ಕನ್ನಡದಲ್ಲಿ" ಎಂದು ಮೂಗು ಮುರಿದವರೂ ಆಗ ಇರದೆ ಹೋಗಲಿಲ್ಲ. ಎಂ.ಎ. ತರಗತಿಯನ್ನು ಆರಂಭಿಸುವುದಕ್ಕೆ ಹೆಚ್ಚಿನ ಸಿಬ್ಬಂದಿ ಬೇಕೆಂದು ಹೇಳಿದರೆ ಸರ್ಕಾರ ಒಪ್ಪದಿರಬಹುದೆಂಬ ಅಳುಕು ಶ್ರೀಯವರ ಮನಸ್ಸಿನಲ್ಲಿ ಇತ್ತು. ಆದ್ದರಿಂದಲೇ ಅವರು "ಹೆಚ್ಚು ಖರ್ಚು ತೋರಿಸಬೇಡಿ ಒಬ್ಬ ಅಸಿಸ್ಟಂಟ್ ಪ್ರೊಫೆಸರ್ ಸಾಕು" ಎಂದು ಹೇಳಿದ್ದುಂಟು. ಆದರೆ ಆ ಸಮಿತಿಯ ಅಧ್ಯಕ್ಷರಾಗಿದ್ದ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಎಂ. ಹಿರಣ್ಣಯ್ಯನವರು ಒಂದು ಪ್ರೊಫೆಸರ್ ಹುದ್ದೆಯಾದರೂ ಇರಲೇಬೇಕೆಂದು ಪಟ್ಟು ಹಿಡಿದು ಸಾಧಿಸಿದ್ದರಿಂದ ಒಬ್ಬ ಪ್ರೊಫೆಸರ್ ನೇಮಕವಾಯಿತು. ಶ್ರೀ ಟಿ.ಎಸ್. ವೆಂಕಣ್ಣಯ್ಯನವರು ಮೊಟ್ಟ ಮೊದಲನೆಯ ಕನ್ನಡ ಪ್ರೊಫೆಸರ್ ಆದರು. ರಿಜಿಸ್ಟ್ರಾರ್ ಕೆಲಸನ್ನು ನಿರ್ವಹಿಸುತ್ತ ಶ್ರೀಕಂಠಯ್ಯನವರು ಕನ್ನಡ ಗೌರವ ಪ್ರಾಧ್ಯಾಪಕರಾಗಿ ಬಂದು ಕನ್ನಡ ಎಂ.ಎ. ತರಗತಿಗೆ ಖುದ್ದು ಪಾಠ ಹೇಳಿದರು. ಹೀಗೆ ಅಡಿಗಡಿಗೂ ಕನ್ನಡ ಕಟ್ಟುವ ಕೆಲಸಕ್ಕೆ ಕನ್ನಡಿಗರ ಮನಸ್ಸಿನ ಕೀಳರಿಮೆಯ ದೆಸೆಯಿಂದ ಏನು ಕಂಟಕ ಬರುವುದೋ ಎಂಬ ಅಳುಕು ಶ್ರೀಯವರ ಮನಸ್ಸಿನಲ್ಲಿ ಇದ್ದೇ ಇತ್ತು. ಈ ಕೀಳರಿಮೆ ತೊಡೆದು ಹೋಗಿ ಕನ್ನಡಿಗರು ಸ್ವಾಭಿಮಾನದಿಂದ, ಸ್ವಭಾಷಾಭಿಮಾನದಿಂದ ಕನ್ನಡದ ಕೈಂಕರ್ಯಕ್ಕೆ ಮುನ್ನುಗ್ಗಬೇಕೆಂಬುದೇ ಅಂದು ಶ್ರೀಯವರ ಮನದ ಹೆಬ್ಬಯಕೆಯಾಗಿತ್ತು. ಇದು ಸಾಧ್ಯವಾಗಲು ಕನ್ನಡದಲ್ಲಿ ಹೆಚ್ಚಿನ ಕೃಷಿ ನಡೆಯಬೇಕು, ಉತ್ತಮ ವಚನ ಶೈಲಿ ಮಾಡಬೇಕು. ಆಧುನಿಕ ವಿಜ್ಞಾನವನ್ನೂ ಕನ್ನಡದ ಮಾಧ್ಯಮದಲ್ಲಿ ಸುಲಭವಾಗಿ ಹೇಳುವಂತಾಗಬೇಕು ಎಂಬುದು ಅವರ ಆಲೋಚನೆಯಾಗಿತ್ತು. ಎಂ.ಎ ಮತ್ತು ಆನರ್ಸ್ ತರಗತಿಗಳನ್ನು ಆರಂಭಿಸಿದ ಮೇಲೆ ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಸ್ಥಾನ ಉನ್ನತವಾಯಿತು. ಹೆಚ್ಚು ಹೆಚ್ಚು ಜನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ತರಗತಿಗಳಿಗೆ ಸೇರಿ ಕನ್ನಡವನ್ನೇ ತಮ್ಮ ವ್ಯಾಸಂಗದ ಪ್ರಧಾನ ವಿಷಯವಾಗಿ ಆರಿಸಿಕೊಂಡರು. ಹಳಗನ್ನಡ, ನಡುಗನ್ನಡ ಸಾಹಿತ್ಯ ಕೃತಿಗಳನ್ನು ಆಳವಾಗಿ ವ್ಯಾಸಂಗ

ಮಾಡಿ ವಿಮರ್ಶೆ ನಡೆಸಿ 'ಜಳ್ಳನ್ನು ತೂರಿ ಕಾಳನ್ನು ಆರಿಸಿಕೊಳ್ಳುವ' ಕಾಯಕ ನಡೆಸಲು ಶಕ್ತರಾದ ತರುಣ ಕನ್ನಡ ಪಡೆ ಸಿದ್ಧವಾಗತೊಡಗಿತು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಖಿಲ ಕರ್ನಾಟಕದವರೂ ಬಂದು ಸೇರಲು ಅವಕಾಶವಿರಬೇಕೆಂದು ಶ್ರೀಯವರು ಬಯಸಿದರು. "ಹೀಗಾಗುವುದಕ್ಕೆ ಅನೇಕ ಅಡಚಣೆಗಳಿದ್ದುವು. ನನ್ನ ಕೈ ನಡೆಯುವ ಕಾಲದಲ್ಲಿ ಈ ಅಡಚಣೆಗಳನ್ನು ನಿವಾರಿಸಿದ್ದರಿಂದ ಹೈದರಾಬಾದಿನ ನಿಜಾಮ ಸರ್ಕಾರದವರು ಕಳಿಸಿಕೊಟ್ಟ ವಿದ್ಯಾರ್ಥಿಗಳಿಗೆ ವ್ಯಾಸಂಗದ ಸೌಕರ್ಯಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಕೊಟ್ಟಿತು. ಇದರಿಂದ ಹೈದರಾಬಾದಿನಲ್ಲಿ ಕನ್ನಡದ ಮುನ್ನಡೆ, ಇಲ್ಲಿ ಕಲಿತು ಹೋದ ವಿದ್ಯಾರ್ಥಿಗಳ ಕಾರಣವಾಗಿ, ಚುರುಕಿನಿಂದ ಸಾಗಿದೆ. ಮೈಸೂರು ವಿಶ್ವವಿದ್ಯಾನಿಲಯವು ಅಫಿಲಿಯೇಟಿಂಗ್ ಯುನಿವರ್ಸಿಟಿ ಆಗಿ ಕರ್ನಾಟಕಕ್ಕೆಲ್ಲ ವಿಶ್ವವಿದ್ಯಾನಿಲಯ ಒಂದೇ ಆಗಿರಬೇಕೆಂಬುದು ಅವರ ಹಂಬಲವಾಗಿತ್ತು. ಅಖಂಡ ಕರ್ನಾಟಕ ಒಂದಾಗಬೇಕು; ವಿಭಿನ್ನ ಸರ್ಕಾರಗಳಲ್ಲಿ ಹಂಚಿ ಹೋಗಿರುವ ಕನ್ನಡ ಪ್ರದೇಶಗಳು ಒಟ್ಟುಗೂಡಿ ಕನ್ನಡದಲ್ಲಿ ರಾಜ್ಯಾಡಳಿತ ನಡೆದು ಕನ್ನಡಿಗರ ಬದುಕು ಹಸನಾಗಬೇಕೆಂಬುದು ಅವರ ಮಹತ್ತರವಾದ ಆಕಾಂಕ್ಷೆ.

'ಕನ್ನಡಿಗರಿಗೆ ಕನ್ನಡವೇ ಗತಿ' 'ಅತ್ಯಥಾ ಶರಣಂ ನಾಸ್ತಿ' ಎಂಬುದು ಶ್ರೀಯವರ ಅವಿಚಲವಾದ ನಿರ್ಧಾರ. ಕನ್ನಡದ ಕಲಿಕೆ, ಕನ್ನಡ ಗ್ರಂಥ ಸಂಶೋಧನೆ, ಕನ್ನಡದ ಪ್ರಚಾರ, ಕನ್ನಡದಲ್ಲಿ ಶಿಕ್ಷಣ, ಕನ್ನಡ ಮೂಲಕ ರಾಜ್ಯದ ಆಡಳಿತ – ಈ ಐದೂ ಶ್ರೀಯವರಿಗೆ ಐದು ಪ್ರಾಣಗಳೇ ಆಗಿದ್ದುವೆಂದರೆ ತಪ್ಪಲ್ಲ. ಕರ್ನಾಟಕ ಏಕೀಕರಣದ ಕನಸು ಕಂಡ ಮೊದಲಿಗರಲ್ಲಿ ಶ್ರೀಯವರು ಅಗ್ರಮಾನ್ಯರು. ಮೈಸೂರು ಮತ್ತು ಹೈದರಾಬಾದ ಸಂಸ್ಥಾನಗಳಲ್ಲಿ ಲೀನವಾಗಿದ್ದ ಕನ್ನಡ ಜಿಲ್ಲೆಗಳು, ಬೊಂಬಾಯಿ ಮತ್ತು ಮದರಾಸು ಅಧಿಪತ್ಯಗಳಲ್ಲಿ ಸೇರಿ ಹೋಗಿದ್ದ ಕನ್ನಡ ಪ್ರದೇಶಗಳು ಮತ್ತು ಕೊಡಗು ಇವೆಲ್ಲ ಸೇರಿ ಕರ್ನಾಟಕ ರಾಜ್ಯವಾಗಬೇಕು. ಆಡಳಿತ, ಶಿಕ್ಷಣ, ಎಲ್ಲ ಕನ್ನಡದ ಮೂಲಕ ನಡೆಯಬೇಕು ಎಂಬುದು ಅವರ ಧ್ಯೇಯ. ಹಾಗಾದರೆ ಮಾತ್ರ ಕನ್ನಡಿಗರಿಗೆ ಸ್ವರಾಜ್ಯ ಲಭಿಸುತ್ತದೆ. ಬೇರೆ ಬೇರೆ ಆಡಳಿತಗಳಲ್ಲಿ ಅಲ್ಪ ಸಂಖ್ಯಾತರಾಗಿದ್ದ ಅಲ್ಲಿನ ಆಡಳಿತದಲ್ಲಿ ಏನೂ ಪ್ರಭಾವವಿಲ್ಲದೆ, ಪ್ರಬಲವಾದ ಅನ್ಯ ಭಾಷಿಕ ಒತ್ತಡಕ್ಕೆ ಸಿಕ್ಕು ಬದುಕಬೇಕಾದ ದುಸ್ಥಿತಿ ತಪ್ಪಿ ಕನ್ನಡಿಗರೆಲ್ಲ ಸೇರಿ ಒಂದು ರಾಜ್ಯವಾದರೆ ತಮ್ಮ ಆಗು ಹೋಗುಗಳನ್ನೆಲ್ಲ ಗಮನಿಸಿಕೊಂಡು ತಮ್ಮ ಮೇಲ್ಮೆಯನ್ನು ಸಾಧಿಸಿಕೊಳ್ಳ ಬಹುದೆಂದು ಶ್ರೀಯವರ ಆಶಯ. "ಬೇರಾವುದೋ ಭಾಷೆಯಲ್ಲಿ ಆಡಳಿತ ನಡೆಯುವುದಾದರೆ ಕನ್ನಡ ರಾಜ್ಯ ಏಕೆ ಬೇಕು?" ಎಂದು ಶ್ರೀಯವರ ಪ್ರಶ್ನೆ.

ಕನ್ನಡ ರಾಜ್ಯ ಸ್ಥಾಪನೆಯಾಗಬೇಕು, ಅದರಲ್ಲಿ ಆಡಳಿತ ಕನ್ನಡದಲ್ಲಿ ನಡೆದು, ಶಿಕ್ಷಣ ಮಾಧ್ಯಮ, ನ್ಯಾಯಾಂಗ ಭಾಷೆ ಎಲ್ಲ ಕನ್ನಡವೇ ಆಗಿರಬೇಕು. ಆಗ ಕನ್ನಡಿಗರು ಸ್ವಶಕ್ತಿಯಿಂದ ಅಭ್ಯುದಯ ಸಾಧಿಸಿಕೊಳ್ಳಬೇಕು. ಆದರೆ ಈ ಕನ್ನಡ ರಾಜ್ಯ ಸ್ಥಾಪನೆ

ಸುಲಭದ ಮಾತೆ? ಬ್ರಿಟಿಷ್ ಅದಕ್ಕೆ ಸಮ್ಮತಿಸಬೇಕಾಗಿತ್ತು! ಹಲವರು ಸಂಸ್ಥಾನಾಧಿಪತಿಗಳು ತಮ್ಮ ಅಧಿಕಾರವನ್ನು ಬಿಟ್ಟುಕೊಡುವುದಾಗುತ್ತಿತ್ತೆ? ಆದರೆ ಇದೆಲ್ಲವನ್ನೂ ಬಲ್ಲ ಶ್ರೀಕಂಠಯ್ಯನವರು ಅಧೀರರಾಗಲಿಲ್ಲ. ತಮ್ಮ ಹಿರಿಯ ಧ್ಯೇಯದಿಂದ ಸ್ವಲ್ಪವೂ ಚಲಿಸಲಿಲ್ಲ. ರಾಜಕೀಯ ಏಕೀಕರಣ ತಡವಾದರೂ ದೊಡ್ಡ ಆಂದೋಳನವನ್ನೇ ನಡೆಸಿದರು. ಬೊಂಬಾಯಿ ಕರ್ನಾಟಕ, ನೈಜಾಂ ಕರ್ಣಾಟಕ, ಮಂಗಳೂರಿನವರು, ಎಂಬ ಈ ಭೇದಗಳನ್ನೆಲ್ಲ ಮರೆತು 'ನಮ್ಮ ಕುಲ ಕನ್ನಡ ಕುಲ' ಕನ್ನಡನಾಡೆಲ್ಲ ಒಂದೇ ಎಂಬ ಭಾವನೆ ಮೂಡಬೇಕೆಂದು ಅವರು ಕನ್ನಡ ನಾಡಿನಲ್ಲೆಲ್ಲ ಸಂಚರಿಸಿ ಕನ್ನಡ ಪ್ರಾಶಸ್ತ್ಯವನ್ನು ಕುರಿತು ವಿಶೇಷವಾದ ಪ್ರಚಾರ ನಡೆಸಿದರು. ಅದೇನು ಸುಲಭದ ಕೆಲಸವಾಗಿರಲಿಲ್ಲ. ತಮ್ಮ ಅನಾರೋಗ್ಯವನ್ನು ಸಡ್ಡೆ ಮಾಡದೆ ಶ್ರೀಕಂಠಯ್ಯನವರು ಕನ್ನಡ ನಾಡಿನ ಮೂಲೆ ಮೂಲೆಗಳಿಗೂ ಹೋಗಿ ಕನ್ನಡದ ಅಗತ್ಯವನ್ನು ಒತ್ತಿ ಹೇಳಿ ಕನ್ನಡಿಗರಲ್ಲಿ ಜಾಗೃತಿ ಮೂಡಿಸುವ ಸಾಹಸ ಮಾಡಿದರು; ತಮ್ಮ ಶಿಷ್ಯ ವರ್ಗದವರನ್ನು ಈ ಪವಿತ್ರ ಕಾರ್ಯದಲ್ಲಿ ತೊಡಗಿಸಿದರು. ಆದರೆ ಜನರ ಇಂಗ್ಲೀಷ್ ವ್ಯಾಮೋಹ ಇಂಗಲಿಲ್ಲ. ಸ್ವಯಂ ಇಂಗ್ಲೀಷ್ ಪ್ರಾಧ್ಯಾಪಕರೇ ಬಂದು ಕನ್ನಡದ ಹಿರಿಮೆ ಗರಿಮೆಗಳನ್ನು ಹಾಡಿ ಹೊಗಳಿದರೂ ಜನರ ಹೃದಯಾಂತರಾಳದಲ್ಲಿ ರೂಢ ಮೂಲವಾಗಿದ್ದ ಕೀಳರಿಮೆ ಹೋಗಲಿಲ್ಲ.

> "ಏನು ಕಪಿಯಿತೋ ಮಂಕು ಮಕ್ಕಳಿಗೆ! ಯಾರೆರಚಬಂದರೊ ಬೂದಿ, ಕಾಣೆ
> ನನ್ನನೊಲ್ಲರು ನನ್ನ ಮಕ್ಕಳೇ! ತಾವೆ ಬಾಳಿ ತಾಯ ಬಾಳಿಸರು
> ಹೆರರ ನುಡಿ, ಹೆರರ ನಡೆ – ಹೆರರ ಕೂಗೇ ಕೂಗು, ಹೇರರೇ ಹೆಮ್ಮೆ!
> ನನ್ನ ಮನೆ ಹಾಳು!
> ನನ್ನ ನುಡಿ ಬೀಳು!

ಎಂದು ಕನ್ನಡ ತಾಯಿ ಮರುಗುತ್ತಿರುವುದನ್ನು ಶ್ರೀಯವರು ಕೇಳಿದರು

> "ಹೆರರೊತ್ತೆ ಗಡಿ ಬಿಡುತ, ಹದುಗುತ್ತ, ನುಗ್ಗೆ ಕುಗ್ಗುತ್ತ,
> ಹೆರರ ಕೈ ಕಾಯುತ್ತ ಸಾಯದೆಯೆ ಬದುಕದೆಯೆ ಬಾಳ ನೂಕುವರು"

ಎಂದುಕೊರಗಿದ ಕನ್ನಡ ತಾಯಿಗೆ ಶ್ರೀಯವರು ಸಾಂತ್ವನ ನುಡಿಯುತ್ತ

> "ನಿನ್ನ ನಾಡೊಂದಾಗಿ ನಿನ್ನ ನುಡಿ ಮೇಲಾಗಿ, ಮನೆ ಮಕ್ಕಳೆಲ್ಲ
> ಪೇರೊಕ್ಕಲಾಗಿ ಪಾಡುವರು!
> ತಾಯ್ ಬದುಕಿ ತಾವ್ ಬದುಕಿ ಹೆರರ ಬದುಕಿಪರು!"

ಎಂದು ಹಾಡಿದರು. ಕನ್ನಡ ನುಡಿ ಮೇಲಾಗಬೇಕು. ಆಗ ಕನ್ನಡಿಗರಿಗೆ ಶಕ್ತಿ, ಕನ್ನಡಿಗರ ಬದುಕು ಹಿರಿದಾಗಬೇಕು. ಕನ್ನಡಿಗರ ಜೀವನ ಶ್ರೀಮಂತವಾಗಬೇಕು. ಆಗ ಕನ್ನಡ ತಾನೇ ವೃದ್ಧಿ ಹೊಂದುತ್ತದೆ. ಭಾಷೆ, ಬದುಕುಗಳ ಈ ನೇರ ಸಂಬಂಧವನ್ನು ಶ್ರೀಯವರು ತಮ್ಮ ಅಪರ ವಯಸ್ಸಿನಲ್ಲಿ ನಾಡಿನ ನಾನಾ ಸ್ಥಳಗಳಲ್ಲಿ ವಿಶದೀಕರಿಸಿ ಹೇಳಿ ಕನ್ನಡವನ್ನು ಕಾಪಿಟ್ಟುಕೊಳ್ಳುವ ಅಗತ್ಯವನ್ನು ಮನದಟ್ಟು ಮಾಡಿಕೊಡಲು ವಿಶೇಷವಾಗಿ ಶ್ರಮಿಸಿದರು.

ಕನ್ನಡಿಗರ ಹೃದಯದಲ್ಲಿ ಕನ್ನಡಕ್ಕೆ ಮಾನ್ಯ ಸ್ಥಾನವಿದ್ದರೆ ನಾಡಿನಲ್ಲಿಯೂ ಮಾನ್ಯತೆ ಮೂಡಿ ಬರುತ್ತದೆ. "ಕನ್ನಡದ ಬೇರನ್ನು ಕೊಯ್ದು ಕನ್ನಡ ನಾಡನ್ನು ಒಂದುಗೂಡಿಸಬಹುದೆ? ನಾಡಿಗೆ ಆಗ ಕನ್ನಡತನವೆಲ್ಲಿ? ಇಂಗ್ಲೀಷಿನಲ್ಲಿಯೋ ಹಿಂದಿಯಲ್ಲಿಯೋ ಕೆಲಸ ನಡೆಯುವುದಾದರೆ ಬೇರೆ ಒಂದು ಕನ್ನಡ ನಾಡೇಕೆ?" ಎಂದು ಪ್ರಶ್ನಿಸಿ ಕನ್ನಡ ಪ್ರಾಂತ ನಿರ್ಮಾಣದ ಮುಖ್ಯೋದ್ದೇಶವೇನೆಂಬುದನ್ನು ಸುಸ್ಪಷ್ಟ ಪಡಿಸಿದ್ದಾರೆ. ಕನ್ನಡ ನುಡಿಯ ಸರ್ವತೋಮುಖವಾದ ಅಭಿವೃದ್ಧಿ, ಕನ್ನಡದ ಮೂಲಕ ಜ್ಞಾನ ಪ್ರಸಾರ, ಕನ್ನಡದಲ್ಲಿ ರಾಜ್ಯದ ಆಡಳಿತ, ನ್ಯಾಯ ವಿತರಣೆ – ಇವೇ ಕನ್ನಡ ಏಕೀಕರಣದ ಪರಮೋದ್ದೇಶಗಳು. ಈ ಉದ್ದೇಶ ಸಾಧಿತವಾಗದಿದ್ದರೆ ಎಲ್ಲ ಸಾಹಸ, ತ್ಯಾಗ, ಶ್ರಮ, ವ್ಯರ್ಥ. "ಕನ್ನಡ ಕಟ್ಟಬೇಕು, ಕನ್ನಡಿಗರು ಎಚ್ಚೆತ್ತು ಕನ್ನಡದ ಹಿರಿಮೆಯನ್ನು ಸಾಧಿಸಬೇಕು. ಕನ್ನಡದ ಅಭಿಮಾನಿಗಳ ಒಂದು ದೊಡ್ಡ ಪಡೆಯೇ ಆಗಬೇಕು. ಕನ್ನಡದ ಬಾವುಟ ಸದಾ ಹಾರುತ್ತಿರಬೇಕು" – ಇದು ಶ್ರೀಯವರ ನಿತ್ಯ ನಿರಂತರ ಜಪವೇ ಆಗಿತ್ತು. "ಕನ್ನಡ ನಮ್ಮದು ನಿಮ್ಮದು ಅಷ್ಟೇ ಅಲ್ಲ, ಅದು ನಿಮ್ಮ ತಂದೆ ತಾತಂದಿರದು ಮುತ್ತಾತಂದಿರದು. ಅವರೆಲ್ಲ ಕನ್ನಡದಲ್ಲಿಯೇ ಜ್ಞಾನಾರ್ಜನೆ ಮಾಡಿದರು. ಸಾವಿರ ವರ್ಷಗಳ ಹಿಂದಿನಿಂದ ಕನ್ನಡ ಸಾಹಿತ್ಯ ಬೆಳೆದು ಬಂದಿದೆ. ಕನ್ನಡ ನಾಡನ್ನು ಆಳಿದ ರಾಜ ಮಹಾರಾಜರುಗಳೆಲ್ಲ ರಾಜ್ಯಾಡಳಿತವನ್ನು ಕನ್ನಡದಲ್ಲಿಯೇ ನಡೆಸಿದರು. ಅವರ ಅನೇಕ ರಾಜ ಶಾಸನಗಳು ಕನ್ನಡದಲ್ಲಿಯೇ ಇವೆ. ಇಂದು ಮಾತ್ರ ಕನ್ನಡದಲ್ಲಿ ರಾಜ್ಯಾಡಳಿತ ಸಾಧ್ಯವಾಗದೆಂಬ ಸಂಶಯವೇಕೆ?".

> "ಹಿರಿಯ ಕನ್ನಡ ಪಡೆ ಮರಿಯ ಕನ್ನಡ ಪಡೆ ಏಳಿರೋ ಬಾಳಿರೋ
> ಕನ್ನಡದ ಬಾವುಟವ ಹಿಡಿಯಿರೋ ನಡೆಯಿರೋ
> ಕುಂದದಿದೆ ಇಂದಿಗೂ ಕನ್ನಡದ ಬಾವುಟ"

ಎಂದು ಹಾಡಿ ಶ್ರೀಯವರು ಕನ್ನಡ ತರುಣ ಜನಾಂಗಕ್ಕೆ ಸಂದೇಶ ನೀಡಿದರು. "ಇಂದಿನ ತನಕ ಕನ್ನಡದ ಬಾವುಟ ಕುಂದದ ಹಾಗೆ ಕಾಪಾಡಿಕೊಂಡು ಬಂದ ನಮ್ಮ ಕವಿಗಳ ನಾಡು ನುಡಿಗಳ ಭಕ್ತಿಯನ್ನು ಸ್ಮರಿಸುತ್ತ, ಇಂದಿನ ನಾವು ಕನ್ನಡಕ್ಕಾಗಿ ಮಡಿದು ಕೃತಾರ್ಥರಾಗಬೇಕು; ಬದುಕಿನಲ್ಲಿ ಸಾಫಲ್ಯವನ್ನು ಕಾಣಬೇಕು. ನಮಗಾದರೂ ಕನ್ನಡವೇ ಗತಿ. ನಮ್ಮ ಮಕ್ಕಳು, ಮೊಮ್ಮಕ್ಕಳು ಬೆಳೆಯಬೇಕಾದದ್ದು, ಬೆಳೆದು ಬದುಕಬೇಕಾದದ್ದು ಕನ್ನಡದಿಂದ".

> "ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ ಬಾಳ್ಗೆ
> ಕನ್ನಡದ ತಾಯ್ ಗೆಲ್ಗೆ ಬಾಳ್ಗೆ"

ಎಂದು ಆಚಾರ್ಯ ಶ್ರೀಯವರು ಭಕ್ತಿಯ ಆವೇಶದಿಂದ ಘೋಷಿಸಿದ್ದಾರೆ. ಯಮ್ಮಿಗನೂರಿನಲ್ಲಿ ೧೯೪೭ರ ಏಪ್ರಿಲ್‌ನಲ್ಲಿ ನಡೆದ ಕರ್ನಾಟಕ ಸಂಘದ

ಪ್ರಾರಂಭೋತ್ಸವದಲ್ಲಿ ಭಾಷಣ ಮಾಡುತ್ತ "ಕನ್ನಡಿಗರಾದ ನಾವು ಸುಸಂಘಟಿತರಾಗಬೇಕು. ನಮ್ಮ ನಾಡು ನುಡಿಯ ಸೇವೆ ಸಲ್ಲಿಸಲು ಮುಂದುವರಿಯುವಾಗ ಹಿಂದೂ-ಮುಸಲ್ಮಾನ, ಬ್ರಾಹ್ಮಣ – ಬ್ರಾಹ್ಮಣೇತರ ಎಂಬ ಸಂಕುಚಿತಾಭಿಪ್ರಾಯಗಳನ್ನು ಬದಿಗೊತ್ತಿ ನಮ್ಮ ಕುಲ ಕನ್ನಡ, ಕುಲ ಗೋತ್ರ ಸೂತ್ರಗಳೆಲ್ಲವೂ ಕನ್ನಡವೇ, ನಮಗೆ 'ಕನ್ನಡ ಗೆಲ್ಗೆ' – 'ಕನ್ನಡ ಬಾಳ್ಗೆ' ಎಂಬುದೇ ನಿತ್ಯವೂ ಪಠಿಸುವ ಪಂಚಾಕ್ಷರೀ ಮಂತ್ರವೆಂದು ಭಾವಿಸಬೇಕು. ಪ್ರತಿಯೊಬ್ಬ ಕನ್ನಡಿಗನೂ ಕನ್ನಡಮ್ಮನ ಪೂಜಾರಿಯಾಗಬೇಕು. ಆಕೆಯ ಆಶೀರ್ವಾದ ಹೊಂದಿ ಭಾರತಮಾತೆಯ ಪೂಜೆಗೆ ಮುಂದಡಿಯಿಡಬೇಕು" ಎಂದು ಕನ್ನಡಿಗರ ಧ್ಯೇಯೋದ್ದೇಶಗಳು ಏನಿರಬೇಕೆಂಬುದನ್ನು ವಿಷದಪಡಿಸಿದ್ದಾರೆ.

"ಪ್ರಕೃತ, ಕನ್ನಡ ನಾಡಿನಲ್ಲಿ ಹಲವಾರು ಕನ್ನಡಿಗರು ಎಚ್ಚತ್ತಿದ್ದಾರೆ. ಅನೇಕ ಹಿರಿಯ ಸಾಹಿತಿಗಳು – ಭಾಷಾಭಿಮಾನಿಗಳು ಜನರ ಬೆಂಬಲಕ್ಕೆ ನಿಂತು ತಕ್ಕ ಸಹಾಯವನ್ನು ಹೃದಯ ಪೂರ್ವಕವಾಗಿ ನೀಡುತ್ತಿದ್ದಾರೆ. ಆದರೆ ಅಕ್ಕ ಪಕ್ಕ ರಾಷ್ಟ್ರಗಳವರ ಅತಿಕ್ರಮಣದ ಜೋರಿನಲ್ಲಿ ಕನ್ನಡಿಗರು ಗಟ್ಟಿಯಾಗಿ ಶ್ವಾಸಬಿಡಲೂ ಸಾಧ್ಯವಿಲ್ಲವಾಗಿದೆ. ಗಡಿನಾಡಿನಲ್ಲಿ ವಾಸಿಸುವ ಕನ್ನಡಿಗರ ಸ್ಥಿತಿ ಬಹಳ ಶೋಚನೀಯವಾಗಿದೆ. ಅವರಿಗೆ ತಮ್ಮ ವಿಷಯದಲ್ಲಿ ಇರುವ ಅಜ್ಞಾನ, ಮಾತೃಭಾಷೆಯ ಮೇಲಣ ತಾತ್ಸಾರ, ಇವೇ ಈ ಹೀನ ಸ್ಥಿತಿಗೆ ಕಾರಣ. ಈಗ ಜಿಲ್ಲೆಯಲ್ಲಿ ಬಹುಸಂಖ್ಯಾತರ ಮನೆಮಾತು ಕನ್ನಡ. ಇದು ನಿಸ್ಸಂಶಯ. ಆಲೂರು, ಅದವಾನಿ, ರಾಯದುರ್ಗ ತಾಲ್ಲೂಕುಗಳಲ್ಲಿ ಕನ್ನಡಿಗರು ಅಧಿಕ ಸಂಖ್ಯಾತರಿದ್ದರೂ ಮನೆ ಮಾತಿನಲ್ಲಿ ಶಿಕ್ಷಣ ಸಿಕ್ಕುವುದು ದುರ್ಲಭ. ಈ ತಪ್ಪಿನ ಅನ್ಯರಾರೂ ಕಾರಣರಲ್ಲ. ನಮ್ಮ ನಿರಭಿಮಾನಿ ಕನ್ನಡಿಗರೇ ಕಾರಣವೆಂದೂ ಧಾರಾಳವಾಗಿ ಹೇಳಬಹುದು. ಇನ್ನಾದರೂ ಎಚ್ಚತ್ತುಕೊಳ್ಳುವ, ಕನ್ನಡ ದೇವಿಯ ಸೇವೆಗೆ ಸಿದ್ಧರಾಗುವ".

ಎಂದು ನುಡಿದ ಆ ದಿನಗಳಲ್ಲಿ ಕನ್ನಡದ ಗಡಿನಾಡಿನಲ್ಲಿ ಇದ್ದ ಪರಿಸ್ಥಿತಿಯನ್ನು ಯಥಾರ್ಥವಾಗಿ ವರ್ಣಿಸಿದ್ದಾರೆ. ಇಂದು ಅದವಾನಿ, ಆಲೂರು, ರಾಯದುರ್ಗ ತಾಲೂಕುಗಳು – ಯಮ್ಮಿಗನೂರು ಸಮೇತವಾಗಿ ಆಂಧ್ರ ಪ್ರಾಂತ್ಯಕ್ಕೆ ಸೇರಿ ಹೋಗಿವೆ; ಅವು ಇಂದು ಕರ್ಣಾಟಕಕ್ಕೆ ಹೊರನಾಡು ಆಗಿವೆ; ಶ್ರೀಯವರು ನೀಡಿದ ಎಚ್ಚರಿಕೆ, ಮಾಡಿದ ಪ್ರಚಾರ, ಈ ಭಾಗದಲ್ಲಿ ಫಲಿಸಲಿಲ್ಲವೆಂಬುದು ವಿಷಾದದ ವಿಷಯ.

ಶ್ರೀಯವರು ಕನ್ನಡದ ಹಿರಿಮೆಯನ್ನು ಕೊಂಡಾಡುವಾಗ 'ಕನ್ನಡಿಗರಿಗೆ ಕನ್ನಡವೇ ಗತಿ' ಎಂದು ಉದ್ಘೋಷಿಸಿದಾಗ ಕೆಲವರು 'ಇದು ಸಂಸ್ಕೃತ ದ್ವೇಷ', 'ಸಂಕುಚಿತ ಬುದ್ಧಿ' ಎಂದರು. ಆದರೆ ಶ್ರೀಯವರು ಎಂದಿಗೂ ಸಂಸ್ಕೃತ ದ್ವೇಷಿಗಳಲ್ಲ. ಅವರು ಉತ್ತಮ ಸಂಸ್ಕೃತ ವಿದ್ವಾಂಸರೇ ಆಗಿದ್ದರು. ಸಂಸ್ಕೃತ ಸಾಹಿತ್ಯದಲ್ಲಿ ಸಾರವತ್ತಾದುದನ್ನು ಕನ್ನಡಕ್ಕೆ ತರಬೇಕೆಂದು ನಂಬಿ ಅದಕ್ಕಾಗಿ ಶ್ರಮಿಸಿದವರು, ಅವರು ಎಂದಿಗೂ ಸಂಕುಚಿತ ಮನೋವೃತ್ತಿಯವರಲ್ಲ.

'ವಿಶ್ವ ಭಾರತಿ ಶರಣು ಕಿರು ತೀರ್ಥಮಲ್ತು'
'ಋತಮೊಂದೆ ಗೆಲ್ಲುವುದು, ಅನೃತಮಲ್ತು'
'ಕಡೆಗೆ ಗೆಲ್ಲುವುದು ಅಭಿಮಾನವಲ್ಲ, ಸತ್ಯ'

ಎಂದು ಪದೇ ಪದೇ ತಮ್ಮ ವಿಶಾಲ ಮನೋಭಾವವನ್ನು ಪ್ರಕಟಪಡಿಸಿದ್ದಾರೆ. ಆದರೂ ಇಂಥ ಆರೋಪಣೆಗಳು ಪುನಃ ಪುನಃ ತಲೆ ಎತ್ತಿದಾಗ ಅವರು ಹೀಗೆ ಉತ್ತರ ನೀಡಿದ್ದಾರೆ: "ನಮ್ಮ ಮನೆಯಲ್ಲಿ ತಾಯಿಯನ್ನು ಉಪವಾಸವಿರಿಸಿ ಊರುತ್ಸವಕ್ಕೆ ಹೋಗುವುದೆ? ಪ್ರಪಂಚದ ಉತ್ಸವದಲ್ಲಿ ಮನೆಯನ್ನು ಬರಿದು ಮಾಡುವುದೆ? ಕನ್ನಡ ಮಾತೆಯ ಮೂಲಕ ಭಾರತ ಮಾತೆಯನ್ನು ಸೇವಿಸೋಣ, ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ವೃದ್ಧಿಯಾಗುತ್ತಾಳೆ. ನಮ್ಮ ತಾಯಿಯ ಅಡಿಯಲ್ಲಿ ನಿರ್ವಂಚನೆಯಿಂದಲೂ ಭಕ್ತಿಯಿಂದಲೂ ಒಂದು ಹೂವು ಹಾಕೋಣ. ಆಮೇಲೆ ಯಾವ ಎಲ್ಲೆಯಲ್ಲಾದರೂ ಇರೋಣ. ಕನ್ನಡ ತಾಯಿಯನ್ನು ಮರೆಯದೆ ಆಕೆಯ ಮೂಲಕ ಸರ್ವವನ್ನೂ ಸಾಧಿಸೋಣ. ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ವೃದ್ಧಿಯಾಗುತ್ತಾಳೆ. ತಾಯಿ ಹೆಮ್ಮೆ ಪಟ್ಟುಕೊಂಡರೆ ಮಕ್ಕಳು ಬದುಕಿ ಹೋಗುತ್ತಾರೆ. ಕನ್ನಡ ತಾಯಿ ನಮ್ಮನ್ನು ಆಶೀರ್ವದಿಸಲಿ. ಆಕೆಯ ವಿಜಯ ಪತಾಕೆ ಹಾರಲಿ. ಕನ್ನಡ ನಾಡು ದೊಡ್ಡದಾಗಲಿ".

ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಅದರ ಆಡಳಿತವನ್ನು ವಹಿಸಿಕೊಂಡ ಶ್ರೀಕಂಠಯ್ಯನವರು ಅದು ಕನ್ನಡ ಮಹಾಜನರ ವಿಶ್ವವಿದ್ಯಾನಿಲಯವಾಗಬೇಕೆಂದು ಹಾರೈಸಿದರು. ಅದು ಕನ್ನಡಿಗರ ಪುನರುಜ್ಜೀವನ ನಡೆಸಬೇಕೆಂದು ಕೋರಿದರು. ಹಳೆಯ ಸಾಹಿತ್ಯದ ಪ್ರಚಾರ, ಹೊಸ ಸಾಹಿತ್ಯದ ಪೋಷಣೆಗಳು ಪರಿಷತ್ತಿನಿಂದ ನಡೆಯಬೇಕೆಂದು ಉದ್ದೇಶಪಟ್ಟು ಕನ್ನಡ ಪರೀಕ್ಷೆಗಳನ್ನು ನಡೆಸುವ ಯೋಜನೆಯನ್ನು ಹಾಕಿಕೊಂಡರು. ಶಾಲೆಗೆ ಹೋಗಿ ವಿದ್ಯೆ ಕಲಿಯಲು ಅನುಕೂಲವಿಲ್ಲದೆ ಕನ್ನಡದಲ್ಲಿ ಆಸಕ್ತಿ ವಹಿಸಿ ಕನ್ನಡ ಕಲಿಯಬೇಕೆಂದಿರುವವರಿಗಾಗಿ ಕನ್ನಡ ಕಾವ, ಜಾಣ, ರತ್ನ ಎಂಬ ಮೂರು ಪರೀಕ್ಷೆಗಳನ್ನು ಏರ್ಪಡಿಸಿ ಜಾರಿಗೆ ತಂದರು. ಹೈದರಾಬಾದು ಕರ್ಣಾಟಕದಲ್ಲಿ 'ಕನ್ನಡ ಜಾಣ' ಪರೀಕ್ಷೆಯನ್ನು ಪ್ರಾಥಮಿಕ ಶಾಲೆಯ ಉಪಾಧ್ಯಾಯ ಪದವಿಗೆ ತಕ್ಕ ವಿದ್ಯಾರ್ಹತೆಯೆಂದು ಪರಿಗಣಿಸಿದ್ದರೆಂದು ಕೇಳಿದ್ದೇವೆ. ಈ ಪರೀಕ್ಷೆಗಳನ್ನು ಪರಿಷತ್ತು ನಡೆಸುವುದರಿಂದ ಹೆಚ್ಚು ಜನ ಕನ್ನಡ ಸಾಹಿತ್ಯವನ್ನು ಓದುವಂತಾಗಿ ಕನ್ನಡಕ್ಕೆ ಹೆಚ್ಚಿನ ಪ್ರಚಾರವಾಯಿತು. 'ಕನ್ನಡ ಬಾವುಟ' ಎಂಬ ಪುಸ್ತಕವನ್ನು ಸಿದ್ಧಪಡಿಸಿ ಅದರ ಮಾರಾಟದಿಂದ ಬಂದ ಹಣವನ್ನು ಪರಿಷತ್ತು ನಡೆಸುವ 'ವಸಂತ ಸಾಹಿತ್ಯೋತ್ಸವ'ದ ವೆಚ್ಚಕ್ಕೆ ಬಳಸಬೇಕೆಂದು ಯೋಜಿಸಿದರು. ಇದಲ್ಲದೆ ಹೊಸಗನ್ನಡ ಹಳಗನ್ನಡ ಕಾವ್ಯಗಳಿಂದ ಆಯ್ದ ಶ್ರೇಷ್ಠತಮವಾದ ಕವನಗಳನ್ನು ಒಟ್ಟುಗೂಡಿಸಿ 'ಕನ್ನಡ ಕಾವ್ಯಸಾರ' ಎಂಬ ಹೆಸರಿನಿಂದ ಪ್ರಕಟಿಸಬೇಕೆಂದು ಶ್ರೀಯವರು ಯೋಜಿಸಿದ್ದರು. ಆದರೆ ಅದು

ನೆರವೇರಲಿಲ್ಲ. ಆ ವೇಳೆಗೆ ಅವರು ಪರಿಷತ್ತಿನ ಉಪಾಧ್ಯಕ್ಷ ಪದವಿಯನ್ನು ಬಿಡಬೇಕಾಯಿತು.

ಕನ್ನಡ ಚಟುವಟಿಕೆಗಳ ಸುದ್ದಿಯನ್ನು ಪ್ರಕಟಿಸುವ ಸಲುವಾಗಿಯೇ ಶ್ರೀಯವರು ಪರಿಷತ್ತಿನ ಆಶ್ರಯದಲ್ಲಿ 'ಕನ್ನಡ ನುಡಿ' ಎಂಬ ಒಂದು ಪತ್ರಿಕೆಯನ್ನು ಹುಟ್ಟು ಹಾಕಿದರು. ಈ ಪ್ರಚಾರ ಕಾರ್ಯವನ್ನು ಸಕಾಲದಲ್ಲಿ ನಿರ್ವಹಿಸಲು ಅನುಕೂಲಿಸುವಂತೆ ಪರಿಷತ್ತಿಗೆ ಒಂದು ಅಚ್ಚುಕೂಟವಿರಬೇಕೆಂದು ಯೋಚಿಸಿ ಅದಕ್ಕೆ ಬೇಕಾದ ಹಣವನ್ನು ತಾವೇ ಕೊಟ್ಟರು. ಪರಿಷತ್ತಿನ ವಸಂತ ಸಾಹಿತ್ಯೋತ್ಸವ ಬೆಂಗಳೂರು ಮಹಾನಗರದಲ್ಲಿ ಮಾತ್ರ ನಡೆದರೆ ಸಾಲದೆಂದು ಹೇಳಿ ಕನ್ನಡ ನಾಡಿನ ನಾನಾ ನಗರಗಳಲ್ಲಿ ಸಾಹಿತ್ಯೋತ್ಸವಗಳನ್ನು ಏರ್ಪಡಿಸಿ ಅದಕ್ಕಾಗಿ ಉಪನ್ಯಾಸಕರನ್ನೂ ಗಮಕಿಗಳನ್ನೂ ಕಳುಹಿಸಿಕೊಟ್ಟರು. ಶ್ರೀಯವರು ಕನ್ನಡ ಪ್ರಚಾರದ ಅವಶ್ಯಕತೆಯನ್ನು ಚೆನ್ನಾಗಿ ಮನಗಂಡವರಾದ್ದರಿಂದ ಅದಕ್ಕಾಗಿ ವಿಶೇಷ ಪ್ರಯತ್ನಗಳನ್ನು ನಡೆಸಿದರು.

ಪರಿಷತ್ತಿನ ಆಶ್ರಯದಲ್ಲಿ ಕನ್ನಡ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದುದೇ ಅಲ್ಲದೆ ಶ್ರೀಯವರು ಮೈಸೂರು ವಿಶ್ವವಿದ್ಯಾನಿಲಯದವರು ನಡೆಸುತ್ತಿದ್ದ ಪ್ರಚಾರೋಪನ್ಯಾಸಗಳಿಗೂ ಬೆಂಬಲವಾಗಿ ನಿಂತು ಆಶೀರ್ವದಿಸಿದರು. ವಿಶ್ವವಿದ್ಯಾನಿಲಯದ ಅಧ್ಯಾಪಕ ಸಂಘದವರು ನಡೆಸುತ್ತಿದ್ದ ಪ್ರಚಾರೋಪನ್ಯಾಸ ಸಪ್ತಾಹಗಳಿಗೆ ಅನೇಕ ಸಲ ತಾವೇ ಬಂದು ಉದ್ಘಾಟನಾ ಸಮಾರಂಭದಲ್ಲಿಯೋ, ಮುಕ್ತಾಯ ಸಮಾರಂಭದಲ್ಲಿಯೋ ಪಾಲುಗೊಂಡು ಭಾಷಣ ಮಾಡುತ್ತಿದ್ದರು. ಶ್ರೀಯವರು ಬರುವರೆಂಬುದೇ ಸ್ಥಳದ ಜನರಿಗೆ ದೊಡ್ಡ ಆಕರ್ಷಣೆಯ ಸಂಗತಿಯಾಗಿತ್ತು. ಇಂಥ ಒಂದು ಸಮಾರಂಭಕ್ಕೆ ದೇವನಹಳ್ಳಿಗೆ ಶ್ರೀಯವರು ದಯಮಾಡಿದಾಗ ಸ್ಥಳದ ಮುಖಂಡರು ಅವರನ್ನು ಸಂಭ್ರಮದಿಂದ ಸ್ವಾಗತಿಸಿ ಅಧ್ಯಾಪಕರು ಬಿಡಾರದಿಂದ ಉಪನ್ಯಾಸ ಮಂದಿರದವರೆಗೆ ಮೇಳ ತಾಳಗಳೊಡನೆ ಮೆರವಣಿಗೆಯಲ್ಲಿ ಕರೆದೊಯ್ದ ಸಂಭ್ರಮದ ಚಿತ್ರ – ಆ ವೈಭವದ ಸ್ಮರಣೆ ಇಂದಿಗೂ ನಮ್ಮ ಚಿತ್ತದಲ್ಲಿ ಪ್ರಫಲಿತವಾಗಿದೆ. ಆಗ ಅವರು ನೀಡಿದ ಭಾಷಣ ಅಪೂರ್ವ ಜ್ಞಾನವಾಹಿನಿಯಾಗಿತ್ತು. ಅದನ್ನು ಬರೆದಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಆ ಕಾಲಕ್ಕೆ ಟೇಪ್‌ರಿಕಾರ್ಡರುಗಳು ಈಗಿನ ಹಾಗೆ ಲಭ್ಯವಿರಲಿಲ್ಲ. ಈ ಕಾರಣದಿಂದ ಅವರ ಅನೇಕ ಜ್ಞಾನದಾಯಕವಾದ ಭಾಷಣಗಳು ಗಾಳಿಯ ಪಾಲಾಗಿ ಹೋದುವು. ಈ ಹೊತ್ತು ನಾವು ಅವುಗಳ ವೈಖರಿಯನ್ನು ಹೊಗಳಿ ಸಂತೃಪ್ತರಾಗಬೇಕಾಗಿದೆಯೇ ಹೊರತು ಅವ್ಯಕ್ತತ್ವ ವೈಭವದ ಒಂದು ತುಣುಕನ್ನು ಆಧುನಿಕ ಪೀಳಿಗೆಯವರಿಗೆ ಪ್ರದರ್ಶನ ಮಾಡುವ ಸ್ಥಿತಿಯಲ್ಲಿಲ್ಲ, ಶ್ರೀಯವರು ಹುಟ್ಟಿನಿಂದಲೇ ಮಹಾವಾಗ್ಮಿಗಳು. ಅವರ ಕಂಠಶ್ರೀ ಎಂಥವರನ್ನಾದರೂ ಬೆರಗು ಗೊಳಿಸುವಂತಿತ್ತು. ತರಗತಿಯ ಪಾಠವಾಗಲಿ, ಸಾರ್ವಜನಿಕ ವೇದಿಕೆಯ ಭಾಷಣವಾಗಲಿ, ಅದ್ಭುತ ರಸವಾಹಿನಿಗಳು.

ಶ್ರೀಯವರು ತಮ್ಮ ಭಾಷಣಗಳಿಂದ ಕನ್ನಡಿಗರಲ್ಲಿ ಕನ್ನಡದ ವಿಚಾರವಾಗಿ ಆಸಕ್ತಿ, ಉತ್ಸಾಹಗಳನ್ನು ಹುಟ್ಟಿಸಿ ಕನ್ನಡ ಕೈಂಕರ್ಯಕ್ಕೆ ಹುರಿದುಂಬಿಸಿದರು. ಮಾತೃಭಾಷೆಯ ಮೂಲಕ ಲಭಿಸುವ ಶಿಕ್ಷಣವೇ ಅತ್ಯಂತ ಫಲದಾಯಕವಾದುದರಿಂದ ಕನ್ನಡಿಗರಿಗೆ ಕನ್ನಡದ ಮೂಲಕವೇ ಸಮಸ್ತ ವಿದ್ಯೆಯೂ ಲಭಿಸುವಂತಾಗಬೇಕೆಂಬುದನ್ನು ಮನದಟ್ಟು ಮಾಡಿಕೊಟ್ಟರು. ಅವರ ಈ ಕನ್ನಡ ಸೇವೆ ಅನುಪಮವಾದದ್ದು. ಶ್ರೀಯವರು ಹೀಗೆ ಬಿರುಗಾಳಿಯಂತೆ ಊರೂರುಗಳಿಗೆ ನುಗ್ಗಿ ಎಲ್ಲೆಂದರಲ್ಲಿ ಭಾಷಣ ಬಿಗಿಯುವುದರಲ್ಲಿ ತಮ್ಮ ಶಕ್ತಿಯ ಅಪವ್ಯ ಮಾಡಿದರೆಂದೂ ಕೆಲವರು ಆಕ್ಷೇಪಿಸುವುದುಂಟು. ಶ್ರೀಯವರು ಷೇಕ್ಸ್‌ಪಿಯರ್ ನಾಟಕಗಳನ್ನು ಅನುವಾದ ಮಾಡಬೇಕಿತ್ತು. ತಮಿಳಿನ ಶಿಲಪ್ಪದಿಗಾರಂ, ಮಣಿಮೇಖಲೈ ಮೊದಲಾದ ಮಹಾಕೃತಿಗಳನ್ನು ಕನ್ನಡಿಸಬೇಕಾಗಿತ್ತು. ಎಂದು ಅವರು ಮಾಡಬೇಕಾಗಿದ್ದ ಅನೇಕ ಕಾರ್ಯಗಳನ್ನು ಪಟ್ಟಿ ಮಾಡಿ ಹೇಳುವುದುಂಟು. ಅವನ್ನೆಲ್ಲ ಶ್ರೀಯವರು ಮಾಡಿದ್ದಿದ್ದರೆ ಕನ್ನಡ ಸಾಹಿತ್ಯ ಸಂಪತ್ತು ಅತ್ಯಂತ ಶ್ರೀಮಂತವಾಗುತ್ತಿದ್ದಿತೆಂಬ ವಿಷಯದಲ್ಲಿ ಭಿನ್ನಅಭಿಪ್ರಾಯಕ್ಕೆ ಅವಕಾಶವೇ ಇಲ್ಲ. ಆದರೆ ಶ್ರೀಯವರು ನಡೆಸಿದ ಅದ್ಭುತವಾದ ಕನ್ನಡ ಪ್ರಸಾರಕಾರ್ಯವನ್ನು ಬೇರೆ ಯಾರೂ ನಿರ್ವಹಿಸುವುದು ಸಾಧ್ಯವಿರಲಿಲ್ಲ. "ಈಗ ಪುಣ್ಯದಿಂದ (ಹಿಂದಿನ) ಆ ದೈನ್ಯಾವಸ್ಥೆ ನೀಗಿ ಶುಭೋದಯ ಕಾಣುತ್ತಿದೆ." ತಮ್ಮ ನಾಡು ನುಡಿಗಳ ಬಗ್ಗೆ ಕನ್ನಡ ಜನರಲ್ಲಿ ಮಾತ್ರವಲ್ಲ. ತಮಿಳು, ತೆಲುಗು, ಮರಾಠಿ, ಕೊಂಕಣಿ, ಇವು ಮನೆಯ ಮಾತಾಗಿರುವ ಕರ್ನಾಟಕದ ಜನರೂ ದೇಶ ಭಾಷೆಯಲ್ಲಿ ಸ್ವಭಾಷೆಗಿಂತ ಒಂದು ಬಗೆಯ ಹೆಚ್ಚಿನ ಅಭಿಮಾನವನ್ನೇ ಇಟ್ಟು, ಅದಕ್ಕೆ ಪ್ರಾಮುಖ್ಯತೆ ಕೊಟ್ಟು, ಒಂದು ಸಂಪ್ರದಾಯವನ್ನು ಪಾಲಿಸಿಯೋ ಎಂಬಂತೆ ಈಗಲೂ ಅದಕ್ಕೆ ದುಡಿಯುತ್ತಿದ್ದಾರೆ. ನಾಡಿನಲ್ಲಿ ಎಲ್ಲೆಲ್ಲೂ ಶ್ರದ್ಧೆ, ಉತ್ಸಾಹ, ಧೈರ್ಯಗಳಿಂದ ಕೆಲಸ ಮಾಡುತ್ತಿರುವ ಸಾಹಿತ್ಯ ಸೇವಕರನ್ನೂ ಸಂಘಗಳನ್ನೂ ಕಂಡು ನನ್ನಂಥ ಹಣ್ಣು ಮುದುಕನಿಗೆ ಆಗುತ್ತಿರುವ ಸಂತೋಷ ಹೇಳತೀರದು". ಈ ಹೊಸ ಕನ್ನಡ ಚಳವಳಿಯನ್ನು ಕಂಡು ಶ್ರೀಮಾನ್ ಶ್ರೀಕಂಠಯ್ಯನವರು ಹೇಳಿರುವುದು ಗಮನಾರ್ಹವಾಗಿದೆ. ಶ್ರೀಯವರು ಕನ್ನಡದ ಅಭಿಮಾನಿಗಳು, ಅಧ್ಯಾಪಕರು, ಆರಾಧಕರು, ಭಕ್ತರು ಕನ್ನಡದ ಮೇಲ್ಮೆಗಾಗಿ ತಮ್ಮ ಸರ್ವಶಕ್ತಿಗಳನ್ನು ಮುಡಿಪಾಗಿ ಇಟ್ಟ ಕನ್ನಡ ಸೇವಾ ದೀಕ್ಷಿತರು, ಕನ್ನಡ ಯೋಗಿಗಳು!

❐

‘ಶ್ರೀ ಸಾಧನ’

೬. 'ಶ್ರೀ'ಯವರ ಛಂದಸ್ಸಿನ ಪ್ರಯೋಗಗಳು, ವಿಚಾರಗಳು

■ *ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ*

ಹೊಸಗನ್ನಡ ಸಾಹಿತ್ಯದಲ್ಲಿ ಬಿ.ಎಂ.ಶ್ರೀಕಂಠಯ್ಯನವರ ಸ್ಥಾನಮಾನಗಳೇನು, ಅವರ ವ್ಯಕ್ತಿತ್ವವೂ, ಕೃತಿಗಳೂ, ಪ್ರೋತ್ಸಾಹವೂ ಪ್ರಚಾರಕಾರ್ಯಗಳೂ ಬೀರಿದ ಪ್ರಭಾವ ಪ್ರಕಾಶಗಳೇನು ಎನ್ನುವುದು ಸಮಚಿತ್ತರಾದ ಕನ್ನಡಿಗರಲ್ಲಿ ಎಂದೂ ಉತ್ಪ್ರೇಕ್ಷೆಯ ಇಲ್ಲವೆ ಅತಿರೇಕದ ವಾದವಿವಾದಗಳಿಗೆ ಎಡೆಗೊಟ್ಟಿಲ್ಲ. ಹೊಸಗ್ನಡ ಸಾಹಿತ್ಯದ ಬೆಳವಣಿಗೆಯಲ್ಲಿ ಅವರನ್ನು "ಮಾರ್ಗದರ್ಶಿಗಳು, ಮಾರ್ಗಕಾರರು" ಎಂದು ಹಿರಿಯರು ಗುರುತಿಸಿ[೧] ಆಗಿದೆ. ಹೊಸಗನ್ನಡ ಛಂದಸ್ಸಿನ ಸ್ವರೂಪ ವಿಮರ್ಶೆಯಲ್ಲಿ ಅವರ ವಿಚಾರಗಳೂ ವಿಶ್ಲೇಷಣೆಗಳೂ ಯಾವುವು – ಇವನ್ನು ಸಂಕ್ಷೇಪವಾಗಿ ಗುರುತಿಸುವುದು ಈ ಪ್ರಬಂಧದ ಉದ್ದೇಶ.

-೧-

ಹೊಸಗನ್ನಡ ಛಂದಸ್ಸಿನ ಕ್ಷೇತ್ರದಲ್ಲಿ 'ಶ್ರೀ'ಯವರ ಸಾಧನೆಗಳನ್ನು ನಮ್ಮ ವಿದ್ವಾಂಸರು ಹೇಗೆ ಗುರುತಿಸಿದ್ದಾರೆ? ಮುಂದೆ ಒಂದೆರಡು ಹೇಳಿಕೆಗಳನ್ನು ಮಾತ್ರ ಉದ್ಧರಿಸುತ್ತೇನೆ:

೧) **ಟಿ.ಎಸ್. ವೆಂಕಣ್ಣಯ್ಯನವರು:** ....ಈ ಕವನಗಳು ಒಟ್ಟಿನಲ್ಲಿ ಹೊಸ ದಾರಿಯವು. ಈ ಕವಿಗಳು ಕಾವ್ಯಕ್ಕೆ ಬೇಕಾದ ವಸ್ತುವನ್ನು ಆರಿಸುವುದರಲ್ಲಿಯೂ ಪದ್ಯರಚನೆಯಲ್ಲಿಯೂ ಪ್ರಾಚೀನ ಸಂಪ್ರದಾಯಕ್ಕೆ ಕಟ್ಟುಬಿದ್ದಿಲ್ಲ. ಆದರೆ ಈ ಹೊಸ ದಾರಿಯನ್ನು ಅವರೇ ಕಲ್ಪಿಸಿಕೊಂಡಿಲ್ಲ. ಶ್ರೀಮಾನ್ ಬಿ.ಎಂ.ಶ್ರೀಕಂಠಯ್ಯನವರು ಡಿ.ವಿ. ಗುಂಡಪ್ಪನವರು, ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಮೊದಲಾದ ಹಿರಿಯರಿಗೆ ಈ ಹೊಸದಾರಿಯಲ್ಲಿ ನಡೆದು ಕವಿಗಳಿಗೆ ಮಾರ್ಗದರ್ಶಕರಾದ ಗೌರವವು ಸಲ್ಲುತ್ತದೆ. ಅವರುಗಳು, ಮುಖ್ಯವಾಗಿ ಶ್ರೀ ಬಿ.ಎಂ.ಶ್ರೀಕಂಠಯ್ಯನವರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನೇ ಈ ಕವಿಗಳು ಅನುಸರಿಸಿರುತ್ತಾರೆ."[೨]

೨) ತೀ.ನಂ.ಶ್ರೀಕಂಠಯ್ಯನವರು : "ಎಲ್ಲಕ್ಕೂ ಮಿಗಿಲಾಗಿ 'ಶ್ರೀ'ಯವರಿಂದ ಕನ್ನಡಕ್ಕೆ ಆದ ಪರಮೋಪಕಾರವೆಂದರೆ, 'ಇಂಗ್ಲೀಷ್ ಗೀತಗಳಲ್ಲಿ' ಛಂದಸ್ಸಿನ ಹೊಸದೊಂದು ಹೆದ್ದಾರಿಯನ್ನೇ ತೆರೆದದ್ದು; ಕನ್ನಡ ಕಾವ್ಯದ ಚರಿತ್ರೆಯಲ್ಲಿ ಅವರ ಹೆಸರು ಚಿರಸ್ಮರಣೀಯವಾಗಿ ನಿಲ್ಲುವುದು ಮುಖ್ಯವಾಗಿ ಇದರಿಂದ." (೩)

೩) ಡಿ.ಎಲ್. ನರಸಿಂಹಾಚಾರ್ಯರು : "ಕನ್ನಡವನ್ನೂ ಇಂಗ್ಲೀಷನ್ನೂ ಕಲಿತ ಸವ್ಯಸಾಚಿಗಳಾದ 'ಶ್ರೀ' ಅವರು ಕನ್ನಡದ ಹೊಸ ಕಾವ್ಯಕ್ಕೆ ಪ್ರೇರಕರಾದರು. ಅವರು ರಚಿಸಿದ 'ಇಂಗ್ಲೀಷ್ ಗೀತಗಳು' ಕಾವ್ಯಮಾರ್ಗವನ್ನು ತೋರಿಸಿದ್ದೊಂದೇ ಅಲ್ಲದೆ ಹೊಸಗನ್ನಡ ಛಂದಸ್ಸನ್ನೂ ಧಾಟಿಯನ್ನೂ ಕಾಣಿಸಿತು. ಹೊಸ ಚೈತನ್ಯ ಹರಿಯುವುದಕ್ಕೆ ಹೊಸ ಪಾತ್ರವನ್ನು ನಿರ್ಮಿಸಿತು. ಹೊಸಗನ್ನಡದ ಬಗೆ ಬಗೆಯ ಮಟ್ಟಗಳಿಗೆ ಅವರು ನಿರ್ಮಾಪಕರಾಗಿದ್ದಾರೆ. ಅವರು ತೋಡಿದ ನಾಲೆ ಇಂದು ತುಂಬುಹೊನಲಾಗಿದೆ".(೪)

೪) ಕ.ವೆಂ. ರಾಘವಾಚಾರ್ಯರು: "ಶ್ರೀಮಾನ್ ಶ್ರೀಕಂಠಯ್ಯನವರು ೧೯೨೬ನೆಯ ಇಸವಿಯಲ್ಲಿ ಪ್ರಕಟವಾದ ತಮ್ಮ ಇಂಗ್ಲೀಷ್ ಗೀತಗಳು ಕವನಸಂಗ್ರಹದಿಂದ ಹೊರಗಿನ ಜನರಿಗೆ ಮೊದಲು ಪರಿಚಯವಾಗಿ, ಒಮ್ಮೆಯೇ ಕನ್ನಡಿಗರೆಲ್ಲರ ಪ್ರೀತಿಮನ್ನಣೆಗಳನ್ನು ಪಡೆದರು. ಅದರಲ್ಲಿ ಬಳಸಿರುವ ಹೊಸ ಛಂದಸ್ಸುಗಳೂ ಮಾಡಿರುವ ಪ್ರಯೋಗ ಪರೀಕ್ಷೆಗಳೂ ಹಲವು ತರುಣಕವಿಗಳಿಗೆ ಮಾರ್ಗದರ್ಶಕವಾದುದು."(೫)

೫) ಎಸ್. ಅನಂತರಾಯಣ ಅವರು: "ಇಂಗ್ಲೀಷ್ ಗೀತಗಳ ಹೊಸತನವಿರುವುದು ನಿಜವಾಗಿ ಅವರ ಹೊಸಛಂದಸ್ಸಿನಲ್ಲಿ ಎಂದು ಹೇಳಬಹುದು".(೬)

ಇಂತಹ ಹೇಳಿಕೆಗಳನ್ನು ಇನ್ನೂ ಹುಡುಕಿ ತೆಗೆಯಬಹುದು. ಈ ಹಿರಿಯವರ ಮಾತುಗಳಲ್ಲಿ ಕೆಲವರಿಗೆ ಅತ್ಯುಕ್ತಿಯ ಧ್ವನಿ ತೋರಿದರೆ, ಇನ್ನೂ ಗಾಢವಾದ ವಿಮರ್ಶೆಯಿಂದ ನ್ಯಾಯವಾದ ನಿಲುವನ್ನು ಗುರುತಿಸಿ ಅವರನ್ನು ಸಮಾಧಾನಪಡಿಸಬೇಕಾಗುತ್ತದೆ. ನನ್ನ ಮಟ್ಟಿಗೆ ಆ ಹಿರಿಯರ ಮಾತುಗಳು ಅಸಮೀಕ್ಷಕಾರಿತ್ವದ ಅಡ್ಡೇಟಿನ ಮಾತುಗಳಲ್ಲ, ತಾಳಿಕೆಯಾದ ಮಾತುಗಳೇ, ಈಚೆಗೆ ಇಬ್ಬರು ತರುಣ ವಿದ್ವಾಂಸರು 'ಶ್ರೀ' ಅವರ ಛಂದಸ್ಸಿನ ಪ್ರಯೋಗಗಳ ಬಗೆಗೆ ಆಡಿರುವ ನಿರ್ಣಯಾತ್ಮಕವಾದವು ಎನ್ನುವಂತಹ ಅಭಿಪ್ರಾಯಗಳನ್ನೂ ಇಲ್ಲಿ ನಾನು ಉದ್ಧರಿಸುತ್ತೇನೆ:

೧) ಕೆ. ಶಿವರಾಮ ಐತಾಳರು : "ಲಯ, ಅದರ ಅನುಭವ –ಅದೊಂದು ಆನಂದ. ಜನ ಇದರಿಂದ ವಂಚಿತರಾಗಿದ್ದರು –ಸಂಪ್ರದಾಯದ ಅತಿರೇಕದಿಂದ ಮತ್ತೆ ಅದು ಸಾಮಾನ್ಯರಿಗೂ ಸಿಗುವಂತೆ ಆದುದು ಹೊಸಗನ್ನಡ ಛಂದಸ್ಸಿನಿಂದ. ಅದು ಕಣ್ತೆರೆದುದು ಇಂಗ್ಲೀಷ್ ಗೀತಗಳ ಶಲಾಕೆಯಿಂದ. ಹೊಸಗನ್ನಡ ಛಂದಶ್ಶಾಸ್ತ್ರಕ್ಕೆ ಇಂಗ್ಲೀಷ್ ಗೀತಗಳು ಒಂದು ಭದ್ರವಾದ ತಳಕಟ್ಟು.(೭)

೨) ಕೆ.ಜಿ. ನಾರಾಯಣ ಪ್ರಸಾದ್ ಅವರು : (i)............೧೯೨೧ರಲ್ಲಿ ಬಿ.ಎಂ.ಶ್ರೀಯವರ ಇಂಗ್ಲೀಷ್ ಗೀತಗಳ ಮೊದಲ ಆವೃತ್ತಿ ಪ್ರಕಟವಾಯಿತು. ಇದರೊಂದಿಗೆ ಹೊಸ ಛಂದಸ್ಸಿನ ಇತಿಹಾಸ ಅಧಿಕೃತವಾಗಿ ಪ್ರಾರಂಭವಾಯಿತು. ಅವರಿಗೆ ಪ್ರಧಾನವಾಗಿ ಸಾಂಪ್ರದಾಯಿಕವಾದ ಜಾಡಿನಲ್ಲೇ ಸಾಗುತ್ತಿದ್ದ ಕವಿಗಳು ಹೊಸಮಾರ್ಗಗಳ, ರೂಪಗಳ ಅನ್ವೇಷಣೆಗೆ ತೊಡಗಿದರು...(ii) "ಬಿ.ಎಂ.ಶ್ರೀ ಪಾದಗಳ ಮತ್ತು ನುಡಿಗಳ ಕಟ್ಟನ್ನು ಮೊದಲ ಬಾರಿಗೆ ಮೀರಿ ಹೊಸ ರೀತಿಯ ನುಡಿಗಳ ರಚನೆಗೆ ಮಾರ್ಗದರ್ಶಕರಾದರು. ಇಂಗ್ಲೀಷ್ ಛಂದಸ್ಸಿನಿಂದ ನಾವು ಸ್ವೀಕರಿಸಬೇಕಾದದ್ದು ಬಹಳಷ್ಟಿದೆಯೆಂಬುದನ್ನು ತೋರಿಸಿಕೊಟ್ಟರು."[೮]

ಶ್ರೀಯವರ ಛಂದಸ್ಸಿನ ಪ್ರಯೋಗಗಳನ್ನು, ಸಮಾನಗುಣಲಕ್ಷಣಗಳಿದ್ದರೂ, ಇಲ್ಲಿ ಕವಿತೆಗಳು, ನಾಟಕಗಳು ಎಂಬ ವಿಭಾಗಗಳನ್ನು ಮಾಡಿಕೊಂಡು ಪರಿಶೀಲಿಸಿದೆ. ಕವಿತೆಗಳ ಸಂಕಲನಗಳು 'ಇಂಗ್ಲೀಷ್ ಗೀತಗಳು', 'ಹೊಂಗನಸುಗಳು', ನಾಟಕಗಳು 'ಅಶ್ವತ್ಥಾಮನ್', 'ಪಾರಸಿಕರು', ಮೊದಲು ಕವಿತೆಗಳ ಸರದಿ.

ಹೊಸಗನ್ನಡ ಛಂದಸ್ಸನ್ನು ಗುರುತಿಸುವ ಸಂಗತಿಗಳು ಯಾವುವು? ಭಾಷೆ ಹೊಸಗನ್ನಡವಾಗಿರುವುದು ಪ್ರಾಥಮಿಕ ಸಂಗತಿ. ಪೂರ್ವಪರಿಚಿತಗಳಾದ ವರ್ಣ, ಮಾತ್ರಾ, ಮತ್ತು ಅಂಶ ಗಣನಿಷ್ಠಗಳಾದ ಬಂಧಗಳಿಂದ ಬೇರೆಯಾದ ಬಂಧಗಳಲ್ಲಿ ಭಾವನಿವೇದನೆ ನಡೆದಿರುವುದು. ಮುಖ್ಯವಾದುದು ಇಲ್ಲಿ. ವರ್ಣಗಣದ ಬಂಧಗಳು ರಚನೆಗೆ ಒಗ್ಗತಕ್ಕುವಲ್ಲ; ರಚಿಸುವುದೂ ಕಷ್ಟ. ಅಂಶಗಣದವು ಸ್ವಲ್ಪ ಮಟ್ಟಿಗೆ ಒಗ್ಗುವುದು ಸಾಧ್ಯ; ರಚನೆಗೆ ಅಷ್ಟು ಕಷ್ಟವೂ ಇರಲಾರದು; ಆದರೆ ಅವುಗಳ ಹೊಸ ಪ್ರಯೋಗಗಳಿಗೆ ಪ್ರಚುರತೆಯಿಲ್ಲ; ಸಾರ್ವತ್ರಿಕತೆಯ ಮುದ್ರೆ ಬಿದ್ದಿಲ್ಲ. ಉಳಿದವು ಮಾತ್ರಾಗಣದ ಬಂಧಗಳು; ಒಗ್ಗಿರುವಂಥವೂ ರಚನೆಗೆ ಸುಲಭವಾದವೂ ಇವೇ. ಪ್ರಚುರತೆಗೆ ಕೊರತೆಯಿಲ್ಲ; ಸಾರ್ವತ್ರಿಕತೆಯ ಮುದ್ರೆ ಬಿದ್ದು ಎಷ್ಟೋ ಕಾಲ ಸಂದಿದೆ. ಇವುಗಳ ಲಯಗಳು ವಿಶದಪಟ್ಟಿವೆ. ಪ್ರಯೋಗಗಳೂ ಪರೀಕ್ಷೆಗಳೂ ನಿರಂತರವಾಗಿ ನಡೆದು ವೈವಿಧ್ಯಗಳ ಶ್ರೇಣಿ ಸಿದ್ಧವಾಗಿದೆ.

ಬಿ.ಎಂ.ಶ್ರೀಕಂಠಯ್ಯನವರು ಹೊಸಗನ್ನಡ ಛಂದಸ್ಸಿನ ಹರಿಕಾರರಲ್ಲಿ ಪ್ರಮುಖರಾಗಿ ತಮ್ಮ ಪ್ರಭಾವವನ್ನು ಈಚಿನ ಕವಿಗಳ ಮೇಲೆ ಬೀರುವುದರ ಮೊದಲೇ, ೨-೩ ದಶಕಗಳಿಗೂ ಹಿಂದಿನಿಂದಲೂ ಕವಿತೆಯ ವಸ್ತು ಭಾವಗಳಲ್ಲಿ ಹೊಸತನ ಎನ್ನುವುದು ಹೊಳವು ಹಾಕಿತ್ತು. ಆದರೆ ಅವಕ್ಕೆ ರೂಪಕೊಟ್ಟ ಬಂಧಗಳು ಮಾತ್ರ ಹಳೆಯ ಬಂಧಗಳ ಇಡಿಯಾದ ಇಲ್ಲವೆ ಬಿಡಿಯಾದ ರೂಪಾಂತರಗಳೋ ಮಾದರಿಗಳೋ ಆಗಿ, ಸಂಪ್ರದಾಯದ ದಾರಿ ಬಿಟ್ಟಿರಲಿಲ್ಲ. ವಸ್ತು, ಭಾವ ಮತ್ತು ಭಾಷೆಗಳ ದೃಷ್ಟಿಯಿಂದ

ಹೊಸ ಕವಿತೆಯ ಹುಟ್ಟಿಗೆ ಕಾರಣರೆಂದು ಗಣ್ಯರಾಗಿರುವ ಎಸ್.ಜಿ. ನರಸಿಂಹಾಚಾರ್ಯರು ಸಹ ಬಳಸಿದ ಛಂದಸ್ಸುಗಳು ನಡುಗನ್ನಡದಲ್ಲಿ ಪ್ರಚಾರವಾಗಿದ್ದ ಚೌಪದಿ, ಷಟ್ಪದಿ ಸಾಂಗತ್ಯಗಳು; ಕನ್ನಡ ಕವಿತೆ ಬೆಳೆಯಬೇಕಾದ ದಾರಿಯನ್ನು ಸ್ವತಂತ್ರವಾಗಿ ಆಲೋಚಿಸಿದ ಮೊದಲಿಗರಲ್ಲಿ ಒಬ್ಬರಾದ ಹಟ್ಟಿಯಂಗಡಿ ನಾರಾಯಣರಾಯರು ಸಹ ರಗಳೆ, ಚೌಪದಿಗಳ ಕಟ್ಟನ್ನು ದಾಟಲಿಲ್ಲ. ಆದಿಪ್ರಾಸದ ಮೋಹ ತೊರೆಯಲಿಲ್ಲ; ಕನ್ನಡದ ಸುಧಾರಣೆಗಳನ್ನು ತೀವ್ರವಾಗಿ ಚಿಂತಿಸಿದ ಪಂಜೆ ಮಂಗೇಶರಾಯರು ಬಳಸಿದ ಪದ್ಯದ ಧಾಟಿಗಳು ಕೂಡ ಬಲುಮಟ್ಟಿಗೆ ಗೋವಿನಕಥೆಯ ಮಟ್ಟು, ಚೌಪದಿ, ಷಟ್ಪದಿಗಳೇ; ಇವರೂ ಪ್ರಾಸದ ಕಟ್ಟಳೆಗಳನ್ನು ಒಪ್ಪಿಕೊಂಡವರೇ. ಕನ್ನಡಕ್ಕೆ ಮೊದಲ ಸಲ ಸಾನೆಟ್ ಪರಿಚಯಿಸಿದ ಪ್ರಾಸಕೋಶವನ್ನು ಮರೆಯಿಸಿದ, ಗೋವಿಂದ ಪೈಗಳ ಬಂಧಗಳು ಸಹ ಬಹುಶಃ ಈ ತೆರನಾದವೇ. ಡಿ.ವಿ.ಜಿ., ಕಂದಗಳ ಸಮೃದ್ಧಿಯ ಕವಿ, ಸೀಸ, ದ್ವಿಪದಿ, ಷಟ್ಪದಿಗಳನ್ನೇ ವಿಶೇಷವಾಗಿ ಬಳಸಿದರು. ಆದರೆ ಇವರೆಲ್ಲರ ರಚನೆಗಳಲ್ಲಿಯೂ ಛಂದಸ್ಸಿನ ದೃಷ್ಟಿಯಿಂದ ನಾವೀನ್ಯ ಮತ್ತು ಪ್ರಗತಿಪರದೃಷ್ಟಿ, ಸೂಕ್ಷ್ಮವಾಗಿ ಪರಿಶೀಲಿಸಿದರೆ, ಗೋಚರವಾಗದಿರದು ಎನ್ನುವುದು ನನ್ನ ಗ್ರಹಿಕೆ. ಈ ಬಗ್ಗೆ ವಿಶೇಷ ಅಧ್ಯಯನದ ಅಗತ್ಯವಿದೆ.

ಈ ಸ್ಥಿತಿಯಲ್ಲಿ ಶ್ರೀಯವರು ಕನ್ನಡ ಛಂದಸ್ಸಿಗೆ ಕೊಟ್ಟ ಚಾಲನೆ ಅನನ್ಯವಾದುದು, ಅನುಕರಣೀಯವಾದುದು. ಆರ್. ನರಸಿಂಹಾಚಾರ್ಯರು, ಎಸ್.ಜಿ. ಗೋವಿಂದ ರಾಜಯ್ಯಂಗಾರ್ಯರು, ಮೈಸೂರು ಸೀತಾರಾಮಶಾಸ್ತ್ರಿಗಳು, ಆರ್. ತಾತಾಚಾರ್ಯರು ಮುಂತಾದವರ ಸಾಂಪ್ರದಾಯಿಕ ಬಂಧಗಳ ಕವಿತ್ವವನ್ನು ಪ್ರಕಟವಾಗಿ, ಸೂಚ್ಯವಾಗಿ ಮೆಚ್ಚುವವರೂ ಅನುಕರಿಸುವವರೂ ಆದರ್ಶವೆಂದು ಸಾರುವವರೂ, ಹಾಗೆಯೇ ಹೊಸ ಛಂದಸ್ಸಿನ ಕವಿತೆಗಳನ್ನು ಪ್ರಾಸಪರಿತ್ಯಾಗ ಮೊದಲಾದ ಕಾರಣಗಳಿಗಾಗಿ ಹೀಗಳೆಯುವವರೂ, ಸು. ೧೯೩೦-೩೫ರವರೆಗೆ ತಮ್ಮ ಅಭಿಪ್ರಾಯಗಳನ್ನು ಬರಹಗಳ ಮೂಲಕ ವ್ಯಕ್ತಮಾಡುತ್ತಿದ್ದರೆಂಬುದು ಗಮನಿಸಿದರೆ ತಿಳಿಯುತ್ತದೆ. ಇಂಥವರ ಭಾಷಣ ಲೇಖನಗಳಲ್ಲಿ ಶ್ರೀಯವರ ಹೆಸರನ್ನೂ ಪ್ರಯೋಗಗಳನ್ನೂ ನೇರವಾಗಿ ಎತ್ತಿರುವ ಸಂದರ್ಭಗಳು ಇರಬಹುದಾದರೂ, ನನಗೆ ಅವು ತಿಳಿದಿಲ್ಲ. ಈ ವೇಳೆಗಾಗಲೇ ಅವರ, ಮಾಸ್ತಿ, ಡಿ.ವಿ.ಜಿ., ಪೈ ಮತ್ತು ವಿ.ಸೀ. ಮುಂತಾದವರ ಪದ್ಯಸಂಕಲನಗಳು ಪ್ರಕಟವಾಗಿದ್ದವು. ಇವನ್ನು ಲಕ್ಷಿಸಿಯೇ ಟೀಕೆ ಟಿಪ್ಪಣಿಗಳು ಪ್ರಟಕವಾಗಿರಬೇಕು. ಇದೇ ವೇಳೆಗೆ ಶ್ರೀಯವರು, ಎ. ವೆಂಕಟಸುಬ್ಬಯ್ಯನವರು, ಸೇಡಿಯಾಪು ಕೃಷ್ಣಭಟ್ಟ ಈ ಕೆಲವರು ಕನ್ನಡ ಛಂದಸ್ಸಿನ ಬಗೆಗೆ ಹೊಸ ದೃಷ್ಟಿಯ ಸ್ವತಂತ್ರವಾದ ಆಲೋಚನೆಗಳಿಗೆ, ವಿಮರ್ಶೆಗಳಿಗೆ ತೊಡಗಿದ್ದರೆಂಬುದು ಇದೇ ಅವಧಿಯ ಅವರ ಬರಹಗಳಿಂದ ವ್ಯಕ್ತವಾಗುತ್ತದೆ. ಹೀಗೆಯೇ ಟಿ.ಎಸ್. ವೆಂಕಣ್ಣಯ್ಯ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್

ಮೊದಲಾದ ಹಿರಿಯರು ತಮ್ಮ ಕಾಲದ ಹಿರಿಯ ಕವಿತಾ ಸಂಕಲನಗಳಿಗೆ ಮುನ್ನುಡಿ ಬರೆಯುವಾಗ (ಉದಾ.ಗೆ 'ತಳಿರು', 'ಹಣತೆ' ಇತ್ಯಾದಿ), ಆಡಿರುವ ಉತ್ತೇಜನಕರವಾದ ಹಾಗೂ ಪರಿಸ್ಥಿತಿವಿಮರ್ಶಕವಾದ ಮಾತುಗಳನ್ನು ಗಮನಿಸಿದರೆ, ಈ ಶತಮಾನದ ೨-೩ನೆಯ ದಶಕಗಳು ನಾನಾ ಕಾರಣಗಳಿಂದ ಹೊಸಗನ್ನಡ ಕವಿತೆಯ ಸಂಧಿಕಾಲ ವೆಂಬುದು ನಿಶ್ಚಯವಾಗುತ್ತದೆ. ೧೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ (೨೮-೧೨-೧೯೩೨) ಅಧ್ಯಕ್ಷ ಭಾಷಣ ಮಾಡುತ್ತ ಡಿ.ವಿ.ಜಿ. ಅವರು "ನೂತನ ಕವಿತ್ವದ ವಿಷಯದಲ್ಲಿ ಯಾವ ದೃಷ್ಟಿಯಿಂದಲೂ ನಿಷ್ಕರ್ಷೆಯಾದ ಅಭಿಪ್ರಾಯವನ್ನು ಹೇಳಲು ಇನ್ನೂ ತಕ್ಕಷ್ಟು ಕಾಲವಾಗಿಲ್ಲ. ನಾವು ಇನ್ನೂ ಮಾರ್ಗಾನ್ವೇಷಿಗಳಾಗಿದ್ದೇವೆ. ಹೊಸವಸ್ತು, ಹೊಸ ರೀತಿ, ಹೊಸ ಶೈಲಿಗಳನ್ನು ಕಲ್ಪಿಸಲು ಪೀಠಿಕಾರೂಪದ ಪ್ರಯತ್ನಗಳನ್ನು ನಡೆಸುತ್ತಿದ್ದೇವೆ"[೯] ಎಂದಿರುವುದು ಆ ಸಂಧಿಕಾಲದ ಸಂದರ್ಭದ ಒಂದು ಚಿತ್ರವೇ ಆಗಿದೆ.

ಈಗಾಗಲೇ ಶ್ರೀಯವರ ಛಂದಃಪ್ರಯೋಗಗಳನ್ನು ಕುರಿತವರು ವಿಮರ್ಶಿಸಿರುವ ಹಾಗೆ ಅವರ ಕವಿತೆಗಳಲ್ಲಿ ಮಾತ್ರಾಬಂಧಗಳೇ ಹೆಚ್ಚು. ಅವರ ಕಾಲದವರೆಲ್ಲ ಹೆಚ್ಚಾಗಿ ಬಳಸಿದವೂ ಇವೇ. ೩,೪,೫ ಮತ್ತು ೬ ಮಾತ್ರೆಗಳ, ವಿರಳವಾಗಿ ೭ (೩+೪) ಮತ್ತು ೮(೩+೫) ಮಾತ್ರೆಗಳ ಗಣಗಳಿಂದ ಕಟ್ಟಿದ ಬಂಧಗಳನ್ನು 'ಶ್ರೀ'ಯವರು ರಚಿಸಿದ್ದಾರೆ. ಈ ಬಂಧಗಳೊಂದೊಂದರಲ್ಲೂ ಒಂದಕ್ಕಿಂತ ಹೆಚ್ಚಾದ ಸಂಖ್ಯೆಯ ನುಡಿಗಳಿರುತ್ತವೆ. ಈ ನುಡಿಗಳು ಪಾದರಚನೆಯ ದೃಷ್ಟಿಯಿಂದ ಸಮ, ಅರ್ಧಸಮ, ವಿಷಮ ಎಂಬ ರೀತಿಯಲ್ಲಿರುತ್ತವೆ; ಬಹುಶಃ ೨-೩ ಪಾದಗಳ ಕೆಳಮಿತಿಯಿಂದ ೮-೯ ಪಾದಗಳ ಮೇಲುಮಿತಿಯವರೆಗೆ (ಪ್ರಗಾಥಗಳ ಹೊರತಾಗಿ) ವ್ಯಾಪ್ತಿಯುಳ್ಳುವಾಗಿರುತ್ತವೆ. ಪಾದಗಳ ದೀರ್ಘತೆ ಹಾಗೂ ಸಂಖ್ಯೆಯ ಪ್ರಮಾಣಗಳಲ್ಲಿ, ಗಣಗಳ ಮಿತಿ ಹಾಗೂ ಸಂಯೋಜನೆ ಗಳಲ್ಲಿ ಲಯಗತಿ ಎಡರುವ, ತೊಡರುವ ವಿಪರ್ಯಾಸಗಳಿಲ್ಲದಂತಹ ಸ್ವಾತಂತ್ರ್ಯ ಕೌಶಲಗಳಿವೆ; ಸ್ವಯಂಸ್ಫೂರ್ತವಾದ ಸಂಚಾರಗಳೂ ಲಹರಿಗಳೂ ಇರುವಂತೆಯೇ ಉದ್ದೇಶಪೂರ್ವಕವಾದ, ಪ್ರಯೋಗನಿಮಿತ್ತವಾದ ಕುಸುರಿಯೂ ಕೃತಜ್ಞತೆಯೂ ಸಾಕಷ್ಟು ಪ್ರಮಾಣದಲ್ಲಿಯೇ ಗೋಚರಿಸುತ್ತವೆ.

ಶ್ರೀಯವರ ಪ್ರಯೋಗಗಳ ವ್ಯಾಪ್ತಿಯೇನು? ಅವರು ಸಾಂಪ್ರದಾಯಿಕ ಛಂದಸ್ಸುಗಳಲ್ಲಿ ಕಂದ ಬಿಟ್ಟು ವರ್ಣವೃತ್ತಗಳನ್ನು ಮುಟ್ಟಿಲ್ಲ; ಶ್ಲೋಕಛಂದಸ್ಸಿನ ಬಗ್ಗೆ ಮೆಚ್ಚುಗೆಯಿದ್ದೂ ಅದರಲ್ಲಿ ಒಂದೇ ಒಂದು ಪದ್ಯ ಬರೆದಿಲ್ಲ. ತ್ರಿಪದಿ ಅಕ್ಕರ ಸಾಂಗತ್ಯ ಮೊದಲಾದ ಶುದ್ಧ ಅಂಶಬಂಧಗಳಾವುವನ್ನೂ ನೇರವಾಗಿ ಬಳಸಿಲ್ಲ; ಆದರೆ ಆ ಜಾಯಮಾನದ ಒಂದೆರಡು ರಚನೆಗಳನ್ನೇನೋ ಮಾಡಿದ್ದಾರೆ. ಸಾಂಪ್ರದಾಯಿಕ ಮಾತ್ರಾಬಂಧಗಳಲ್ಲಿ

ಕುಸುಮ ಮತ್ತು ಭಾಮಿನೀ ಷಟ್ಪದಿಗಳನ್ನು ಮಾದರಿಗೋ ಎನ್ನುವಂತೆ ವಿರಳವಾಗಿ ರಚಿಸಿದ್ದರೂ ಉಳಿದವುಗಳನ್ನು ಹಚ್ಚಿಕೊಂಡಿಲ್ಲ; ಸೊಗಸುವುದೆಂದು ಮಾತ್ರಾ ಚೌಪದಿಯನ್ನೇನೋ ಮನ್ನಿಸಿದ್ದಾರೆ; ಅದೂ ಪರೋಕ್ಷವಾಗಿ. ಇಂಗ್ಲೀಷಿನ ಸಾನೆಟ್ಟವನ್ನು ಏಕೋ ಹತ್ತಿರ ಬರಗೊಟ್ಟಿಲ್ಲ; ಆದರೆ ಬ್ಲ್ಯಾಂಕ್‌ವರ್ಸಿಗೆ ಹತ್ತಿರವಾದ ಸರಳರಗಳೆಯನ್ನು ತಮ್ಮ ನಾಟಕಗಳಲ್ಲಿಯೂ ಓಡ್‌ಗೆ ಸದೃಶವಾದ ಪ್ರಗಾಥವನ್ನು ಕವಿತೆಗಳ ಗುಂಪಿನಲ್ಲಿಯೂ ಪುರಸ್ಕರಿಸಿದ್ದಾರೆ. ಇವೆಲ್ಲ ನಿಜವೇ. ಆದರೂ ಭಾಷೆಯ ಹಳೆಯ ಹಾಗೂ ಹೊಸಛಂದಸ್ಸುಗಳ ಗುಣಲಕ್ಷಣಗಳು ಸಂಸ್ಕೃತ, ಇಂಗ್ಲೀಷ್, ಗ್ರೀಕ್, ತಮಿಳು ಈ ಮೊದಲಾದ ಭಾಷೆಗಳಲ್ಲಿಯ ಹಳೆಯ ಹಾಗೂ ಹೊಸ ಛಂದಸ್ಸುಗಳ ಗುಣಲಕ್ಷಣಗಳು ಯಥೋಚಿತವಾಗಿ ಪ್ರತಿಬಿಂಬಿಸುವಂತೆಯೂ ಪ್ರತಿಧ್ವನಿಸುವಂತೆಯೂ ಮಾಡಿದ್ದಾರೆ.

ಸಾಂಪ್ರದಾಯಿಕ ಬಂಧಗಳು

'ಇಂಗ್ಲೀಷ್ ಗೀತಗಳು' ಸಂಗ್ರಹದ ಶೀರ್ಷಿಕಾಪುಟದ "ಅವಳ ನಿರ್ಮಲತೇಜಂ....." ಎಂಬ ಏಕೈಕ ಕಂದಪದ್ಯ ಭಾಷೆ ಛಂದಸ್ಸುಗಳ ದೃಷ್ಟಿಯಿಂದ ನಿರ್ದುಷ್ಟವಾದ್ದು; 'ಹೊಳೆಕರೆ'(ಪ.೫) ಆದಿ ಪ್ರಾಸವನ್ನೂ ಕಾಯ್ದುಕೊಂಡ ಶುದ್ಧ ಕುಸುಮ ಷಟ್ಪದಿ;[೧೦] 'ವಸಂತಕಾಲದೊಲುಮೆ' (ಪ.೨೭) ಪ್ರಸ್ತಪಾದಗಳಿಗೆ ಮಾತ್ರ ಆದಿಪ್ರಾಸವಿಟ್ಟ ಒಂದು ವೈಲಕ್ಷಣ್ಯ ಹೊರತಾಗಿ (ಪದ್ಯದ ಮುದ್ರಣ ರೀತಿ ಗೌಣವಾದ ಸಂಗತಿ) ತಾನೂ ಒಂದು ಕುಸುಮ ಷಟ್ಪದಿಯೇ. 'ಹೇಳದಿರು ಹೋರಾಡಿ ಫಲವಿಲ್ಲವೆಂದು' (ಪ. ೫೪) ಆದ್ಯಂತಪ್ರಾಸವಿಟ್ಟ ನಡುಗನ್ನಡದ ದ್ವಿಪದಿಯೇ ಸರಿ (ಯುಗ್ಮವನ್ನು ಒಟ್ಟಾಗಿ ಗಣಿಸಿ ಚೌಪದಿಯೆಂದು ಬೇಕಾದರೂ ತಿಳಿಯಬಹುದು). ಹೀಗೆಯೇ 'ಕಾರಿಹೆಗ್ಗಡೆಯ ಮಗಳು' (ಪ.೩೭) ಸಮಗ್ರವಾಗಿ 'ಗೋವಿನ ಹಾಡು' ಮಟ್ಟಿನ ಒಂದು ರಚನೆ. ಪ್ರಾಸ ಅಲ್ಲಿ ಐಚ್ಛಿಕ, ಇಲ್ಲಿ ಯುಗ್ಮನಿಷ್ಠ ಆ ಛಂದಸ್ಸಿನಲ್ಲಿ ಅವರಿಗಿದ್ದ ಒಲವು, ಆ ಮಾದರಿಯನ್ನು ಬಲುಮಟ್ಟಿಗೆ ಹತ್ತಿರದಿಂದ ಅನುಸರಿಸಿರುವುದರಲ್ಲಿ ಕಂಡುಬರುತ್ತದೆ. ಛಂದಸ್ಸು ಅಲ್ಲಿ ಸ್ವಲ್ಪ ರೂಕ್ಷ, ಸ್ನಿಗ್ಧ; ಇಲ್ಲಿ ಮೃದು, ನಿಯತ; ಅಷ್ಟೆ.

ಇನ್ನು 'ಹೊಂಗನಸುಗಳು' ಸಂಗ್ರಹದ ಕವಿತೆಗಳು; "ಅರಮನೆಯ ಒಸಗೆ..."(ಪ.೯) ಆದ್ಯಂತ ಪ್ರಾಸಗಳನ್ನು (ಐಚ್ಛಿಕವಾಗಿ ಪಾಲಿಸಿದ ೭ ಪಾದಯುಗ್ಮಗಳ ಲಲಿತರಗಳೆ; 'ಶಿಲಪ್ಪದಿಗಾರಂ' (ಪ.೧೩) ತಮಿಳು ಅಂಶ ಗಣರಚನೆಯ ಸೌಲಭ್ಯವನ್ನು ಪಡೆದುಕೊಂಡ ಕನ್ನಡ ಮಂದಾನಿಲ ರಗಳೆಗೆ ಸದೃಶವಾದ ಪದ್ಯ; 'ಧರ್ಮಯುದ್ಧ' (ಪ. ೧೭) ಎಂಟು ಭಾಮಿನೀ ಷಟ್ಪದಿಗಳ ಒಂದು ಕವಿತೆ. ಪ್ರಾಚೀನ ಷಟ್ಪದಿಕಾರರಂತೆ ಪಾದಗಳನ್ನು ಹರಿಯಬಿಡದೆ ಲಘು ವಾಕ್ಯೋಪ ವಾಕ್ಯಗಳನ್ನು ಕೋಡು, ಯತಿಸ್ಥಾನಗಳನ್ನು ನಿರ್ಮಿಸಿ, ಪದ್ಯವನ್ನು ರೂಪಿಸಿರುವುದು ಇಲ್ಲಿಯ ವಿಶೇಷ. ೧೯೪೫ರಷ್ಟು ಈಚೆಗೆ ಈ ಶುದ್ಧ ಸಾಂಪ್ರದಾಯಿಕ ಬಂಧವನ್ನು ಶ್ರೀಯವರು ರಚಿಸಿದ್ದು ಕುತೂಹಲಕಾರಿಯಾಗಿದೆ.

'ಹಾರೈಕೆ'ಯ (ಪ.೧೪) ಕುರಳ್ ಧಾಟಿಯ ಹತ್ತು ದ್ವಿಪದಿಗಳು, ನಮ್ಮ ಏಳೆಯ ಛಂದಸ್ಸನ್ನು ಹೋಲುವಂಥವು; ಇಲ್ಲಿಯೂ ತಮಿಳು ಅಂಶ ಗಣರಚನೆಯ ಸೌಲಭ್ಯ ಹೆಚ್ಚಾಗಿ ಬಳಸಿರುವುದು ಕಾಣುತ್ತದೆ. ಏಳೆಯ ಲಕ್ಷಣವನ್ನು ಬೇರೆಯಾಗಿ ತಿಳಿದುದರ ಫಲವಾಗಿ ಬಂಧಗುಣ ಶಿಥಿಲಗೊಂಡಿದೆಯೆಂದು ಹೇಳಬೇಕಾಗಿದೆ.

'ಇಂಗ್ಲೀಷ್ ಗೀತಗಳು' ಸಂಕಲನದ ಹಲವು ರಚನೆಗಳು ೧೯೧೪-೨೬ರ ಅವಧಿಯಾಗಿ ಹಳೆಯವಾದರೂ, ಛಂದಸ್ಸು ಹೊಸದು. 'ಹೊಂಗನಸುಗಳು' ಸಂಕಲನದ ಕೆಲವು ರಚನೆಗಳು ೧೯೪೧-೪೫ರ ಅವಧಿಯವೆಂಬುದರಿಂದ ಹೊಸಕಾಲದವು; ಆದರೆ ಛಂದಸ್ಸು ಹಳೆಯದು. ಇದಕ್ಕೆ ಕಾರಣವೇನು? ಹಳೆಯ ಛಂದಸ್ಸುಗಳ ಮೋಹ ಶ್ರೀಯವರನ್ನು ಬಿಡದೆ ಕಾಡಿತೇ? ಅವುಗಳಲ್ಲಿ ತಮ್ಮ ಕೈ ಹೇಗೆ ನಡೆಯುವುದೆಂದು ಪರೀಕ್ಷಿಸಿಕೊಳ್ಳಲು ಅವರು ಹೀಗೆ ಮಾಡಿದರೆ? ಹೊಸತರ ನಡುವೆ ಹಳೆಯವು, ವಿರಳವಾಗಿ, ಎಸ್.ಜಿ.ನ. ಮೊದಲಾದವರನ್ನು ಅನುಸರಿಸಿ ರಚಿತವಾಗುವುದಾದರೆ ತಪ್ಪೇನಲ್ಲ ಎಂದೋ, ಅವುಗಳಲ್ಲಿಯೂ ರುಚಿಯುಂಟು, ಕಳೆಯುಂಟು ಎಂದು ತೋರಿಸಲೆಂದೋ ಇವಕ್ಕೆ ಶ್ರೀಯವರು ಕೈ ಹಾಕಿರಬಹುದೇ? ಅಂತೂ ಈ ಕೆಲವು ರಚನೆಗಳ ಭಾವ ಭಾಷೆಗಳಲ್ಲಿ 'ಶ್ರೀ' ಮುದ್ರೆ ಅಂಕಿತಗೊಂಡಿರುವುದು ಸುಲಭವೇದ್ಯ. ಸಂಕಲನದ ಕೊನೆಗೆ ಅಚ್ಚಾಗಿರುವ 'ಶ್ರೇಯಃಪ್ರಾರ್ಥನೆ'ಯಲ್ಲಿ 'ಕಾಯೌ ಶ್ರೀಗೌರಿ ಕರುಣಾಲಹರಿ' ಎಂಬ ಸಂಗೀತಕೃತಿಯೊಂದರ ಅನುಕರಣೆಯಿರುವಂತಿದೆ.

ಸ್ವನಿಯಂತ್ರಿತ ಬಂಧಗಳು – ೧

ಇವು ಯಾವಾಗಲೂ ಪರಿಶೀಲನೆಗೆ ತೊಡಕಾದವು. ಗಣಗಳ ಸಂಖ್ಯೆ ರಚನೆಗಳೂ ಪಾದಗಳ ಸಂಖ್ಯೆ ದೀರ್ಘತೆಯ ಪ್ರಮಾಣಗಳೂ ಕಟ್ಟಳೆಗೆ ಅನುಸಾರವಾಗಿ ಇರಬಹುದು. ಇಲ್ಲದೆಯೂ ಇರಬಹುದು. ಅಲ್ಲಿಲ್ಲಿ ವೈವಿಧ್ಯ ವೈಚಿತ್ರ್ಯಗಳು ಕವಿಸ್ವಾತಂತ್ರ್ಯ ಹಾಗೂ ಕೌಶಲದ ಫಲವಾದವು. ಆದರೆ ಶ್ರೀಯವರ ಪ್ರಯೋಗಗಳಲ್ಲಿ ದಿಗ್ಭ್ರಮೆಗೊಳಿಸುವ ಮಟ್ಟಿಗೆ ಅವೇನೂ ಕಂಡು ಬರುವುದಿಲ್ಲ. ಇದಕ್ಕೆ ಅವರು ತಮ್ಮ ಕವಿತೆಗಳನ್ನು ಕಟ್ಟಿದ ಕಾಲ, ಹೊಸ ಛಂದಸ್ಸಿನ ಪ್ರಯೋಗ ಪರೀಕ್ಷೆಗಳ ಕಾಲವಾಗಿದ್ದುದು ಒಂದು ಕಾರಣವಾದರೆ ಅವರು ತಾವೇ ಹೇಳಿಕೊಂಡಿರುವಂತೆ 'ಕನ್ನಡದ ಜಾಯಮಾನವನ್ನು ಮೀರದೆ' ಪದ್ಯರಚನೆ ಮಾಡುವ ಒಂದು ನಿರ್ಬಂಧವನ್ನು ಹಾಕಿಕೊಂಡಿದ್ದುದು ಇನ್ನೊಂದು ಕಾರಣ. ಇದನ್ನು ಸ್ವಲ್ಪ ವಿಶದವಾಗಿ ನೋಡೋಣ.

೧) ಗಣರಚನೆ ಪಾದರಚನೆಗಳಲ್ಲಿ ಹಳೆಯ ಬಂಧಗಳ ಕಟ್ಟು ಕಟ್ಟಳೆಗಳನ್ನು ಯಥೋಚಿತವಾಗಿ ಬಳಸಿದುದು: ಇದರಲ್ಲಿ ಎರಡು ಕವಲುಗಳು: (i) ಅಂಶಗಣ ನಿಷ್ಠವಾದವು; (ii) ಮಾತ್ರಾಗಣನಿಷ್ಠವಾದವು.

(i) ಅಂಶಗಣನಿಷ್ಠವಾದವು : 'ವಸಂತ', 'ಸರ್ ಜಾನ್ ಮೂರನ್ನು ಹೂಳಿದ್ದು', 'ಬ್ಲೆನ್‌ಹೀಮ್ ಕದನ' ಇವು ಮೂರೂ ಈ ಗುಂಪಿನವು. (ಇಂಗ್ಲೀಷ್ ಗೀತಗಳು, ಪ.೪,೧೧,೧೭).

'ವಸಂತ'ದ ಒಂದು ನುಡಿ :

(೧) ಮಾವಿನ ಸೊಂಪು ॥ ಮಲ್ಲಿಗೆ ಬಯಲೆಲ್ಲ ಕಂಪು
ಗಾಳಿಯ ತಂಪು ॥ ಜನಗಳ ಜಾತ್ರೆಯ ಗುಂಪು
ಕಿವಿಗಳಿಗಿಂಪು ॥ ಹಕ್ಕಿಗಳುಲುಹಿನ ಪೆಂಪು
ಕೂವೂ ಜಗ್‌ಜಗ್ ಪುವ್ವೀ ಟೂವಿಟ್ಟವೂ!

ಪದ್ಯದ ಪಾದರಚನೆ, ಪ್ರಾಸವಿನ್ಯಾಸ ನ್ಯಾಸ್ ಕವಿಯ ಮೂಲಕವಿತೆಯಲ್ಲಿರುವಂತಯೇ! ಆದರೆ ಗಣರಚನೆ ನಮ್ಮದು. ವಿ.ಬ್ರ (ಯತಿ) ವಿ.ವಿ.ಬ್ರ ಇದು ಇಲ್ಲಿಯ ರಚನೆ. ಕೊನೆಯ ಪಾದದ ರಚನೆ ಸ್ವಲ್ಪ ಭಿನ್ನ. ಪದ್ಯ ಅಂಶಗಣಬದ್ಧವಾದುದು ಎನ್ನುವುದು 'ಬಯಲೆಲ್ಲ', 'ಜಾತ್ರೆಯ' ಈ ಗಣಗಳನ್ನು ಪರಸ್ಪರವಾಗಿ ಹೋಲಿಸಿದಾಗ ತಿಳಿಯುತ್ತದೆ. ಮಾತ್ರಾಮೌಲ್ಯ ಕ್ರಮವಾಗಿ ೫,೪; ಆದರೆ ಎರಡೂ ವಿಷ್ಣುಗಣಗಳು. ಉಳಿದ ನುಡಿಗಳಲ್ಲಿಯೂ ಇಂಥವೇ ರಚನೆಗಳಿವೆ.

'ಸರ್ ಜಾನ್ ಮೂರನ್ನು ಹೂಳಿದ್ದು' ಕವಿತೆಯ ಒಂದು ನುಡಿ:

(೨) ತಂಬಟೆ ಹೊಯಿಲಿಲ್ಲ ವಾದ್ಯದ ಹಲುಬಿಲ್ಲ
ಹೆಣವ ಕೋ. ಟೆಗೆ ನಾವು ತ್ವರೆಯಲೊ. ಯ್ದಾಗ;
ಒಬ್ಬ ಸಿ. ಪಾಯಿಯ ಕಳುಹುವ. ಸುರುಟಿಲ್ಲ
ನಮ್ಮ ನಾ. ಯಕನನು. ಹೂಳುತಿ ದ್ದಾಗ ॥

ಮೂಲಕವಿತೆಯೂ ಅನುವಾದವೂ ಚತುಷ್ಪದೀರೂಪವಾದವು; ಗಣರಚನೆ ನಮ್ಮದು. ಪ್ರಸ್ತಾರ ವಿವಿ. ವಿ.ವಿ.ವಿ. । ವಿ.ವಿ.ವಿ.ಬ್ರ ॥ ವಿ.ವಿ.ವಿ.ವಿ । ವಿ.ವಿ.ವಿ.ಬ್ರ ॥ ೨-೪ನೆಯ ಪಾದಗಳಲ್ಲಿ ಒಂದು ಅಧಿಕ ವಿಷ್ಣುಗಣ ಸೇರಿರುವುದನ್ನು ಬಿಟ್ಟರೆ ರಚನೆ ಸಾಂಗತ್ಯವನ್ನು ಹೋಲುತ್ತದೆ. "ಬೇಗ ಒಂ. ದೆರಡು. ಪ್ರಾರ್ಥನೆ. ಯನು ಹೇಳಿ" ಎಂಬಲ್ಲಿ (೪ನೆಯ ನುಡಿ) ಬ್ರಹ್ಮದ ಪರ್ಯಾಯವನ್ನು ಗಮನಿಸಬಹುದು. ಉಳಿದ ನುಡಿಗಳಲ್ಲಿಯೂ ಪ್ರಸ್ತಾರ ಮೇಲಿನಂತೆಯೇ.

'ಬ್ಲೆನ್‌ಹೀಮ್ ಕದನ' ದಿಂದ ಒಂದು ನುಡಿ :

(೩) ಕಂಡಳು ಕೂಡಿಕೊಂ ಡಣ್ಣನು ಬರುವುದ-
ಆಡುತ ಹೊಳೆಯಂಚಿನಿಂದ
ದಪ್ಪಗೆ ದುಂಡಗೆ ಏನನೋ ಒಂದನು
ಉರುಳಿಸಿ ಕೊಂಡವ ತಂದ

ದಪ್ಪಗೆ ನುಣ್ಣಗೆ, ದುಂಡಗೆ, ಇರುವುದು
ಅಜ್ಜ ಇದೇನೆಂದು ಕೇಳಲು ಬಂದ ॥

ಪಾದರಚನೆ ಮೂಲ ಕವಿತೆಯಲ್ಲಿರುವಂತೆಯೇ. ಗಣರಚನೆ ನಮ್ಮದು. ಮೊದಲ ನಾಲ್ಕು ಪಾದಗಳ ಪ್ರಸ್ತಾರ ಸಾಂಗತ್ಯಛಂದಸ್ಸಿನ ಪ್ರಸ್ತಾರ ಕ್ರಮದಂತೆಯೇ ಮುಂದಿನೆರಡು ಪಾದಗಳ ಲಕ್ಷಣ ವಿ.ವಿ.ವಿ.ವಿ. । ವಿ.ವಿ.ವಿ.ಬ್ರ. ಗಣಪರ್ಯಾಯಗಳುಂಟು.

(ii) ಮಾತ್ರಾಗಣನಿಷ್ಠವಾದವು : ತಕ್ಕ ಮಟ್ಟಿಗೆ ಅಧಿಕ ಸಂಖ್ಯೆಯ ರಚನೆಗಳು ಈ ಗುಂಪಿನವು; ಪ್ರಸ್ತಾರದ ವೈಚಿತ್ರ್ಯಗಳೂ ವಿಪುಲ. ಹಳಯ ಛಂದಸ್ಸಿನ ಕಟ್ಟು ಕಟ್ಟಳೆಗಳನ್ನು ಇಟ್ಟುಕೊಂಡವು ಇವು. ಕೆಲವು ಲಕ್ಷ್ಯಗಳನ್ನು ನೋಡೋಣ:

'ಕಾಣಿಕೆ' ಪದ್ಯದ ಒಂದು ನುಡಿ:

(೪) ಮೊದಲು ತಾಯ ಹಾಲ ಕುಡಿದು
ಲಲ್ಲೆ ಯಿಂದ ತೊದಲಿ ನುಡಿದು
ಕೆಳೆಯ ರೊಡನೆ ಬೆಳೆದು ಬಂದ
ಮಾತ ದಾವುದು –
ನಲ್ಲೆ ಯೊಲವ ತೆರೆದು ತಂದ
ಮಾತ ದಾವು ದು–

೩ನೆಯ ಪಾದವನ್ನು ದೀರ್ಘ–ಹ್ರಸ್ವ ಖಂಡಗಳಾಗಿ ವಿಭಜಿಸಿ, ಪುನರಾವರ್ತಿಸಿರುವ ಭೋಗ ಷಟ್ಪದಿಯ ಅರ್ಧವೆಂದು ಈಗಾಗಲೇ ತಿಳಿಯಲಾಗಿದೆ. ಪ್ರಸ್ತಾರ ೪ x ೩/೪ x ೩/೪ x ೩/೪x ೨.ಗ ೧/೧ ೪x ೩/೪ x ೨.ಗ. ಡಿ.ವಿ.ಜಿ. 'ಖಂಡಭೋಗ ಷಟ್ಪದಿ' ಎಂದಿದ್ದಾರೆ. ಆದರೆ ಶ್ರೀಯವರು ತಾವೇ ಸೂಚಿಸಿದ್ದಂತೆ ತಿಳಿಯುವ Burn`s Stanza ಮಾದರಿಯಲ್ಲಿಯೂ ಪದ್ಯವಿರುವುದು ನಿಜ; ಪ್ರಾಸವಿನ್ಯಾಸವೂ (ಎ ಎ ಬಿ ಸಿ ಬಿ ಸಿ) ಅಲ್ಲಿಯ ಹಾಗೆಯೇ.

ಕುಸುಮ ಷಟ್ಪದಿಯ ರಚನೆ ಸೌಲಭ್ಯದಿಂದಾಗಿಯೂ ರುಚಿಯಿಂದಾಗಿಯೂ ಶ್ರೀಯವರಿಗೆ ಇಷ್ಟವಾಗಿರುವಂತಿದೆ. ಅದರ ಗಣರಚನೆಯಲ್ಲಿ ಅಂತಹ ವ್ಯತ್ಯಾಸವೇನನ್ನೂ ಮಾಡಿಕೊಳ್ಳದೆ ಪಾದಸಂಘಟನೆಗಳಲ್ಲಿ ಮಾತ್ರ ಕುಶಲ ಸಂಯೋಜನೆ ನಡೆಸಿರುವುದು ಕಾಣುತ್ತದೆ. ಉದಾ.ಗೆ ಕೆಲವನ್ನು ನೋಡಬಹುದು :

'ಅಡವಿಮರದಡಿಯಲ್ಲಿ' ಪದ್ಯದ ಒಂದು ನುಡಿ :

(೫) ಅಡವಿಮರ ದಡಿಯಲ್ಲಿ
ನನ್ನೊಡನೆ ಕೆಡೆದಲ್ಲಿ
ಇನಿಯ ಹಕ್ಕಿಯ ಕೊರಲ
ತನ್ನ ಕೊರಲಲಿ ತಂದು ನಲಿವನಾ ರೈ–

ಇತ್ತ ಬಾ ಇತ್ತ ಬಾ ಇತ್ತ ಬಾ ರೈ
ಎತ್ತ ನೋ ಡಿಲ್ಲೆಲ್ಲ
ಮತ್ತೆ ಹಗೆ ಯೊಂದಿಲ್ಲ
ಕೊರೆವ ಚಳಿ ಬಿರುಗಾಳಿ ಯಲ್ಲದಿ ಲ್ಲೈ ॥

ಈ ನುಡಿಯಲ್ಲಿ ೩ನೆಯ ಚಿಕ್ಕಪಾದವನ್ನೂ ೫ನೆಯ ದೊಡ್ಡಪಾದವನ್ನೂ ತೆಗೆದರೆ ರಚನೆ ಕುಸುಮ ಷಟ್ಪದಿಗೆ ಸದೃಶವಾದುದು. ಮೂಲಕವಿತೆಯ ಪಾದವಿನ್ಯಾಸದ ಸಲುವಾಗಿ ಹೀಗೆ ಮಾಡಿತೆಂದು ಭಾವಿಸಬಹುದಾಗಿದೆ.

'ಮುಪ್ಪು ಯೌವ್ವನ'ವೆಂಬ ಅದರ ಮುಂದಿನ ಕವಿತೆಯಲ್ಲಿ ಅಂತ್ಯಪ್ರಾಸ ರೂಢಿಸಿದ ಕೊನೆಯೆರಡು ನುಡಿಗಳು ನೇರವಾಗಿ ಕುಸುಮ ಷಟ್ಪದಿಗಳೇ; ಮೊದಲಿನೆರಡು ನುಡಿಗಳು ಪಾದರಚನೆಯ ದೃಷ್ಟಿಯಿಂದ ಭಿನ್ನವಾದವು. 'ಕನಕಾಂಗಿ' ಎಂಬ ೨೪ ನುಡಿಗಳ ಸುದೀರ್ಘ ಕವಿತೆಯನ್ನು ಕೆಲವರು 'ಕುಸುಮ ಚೌಪದಿ'ಯೆಂದು ಹೇಳುವುದನ್ನು ಒಪ್ಪಬಹುದು. ಷಟ್ಪದೀ ರೂಪವನ್ನು ಚೌಪದೀ ರೂಪವಾಗಿ ವಿನ್ಯಾಸಗೊಳಿಸಿರುವುದರ ಹೊರತು ಗಣವಿನ್ಯಾಸದಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಪ್ರಾಸವಿನ್ಯಾಸ ಮೂಲಕವಿತೆಯ ಜಾಡು ಹಿಡಿಯದೆ, ಯುಗ್ಮನಿಷ್ಠ ಆದಿಪ್ರಾಸವನ್ನು ಒಲಿದಿರುವುದು ಒಂದು ವಿಶೇಷ. ಚೌಪದಿಯಾದರೂ ಪಾದರಚನೆಯಲ್ಲಿ ಮೂಲಕವಿತೆಯನ್ನು ಯಥಾರೀತಿಯಾಗಿ ಅನುಸರಿಸಿದೆ ಎನ್ನುವುದನ್ನು ಹೇಳಬೇಕು.

ನಡುಗನ್ನಡ ಕಾಲದ ದ್ವಿಪದಿಗಳ ಹಾಗೂ ಮಾತ್ರಾ ಚೌಪದಿಗಳ ರಚನೆಗಳು ತಾಳಮಾತ್ರಾಲಯದ ಧಾಟಿಗೆ ಚೆನ್ನಾಗಿ ಒಗ್ಗಿರುವಂಥವು. ಶ್ರೀಯವರು ಅಂಥ ರಚನೆಗಳನ್ನು ಕೆಲವೆಡೆ ತಂದಿದ್ದಾರೆ. ಮಾತ್ರಾ ಚೌಪದಿಗಳ ಸಾದೃಶ್ಯಗಳನ್ನು ನೋಡೋಣ. ಇವು ಪಂಚಮಾತ್ರಕಗಳೆಂಬುದು ತಿಳಿದಿದೆ. ಪ್ರಸಾರ ೫ + ೫ + ೫ + ೩ 'ನಿನ್ನೊಳೆನಗೊಲವಿಲ್ಲ' ಕವಿತೆಯಲ್ಲಿ ೩ನೆಯ ಪಾದದ ಕೊನೆಗೆ ೫ ಮಾತ್ರೆಗಳ ಪೂರ್ಣಗಣವೊಂದು ಬಂದಿರುವುದರ ಹೊರತು, ನುಡಿಗಳ ನಡೆ ಮಾತ್ರ ಚೌಪದಿಗಳ ನಡೆಯ ಹಾಗೆಯೇ. 'ಆರ ಯಾವುದಿಲ್ಲಿ?' ಕವಿತೆಯಲ್ಲಿ ಆದ್ಯಂತದ ಕೆಲವು ಹ್ರಸ್ವಪಾದಗಳನ್ನು ಬಿಟ್ಟರೆ ನಡುವೆ ಇರುವ ಎರಡು ನುಡಿಗಳು ಎರಡು ಮಾತ್ರಾ ಚೌಪದಿಗಳೇ. 'ಮನಸ್ತಾಪ'ದಲ್ಲಿ ಇವೇ ಮಾತ್ರಾ ಚೌಪದಿಗಳು ಒಂದೊಂದು ದ್ವಿಪದಿಯಿಂದ ವರ್ಧಿಸಿ ಆರು ಪಾದಗಳ ಒಂದೊಂದು ನುಡಿಯಾಗಿದೆ, ಅಷ್ಟೆ. ಮುಂದುವರಿದರೆ, 'ಹೇಳದಿರು ಹೋರಾಡಿ ಫಲವಿಲ್ಲವೆಂದು' ಕವಿತೆ ನೇರವಾಗಿ ೪ ಮಾತ್ರಾ ಚೌಪದಿಗಳಿಂದ ಕಟ್ಟಿದ ನುಡಿಗಳನ್ನುಳ್ಳುದೇ ಆಗಿದೆ. 'ಜೀವ'ದ ಮೊದಲೆರಡು ನುಡಿಗಳೂ ಹೀಗೆಯೇ. ಇಲ್ಲಿ ಕೊನೆಯ ಒಂದು ನುಡಿಯನ್ನು ಮಾತ್ರಾಸಾಂಗತ್ಯವೆಂದು ಬೇಕಾದರೆ ಕರೆಯಬಹುದು (೫+೫+೫+೯/೫+೫+೪/೧ ಉಳಿದರ್ಧವೂ ಹೀಗೆಯೇ).

ಈಗ 'ಹೊಂಗನಸುಗಳು' ಸಂಕಲನದ ಕಡೆಗೆ ಹೊರಡೋಣ. 'ಶ್ರೀಕೃಷ್ಣರಾಜ ರಜತ ಮಹೋತ್ಸವ ಪ್ರಗಾಥ'ದ ೪ನೆಯ ಖಂಡದ ಮೊದಲ ಎರಡು ನುಡಿಗಳೂ 'ಬಾನ್‌ಕೊಂಡ ಕೃಷ್ಣನೆ' ಎಂಬುದರ ಕೆಲವು ಪಾದಯುಗ್ಮಗಳೂ ಮಾತ್ರಾಚೌಪದಿಯ ನುಡಿಗಳು, ಅವುಗಳ ಭಾಗಗಳು, ಅಷ್ಟೇಕೆ? ಶ್ರೀಯವರ 'ಶುಕ್ರಗೀತೆ'ಯ ಪ್ರಸಿದ್ಧ ಫಲಶ್ರುತಿಯ ಭಾಗ ಮೊದಲೆರಡು ಪಾದಗಳ ಹೊರತಾಗಿ (ಇವನ್ನೂ ತಕ್ಕ ಹೊಂದಿಕೆ ದೀರ್ಘೀಕರಣಗಳಿಂದ ಲಕ್ಷಣಕ್ಕೆ ಅನುಗುಣವಾಗಿ ಪ್ರಸ್ತಾಪಿಸಬಹುದು) ಉಳಿದ ನುಡಿಗಳು ನ್ಯೂನಚತುರ್ಥಪಾದದ ಮಾತ್ರಾಚೌಪದಿಯ ನುಡಿಗಳೇ ಸೇರಿದ ಭಾಗ ಎಂದು ತಿಳಿಯಬಹುದು. ಹಾಗೆಯೇ 'ಮೈಸೂರು ಮಕ್ಕಳು' ಕವಿತೆಯ ನಿಡುಸಾಲುಗಳೆಲ್ಲ ಸೀಸಪದ್ಯದ ಪಾದಗಳ ರಚನೆಯನ್ನು ಅನುಸರಿಸಿದವು; ಎಂದರೆ ಅವು ೬ ಪಂಚಮಾತ್ರಾಗಣಗಳು +೨ ತ್ರಿಮಾತ್ರಾಗಣಗಳು ಎಂಬ ವಿನ್ಯಾಸಕ್ಕೆ ಅನುಸಾರವಾದವು.

ಸ್ವನಿಯಂತ್ರಿತ ಬಂಧಗಳು – ೨

ಈ ವಿಭಾಗದ ಬಂಧಗಳನ್ನೆಲ್ಲ ಸೋದಾಹರಣವಾಗಿ, ವಿವರವಿಶದವಾಗಿ ನಿರೂಪಿಸುವುದು ಇಲ್ಲಿ ಸಾಧ್ಯವಿಲ್ಲ. ಕೆಲವು ಸಾಮಾನ್ಯ ಸಂಗತಿಗಳನ್ನಷ್ಟೇ ಗುರುತಿಸಿ, ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಶ್ರೀಯವರ ಕವಿತೆಗಳು ಬಲುಮಟ್ಟಿಗೆ ೩,೪,೫ ಮತ್ತು ೬ ಮಾತ್ರೆಗಳ ತನಿಲಯದ, ೩–೪, ೩–೫ರಂತೆ ಮಾತ್ರೆಗಳು ಬರುವ ಮಿಶ್ರಲಯದ ರಚನೆಗಳೇ ಆಗಿವೆ. ಪಾದಗಳಲ್ಲಿ ಸೇರುವ ಈ ಎರಡು ಬಗೆಯ ಲಯಗಳಲ್ಲಿರುವ ಗಣಗಳ ಸಂಖ್ಯೆ ಸಂಯೋಜನೆಗಳು ಸೊಗಸು ಸಮತೋಲನಗಳಿಗೆ ಭಂಗ ಬಾರದಂತೆ ಅನಿರ್ದಿಷ್ಟವಾಗಿರುತ್ತವೆ, ವ್ಯತ್ಯಾಸಗೊಳ್ಳುತ್ತಿರುತ್ತವೆ. ಪಾದಗಳ ರಚನೆಯೂ ಹೀಗೆಯೇ. ಅವುಗಳ ಸಂಖ್ಯೆ, ದೀರ್ಘತೆಯ ಪ್ರಮಾಣ ಎರಡೂ ಸೊಗಸು ಸಮತೋಲನಗಳಿಗಾಗಿ ಉಚಿತ ರೀತಿಯಲ್ಲಿ ವಿನ್ಯಾಸಗೊಳ್ಳುತ್ತವೆ. ಪಾದಗಳು ಹಾಗೂ ನುಡಿಗಳ ಕಟ್ಟನ್ನು ಮೊದಲ ಬಾರಿಗೆ ಮೀರಿ ಹೊಸ ರೀತಿಯ ನುಡಿಗಳ ರಚನೆಗೆ- ಶ್ರೀಯವರು ಮಾರ್ಗದರ್ಶಕರಾದರೆಂದು ಈಗಾಗಲೇ ಗಮನಿಸಿದೆ. ಹೀಗೆ ಮೀರಲು, ಹೊಸ ಮಾರ್ಗವನ್ನು ಹೂಡಲು ಅವರಿಗೆ ಮುಖ್ಯ ಪ್ರೇರಣೆ ದೊರತದು ಇಂಗ್ಲೀಷ್ ಭಾಷೆಯ ಕವಿಗಳ ಕವಿತೆಗಳಲ್ಲಿ ಕಂಡುಬರುವ ಮಾದರಿಗಳಿಂದಲೇ. ಅವರು ತಮ್ಮ ಬಹುಪಾಲು ಅನುವಾದಿತ ಕವಿತೆಗಳಲ್ಲಿ, ಪಾದಗಳ ಸಂಖ್ಯೆ ದೀರ್ಘತೆಯ ಪ್ರಮಾಣಗಳನ್ನೂ ನುಡಿಗಳ ಸಂಖ್ಯೆ ಕಟ್ಟಡಗಳನ್ನೂ ತಾವು ಅನುಸರಿಸಿದ ಮೂಲ ಕವಿತೆಗಳಲ್ಲಿ ಹೇಗೆ ಅವು ಕಂಡುಬರುವವೋ ಹಾಗೆಯೇ ಇಟ್ಟುಕೊಂಡಿರುವಂತೆ ತೋರುತ್ತವೆ. ಗಣವಿನ್ಯಾಸದಲ್ಲಿ ರಚನೆ ಇಂಗ್ಲೀಷ್ ಭಾಷೆಯಲ್ಲಿ ಸ್ವರಾಘಾತನಿಯಮವನ್ನು ಹಿಡಿದದ್ದು; ಕನ್ನಡದಲ್ಲಿ ವಿಭಿನ್ನ ಮಾತ್ರಾಲಯವನ್ನು ಅನುಸರಿಸಿದ್ದು. ಇನ್ನು ಪ್ರಾಸದ ವಿಷಯ: ಆದಿಪ್ರಾಸದ ವಿಷಯದಲ್ಲಿ ಶ್ರೀಯವರಿಗೆ, ಪಂಜೆಯವರು. ಎಸ್.ಜಿ.ನ. ಅವರು, ಹಟ್ಟಿಯಂಗಡಿ

ನಾರಾಯಣರಾಯರು ಮೊದಲಾದವರಿಗೆ ಇದ್ದಂತೆ ವೀರವ್ರತವೇನೂ ಇರಲಿಲ್ಲ; ಆದರೆ ಸ್ವಲ್ಪ ಈಚೆಯ ಕಾಲದ ಹಾಗೂ ನಮ್ಮ ಕಾಲದ ಕವಿಗಳಲ್ಲಿ ಕಂಡುಬರುವ ಹಾಗೆ ಅತ್ಯಂತವಾದ ಉಪೇಕ್ಷೆಯೂ ಇರಲಿಲ್ಲ. ಐಚ್ಛಿಕವಾಗಿ ಅವರು ಅದನ್ನು ಒಪ್ಪಿದ್ದಾರೆ. ಬಿಟ್ಟೂ ಬಿಡದಂತೆ ಅವರು ಅದನ್ನು ಪಾಲಿಸುವ ಹವಣಿಕೆಯನ್ನು ಸಾಧಿಸಿದ್ದಾರೆ.[೧೧] ಆದರೆ ನುಡಿಗಳು ಅಂತ್ಯಪ್ರಾಸದ ವಿವಿಧ ವಿನ್ಯಾಸಗಳಿಂದ ಸೊಗಸುವುದೇ ಸಾಮಾನ್ಯ, ಶ್ರೀಯವರ ಕವಿತೆಗಳಲ್ಲಿ ಈ ಅಂತ್ಯಪ್ರಾಸದ ವಿನ್ಯಾಸಗಳನ್ನು ಅವರು 'ಇಂಗ್ಲೀಷ್ ಗೀತಗಳು' ಸಂಕಲನದ ಮಟ್ಟಿಗೆ ಮೂಲಕವಿತೆಗಳಲ್ಲಿ ಅವು ರೂಪಗೊಂಡಿರುವಂತೆಯೇ ರೂಪಗೊಳಿಸಿರುವ ಹಾಗೆ ಬಲುಮಟ್ಟಿಗೆ ತೋರುತ್ತದೆ. ಇದೇನೂ ಕಡಿಮೆಯಾದ ಸಾಧನೆಯಲ್ಲ.

ಹೊಸ ಛಂದಸ್ಸಿನ ಪ್ರಮುಖ ಲಕ್ಷಣಗಳಲ್ಲಿಯೇ ಸೇರುವ ಪಾದಾಂತರಾಳ ಮತ್ತು ಪಾದಾಂತ ಸ್ಥಾನಗಳ ಮುಡಿ ಪದ್ಮಗಣಗಳೂ, ಪ್ಲುತ ಕಂಪಿತಗಳೂ, ಹ್ರಸ್ವೀಕರಣ ದೀರ್ಘೀಕರಣಗಳೂ, ಗಣಪರಿವೃತ್ತಿಯೂ, ಮೌನ ಅನಾಗತಗಳೂ, ಇತರ ಇಂತಹ ಲಕ್ಷಣಗಳೂ ಶ್ರೀಯವರ ಕವಿತೆಗಳಲ್ಲಿ ಯಥೇಷ್ಟವಾದ ಪ್ರಮಾಣದಲ್ಲಿಯೇ ಕಾಣಲು ಸಿಗುತ್ತವೆ; ವಾಚನದಲ್ಲಿ ಅನುಭವಕ್ಕೆ ಬರುತ್ತವೆ.

ಶ್ರೀಯವರ ಕವಿತೆಗಳನ್ನು ಮುಖ್ಯಲಯಗಳಿಗೆ ಅನುಸಾರವಾಗಿ ಹೀಗೆ ವಿಂಗಡಿಸಬಹುದಾಗಿದೆ :

(೧) **ತ್ರಿಮಾತ್ರಾಲಯದವು** : ಮುದ್ದಿನ ಕುರಿಮರಿ, ಬಡವನ ಹುರುಡು, ಮಾದಮಾದಿ, ಇರುಳ ದೇವಿ, ಕನಸು, ವೀರಜನ್ಮ.

(೨) **ಚತುರ್ಮಾತ್ರಾಲಯದವು** : ಸುಂದರಿ ಕಮಲೆ, ಬಿಂಕದ ಸಿಂಗಾರಿ, ಪದುಮ, ನಿರಾಶೆ.

(೩) **ಪಂಚಮಾತ್ರಾಲಯದವು** : ಮಳೆಬಿಲ್ಲು, ವೀರಗಲ್ಲು, ರಾವುತರ ದಾಳಿ, ಇಂಗ್ಲೆಂಡ್ ನಾವಿಕರು, ಅಳೌ ಬ್ರಿಟಾನಿಯಾ, ಇಂಗ್ಲೆಂಡ್, ದೇಶಸೇವಕ, ನನ್ನ ಪ್ರೇಮದ ಹುಡುಗಿ, ಪ್ರೇಮ ರಹಸ್ಯ, ಬೇಡ ಬಿಡು ನಾವಲೆವುದಿನ್ನು, ಹೆದರುವೆನು ನಾ ನಿನ್ನ ಬಿನ್ನಾಣಕೆಲೆ ಹೆಣ್ಣೆ, ಒಂದು ಮುಂತನು ಲೋಕ ಹೊಲೆಗೆಡಿಸಿಕೊಂಡಿಹುದು, ಪ್ರೇಮದ ಸಂಕಟ, ಅರೆ ಯಾವುದಿಲ್ಲಿ?, ಹೊಯ್ ಹೊಯ್ ಹೊಯ್, ನೆಮ್ಮುಗೆಯ ನಾಡು, ಎರಡು ಮನಸ್ಸು, ಕವಿಶಿಷ್ಯ, ಸುಖಜೀವನ, ಜೀವನ ಪ್ರಾರ್ಥನೆ, ಬಂದರು ದಾಟುವುದು (ಇಂಗ್ಲೀಷ್ ಗೀತಗಳು); ಕನ್ನಡ ತಾಯಿ ನೋಟ, ಕನ್ನಡದ ಬಾವುಟ, ಬಾನ್‌ಕೊಂಡ ಕೃಷ್ಣನ್, ಶ್ರೀಜಯನ ಬೆಳಕು, ಶುಕ್ರಗೀತೆ ('ಹೊಂಗನಸುಗಳು').

(೪) ೩–೪ ಮಾತ್ರೆಗಳ ಮಿಶ್ರಲಯದವು : ಬಾನಾಡಿ, ರಾಯಲ್ ಜಾರ್ಜ್ ಮುಳುಗಿ ಹೋದದ್ದು, ಮೇಲು ನೋಟಕೆ ಮರೆಯಲಾರಳು, ಮುದಿಯ ರಾಮಗೌಡ, ಒಂದು ಮುತ್ತು, ಬಿಟ್ಟ ಹೆಣ್ಣು, ದುಃಖಸೇತು, ಅಳಿನಿ, ಗಾನಮೆಲುಪಿನ ಕೊರಲು ಕುಗ್ಗಲು, ಕಳೆದ ಹಿಂದಿನ ದಿನಗಳು, ನನ್ನ ಮೇರಿ, ಹಳೆಯ ಪಳಕೆಯ ಮುಖಗಳು ('ಇಂಗ್ಲೀಷ್ ಗೀತಗಳು'): 'ಭರತಮಾತೆಯ ನುಡಿ' ('ಹೊಂಗನಸುಗಳು').

(೫) ೩–೫ ಮಾತ್ರೆಗಳ ಮಿಶ್ರಲಯದವು : ಜೋಳಕನ್ನೆಯರು, ದುಃಖಸಮಯ, ಪೆಡಸು ದಾರಿ.

(೬) ವಿಭಿನ್ನಲಯದವು : ಕಾಳೆಗದ ಪದ ('ಇಂಗ್ಲೀಷ್ ಗೀತಗಳು'): ಶ್ರೀಕೃಷ್ಣರಾಜ ರಜತಮಹೋತ್ಸವ ಪ್ರಗಾಥ ('ಹೊಂಗನಸುಗಳು').

ಕೆಲವು ವೈಚಿತ್ರ್ಯಗಳನ್ನು ಮುಂದೆ ಗುರುತಿಸಬಹುದು. (ಗಣರಚನೆ, ಲಯಗತಿ ಇವು ಕರ್ತೃವಿನಿಷ್ಟದಂತೆ, ವಾಚಕನ ಇಷ್ಟದಂತೆ ಸ್ವಲ್ಪ ಬೇರೆಯಾಗಿಯೂ ಇರಬಹುದು);

'ಮುಪ್ಪು ಯೌವನ'ದ ಒಂದು ನುಡಿ :

(೬) ಯೌವನವು ಸಿರಿ: ಸುಗ್ಗಿ
ಮುಪ್ಪು : ಬರಿ. ಮಾರಿ
ಯೌವನವು ಶೃಂಗಾರಿ
ಮುಪ್ಪು : ತಲೆ. ದೂಗಿ ॥

ಮುಖ್ಯಲಯ ೫ ಮಾತ್ರೆಗಳದು; ಆದರೆ ೨+೩, ೩+೨, ೩+೨ ಇವುಗಳ ಪರಿವೃತ್ತಿಯನ್ನು ಗೊತ್ತಾದೆಡೆಗಳಲ್ಲಿ ಗಮನಿಸಬಹುದು. ೨,೪ನೆಯ ಪಾದಗಳ ಕೊನೆಯಲ್ಲಿ ಪದ್ಮಗಣವಿದೆ. ಬಂಧ ಅರ್ಧನಿಯತ ಚತುಷ್ಪದಿ.

(೭) ಕಾಳೆ ಹರೆ ಕೊಂಬುಗಳ
ಏಳಿ ಮೊಳಗಿ ಏಳಿ ।
ನಾಡುಗಳ ಕುಳಗಳನು
ಕೂಡಿ ಕೊಳ ಹೇಳಿ॥
ಬನ್ನಿರಣ್ಣ ಬನ್ನಿರಣ್ಣ
ಅದೊ ಕೂಗು ಕೇಳಿ ।
ಮನ್ನೆಯರ ಬಂಟರಿರ
ಒದಗಿ ಏಳಿ ಏಳಿ ॥

ಇದನ್ನು ವಿಭಿನ್ನಲಯದ ಇಲ್ಲವೆ ಸಂಕೀರ್ಣಲಯದ ರಚನೆ ಎಂದು ಹೇಳಬಹುದು. ಈ ರಚನೆ ತಕ್ಕ ಭಾವಾನುಸಾರಿ ವಾಚನದಿಂದ ೩, ೫, ೬, ೩–೪ ಈ ಲಯಗಳನ್ನು ಹಿಡಿದು ಸಾಗುವ ಸ್ಥಿತಿಸ್ಥಾಪಕಗುಣವನ್ನು ಹೊಂದಿದೆ. ಮೇಲಿನ ಎರಡು ನುಡಿಗಳಲ್ಲಿ

೩-೪ರ ಹೊರತಾದ ಲಯಗಳ ಗತಿ ಸಾಧ್ಯ. ೪ನೆಯ ನುಡಿಯಲ್ಲಿ ೩-೪ರ ಲಯವನ್ನು ಕಾಣಬಹುದು. ಮೇಲಿನ ನುಡಿಗಳ ಪ್ರಸ್ತಾರಕ್ರಮಗಳಲ್ಲಿ ಹೃದ್ಯವಾದುದು ಮೊದಲಿನದೇ ಎನ್ನುವುದು ವಿದಿತ:

ಕಾಳೆ ಹರೆ ಕೊಂಬು ಗಳ
ಏಳಿ ಮೊಳಗಿ ಏಳಿ (ಏs + ಮು)
ನಾಡು ಗಳ ಕುಳ ಗಳನು
ಕೂಡಿ ಕೊಳ ಹೇಳಿ (ಹೇs + ಮು)
ಬನ್ನಿ ರಣ್ಣ ಬನ್ನಿ ರಣ್ಣ
ಅದೊ ಕೂಗು ಕೇಳಿ (ಕೇs + ಮು)
ಮನ್ನೆ ಯರ ಬಂಟ ರಿರ
ಒದಗಿ ಏಳಿ ಏಳಿ ॥ (ಏs + ಮು)

'ರಾಯಲ್ ಜಾರ್ಜು ಮುಳುಗಿ ಹೋದದ್ದು' ಕವಿತೆಯ ಒಂದು ನುಡಿ:

(೮) ಅಳಿದರೇ: ಹಾ ಧೀರ ರು
ಕಳೆದು ಹೋದರೆ ಧೀರ ರು
ತಮ್ಮ ನಾಡಿನ ಕರೆಯೊ ಳಿಲ್ಲದರು
ಮುಳುಗಿ ಹೋದರು ತೆರೆಯೊ ಳು ॥

ಈ ನುಡಿಯ ನಡೆ ೩-೪ರ ಮಿಶ್ರಲಯದ್ದು; ೫:೨ರ ಗಣಪರಿವೃತ್ತಿಯನ್ನೂ ಪಾದಾಂತದಲ್ಲಿ ಮುಡಿಯು ಗಣವನ್ನು ತುಂಬುವ ರೀತಿಯನ್ನೂ ಗಮನಿಸಬೇಕು.

'ಇಂಗ್ಲೆಂಡ್ ನಾವಿಕರು' ಕವಿತೆಯ ಒಂದು ನುಡಿಯ ಭಾಗ :

(೯) ಇಂಗ್ಲೆಂಡ ಧ್ವಜಪಟವ ದು-ರೌದ್ರದಲಿ
ಧೂಮಕೇ ತುವೊಲುರಿವು ದು;
ಬಿಗಿದ: ಭೀತಿಯ : ನಿಶಿಯ ಕಾರೊಡ್ಡು ಕರುಗುತ್ತ
ನಗುವನಕ ಶಾಂತಿಯರಿ ಲು

ಇಲ್ಲಿಯದು ೫ ಮಾತ್ರೆಗಳ ಲಯ. ಮೊದಲೆರಡು ಪಾದಗಳ ರಚನೆ 'ಅರ್ಜುನ ಜೋಗಿ ಹಾಡು' ಮಟ್ಟಿನ ಗಣಸ್ಥಾನದ ಏಕಾಕ್ಷರಸಂಘಟನೆ, ಪ್ರತ್ಯೇಕ ಮೀಟುಗಣದ.

ಮಣಿಪುರಕೆ ಬಂದುವಾ ಗ -ಗಿಣಿಗಳು
ದಣಿದು ಮಲಗಿದುವು ಬೇ ಗ॥

ಎಂಬಂತಹ ನುಡಿಯ ಭಾಗಗಳ ರಚನೆಗೆ ಸದೃಶವಾದುದು ಎನ್ನುವುದು ವಿದಿತ.

'ಇಂಗ್ಲೆಂಡ್' ಕವಿತೆಯಲ್ಲಿ ಒಂದು ನುಡಿ :

(೧೦) ಏನ : ಮಾಡಿದೆ : ನಾನು ನಿನಗೆ
        ಇಂಗ್ಲೆಂಡ್ ನನ್ನಿಂಗ್ಲೆಂಡ್
ಏನ : ಮಾಡೆನು : ಹೇಳು ನಿನಗೆ
        ನನ್ನ ಇಂ. ಗ್ಲೆಂಡ್

ಪದ್ಯದ ನಡೆ ಪಂಚಮಾತ್ರೆಗಳದು. ಪ್ರಸ್ತಾರ ಮೇಲುನೋಟಕ್ಕೆ ಇಲ್ಲಿ ತೊಡಕಿನದು. ಆದರೆ ಮೇಲೆ ತೋರಿಸಿರುವಂತೆ ೩: ೪':೩.ಪ। ೪':೬।೩:೪':೩.ಪ।೫. ಮು॥ ೨ನೆಯ ಪಾದವನ್ನು, ೫ (ಭಾವನಿರ್ಭರತೆಯ ಕಾರಣವಾದ ದೀರ್ಘೀಕರಣ ಅಥವಾ ಮೌನ Elongation or Compensating Pause ಗಣವನ್ನು ಬೆಳಸುವುದು ಸಾಧ್ಯ) +೫ (ತ್ವರಿತೋಚ್ಚಾರದಿಂದ).

'ಬಡವನ ಹುರುಡು' ಪದ್ಯದ ಒಂದು ನುಡಿ:

(೧೧) ಮೌನ 'ವಾಗಿ ತಾನು ಬದುಕಿ
        ಹೀನ ಬಡತನ ವೇನೆ ಇರಲಿ
ನಾಚಿ ಕೊಳುವ ನೀಚ ತೊತ್ತು
        ಆಚೆ ನೂಕು ಏನೆ ಇರಲಿ ॥

ಈ ನುಡಿ ತ್ರಿಮಾತ್ರಾಲಯದ್ದು. ಇದರಲ್ಲಿ ೨ಸೆಯ ಪಾದದ ೨ನೆಯ 'ಬಡತನ' ಎಂಬ ಪದ ಬರುವ ಗಣ ತ್ವರಿತೋಚ್ಚಾರದಿಂದ ಕುಗ್ಗುವ ಹ್ರಸ್ವೀಕೃತಗಣ. ಈ ತೆರನ ಗಣಗಳು ಮುಂದಿನ ನುಡಿಗಳಲ್ಲಿಯೂ ಅಲ್ಲಲ್ಲಿ ಬಂದಿವೆ. ('ನಿಷ್ಠುರ', 'ಪಳುಕಗ', 'ತೋಡಿಗೆಗೆ'). ಉದ್ಧೃತ ಸಂದರ್ಭಕ್ಕಿಂತ ಇತರ ಸಂದರ್ಭಗಳ ಗಣಗಳು ಭಾವದ ಗತಿಗೆ ಚೆನ್ನಾಗಿ ಹೊಂದಿಕೊಳ್ಳುವುದರಿಂದ ಅಲ್ಲಿ ಅವುಗಳ ಸಾರ್ಥಕ್ಯವಿದೆ. ಶ್ರೀಯವರಿಗೆ ಈ ಪ್ರಯೋಗಕ್ಕೆ ಪ್ರೇರಣೆ ಇಂಗ್ಲೀಷ್ ಮೂಲದಲ್ಲಿಯೇ ದೊರೆತಿರುವಂತಿದೆ. ಮೂಲದ ಕವಿತೆ ಬರ್ನ್ಸ್‌ಕವಿಯ A Man's A Man fo A' that ಎಂಬುದರಲ್ಲಿ, ಪ್ರತಿನುಡಿಯಲ್ಲಿಯೂ ವರ್ಣಲೋಪಚಿಹ್ನೆ (ತೇಲುಗೆರೆ)ಗಳನ್ನು ಸಮೃದ್ಧವಾಗಿ ಬಳಸಿ' ಗಣಗಳನ್ನು ಕಟ್ಟುವ ಪದಗಳ ಉಚ್ಚಾರಕಾಲವನ್ನು ಕುಗ್ಗಿಸಿರುವುದು ಕಾಣುತ್ತದೆ. ಅದನ್ನು ಕಂಡಾಗ ಶ್ರೀಯವರಿಗೆ ಈ ಅಪೂರ್ವಪ್ರಯೋಗವನ್ನು ಮಾತ್ರಾಲಯದಲ್ಲಿಯೂ ಏಕೆ ತರಬಾರದು ಎನ್ನಿಸಿದ್ದರೆ ಆಶ್ಚರ್ಯವೇನಲ್ಲ.

'ಬಿಂಕದ ಸಿಂಗಾರಿ'ಯ ಒಂದು ನುಡಿ:

(೧೨) ಹೇಳೆಲೆ ಹಕ್ಕಿ ಚೆಲುವನು ಸಿಕ್ಕಿ
        ನನಗೆ ಮ. ದುವೆ ಯೆಂ.ದು
ಅಳಿ ಬ್ಬಿಬ್ಬರು ಕೇರಿಯ ಸುತ್ತಿ
        ಹೆಗಲಲಿ ಹೊತ್ತಂ ದು

ಈ ೪ ಮಾತ್ರೆಗಳ ಲಯದ ನುಡಿಯಲ್ಲಿ 'ಹಕ್ಕಿ', 'ಸಿಕ್ಕಿ' ಇವು ಪದ್ಮಗಣಗಳು; ೨–೪ನೆಯ ಪಾದಗಳ ಅಂತ್ಯಾಕ್ಷರಗಳು 'ಮುಡಿ'ಗಳು ಹೊಸಗನ್ನಡ ಛಂದಸ್ಸಿನಲ್ಲಿ ಈ ಪ್ರಕ್ರಿಯೆಗಳು ತುಂಬ ಪ್ರಚಾರವಾದುವು ಎಂಬುದು ತಿಳಿದೇ ಇದೆ.

'ಮುದಿಯ ರಾಮಗೌಡ' ಕವಿತೆಯ ಒಂದು ನುಡಿ :

(೧೩) ಕುಲಗ ಳೆಲ್ಲಾ ರೊಪ್ಪ ದಲ್ಲಿ ದನಗ ಳೆಲ್ಲಾ ತೊಟ್ಟಿ ಯಲ್ಲಿ
ಜನಗ ಳೆಲ್ಲಾ ಹಟ್ಟಿ ಯಲ್ಲಿ ಬಳಸಿ ಕೆಡೆದರು ತೆಪ್ಪ ಗೆ
ಗಂಡ ಗೊರಕೆ ಹೊಯ್ಯು ತಿಹನು ನಿದ್ದೆ ಕವಿದು ಮಗ್ಗು ಲಲ್ಲಿ
ನನಗೊ ಹೊಟ್ಟೆಯ ದುಃಖವೆಲ್ಲಾ ಕಣ್ಣ ಹನಿಯಲಿ ಸುರಿವು ದು॥

ಇಲ್ಲಿ ಮೂಲಶ್ರುತಿ ೩–೪ರ ಮಿಶ್ರಲಯದ್ದು. ಚತುರ್ಮಾತ್ರಾಗಣಗಳು ಹಲವೆಡೆ ಒಂದು ಮಾತ್ರಾಕಾಲದ ದೀರ್ಘೀಕರಣದಿಂದ ಸಿದ್ಧವಾಗುವುದು ಇಲ್ಲಿ ಬಹು ಸ್ವಾರಸ್ಯಕರವಾದ ಸಂಗತಿ. ಭಾವದ ಚೆಲುವು ಇಲ್ಲಿ ಹಿಗ್ಗುವುದನ್ನು ಕಾಣಬಹುದು.

'ದುಃಖಸೇತು'ವಿನ ಒಂದು ನುಡಿ :

(೧೪) ತುಂಬಿದೀ ಜನದಲ್ಲಿ
ನೆರೆ : ಇವಳಿ ಗಿಲ್ಲ
ಅ)ನಾಥೆ ಹಾ ದಿಕ್ಕಿಲ್ಲ
ಮರಣವೇ ಶರಣು

ಈ ಪಂಚಮಾತ್ರಾಲಯದ ನುಡಿಯಲ್ಲಿ ಗಮನಿಸಬೇಕಾದ್ದು ೩ನೆಯ ಪಾದವನ್ನು ಅಲ್ಲಿ ಗುರುತಿಸಿರುವ ಆದ್ಯಕ್ಷರ ತಾಳವನ್ನೆತ್ತಿಕೊಡುವ, 'ಅನಾಗತ' ಎಂಬುದಾಗಿ ರೂಢಿಯಲ್ಲಿ ಹೇಳುವ, ಅಕ್ಷರ, ಪ್ರಸ್ತಾರದಲ್ಲಿ ಅದನ್ನು ಎಣಿಕೆಗೆ ಗಣಿಸುವುದಿಲ್ಲ. ಇಂಗ್ಲೀಷ್ ಛಂದಸ್ಸಿನ Anacrusis, Catch, Hypermetrical Syllable ಎಂದು ಹೇಳಬಹುದಾದದ್ದು ಇಲ್ಲಿ ಅನಾಗತವೆನಿಸಿದೆ.

'ಚೋಳಕನ್ನೆಯರು' ಕವಿತೆಯ ಒಂದು ನುಡಿಯ ಭಾಗ:

(೧೫) ಮೆರೆವ ಮೂಡಲಲಿ ಮೊರೆದು ತೀಡುತಲಿ
ಗಾಳಿ ತರುಬುವುದು ಕಡಲ ನು
ತೆರೆಗ ಳೇಳುವುವು ಹೊರಳಿ ಬೀಳುವುವು
ಚೋಳ ಮಂಡಲವ ತೊಳೆವು ವು

೩–೫ರ ಈ ಮಿಶ್ರಲಯ ಹೊಸಛಂದಸ್ಸಿನಲ್ಲಿ ವಿರಳವಾದದ್ದು. ಗಮಕದ ಗತಿ ಚೆಲುವಾದದ್ದು. ಈಗಾಗಲೇ ಗಮನಿಸಿರುವಂತೆ ಪದ್ಧಳಿ ರಗಳೆಯ ಒಂದೊಂದು ಪ್ರಯೋಗದಲ್ಲಿ ಇದು ಕಾಣುತ್ತದೆ.

'ಇರುಳ ದೇವಿ' ಕವಿತೆಯ ಒಂದು ನುಡಿ:

(೧೬) ಬೇಗ ಪಡುವ ತೆರೆಯ ತುಳಿದು
ಇರುಳ ದೇವಿ ಬಾ
ಮಬ್ಬು ಗವಿಯೊ ಳೊಬ್ಬ ಳಿದ್ದು
ಹಗಲು ಸಮಯ ದಾಗ ಹೆಣೆದ
ಸೊಗದ ಭಯದ ಕನಸ ಬೀರಿ
ಉಬ್ಬಿ ಸುತ್ತ ಬೆದರಿ ಸುತ್ತ
ಬಾಽ ಬೇಗ ಬಾ

ಈ ತ್ರಿಮಾತ್ರಾಲಯದ ನುಡಿಯಲ್ಲಿ ಕೊನೆಯ ಪಾದದ ಮೊದಲನೆಯ ಅಕ್ಷರ, ಒಂದೇ ಅಕ್ಷರವಾಗಿಯೂ ಒಂದು ಗಣದ ಸ್ಥಾನದಲ್ಲಿ ನಿಲ್ಲುತ್ತದೆ; ಅಲ್ಲದೆ ಗುರ್ವಕ್ಷರ ಪ್ಲುತದ ಎಂದರೆ ೩ ಮಾತ್ರೆಗಳ ಬೆಲೆಗೆ ಹಿಗ್ಗುತ್ತದೆ.

ಇವೆಲ್ಲ 'ಇಂಗ್ಲೀಷ್ ಗೀತಗಳು' ಸಂಕಲನದಿಂದ ಎತ್ತಿದ ಲಕ್ಷ್ಯಗಳು. ಇನ್ನೂ ಕೆಲವು ವೈಚಿತ್ರ್ಯಗಳನ್ನು ಗುರುತಿಸುವುದು ಸಾಧ್ಯವಿದೆ. ಕೆಲವನ್ನು ತೀ.ನಂ.ಶ್ರೀ. ಮೊದಲಾದವರು ಈಗಾಗಲೇ ಗುರುತಿಸಿದ್ದಾರೆ. ಆದರೆ ಇನ್ನೂ ಕೆಲವು ಸ್ವಾರಸ್ಯಕರವಾದ ವೈಚಿತ್ರ್ಯಗಳನ್ನು ಗುರುತಿಸುವುದು ಸಾಧ್ಯವೆನ್ನುವುದರಲ್ಲಿ ಸಂಶಯವಿಲ್ಲ. ಇದು ಹೊಸಗನ್ನಡ ಛಂದಸ್ಸಿನ ಸ್ವರೂಪ ವಿಶದಪಡುವುದನ್ನು ಅವಲಂಬಿಸಿದೆ.

ಈಗ 'ಹೊಂಗನಸುಗಳು' ಸಂಕಲನದ ಬಗೆಗೆ ಒಂದೆರಡು ಮಾತುಗಳು. ಇಲ್ಲಿರುವ ಕವಿತೆಗಳು, ಶ್ರೀಯವರ ಸ್ವಂತ ರಚನೆಗಳು, ಅನುವಾದಿತಗಳಲ್ಲ. ಚೆಲುವಾದ, ಗಂಭೀರವಾದ ಪ್ರಗಾಥಗಳನ್ನು ಹುಟ್ಟುಹಾಕಿ ಈಚಿನ ಕವಿಗಳಿಗೆ ಸ್ಫೂರ್ತಿ ಮಾರ್ಗದರ್ಶನಗಳನ್ನು ನೀಡಿದವರು ಶ್ರೀಯವರು. "ಕನ್ನಡಕ್ಕೆ ಓಡ್ ಬಂದುದು ಇಂಗ್ಲೀಷಿನಿಂದ ತಂದ ಓಡ್‌ಗೆ ಸಂಸ್ಕೃತದಿಂದ 'ಪ್ರಗಾಥ' ಎಂಬ ಹೆಸರನ್ನು ತಂದು ಇಟ್ಟವರೂ 'ಶ್ರೀ' ಯವರೇ" ಎಂದು ಅಭಿಪ್ರಾಯ ಪಟ್ಟಿರುವ ಎಸ್. ಅನಂತನಾರಾಯಣ[೧೨] ಅವರು ರಚಿಸಿರುವ ಪ್ರಗಾಥಗಳ ಬಗೆಗೆ ಸ್ವಲ್ಪಮಟ್ಟಿಗೆ ವಿಚಾರ ಮಾಡಿದ್ದಾರೆ..... ಪದಪ್ರತಿಭೆ, ಸಂಯಮಪೂರ್ಣವಾದ ಪ್ರತಿಮಾಪ್ರಯೋಗ, ಅಗತ್ಯವಾದಷ್ಟೇ ಬಳಸಿರುವ ನಾಟಕೀಯತೆ ಇವು ಪಿಂಡಾರನ ಓಡ್‌ಗಳಿಗೆ ಪರಿಪೂರ್ಣತೆಯನ್ನು ತಂದಿವೆ. ಶ್ರೀಯವರ ಪ್ರಗಾಥಗಳಲ್ಲಿಯೂ ಈ ಎಲ್ಲ ಗುಣಗಳೂ ತುಂಬಿವೆ. ಪಿಂಡಾರನಲ್ಲಿರುವಂತೆಯೇ ಶ್ರೀಯವರಲ್ಲಿಯೂ ದೈವದ ಬಗ್ಗೆ ಭಕ್ತಿಯೂ ತುಂಬಿಕೊಂಡು ಬಂದಿದೆ" ಎಂದು ಅವರು ಮುಂದುವರಿದು ಹೇಳಿದ್ದಾರೆ.[೧೩]

'ಶ್ರೀಕೃಷ್ಣರಾಜ ರಜತಮಹೋತ್ಸವ ಪ್ರಗಾಥ' (೧೯೨೭), 'ಕನ್ನಡತಾಯ ನೋಟ'(೧೯೨೬), ಶುಕ್ರಗೀತೆ (೧೯೪೧) ಇವು ರಚಿತವಾದ ಸಂದರ್ಭಗಳು

ಪರ್ವಸಂದರ್ಭಗಳು. ಛಂದಸ್ಸಿನ ದೃಷ್ಟಿಯಿಂದ ಇವನ್ನು ಅನಿಯತ ಪ್ರಗಾಥಗಳ ಗುಂಪಿಗೆ ಸೇರಿಸಬಹುದು. 'ಕನ್ನಡದ ಬಾವುಟ' (೧೯೩೮), 'ಶ್ರೀಜಯನ ಬೆಳಕು (೧೯೪೦); ಬಾನ್‌ಕೊಂಡ ಕೃಷ್ಣನ್ (೧೯೪೦) ಇವೂ ಒಂದರ್ಥದಲ್ಲಿ ಅನಿಯತ ಪ್ರಗಾಥಗಳೇ. ವಿವಿಧ ವಸ್ತುಖಂಡಗಳಲ್ಲಿ ವಿಸ್ತಾರ ವಿಳಂಬ ಶೈಲಿಯ ಪಾದಗಳೊಂದಿಗೆ ಅನತಿದೀರ್ಘ ಹಾಗೂ ಅತಹ್ರಸ್ವಪ್ರಮಾಣದ ದ್ರುತಗತಿಯ ಪಾದಗಳು ಭಾವದ ಬಾಗು ಬಳುಕುಗಳಿಗೆ ತಕ್ಕಂತೆ ವಿನ್ಯಾಸಗೊಂಡಿರುತ್ತವೆ, ಇಲ್ಲಿ; ಆ ಪಾದಗಳನ್ನು ಕಟ್ಟುವ ಗಣಗಳು ಭಾವದ ಬಾಗು ಬಳುಕುಗಳಿಗೆ ತಕ್ಕಂತೆಯೇ ವಿಭಿನ್ನ ಮಾತ್ರಾಲಯಗಳಲ್ಲಿ ರೂಪಗೊಂಡಿರುತ್ತವೆ; "ಇಲ್ಲಿ ಛಂದಸ್ಸು ಕುಣಿಯುತ್ತದೆ, ಜೀಗುತ್ತದೆ, ಬಳುಕುತ್ತದೆ. ಪ್ರಾಸ, ಅನುಪ್ರಾಸ, ಅಂತ್ಯಪ್ರಾಸಗಳು ಮೆರೆಯುತ್ತವೆ"(೧೯) ಮಡಿಗಳ ಗಡಣಿಕೆಗೆ ಒಗ್ಗದ ಇಲ್ಲಿಯ ಛಂದೋರೂಪ ಅಖಂಡವಾಗಿದ್ದರೂ ಮೇಲೆ ಮೇಲೆ ಬದಲಾಗುತ್ತ, ಬೇರೆ ಬೇರೆಯಾದ ಛಂದಸ್ಸುಗಳ ಲಕ್ಷಣಗಳನ್ನು ಬಿಡಿಯಾಗಿಯೋ ಇಡಿಯಾಗಿಯೋ ತೋರಿಸುತ್ತದೆ ಎನ್ನಬಹುದು. ಕೆಲವು ಪಾದಗಳನ್ನು ಇಲ್ಲಿ ಉದ್ಧರಿಸಬಹುದು.

'ಕನ್ನಡ ತಾಯಿ ನೋಟ'ದ ೪ನೆಯ ಖಂಡದ ಆರಂಭದ ಕೆಲವು ಪಾದಗಳು:

(೧೭) ಕೇಳಣ್ಣ ನಾನೊಬ್ಬ ಹಳೆಯ ಮುತ್ತೈದೆ–ಹಿರಿದಾಗಿ ಬಾಳಿದವ ಳೊಮ್ಮೆ
ಈಗ ಬಡತನ ಬಡವೆ ಬಡವಾದೆ ಬಡವಾದ ಮಕ್ಕಳನು ನೋಡಿ
ಬತ್ತಿ ಮತ್ತಿಮ್ಮಡಿಯು ಸೊರಗಿನಲಿ ಬಡವಾದೆ– ಸಾವಿಲ್ಲ. ನನಗೆ
ಸಾವಿಲ್ಲ. ಸಾಯುತಿಹೆ ಹೊಸ ಪೀಗಳಾಗಿ ನೆಲ ಹೊಸಹೊನಲು ಹರಿದು
ಹೊಸ ಹಮ್ಮು ಹಮ್ಮುತ್ತ. ಎಲ್ಲರೂ; ನನ್ನಕ್ಕ ತಂಗಿಯರು ಚಿಗುರಿ
ಎಲ್ಲರೂ ಚೆಲುವಾದರೆಲ್ಲರೂ ಚಿನ್ನವಾದರು – ನೋಡು. ನೋಡು
ಆ ಕಡೆಗೆ ಈ ಕಡೆಗೆ ತೂಗುವರು. ತೊನೆಯುವರು ಆ ಪೊಂಕ ಬಿಂಕ
ಪೇರೊಕ್ಕಲಾಗಿ ಪಾಡುವರು
ಅವರ ಮಕ್ಕಳು ಬೆಳೆದು ಕಳೆಗೂಡಿ ಮನೆಬೆಳಗಿ ಹಬ್ಬಮಾ ಡುವರು.

ಪಂಚಮಾತ್ರಾಲಯ ಇಲ್ಲಿಯದು: ಮೊದಲ ಪಾದವೊಂದು ಹೊರತಾಗಿ, ೮ನೆಯ ಹ್ರಸ್ವಪಾದವೊಂದು ಹೊರತಾಗಿ ಉಳಿದ ಪಾದಗಳೆಲ್ಲ ೫ ಪಂಚಮಾತ್ರಾಗಣ ಗಳು+ಪದ್ಮಗಣದಿಂದ ಕೂಡಿರುವುದನ್ನು ಗಮನಿಸಬಹುದು. ಆದರೆ ಆ ಗಣಗಳು ವಿವಿಧ ಪರಿವೃತ್ತಿಯ ಹಾಗೂ ಲಯಚಲನೆಯ ಮೂಲಕವಾಗಿ ಏಕತಾನತೆ ಸ್ವಲ್ಪವೂ ತೋರದ ಗತಿ ಗಮಕಗಳಿಂದ ಗಂಭೀರವಾಗಿ ಸಾಗುವುದರಲ್ಲಿ ಛಂದಸ್ಸಿನ ಯಶಸ್ಸಿದೆ. ಕೆಲವರು ಭಾವಿಸುವಂತೆ ಈ ಬಗೆಯ ಪಾದಗಳು ಗದ್ಯಪಾದಗಳಲ್ಲ; ಪದ್ಯಪಾದಗಳೇ ಎನ್ನುವುದನ್ನು ಗಮನಿಸಬೇಕಾಗಿದೆ. ಮೇಲೆ ಉದ್ಧರಿಸಿದ ಪಾದಗಳನ್ನು ದಾಟುತ್ತಿದ್ದ ಹಾಗೆ ಲಯಗತಿ ಪಡೆಯುವ ಕುಣಿತಮಣಿತಗಳು ವಿವಿಧವಾದವು.

ಹೊಸಗನ್ನಡ ಛಂದಸ್ಸಿನಲ್ಲಿ ಶ್ರೀಯವರ ಸಾಧನೆಗಳೇನು?

(i) ಶ್ರೀಯವರು ಹೊಸಗನ್ನಡ ಛಂದಸ್ಸಿನ ಅಧ್ವರ್ಯುಗಳು. ಗಣರಚನೆ, ಪಾದರಚನೆಗಳಲ್ಲಿ ಮೊದಲ ಸಲ ಹೊಸ ಪ್ರಯೋಗ ಪರೀಕ್ಷೆಗಳನ್ನು ಸಮಗ್ರವಾಗಿ ನಡೆಸಿದವರು ಅವರು. ಹೊಸಗನ್ನಡ ಛಂದಸ್ಸು ಎಂಬುದು ಒಂದು ಪ್ರಸ್ಥಾನವಾಗಲು ಅವರೇ ಮುಖ್ಯ ಕಾರಣಕರ್ತರು.

(ii) ಶ್ರೀಯವರು ಹಳೆಯ ಕನ್ನಡ ಛಂದಸ್ಸುಗಳನ್ನು ಅವುಗಳ ಯಥಾರೂಪದಲ್ಲಿ ಬಹು ವಿರಳವಾಗಿ ಮಾತ್ರ ಬಳಸಿದರು. ಅವುಗಳ ಕಟ್ಟು ಕಟ್ಟಳೆಗಳನ್ನು ಸ್ವಲ್ಪ ಸ್ವಲ್ಪ ಬದಲಾಯಿಸಿ ಸ್ವಲ್ಪ ಹೆಚ್ಚಾಗಿ ಅವನ್ನು ಬಳಸಿದರು. ಅವುಗಳ ಮುಖ್ಯ ಲಕ್ಷಣಾಂಶಗಳನ್ನು ಮಾತ್ರ ಅಂಗೀಕರಿಸಿ, ಹೊಸ ಲಕ್ಷಣಾಂಶಗಳನ್ನು ಧಾರಾಳವಾಗಿಯೇ ಹೂಡಿ ಹೊಸವಾಗಿಯೇ ತೋರುವ ಕನ್ನಡ ಛಂದಸ್ಸುಗಳನ್ನು ರೂಢಿಸಿದರು. ಈ ಕೊನೆಯ ರೀತಿಯಿಂದಲೇ ಹೊಸಗನ್ನಡ ಛಂದಸ್ಸಿನ ಸ್ವರೂಪ ವಿಶದಪಡುವುದು ಸಾಧ್ಯವಾಯಿತು.

(iii) ಗಣಗಳ ಸಂಖ್ಯೆ – ವಿನ್ಯಾಸ, ಪಾದಗಳ ಸಂಖ್ಯೆ – ವಿನ್ಯಾಸ, ನುಡಿಗಳ ವ್ಯವಸ್ಥೆ – ಪ್ರಕಾರ ಇವುಗಳಲ್ಲಿ ಸೊಗಸು ಸಮತೋಲನಗಳನ್ನು ಕೌಶಲದಿಂದ ಸಾಧಿಸುವ ವಿಪುಲ ವೈಚಿತ್ರ್ಯಗಳನ್ನು ಮೊದಲ ಸಲ ಪ್ರದರ್ಶಿಸಿದವರು ಶ್ರೀಯವರು. ಇದರಿಂದ ಬಂಧವೈವಿಧ್ಯ ಹೆಚ್ಚಿತು.

(iv) ಶ್ರೀಯವರು ಇಂಗ್ಲೀಷ್ ಛಂದಸ್ಸುಗಳ ಕೆಲವು ಲಕ್ಷಣಗಳನ್ನು ಅನುಸರಿಸಿದರೆ ಕನ್ನಡದಲ್ಲಿ ಪದ್ಯರಚನೆಯ ವಿಧಿವಿಧಾನಗಳನ್ನು ಇನ್ನೂ ಬೆಳಸಬಹುದೆಂದೂ ಕಾವ್ಯಾಸ್ವಾದವನ್ನು ಹೆಚ್ಚಿಸಬಹುದೆಂದೂ ಇತರ ತಮ್ಮ ಕಾಲದ ಅನುವಾದಕರಿಗಿಂತ ಚೆನ್ನಾಗಿ ತೋರಿಸಿದರು; ಕನ್ನಡ ಇಂಗ್ಲೀಷ್ ಛಂದಸ್ಸುಗಳನ್ನು ಕಸಿಗೊಳಿಸಿ ಹೊಸಗನ್ನಡ ಛಂದಸ್ಸನ್ನು ರೂಪಿಸಿದ ನವೋದಯಕಾಲದ ಕವಿಗಳಲ್ಲಿ ಅಗ್ರಗಣ್ಯರಾದರು.

(v) ಕನ್ನಡದಲ್ಲಿ ಅನಿಯತ ಪ್ರಗಾಥದ ಆರಂಭಕಾರರಾದವರು ಶ್ರೀಯವರು. ಅವರ ಮಾರ್ಗದಲ್ಲಿ ಈಚೆಯ ಕಾಲದ ಕನ್ನಡ ಕವಿಗಳು ಆ ಪ್ರಕಾರವನ್ನು ಬೆಳೆಸುವುದು ಇದರಿಂದ ಬಳಿಕ ಸಾಧ್ಯವಾಯಿತು.

(vi) ಪ್ರಾಚೀನ ಕನ್ನಡ ಭಾಷೆ ಛಂದಸ್ಸುಗಳನ್ನು ಶ್ರೀಯವರು ಪುನರುಜ್ಜೀವಿಸಿದ್ದು, ಈಚೆಯ ಕಾಲದ ಕವಿಗಳಿಗೆ ಸ್ಫೂರ್ತಿಪ್ರದವೂ ಮಾರ್ಗದರ್ಶಕವೂ ಆಯಿತು.

ಈಗ ಶ್ರೀಯವರ ಎರಡು ನಾಟಕ ಕೃತಿಗಳ ಛಂದಸ್ಸಿನ ಬಗೆಗೆ, ಸಂಕ್ಷೇಪವಾಗಿ ಸ್ವಲ್ಪ ವಿಚಾರ ಮಾಡಬಹುದು. ಲಕ್ಷ್ಯಗಳನ್ನು ಮೂಲದಲ್ಲಿಯೇ ನೋಡಿಕೊಳ್ಳಬೇಕು.

'ಅಶ್ವತ್ಥಾಮನ್' ಪದ್ಯನಾಟಕ. ಮೇಳಗೀತಗಳು ೩.೪.೫ ಮತ್ತು ೬ ಮಾತ್ರೆಗಳ ಬೇರೆ ಬೇರೆ ಲಯಗಳಲ್ಲಿ ಕಟ್ಟಿದ, ನುಡಿಕಟ್ಟುಗಳೂ ವಿವಿಧವಾಗಿರುವ ಶುದ್ಧ ಪದ್ಯಬಂಧಗಳೇ ಆಗಿವೆ. ಕೆಲವೊಮ್ಮೆ ಮೇಳ ಮತ್ತು ಪಾತ್ರಗಳ ಸಂವಾದಗಳಲ್ಲಿಯೂ ಈ ವಿಧದ ರಚನೆಗಳನ್ನು ಕಾಣಬಹುದು. ಇವು ಹೊರತಾಗಿ ನಾಟಕದ ಹೆಚ್ಚು ಪಾಲು ಸಂವಾದಭಾಗವೆಲ್ಲ ಮೇಲು ನೋಟಕ್ಕೆ ಗದ್ಯದಂತೆ ತೋರುವ, ಆದರೆ ಪಂಚಮಾತ್ರಾಲಯದ ಗಣಗಳ ಗತಿಯಿಂದ ನಿಬದ್ಧವಾದ ದೀರ್ಘ ಪದ್ಯಪಾದಗಳಲ್ಲಿದೆ. ಈ ಗಣಗಳು ಪಾದದಲ್ಲಿ ೪ ಬಂದಾಗ, ಅವನ್ನು ಸರಳರಗಳೆಯ ಪಾದಗಳೆಂದೇ ತಿಳಿಯಬಹುದು. ಸಾಮಾನ್ಯವಾಗಿ ದೀರ್ಘತರ ಪಾದಗಳಲ್ಲಿ ೬ ಪಂಚಮಾತ್ರಾಗಣಗಳು (೫ x ೫ ಪ.) ಬಂದಿರುತ್ತವೆ. ಒಂದೊಂದು ಸಲ ವಿರಳವಾಗಿ ಇನ್ನೊ ಒಂದು ಗಣ ಹೆಚ್ಚಾಗಿ ಬಂದಿರಲೂಬಹುದು (ಸಾ. ೪೧೧, ೪೧೯). ಸಂವಾದ ಭಾಗಗಳಲ್ಲಿ ಅವಶ್ಯಕತೆಗೆ ತಕ್ಕಂತೆ ಗಣಗಳನ್ನು ಹಂಚುವುದಕ್ಕಾಗಿ ಪಾದಗಳನ್ನು – ಇವು ಸಾಮಾನ್ಯವಾಗಿ ಸರಳರಗಳೆಯ ಪಾದಗಳು – ಒಡೆದಿರುವುದನ್ನೂ ಕಾಣಬಹುದು. ಪಾದಗಳಲ್ಲಿ ಗಣಗಳ ವ್ಯಾಪ್ತಿ ೨–೩ ಗಣಗಳಷ್ಟು ಕನಿಷ್ಠವಾಗಿಯೂ ೬–೭ ಗಣಗಳಷ್ಟು ಗರಿಷ್ಠವಾಗಿಯೂ ಇರಬಹುದು. ಗಣರಚನೆಯಲ್ಲಿ ಹೊಸಛಂದಸ್ಸಿನ ಲಕ್ಷಣಗಳಿಗೆ ಅನುಸಾರವಾಗಿ ಈ ಹಿಂದೆ ಹೇಳಿದ ಮುಡಿ, ಪದ್ಮಗಣ ಮುಂತಾದುವನ್ನೆಲ್ಲ ಗಣನೆಗೆ ತೆಗೆದುಕೊಳ್ಳ ಬೇಕಾಗುತ್ತದೆ.

ಮೇಳಗೀತಗಳು, ಮಾತುಗಳು, ಮೇಳದೊಂದಿಗೆ ಪಾತ್ರಗಳ ಸಂವಾದ, ಅಶ್ವತ್ಥಾಮನ್ ಮೊರೆ ಮೊದಲಾದ ಕೆಲವು ಭಾಗಗಳು ವಿವಿಧವೂ ಮನೋಜ್ಞವೂ ಆದ ಮಾತ್ರಾ ಛಂದಸ್ಸುಗಳಲ್ಲಿವೆ. ಇವುಗಳ ಭಾಷಾಸೌಷ್ಠವ, ಭಾವಸೌಂದರ್ಯಗಳು ಮಿಗಿಲಾದವು. ಆರಂಭದ ಮೇಳಗೀತ ಮೊದಲು ತ್ರಿಮಾತ್ರಾಲಯದ ೬ ಚತುಷ್ಪದಿಗಳಿಂದ ಕೂಡಿದ್ದು (೩ ೪/೩ ೩. ಮು) ಬಳಿಕ ಕ್ರಮವಾಗಿ ಯಥೋಚಿತವಾಗಿ ಮಾತ್ರಾಚೌಪದಿಯ ಇಲ್ಲವೆ ಸರಳರಗಳೆಯ ಪಾದಬಂಧಗಳಲ್ಲಿ ಸಾಗಿ, ಸ್ವಲ್ಪ ಭಾಗ ಮುಂದೆ (ಸಾ. ೧೬೫–೯೬) ಮಂದಾನಿಲರಗಳೆಯ ಧಾಟಿಯಲ್ಲಿ ನಡೆಯುತ್ತದೆ. ಅನಂತರ ಭಾರ್ಗವಿಯ ಮಾತಿನ ಭಾಗ (ಷಣ್ಮಾತ್ರಾಲಯ) ಬಿಟ್ಟು ಹಲವು ಪಾದಗಳ ೨ ಮೇಳಗೀತಗಳು, ಸಮಾನವಾಗಿ ೮–೮ ಪಾದಗಳುಳ್ಳವು, ಮಾತ್ರಾಚೌಪದಿಯ ಲಯದಲ್ಲಿವೆ. ಆ ಮುಂದಿನ ಭಾರ್ಗವಿಯ ಮಾತಿನ ಸಾಲುಗಳ ಲಯವೂ ಒಟ್ಟಿನಲ್ಲಿ ಪಂಚಮಾತ್ರೆಗಳದೇ. ಅಶ್ವತ್ಥಾಮನ ಮೊರೆಯು. ಸಾಲು ೩೩೦–೭೦ರ ಪದ್ಯಭಾಗ ಪಾದಾಂತದಲ್ಲಿ ಮುಡಿ ಪದ್ಮಗಣಗಳು ಮುಡಿಗಟ್ಟುವ, ಭಾವಾನುಸಾರಿಯಾಗಿ ಗಣಗಳ ಸಂಖ್ಯೆ ಬದಲಾಗುವ, ಪಂಚಮಾತ್ರಾಲಯದ ಪಾದಗಳಿಂದ ಕೂಡಿದುದಾಗಿದೆ. ಸಾಲು ೪೮೮–೯೯ರ ನಡುವಿನ ಮೇಳಗೀತಗಳು ಷಣ್ಮಾತ್ರಾಲಯದ ಸುಂದರ ರಚನೆಗಳೆಂಬುದನ್ನು ಎಲ್ಲರೂ

ಗಮನಿಸಿದ್ದಾರೆ. ೪–೨, ೨–೪ ಗಣಪರಿವೃತ್ತಿಗಳಿಂದ ಸೊಗಸುವ, ಪಾದಕ್ಕೆ ೪ ಗಣಗಳು ಬರುವ ೬–೬ ಪಾದಗಳ ಈ ಗೀತಗಳ ಗೇಯಗುಣ ಮಿಗಿಲಾದುದು. ಅನಂತರದ ೨ ಖಂಡಗಳು ಮಂದಾನಿಲ ಲಯದ್ದು. ಆ ಮುಂದಿನ ಮೇಳಗೀತ (ಸಾ. ೫೪೫–೭೬)ದ್ದು ಸಹ ಮಂದಾನಿಲ ಲಯವೇ ಆದರೂ, ಇಲ್ಲಿಯ ಗಣಯುಗ್ಮಗಳ ಲಘುಪಾದಗಳಿಂದಾದ ಬಂಧದ ಉತ್ಸಾಹಗಣಕ್ಕೆ ಗರಿಮೂಡಿದಂತಾಗಿದೆ. ಸಾಲು ೬೭೫ರ ಮುಂದಿನ ಕೆಲವು ಹ್ರಸ್ವ ಪಾದಗಳ ಮೇಳಗೀತ ಭಾಗ ಉತ್ಸಾಹಲಯದ್ದು; ಚೆಲುವಾದುದು, ಸಾಲು ೮೫೨–೯೧೦ರ ನಡುವೆ ವಿಸ್ತಾರವಾಗಿ ಬರುವ ಮೇಳಗೀತ ಭಾಗದಲ್ಲಿ ಮಾತ್ರಾಚೌಪದಿಯ ಲಯದ್ದು ಮೇಲುಗೈ. ೧–೨ನೆಯ ಖಂಡಗಳನ್ನು ಮುಡಿಗಟ್ಟಿದ ಚತುಷ್ಪದಿಗಳೂ ಮೇಲಿನ ಧಾಟಿಯವೇ; ೩ನೆಯ ಖಂಡದ ಲಘುಪಾದಗಳ, ಹಾಗೂ ನಾಟಕದ ಕೊನೆಯ ಮೇಳ ವಾಕ್ಯಗಳ ವಿಚಾರವೂ ಹೀಗೆಯೇ. ಎಲ್ಲ ಕಡೆಯೂ ಪಾದರಚನೆ ವಿವಿಧ ಅಂತ್ಯಪ್ರಾಸ ವಿನ್ಯಾಸಗಳಿಂದ ಸೊಗಸುತ್ತವೆ.

ಈ ನಾಟಕದ ಗೀತಗಳ ಹಾಗೂ ದೀರ್ಘ ಪದ್ಯಪಾದಗಳ ರಚನೆ ಶ್ರೀಯವರ ಸ್ವತಃ ಸಂಯೋಜನೆಗಳೇ? ಇಲ್ಲ, ಗ್ರೀಕ್ ಮತ್ತು ಇಂಗ್ಲೀಷ್ ಅನುವಾದಗಳಲ್ಲಿ ತೋರಿಬರುವ ರಚನೆಗಳ ಮಾದರಿಗಳಿಗೆ ಅನುಗುಣವಾದುವೇ? ಈ ವಿಷಯದಲ್ಲಿ, ತುಲನಾತ್ಮಕ ಪರಿಶೀಲನೆ ಅಗತ್ಯ. ಬಲುಮಟ್ಟಿಗೆ ಮಾದರಿಗಳು ಅಲ್ಲಿಯವನ್ನೇ ಅನುಸರಿಸಿರುವುದು ಶಕ್ಯ.

ಈ ಮೇಲಿನ ಮಾತುಗಳನ್ನೇ ಮುಖ್ಯ ವಿವರಗಳಲ್ಲಿ 'ಪಾರಸಿಕರು' ನಾಟಕಕ್ಕೆ ಸಹ ಹೇಳಬಹುದಾಗಿದೆ. ಇಲ್ಲಿಯೂ ಮೇಳಗೀತಗಳಲ್ಲಿ ವಿವಿಧ ಮಾತ್ರಾಲಯಗಳ ವಿನ್ಯಾಸ ಚೆಲ್ಲುವರಿದಿರುವುದನ್ನು ಕಾಣಬಹುದಾಗಿದೆ. ಇಡೀ ನಾಟಕ ಲಯಬದ್ಧ ಪಾದವಿನ್ಯಾಸಗಳಿಂದ, ಅವುಗಳ ಮಿಗಿಲಾದ ಗೀತಗುಣದಿಂದ, ಗೀತನಾಟಕವೆಂದೇ ಇದನ್ನು ಕರೆಯುವಂತೆ ಮಾಡಿದೆ. ಸರಳರಗಳೆಯ ಪಾದರಚನೆ ಇಲ್ಲಿ 'ಅಶ್ವತ್ಥಾಮನ್' ನಾಟಕದಲ್ಲಿರುವುದಕ್ಕಿಂತ ಹೆಚ್ಚು. ಜೊತೆಗೆ ಮೇಳಗೀತಗಳ ಲಯವೈವಿಧ್ಯವೂ ಹೆಚ್ಚು. ಗಣಸಂಯೋಜನೆ, ಪಾದ ಮತ್ತು ಪ್ರಾಸವಿನ್ಯಾಸಗಳ ವೈಚಿತ್ರ್ಯಗಳನ್ನು ಅಧಿಕವಾಗಿ ಕಾಣುವುದು ಇಲ್ಲಿಯೇ. ಮಾತ್ರಾ ದ್ವಿಪದಿ, ಚೌಪದಿಗಳ, ವಿವಿಧ ರಗಳೆಗಳ ಲಯ, ಪ್ರಾಸಾನುಪ್ರಾಸಗಳ ಸಂಯೋಜನೆಗಳ ಫಲವಾಗಿ, ಚುರುಕಿನ ಗತಿಗಮಕಗಳ ಫಲವಾಗಿ, ನಾಟಕದ ಗೀತಗುಣವನ್ನು ಹೆಚ್ಚಿಸುವಲ್ಲಿ ಸಫಲಗೊಂಡಿವೆ. ಆದರೆ ವಸ್ತುವಿನ ವಿಸ್ತಾರ ಕಥನಕ್ಕೆ 'ಅಶ್ವತ್ಥಾಮನ್'ನಲ್ಲಿ ಬರುವ ಹಾಗೆಯೇ ದೀರ್ಘ ಪಾದಗಳು ೫ x ೫ ಪ.ಗಳ ವಿನ್ಯಾಸದಲ್ಲಿ ಇಲ್ಲಿಯೂ ಬಂದಿವೆ. ಲ್ಯೂಯಿ ಕ್ಯಾಂಪ್‌ಬೆಲ್ ಮೊದಲಾದ ಇಂಗ್ಲೀಷ್ ಅನುವಾದಕರ ಮಾದರಿಗಳನ್ನು ಹೋಲುವಂತೆ ಇಲ್ಲಿಯ ಗೀತ ಮತ್ತು ಪದ್ಯಪಾದದ ಮಾದರಿಗಳಿರುವುದು ಕಾಣುತ್ತದೆ.

ಈ ಎರಡೂ ನಾಟಕಗಳ ಛಂದಸ್ಸಿನ ಪ್ರಯೋಗಗಳನ್ನು ಪರಸ್ಪರವಾಗಿ ಹೋಲಿಸಿ ಸಾದೃಶ್ಯ ವೈದೃಶ್ಯಗಳನ್ನೂ ವಿಶೇಷಾಂಶಗಳನ್ನೂ ಗುರುತಿಸುವುದು ಫಲಕಾರಿಯಾದುದು; ಇದಕ್ಕಿಂತ ಮುಖ್ಯವಾದುದು ಎಂದರೆ ಗ್ರೀಕ್ ಮತ್ತು ಇಂಗ್ಲೀಷ್ ಮೂಲಗಳೊಂದಿಗೆ ಇಲ್ಲಿಯ ರಚನೆಗಳನ್ನಿಟ್ಟು ಹೋಲಿಸುವುದು. ಪ್ರಸ್ತುತ ಪ್ರಬಂಧದಲ್ಲಿ ಅದು ಸಾಧ್ಯವಾಗಿಲ್ಲ.

–೨–

ಛಂದಸ್ಸಿನ ವಿಚಾರಗಳು

ಶ್ರೀಯವರ ಛಂದಸ್ಸಿನ ವಿಚಾರಗಳು, ಹಳೆಯ ಹಾಗೂ ಹೊಸಗನ್ನಡ ಛಂದಸ್ಸನ್ನು ಕುರಿತವು. ಗಮನಾರ್ಹವಾದವು; ಅಮೂಲ್ಯವಾದವು. ೧೯೧೨–೧೪ರಷ್ಟು ಹಿಂದೆಯೇ ಅವರು ತಮ್ಮ ಕನ್ನಡ ವಿದ್ಯಾರ್ಥಿಗಳಿಗಾಗಿ ಛಂದಸ್ಸಿನ ಟಿಪ್ಪಣಿಗಳನ್ನು(Notes on Prosody)ಬರೆದಿಟ್ಟುಕೊಂಡಿದ್ದರೆಂದೂ ಅದರಲ್ಲಿ ಕನ್ನಡ ಛಂದಸ್ಸಿನ ಗಣರಚನೆ, ಪಾದರಚನೆ, ಬಂಧಗಳು ಮುಂತಾದವುಗಳಿಗೆ ಸಂಬಂಧಿಸಿದ ಸಂಗತಿಗಳು ಸೇರಿದ್ದು ವೆಂದೂ ವಿ.ಸೀ. ಅವರು ಒಂದೆಡೆ ಬರೆದಿದ್ದಾರೆ. 'ಕನ್ನಡ ಕೈಪಿಡಿ'ಯ 'ಕನ್ನಡ ಛಂದಸ್ಸಿನ ಚರಿತ್ರೆ'ಯಲ್ಲಿ ಆ ಟಿಪ್ಪಣಿಗಳ ಮುಖ್ಯಭಾಗ ಸೇರಿಕೊಂಡಿದೆಯೆಂದೂ ಅವರು ಗ್ರಹಿಸಿದ್ದಾರೆ; ಆ ಹಿಂದಿನ ಟಿಪ್ಪಣಿಗಳಲ್ಲಿರಬಹುದಾದ ವಿಷಯಗಳ ಒಂದು ಸಾಮಾನ್ಯ ನಿರೂಪಣೆಯನ್ನೂ ಅವರು ಕೊಟ್ಟಿದ್ದಾರೆ. ಅಲ್ಲಿ ಸ್ವಾರಸ್ಯಕರವಾದ ಮೌಲಿಕ ಸಂಗತಿಗಳಿವೆ. "ಅದಷ್ಟು ಬೇಗ ಅದಿದ್ದ ಹಾಗೆಯೇ ಪ್ರಕಟಿಸುವ ಭಾಗ್ಯ ಕ್ನನಡಿಗರಿಗೆ ಒದಗಬೇಕು" ಎಂದು ಅವರು ಆಶಿಸಿರುವುದು ನಿಜವಾಗುವುದು ಎಂದೊ?[೧೫]

೧೯೧೨ರಲ್ಲಿ ಪ್ರಕಟವಾದ Rhetoric Notes ನಲ್ಲಿಯೂ (ಬಹುಶಃ), ೧೯೧೯ರಲ್ಲಿ ಪ್ರಕಟವಾದ A Hand Book of Rhetoric ನಲ್ಲಿಯೂ ಶ್ರೀಯವರು ಇಂಗ್ಲಿಷ್ ಛಂದಸ್ಸಿನ ಸಾಮಾನ್ಯ ಲಕ್ಷಣ, ಪ್ರಮುಖ ಬಂಧಗಳು ಹಾಗೂ ಇತಿಹಾಸದ ಒಂದು ಸಂಕ್ಷಿಪ್ತ ಸಮಾಲೋಚನೆಯನ್ನು ಒದಗಿಸಿದ್ದಾರೆ. ಈ ಎರಡನೆಯ ಕೃತಿಯಲ್ಲಿ Rhythm in Prose and Verse ಎಂಬ ಒಂದು ಪ್ರಕರಣ ಪ್ರತ್ಯೇಕವಾಗಿ ಸಮೀಕ್ಷೆಗೆ ಮೀಸಲಾಗಿದ್ದು, ೨೩ ಪುಟಗಳಷ್ಟು ವಿಸ್ತಾರವಾದ ಸಮಾಲೋಚನೆ ಇಲ್ಲಿ ನಡೆದಿದೆ. ಇಂಗ್ಲಿಷ್ ಸಾಹಿತ್ಯದ ಅಭ್ಯಾಸಿಗಳಿರಲಿ, ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೂ ಇದು ತುಂಬ ಉಪಯುಕ್ತ ವಾದುದು. ಇಂತಹ ಪುಸ್ತಕವೊಂದನ್ನು, ವಿದ್ಯಾರ್ಥಿಗಳ ಕೈಪಿಡಿಯಾಗಿ ರಚಿಸಿದ್ದರೂ, ರಚಿಸುವುದರಲ್ಲಿ ಶ್ರೀಯವರು ಸಾಕಷ್ಟು ವ್ಯಾಸಂಗ ನಡೆಸಿರುವುದೂ, ಚಿಂತನ ಮಂಥನಗಳ ಬಳಿಕ ವಿಷಯಗಳನ್ನು ಪ್ರ[illegible]ಷ್ಕಾರ ಮಾಡಿಕೊಂಡಿರುವುದೂ ಸುವಿದಿತ. ಅವರ 'ಇಂಗ್ಲಿಷ್ ಗೀತಗಳು' ಸಂಗ್ರಹದ ಅನುವಾದ ಕವಿತೆಗಳ ಹೊಸ ಹೊಸ ಛಂದಸ್ಸಿನ ಪ್ರಯೋಗಗಳಿಗೆ ಈ ವ್ಯಾಸಂಗ ಮತ್ತು ಕೃತಿರಚನೆಯ ಹಿನ್ನೆಲೆ ಇದ್ದಿರಲೇಬೇಕು

ಎನಿಸುತ್ತದೆ. ಶ್ರೀಯವರ ಮೊದಮೊದಲ ಅನುವಾದಗಳು 'ವಿದ್ಯಾದಾಯಿನಿ'ಯಲ್ಲಿ ಪ್ರಕಟವಾದುದೂ ೧೯೧೯ರಲ್ಲಿಯೇ ಎನ್ನುವುದನ್ನಿಲ್ಲಿ ನೆನೆಯಬಹುದು.

ಇಂಗ್ಲಿಷ್ ಛಂದಸ್ಸುಗಳ ಈ ಅಭ್ಯಾಸಬಲದಿಂದಾಗಿ, ಶ್ರೀಯವರಿಗೆ, ಸಂಸ್ಕೃತ ಕನ್ನಡ ಛಂದಸ್ಸುಗಳ ಬಗೆಗೆ ಆವರೆಗೆ ಪ್ರಚಲಿತವಿದ್ದ ಗತಾನುಗತಿಕವಾದ ಲಕ್ಷಣಲಕ್ಷ್ಯಗಳ ವಿಚಾರವಾದ ಜಡದ ದೃಷ್ಟಿಯನ್ನು ಮೀರಿ ಆಲೋಚಿಸುವುದು ಸಾಧ್ಯವಾಯಿತೆಂದು ತೋರುತ್ತದೆ. ಆದ್ದರಿಂದ ಛಂದಸ್ಸಿನ ವಿವೇಚನೆಯಲ್ಲಿ ತುಲನೆ, ವಿಮರ್ಶೆಗಳ ದೃಷ್ಟಿಯೂ ಇತಿಹಾಸದ ಹಿನ್ನೆಲೆಯ ಪರಿಶೀಲನೆಯೂ ಅವಶ್ಯವೆಂಬುದನ್ನು ಅವರು ಅರಿತರು. ಗ್ರೀಕ್, ಇಂಗ್ಲಿಷ್ ಮತ್ತು ಸೋದರ ಭಾಷೆಗಳ ಛಂದಸ್ಸುಗಳ ಸಾಮಾನ್ಯಲಕ್ಷಣಗಳ ಹಾಗೂ ಬಂಧಗಳ ಅಭ್ಯಾಸವನ್ನೂ ಶಕ್ಯವಿದ್ದ ಮಟ್ಟಿಗೆ ಅವರು ಕೈಗೊಂಡರು. ಛಂದಸ್ಸುಗಳನ್ನು ಪರಸ್ಪರವಾಗಿ ಹೋಲಿಸುವುದು ಬೆಳವಣಿಗೆಯ ದೃಷ್ಟಿಯಿಂದ ಫಲಕಾರಿಯಾದುದೆಂಬುದನ್ನು ಮನಗಂಡರು. ತಮ್ಮ ವಿಚಾರಗಳನ್ನು ಶಾಸ್ತ್ರಶುದ್ಧತೆಗೆ ಭಂಗಬಾರದಂತೆ ನಿರೂಪಿಸುವ ಹವಣಿಕೆಯನ್ನು ಬರೆಹದ ರೂಪದಲ್ಲಿ ಹೊರಗೆಡಹಲು ಅವರು ಸ್ವಲ್ಪ ಹೆಚ್ಚು ಕಾಲವನ್ನೇ ತೆಗೆದುಕೊಂಡರೆಂದು ಹೇಳಬೇಕು. ಆದರೆ ತಮ್ಮ ಕನ್ನಡ ಪ್ರೌಢವಿದ್ಯಾರ್ಥಿಗಳಿಗೆ ಪಾಠಪ್ರವಚನಗಳ ಮೂಲಕ ಹೊಸ ವಿಚಾರಧಾರೆಯ ಛಂದಸ್ಸಿನ ವಿವೇಚನೆಗಳನ್ನು ಅವರು ತಿಳಿಯಪಡಿಸುತ್ತಿದ್ದರೆಂದೇ ತೋರುತ್ತದೆ. ಒಂದು ಸೆಂಟ್ರಲ್ ಕಾಲೇಜ್ ಕರ್ನಾಟಕ ಸಂಘದ ಸದಸ್ಯರ ಪರಿಮಿತ ಗೋಷ್ಠಿಯಲ್ಲಿ, ಕನ್ನಡ ಛಂದಸ್ಸಿನ ಚರಿತ್ರೆಯನ್ನು ಅವರು ಮೂರು ಭಾಗಗಳಾಗಿ ಮಾಡಿಕೊಂಡು ಉಪನ್ಯಾಸ ಮಾಡಿ ವಿವರಿಸಿದ್ದು, ೧೯೩೩ರ ಪ್ರಬುದ್ಧ ಕರ್ನಾಟಕದ ಎರಡು ಸಂಚಿಕೆಗಳಲ್ಲಿ (೧೪-೧, ೩) ಅದರ ಸಾರಾಂಶ ಪ್ರಕಟವಾಗಿದೆ. ಈ ವಿಷಯ ಮುಂದೆ ೧೯೩೬ರಲ್ಲಿ ಆದ ದ್ವಿತೀಯ ಮುದ್ರಣದ 'ಕನ್ನಡ ಕೈಪಿಡಿ'ಯ (ಸಂ.೧-ಭಾಗ ೨) ಛಂದಸ್ಸಿನ ಭಾಗದಲ್ಲಿ, ಅದರ ೪ನೆಯ ಪ್ರಕರಣದಲ್ಲಿ, ಬಹುಶಃ ವಿಸ್ತಾರವಾಗಿಯೂ ಪರಿಷ್ಕಾರ ವಾಗಿಯೂ ಬರೆಹದ ರೂಪವನ್ನು ಪಡೆದಂತೆ ತೋರುತ್ತದೆ. ಆ ಮೊದಲಿನ ಅಲ್ಲಿಯ ಛಂದಸ್ಸಿನ ಭಾಗ ಅವರಿಗೆ ಸಾಲದು ಎನಿಸಿರಬೇಕು; ಅಲ್ಲಿಯ ವಿಧ್ಯಾತ್ಮಕ ವಿಧಾನದ ಲಕ್ಷಣಲಕ್ಷ್ಯ ವಿವರಣ ಪದ್ಧತಿ ಅಸಮರ್ಪಕವೆನಿಸಿರಲೂಬಹುದು. ವಿದ್ವಾಂಸರು ಹೇಗೆ ತಮ್ಮ ನಿರೂಪಣೆಯನ್ನು ಅಂಗೀಕರಿಸುವರೋ ಎಂಬ ಅಳುಕು ಅವರಿಗೆ ಇದ್ದುದ ರಿಂದಲೇ "ಇದರಲ್ಲಿ ಸೂಚಿಸಿರುವ ಅಂಶಗಳು ವಿಚಾರ ದೃಷ್ಟಿಯಿಂದ ಮೂಡಿರುತ್ತವೆ; ವಿದ್ವಾಂಸರು ವಿಮರ್ಶೆ ಮಾಡಿ ಸಹಾಯ ಮಾಡಬೇಕೆಂದು ಪ್ರಾರ್ಥನೆ" ಎಂದು ಅವರು ಕೋರಿದ್ದಾರೆ.

ಕನ್ನಡ ಛಂದಸ್ಸಿನ ಅಭ್ಯಾಸದಲ್ಲಿ, ಲಕ್ಷಣವಿಮರ್ಶೆಯನ್ನು ಕವಿಕಾರ್ಯದ ಹಿನ್ನೆಲೆ ಯಲ್ಲಿ ಸ್ವತಂತ್ರವಾಗಿ ಕೈಕೊಳ್ಳುವ, ಲಕ್ಷ್ಯಗಳನ್ನು ಲಕ್ಷಣಪರ್ಯಾಯಗಳು, ಸ್ಥಿತ್ಯಂತರಗಳು,

ತುಲನಾತ್ಮಕ ಪರಿಶೀಲನೆ, ಇತಿಹಾಸ ಇತ್ಯಾದಿಗಳ ದೃಷ್ಟಿಯಿಂದ ವಿವೇಚಿಸುವ ಹೊಸ ದೃಷ್ಟಿಯನ್ನು ಮೊದಲು ನಾವು ಗುರುತಿಸುವುದು ಪ್ರಾಯಃ ಶ್ರೀಯವರ ಈ ಬರಹದಲ್ಲಿಯೇ. ಈ ಬರೆಹದ ಬಗೆಗೆ ಅತ್ಯುಕ್ತಿ ಎನ್ನಬಹುದಾದ ಕೆಲವು ಮಾತುಗಳನ್ನು ಕೆಲವರು ವಿದ್ವಾಂಸರು ಆಡಿರುವಂತೆಯೇ, ಕೃಪಣ ಎನ್ನಬಹುದಾದ ಧೋರಣೆಯ ಮಾತುಗಳನ್ನೂ ಕೆಲವರು ಆಡಿದ್ದಾರೆ. ಈ ನಿಲುವುಗಳೆರಡರ ನಡುವೆ ಇದಕ್ಕೆ ಸಲ್ಲಬೇಕಾದ ಬೇರೆಯೇ ನ್ಯಾಯವಾದ ಸ್ಥಾನವಿದೆ. ಜೊತೆಗೆ ಈ ಕಾಲದ ಇತರ ವಿದ್ವಾಂಸರಿಗೂ ಕೀರ್ತಿಯ ಸ್ವಲ್ಪ ಪಾಲು ಸಲ್ಲಬೇಕಾದ್ದನ್ನೂ ಸರಿಯಾಗಿ ಗುರುತಿಸಬೇಕಾಗಿದೆ.

ಈ ನಮ್ಮ ಪ್ರಬಂಧದಲ್ಲಿ ಶ್ರೀಯವರ 'ಕನ್ನಡ ಛಂದಸ್ಸಿನ ಚರಿತ್ರೆ'ಯ ಎಲ್ಲ ಮುಖ್ಯಾಂಶಗಳನ್ನೂ ನಿಲವು ನಿರ್ಣಯಗಳನ್ನೂ ಕೊಡುಗೆ ಪ್ರಭಾವಗಳನ್ನೂ ನಿರೂಪಿಸುವುದು ಕಷ್ಟಸಾಧ್ಯವಾದದ್ದು. ಆದರೆ ಹೇಳತಕ್ಕದ್ದೇನೋ ಬೇಕಾದ ಹಾಗೆ ಇದೆ. ಈ ಪ್ರಕರಣ ಏನು ಸಾಧಿಸಿತು?

೧) ಕನ್ನಡ ಭಾಷೆಯ ಕವಿಗಳಿಗೆ, ಅಭ್ಯಾಸಿಗಳಿಗೆ ವೈದಿಕಛಂದಸ್ಸುಗಳ ಪರಿಚಯವನ್ನೂ ಮಹತ್ವವನ್ನೂ ಮೊದಲ ಸಲ ಮಾಡಿಕೊಟ್ಟಿದೆ.

೨) ಶ್ಲೋಕ ಛಂದಸ್ಸಿನ ವಿಷಯದಲ್ಲಿ ಕನ್ನಡ ಕವಿಗಳ ನೀತಿ ನಿಲುವುಗಳೇನು ಎನ್ನುವುದನ್ನು ಕುರಿತು ಚಿಂತಿಸುವಂತೆ ಮಾಡಿದೆ.

೩) ವೈದಿಕ ಛಂದಸ್ಸುಗಳ ಲಕ್ಷಣವಿಮರ್ಶೆಯಲ್ಲಿ ಉತ್ತರಾರ್ಧದ ದ್ವಿಲಗ ವಿನ್ಯಾಸವನ್ನು ಗುರುತಿಸಿದ್ದು ಕನ್ನಡದ ಮಟ್ಟಿಗೆ ಪ್ರಾಯಃ ಹೊಸತು.

೪) ಚಂಪಕ, ಮತ್ತೇಭ, ಮಹಾಸ್ರಗ್ಧರೆಗಳ ರಚನೆಯ ಸಾಧ್ಯತೆಯನ್ನು ಸದೃಶ ಸಂಸ್ಕೃತ ವರ್ಣವೃತ್ತಗಳೊಂದಿಗೆ ಹೋಲಿಸಿ ಸೂಚಿಸಿದ್ದು ಪ್ರಾಯಃ ಹೊಸತು.

೫) ಸಂಸ್ಕೃತ ವರ್ಣವೃತ್ತಗಳನ್ನು ಕನ್ನಡ ಭಾಷೆಗೆ ಸ್ವೀಕರಿಸಿದಾಗ ಮಾಡಿಕೊಂಡ ಮಾರ್ಪಾಡುಗಳನ್ನೂ ಅವುಗಳ ಫಲ ಪರಿಣಾಮಗಳನ್ನೂ ನಿರೂಪಿಸಿತು.

೬) ಅಕ್ಷರವೃತ್ತಗಳು ಮಾತ್ರಾವೃತ್ತಗಳಾಗಿ ಪರಿಣಮಿಸಿತೆಂದು ಲಕ್ಷ್ಯಗಳ ಮೂಲಕ ಸಮರ್ಥಿಸಿತು.

೭) ಕಂದದ ಮೂಲ, ಚಂಪುವಿನಲ್ಲಿ ಅದರ ವ್ಯಾಪ್ತಿ, ಬಳಕೆಯ ರೀತಿನೀತಿಗಳು ಮತ್ತು ಗುಣದೋಷಗಳು ಇವನ್ನು ವಿಮರ್ಶೆಯ ದೃಷ್ಟಿಯಿಂದ ಪರಿಶೀಲಿಸುವ ದೃಕ್ಪಥವನ್ನು ಹಾಕಿತು.

೮) ವೃತ್ತ ಕಂದಗಳ ಪ್ರಯೋಗಗಳ ಮೇಲೆ ಭಾಷಾ ವ್ಯತ್ಯಾಸದ ಪರಿಣಾಮವನ್ನು ಚರ್ಚಿಸಿತು.

೯) ಅಚ್ಚಕನ್ನಡ ಛಂದಸ್ಸುಗಳ ಹೆಚ್ಚುಗಾರಿಕೆ, ದ್ರಾವಿಡ ಛಂದಸ್ಸುಗಳ ಹಿನ್ನೆಲೆಯಲ್ಲಿ ಅವುಗಳನ್ನು ಅಭ್ಯಾಸಮಾಡುವ ಅವಶ್ಯಕತೆ ಇವನ್ನು ಪ್ರತಿಪಾದಿಸಿತು.

೧೦) ದ್ರಾವಿಡ ಅಂಶಗಣಗಳ ಹಿನ್ನಲೆಯಲ್ಲಿ ಕನ್ನಡ ಅಂಶಗಣಗಳ ಲಕ್ಷಣಗಳನ್ನು ಪರಿಷ್ಕಾರವಾಗಿ ನಿರೂಪಿಸಿತು. (ಅಂಶ, ಅಂಶಗಣ ಎಂಬ ಮಾತುಗಳು ಕನ್ನಡ ಛಂದಸ್ಸಿಗೆ ಶ್ರೀಯವರ ಕೊಡುಗೆಗಳು).

೧೧) ಅಂಶಗಣಗಳು ಕಾಲಕ್ರಮದಲ್ಲಿ ಮಾತ್ರಾಗಣಳಾದುವು ಎಂಬುದನ್ನು ಗುರುತಿಸಲು ಸೂಚಿಸಿತು.

೧೨) ತ್ರಿಪದಿ, ಅಕ್ಕರ ಮೊದಲಾದ ಕನ್ನಡ ಮಟ್ಟುಗಳ, ರಗಳೆ ಷಟ್ಪದಿಗಳ, ಯಕ್ಷಗಾನದ ದ್ವಿಪದಿ ಸೀಸಪದ್ಯ ಮೊದಲಾದವುಗಳ ಲಕ್ಷಣ ಮತ್ತು ಚರಿತ್ರೆಯನ್ನು ಮೊದಲ ಸಲ ಸವಿಮರ್ಶವಾಗಿ ನಿರೂಪಿಸಿತು.

೧೩) ತಮಿಳು ಛಂದಸ್ಸಿನ ಸಾಮಾನ್ಯಲಕ್ಷಣ ಹಾಗೂ ಕೆಲವು ಬಂಧಗಳ ಸ್ವರೂಪ ಪರಿಚಯವನ್ನು, ತಿಳಿಸುವ ಮೂಲಕ ಛಂದಸ್ಸಿನ ತೌಲನಿಕ ವಿವೇಚನೆಯ ಅವಶ್ಯಕತೆಯನ್ನು ಸಾರಿತು.

ನಮ್ಮ ಕಾಲದಲ್ಲಿ ಛಂದಸ್ಸಿನ ವಿವೇಚನೆ ಕೊಂಚ ಮಟ್ಟಿಗೆ ಮುಂದುವರಿದಿರುವುದರಿಂದ ಈಗ ಶ್ರೀಯವರ 'ಕನ್ನಡ ಛಂದಸ್ಸಿನ ಚರಿತ್ರೆ' ನಮಗೆ ಸಾಧಾರಣವಾಗಿ ತೋರುವುದು ಸಹಜವೇ. ಆದರೆ ಅದು ಪ್ರಕಟವಾದ ಕಾಲಕ್ಕೆ ಅದು ಹೊಸದು. ಆ ಕಾಲದ ಪಂಡಿತರ ಹೊಸ ಛಂದೋಗ್ರಂಥಗಳನ್ನು ಪರಿಶೀಲಿಸಿದರೆ ಇದು ತಿಳಿಯುತ್ತದೆ. ಶ್ರೀಯವರು ಅಚ್ಚಕನ್ನಡ ಮಟ್ಟುಗಳ ಲಕ್ಷಣ ಮತ್ತು ಚರಿತ್ರೆಯನ್ನು ನಿರೂಪಿಸಿರುವ ಭಾಗದಿಂದ ಈಚಿನ ಕಾಲದ ಛಂದಸ್ಸಿನ ಅಭ್ಯಾಸಿಗಳು ಪ್ರಯೋಜನ ಮಾರ್ಗದರ್ಶನಗಳನ್ನು ಪಡೆದಿದ್ದಾರೆಂದು ಸಮರ್ಥಿಸಲು ಸಾಕ್ಷ್ಯಗಳನ್ನು ಒದಗಿಸಬಹುದು. ಈಗಿನ ಶೋಧನೆಗಳಿಂದ, ಶ್ರೀಯವರ ಛಂದಸ್ಸಿನ ವಿಚಾರಗಳಲ್ಲಿ ಕೆಲವೆಡೆ ಅಸಮರ್ಪಕತೆಯೂ ದೋಷವೂ ಕಂಡುಬಂದಿದ್ದರೆ ಅದು ಸಹಜವೇ. ಪದವಿ ವಿದ್ಯಾರ್ಥಿಗಳಿಗಾಗಿ ಬರೆದ ಈ ಬರೆಹ ಅಸಮಗ್ರವೆಂಬುದು ವಿದಿತವೇ ಇದೆ. ಏಳೆ, ತ್ರಿಪದಿ, ರಗಳೆ, ಷಟ್ಪದಿ ಮೊದಲಾದ ಬಂಧಗಳ ಲಕ್ಷಣ ವಿಮರ್ಶೆಯಲ್ಲಿ ಶ್ರೀಯವರು ಹಿಡಿದಿರುವ ಹಾದಿ, ಮಾಡಿರುವ ಹಾದಿ ವಿಮರ್ಶೆ ತೃಪ್ತಿಕರವಾಗಿಲ್ಲವೆಂಬುದು ನಮಗೆಲ್ಲ ತಿಳಿದಿರುವ ವಿಷಯವೇ. ಈಗ ಈ ಬರೆಪಕ್ಕಿರುವ ಬೆಲೆ ಐತಿಹಾಸಿಕ ಪ್ರಾಮುಖ್ಯದ್ದು. ಅವರ ಕಾಲಕ್ಕಿದ್ದ 'ಛಂದೋಂಬುಧಿ' ಮೊದಲಾದ ಛಂದೋಗ್ರಂಥಗಳ ಶುದ್ಧಪಾಠದ ತೊಡಕು, ಇನ್ನೂ ಪರಿಹಾರವಾಗಿದೆಯೆಂದು ನನಗೆ ಭರವಸೆಯಿಲ್ಲ. ಇನ್ನು ಶ್ರೀಯವರು ಹೊಸಗನ್ನಡ ಛಂದಸ್ಸಿನ ವಿಷಯದಲ್ಲಿ ಒಂದೆರಡು ಸಾರಸಂಗ್ರಹ ರೂಪವಾದ

ವಾಕ್ಯಗಳನ್ನಾಡಿ ಮುಗಿಸಿದ್ದಾರೆ. ವಿವರ ವಿಮರ್ಶೆಗೆ ಹೋಗಿಲ್ಲ; ಆ ವೇಳೆಗೆ ಒಂದು ಪ್ರಸ್ಥಾನವಾಗಿ ಅದು ನೆಲೆಗೊಂಡಿರಲಿಲ್ಲ ಎಂಬುದೇ ಇದಕ್ಕೆ ಕಾರಣ.

ಶ್ರೀಯವರು ತಾವು ಇತರರ ಪದ್ಯ ಸಂಕಲನಗಳಿಗೆ (ಉದಾ. 'ಗರತಿಯ ಹಾಡು', 'ಗೀತಗಳು' ಇ.) ಬರೆದ ಮುನ್ನುಡಿಗಳಲ್ಲಿಯೂ 'ಕನ್ನಡದ ಪುನರುಜ್ಜೀವನ', 'ಜನಪದ ಸಾಹಿತ್ಯ' ಮೊದಲಾದ ಗದ್ಯ ಲೇಖನಗಳಲ್ಲಿಯೂ ಕನ್ನಡ ಛಂದಸ್ಸಿನ ಧಾಟಿ ಲಕ್ಷಣಗಳ ಬಗೆಗೆ ಅಲ್ಲೊಂದು ಇಲ್ಲೊಂದು ಮಾತು ಹೇಳಿದ್ದಾರೆ. ಅವಾದರೂ ಶಾಸ್ತ್ರಜಡವಾದುವಲ್ಲ, ಭಾವಸಂವೇದನೆಯುಳ್ಳವು. ಛಂದಸ್ಸಿನ ವಿಚಾರ ವಿಮರ್ಶೆಗಳಲ್ಲೆಲ್ಲಾ ಅವರ ಆದರ್ಶ, ಭಾವಪ್ರಕಾಶಕವಾದ ಶಾಸ್ತ್ರನಿಷ್ಠೆಯನ್ನು ಪಾಲಿಸಬೇಕೆಂಬುದೇ ಆಗಿದೆ.[೧೬]

ಅಡಿಟಿಪ್ಪಣಿಗಳು

೧. ದ.ರಾ. ಬೇಂದ್ರೆ, ಇಂಗ್ಲಿಷ್ ಗೀತಗಳು, 'ಸಂಭಾವನೆ', ಬೆಂಗಳೂರು. ೧೯೪೧, ಪು. ೬೪

೨. ಮುನ್ನುಡಿ, 'ಕಿರಿಯ ಕಾಣಿಕೆ', ೧೯೨೮, ಪು.೨

೩. ಪ್ರಸ್ತಾವನೆ, 'ಇಂಗ್ಲಿಷ್ ಗೀತಗಳು', ೧೯೬೬ (೪), ಪು. ೨೯

೪. ಇಂದಿನ ಕನ್ನಡ ಕವಿತೆ, 'ಪೀಠಿಕೆಗಳು ಲೇಖನಗಳು', ಮೈಸೂರು ೧೯೭೩, ಪು. ೬೬೯

೫. ಶ್ರೀಯವರ ಜೀವನ ಪರಿಚಯ, 'ನಂದಾ ನೆನಪು', ಮೈಸೂರು ೧೯೭೩, ಪು. ೧೩೧.

೬. 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ', ಬೆಂಗಳೂರು ೧೯೭೬(೨) ಪು. ೯೫.

೭. ಶ್ರೀಯವರು ರೂಪಿಸಿದ ಛಂದಸ್ಸು 'ಬಿ.ಎಂ.ಶ್ರೀ. ಅವರ ಬದುಕು–ಬರಹ', ಬೆಂಗಳೂರು, ಪು. ೮೦

೮. 'ಹೊಸಗನ್ನಡ ಕವಿತೆಯ ಛಂದಸ್ಸು : ಒಂದು ಅಧ್ಯಯನ' (ಅಪ್ರಕಟಿತ ಪಿಎಚ್.ಡಿ. ನಿಬಂಧ), ೧೯೮೧, ಪು೧೦೬೫; ಪು. ೧೦೭೨ (ಇದು ಪ್ರಕಟವಾಗಿದೆ.)

೯. ನೋಡಿ : ಹದಿನೆಂಟನೆಯ ಕರ್ನಾಟಕ ಸಾಹಿತ್ಯ ಸಮ್ಮೇಳನ. ಕ.ಸಾ.ಪ., ೧೭–೪, ಜನವರಿ, ೧೯೩೩, ಪು.೨೫೫; ಕವಿತೆಯೂ ಪಾಂಡಿತ್ಯವೂ, ಅದೇ, ಪು.೩೨೧–೩೪

೧೦. "ಇದು ಅವರ First attempt...ಆ ಪುಸ್ತಕದಲ್ಲೆಲ್ಲಾ ಇದೊಂದೇ' Orthodox metreನಲ್ಲಿ (ಇಲ್ಲಿ ಕುಸುಮ ಷಟ್ಪದಿ) ಬರೆದಿರುವುದು" ಎಂಬುದಾಗಿ ತೀ.ನಂ.ಶ್ರೀ ಹೇಳಿರುವುದನ್ನು ಗಮನಿಸಿದರೆ, ಶ್ರೀಯವರೂ ತಮ್ಮ ಕಾಲದ ಇತರರಂತೆಯೇ ಹೊಸಹಾದಿಯಲ್ಲಿ ನುಗ್ಗಲು ಇನ್ನೂ ಮನಸ್ಸು ಗಟ್ಟಿ ಮಾಡಿರಲಿಲ್ಲವೇನೋ ಎಂಬ ಶಂಕೆಯುಂಟಾಗುತ್ತದೆ (ಪ್ರಸ್ತಾವನೆ ಇಂ.ಗೀ. ೧೯೬೬, ಪು. ೧೫).

೧೧. ಶ್ರೀಯವರ ತೀರ ಮೊದಲಿನ ಕವಿತೆಯೆಂದು ಈಗ ಗುರುತಿಸಿರುವ, 'ಭರತಮಾತೆಯ ವಾಕ್ಯ'ದಲ್ಲಿ ಆದಿಪ್ರಾಸನಿಷ್ಠೆ ಸ್ಫುಟವಾಗಿ ತೋರಿದೆ. ಎರಡು ನುಡಿಗಳಲ್ಲಿ ಮಾತ್ರ ಅದರ ಉಲ್ಲಂಘನೆ ಇದೆ.

೧೨–೧೪ ಪ್ರಗಾಥ, 'ಉಪಾಯನ', ಬೆಂಗಳೂರು, ೧೯೬೭, ಪು.೫–೧೩; ಅಲ್ಲದೆ ನೋಡಿ – 'ಕನ್ನಡ ಛಂಧ:ಸ್ವರೂಪ', ೧೯೭೮, ಪು. ೬೭೦–೭೩

೧೫. ಬಿ.ಎಂ.ಶ್ರೀಕಂಠಯ್ಯನವರು : ಪರಿಚಯ - ಕಾಣಿಕೆ, 'ಶ್ರೀ ಸಾಹಿತ್ಯ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೩, ಪು. ೬-೮

೧೬. ಶ್ರೀಯವರ ಛಂದಸ್ಸಿನ ಪ್ರಯೋಗಗಳು ಹಾಗೂ ವಿಚಾರಗಳನ್ನು ಕುರಿತಿರುವ ಕೆಲವು ಮೂಲಗಳು:

(೧) ದ.ರಾ. ಬೇಂದ್ರೆ, ಇಂಗ್ಲಿಷ್ ಗೀತಗಳು, 'ಸಂಭಾವನೆ', ೧೯೪೧, ಪು. ೭೦-೭೧

(೨) ವಿ. ಸೀತಾರಾಮಯ್ಯ, 'ಸಾಹಿತ್ಯಾಲೋಕನ', ೧೯೭೯, ಪು. ೧೨೬, ೧೩೬

(೩) ಸಂ: ವಿ.ಎಂ. ಇನಾಂದಾರ್, 'ವಿ.ಸೀ-೭೫; ಬೆಂಗಳೂರು ೧೯೭೫, ಪು. ೨೮೦-೮೧

(೪) ಟಿ.ವಿ. ವೆಂಕಟಾಚಲಶಾಸ್ತ್ರೀ 'ಕನ್ನಡ ಛಂದಃಸ್ವರೂಪ', ಮೈಸೂರು, ೧೯೭೮, ಪು.೫೮೮-೬೭೫

(೫) ಎಸ್. ಅನಂತನಾರಾಯಣ, 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ', ಬೆಂಗಳೂರು, ೧೯೭೬(೨), ಪು.೨೧-೧೨೧

(೬) ಹಾ.ಮಾ. ನಾಯಕ, ಸಿ.ಪಿ. ಕೃಷ್ಣಕುಮಾರ್ (ಸಂ.), 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ', ಸಂಪುಟ:೨, ಮೈಸೂರು ೧೯೮೦, ಪು. ೩೩೦-೪೭೪; ೫೨೨-೫೬೬

(೭) ಕೆ.ಶಿವರಾಮ ಐತಾಳ, ಶ್ರೀಯವರು ರೂಪಿಸಿದ ಛಂದಸ್ಸು, 'ಬಿ.ಎಂ.ಶ್ರೀ. ಅವರ ಬದುಕು-ಬರಹ, - ಬೆಂಗಳೂರು, ಪು.೭೭-೧೦೨.

❐

೭. ಗದಾಯುದ್ಧ ನಾಟಕಂ

■ *ಡಾ. ಬಿ.ಬಿ. ಹೆಂಡಿ*

ನನ್ನ ಲೇಖನದ ವಿಷಯ ಶ್ರೀಯವರ 'ಗದಾಯುದ್ಧ ನಾಟಕಂ'. ಆದುದರಿಂದ ನನ್ನ ವಿವೇಚನೆಯು ಗದಾಯುದ್ಧ ಕಾವ್ಯವು ನಾಟಕವಾಗಿ ಅವತರಿಸುವಲ್ಲಿ ಶ್ರೀ ಅವರು ಯಾವ ಕೌಶಲ, ಔಚಿತ್ಯಜ್ಞಾನ, ರಸಪ್ರಜ್ಞೆಯನ್ನು ಅಡಕಗೊಳಿಸಿದ್ದಾರೆ. ಅವರ ಈ ಸಾಧನೆಯ ಇತಿಮಿತಿಗಳೇನು, ಒಟ್ಟಿನಲ್ಲಿ ಈ ನಾಟಕ ನೀಡುವ ರಸರುಚಿಯ ಸ್ವರೂಪವೆಂತಹುದು ಎಂಬಂತಹ ಪ್ರಮುಖವಾಗಿ ನಾಟಕಕ್ಕೆ ಮಾತ್ರ ಅನ್ವಯಿಸುವ – ವಿಚಾರಗಳಿಗೆ ಸೀಮಿತವಾಗಿರುವದು ಅನಿವಾರ್ಯ. ಅದಕ್ಕೆ ಮಿಕ್ಕಿ ರನ್ನನ ರಸಘಟ್ಟಿಯ ಗುಣವಿಮರ್ಶೆಯಾಗಲಿ, ಆತನು ಋಣಿಯಾಗಿರುವ ಪಂಪನಲ್ಲಿಯ ಅಥವಾ ಮೂಲ ವ್ಯಾಸಭಾರತದಲ್ಲಿಯ ಆ ವೃತ್ತಾಂತದೊಡನೆ ಕಾಲ್ಪನಿಕ ವಿವೇಚನೆಗಾಗಲಿ ನಾನು ಕೈಯಿಕ್ಕಲು ಆಸ್ಪದವಿರದು. ಅನುಷಂಗಿಕವಾಗಿ ಅಲ್ಲಲ್ಲಿ ಒಂದೆರಡು ಅಂತಹ ಮಾತು ಬಂದೀತು ಅಷ್ಟೇ.

'ಗದಾಯುದ್ಧ ನಾಟಕಂ' ರೂಪಗೊಂಡು ಮೊದಲ ಸಲ ರಂಗಭೂಮಿಗೇರಿದುದು ೧೯೨೫ರಲ್ಲಿ, ಪ್ರಕಟವಾದುದು ೧೯೩೦ರಲ್ಲಿ ಈ ಮಧ್ಯ ೧೯೨೮ರಲ್ಲಿ ರನ್ನ ಕವಿಯ ಪ್ರಶಸ್ತಿ ಹೊರಬಂದಿತ್ತು. ರನ್ನಕವಿಯ ಕವಿತ್ವಶಕ್ತಿಯ ಬಗೆಗೆ ಅದರಲ್ಲೂ ಆತನ ಗದಾಯುದ್ಧ ಕಾವ್ಯದ ಬಗೆಗೆ ಹಿಂದಿನಿಂದಲೂ ಸಾರಸ್ವತ ಲೋಕದಲ್ಲಿ ಬಹುದೊಡ್ಡ ಮೆಚ್ಚುಗೆ ಗೌರವಗಳಿದ್ದುವಾದರೂ 'ಗದಾಯುದ್ಧ ನಾಟಕಂ' ಅವತರಿಸಿ ಪ್ರಯೋಗವಾದ ನಂತರ ಕವಿ ಮತ್ತು ಕಾವ್ಯದ ಬಗೆಗೆ ವಿಮರ್ಶೆ ಪ್ರಶಂಸೆಗಳಿಗೆ ಪರ್ವಕಾಲವೇ ಒದಗಿ ಬಂದಿತು. ೧೯೨೫ರಿಂದ ಮುಂದೆ ಒಂದೆರಡು ವರುಷ ಮೈಸೂರು ವಿಶ್ವವಿದ್ಯಾನಿಲಯ ರನ್ನನ ಅಧ್ಯಯನ ಕೇಂದ್ರವೇ ಆಯಿತೆನ್ನುವಷ್ಟು ಆ ಕವಿಯ ಪ್ರಭಾವ ಅಲ್ಲಿನ ವಾತಾವರಣವನ್ನೆಲ್ಲ

ವ್ಯಾಪಿಸಿದ್ದಿತು. ಆ ಅವಧಿಯಲ್ಲಿ ಪ್ರಕಟಗೊಂಡ ರನ್ನ ವಿಮರ್ಶೆಯ ಪ್ರಭಾವ ಎಷ್ಟಾಗಿದೆಯೆಂದರೆ ಇಂದಿನವರೆಗೂ ನಾವು, ಆಗ ವ್ಯಕ್ತವಾದ ಅಭಿಪ್ರಾಯ, ಪ್ರಶಂಸೆ, ನಿರ್ಣಯಗಳನ್ನು ಪುನರ್ವಿಮರ್ಶಿಸಲು ಮನಸ್ಸು ಮಾಡಿಲ್ಲ. ಗದಾಯುದ್ಧದ ನಾಯಕನಾರು, ಪ್ರಧಾನರಸವಾವುದು, ರನ್ನನ ಸ್ವೋಪಜ್ಞತೆ ಯಾವ ಮಟ್ಟದ್ದು ಎಂಬಿತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕಳೆದ ಅರ್ಧ ಶತಮಾನದಿಂದಲೂ ೧೯೨೫-೩೦ರ ಅವಧಿಯಲ್ಲಿ ವ್ಯಕ್ತವಾದ ಪ್ರಮುಖ ಅಭಿಪ್ರಾಯ ನಿರ್ಣಯಗಳಿಗೇ ಬಹುಮಟ್ಟಿಗೆ ರುಜು ಹಾಕುವದನ್ನು ನಾವು ರೂಢಿಸಿಕೊಂಡಿದ್ದೇವೆ. 'ಗದಾಯುದ್ಧ ನಾಟಕಂ' ಹೀಗೆ ರನ್ನ ವಿಮರ್ಶೆ ಅಧ್ಯಯನಗಳಿಗೆ ಮಹಾದ್ವಾರವನ್ನು ತೆರೆದ ಮತ್ತು ಬುನಾದಿ ರೂಪದ ಅಭಿಪ್ರಾಯ, ನಿರ್ಣಯ, ಚರ್ಚೆಗಳನ್ನು ನೀಡುವದಕ್ಕೆ ಪ್ರೇರಣೆಯಿತ್ತು ಚಾರಿತ್ರಿಕ ಮಹತ್ವವನ್ನು ಪಡೆದಿರುವದು ಅದರ ಮೊದಲ ವೈಶಿಷ್ಟ್ಯ.

ರನ್ನನನ್ನು ಕುರಿತು ಹೀಗೆ ವಿಪುಲವಾದ ಅಧ್ಯಯನಕ್ಕೆ ದಾರಿ ತೆಗೆದ ಕಾರಣಕ್ಕಾಗಿ ಸ್ವಾಭಾವಿಕವಾಗಿಯೆ ಆ ಕಾಲಕ್ಕೆ 'ಗದಾಯುದ್ಧ ನಾಟಕಂ'ಕ್ಕೆ ಬಹುದೊಡ್ಡ ಪ್ರಾಶಸ್ತ್ಯ ದೊರಕಿತು. ಶ್ರೀ ಅವರು ಇಡಿಯಾಗಿ ಕನ್ನಡ ಸಾಹಿತ್ಯಾಧ್ಯಯನ ಹಾಗೂ ಹೊಸ ಸೃಷ್ಟಿಗೆ ಸಂಬಂಧಿಸಿದಂತೆ ಆಗಲೇ ಪ್ರಭಾವಶಾಲಿಗಳಾಗಿದ್ದುದೂ, ಅವರ ಶಿಷ್ಯರೇ ಅನೇಕರು ರನ್ನನ ಅಧ್ಯಯನಕ್ಕೆ ತೊಡಗಿದ್ದುದೂ ಈ ನಾಟಕಕ್ಕೆ ವಿಪುಲವಾದ ಗೌರವ, ಪ್ರಶಂಸೆಗಳನ್ನು ತಂದುಕೊಟ್ಟವು. ಕೆಲವರು ಈ ನಾಟಕ ರಚನೆಯಲ್ಲಿ ಶ್ರೀಯವರ 'ಪ್ರತಿಭೆ'ಯನ್ನು ಗುರುತಿಸುವಷ್ಟು ಉದಾರಮತಿಗಳಾದರು. ಉತ್ಸಾಹ ಉತ್ಸವವೇ ನಿತ್ಯ ಮಂತ್ರವಾಗಿದ್ದ ಆ ಕಾಲದಲ್ಲಿ ಇದೆಲ್ಲ ಸ್ವಾಭಾವಿಕವೆ. ಆ ಮಹಾಪೂರ ಇಳಿದು ಸಾಹಿತ್ಯಾಸ್ವಾದನೆ ತನ್ನ ವಾಸ್ತವಿಕ ಪಾತಳಿಯಲ್ಲಿ ಹಲಕೆಲವು ದೃಷ್ಟಿಯಲ್ಲಾದರೂ ಹರಿಯುತ್ತಿರುವ ಇಂದು ನಮಗೆ 'ಗದಾಯುದ್ಧ ನಾಟಕಂ' ಆಗ ಭಾವಿಸಿದಷ್ಟೇ ಪ್ರಮುಖ ಕೃತಿಯಾಗಿ ಕಾಣುತ್ತಿದೆಯೆ ಎಂಬುದನ್ನು ವಿಚಾರಿಸುವದು ಸನ್ನಿಹಿತವಾಗಿದೆ.

ಶ್ರೀಯವರ ಈ ನಾಟಕ ಸ್ವಂತಂತ್ರ ಕೃತಿಯಲ್ಲ; ಅನು-ಕೃತಿ ವಸ್ತು, ಪಾತ್ರ, ಸನ್ನಿವೇಶ, ಭಾವಸಂಪತ್ತು, ನಾಟಕೀಯ ಧರ್ಮ, ಭಾಷೆಯ ಚುರುಕು, ತೀಕ್ಷ್ಣತೆ - ಈ ಎಲ್ಲ ಅಂಶಗಳಲ್ಲಿ ಮೊದಲೇ ಪೂರ್ಣಾಕಾರದಲ್ಲಿ ರಚನೆಗೊಂಡಿದ್ದ ಗದಾಯುದ್ಧದ ಅಳವಡಿಕೆ. (ಅಳವಡಿಕೆ ಎಂಬ ಮಾತನ್ನು ನಾನಿಲ್ಲಿ ನಿಕೃಷ್ಟಾರ್ಥದಲ್ಲಿ ಬಳಸುತ್ತಿಲ್ಲ. ಶ್ರೀಯವರ ಸಂವಿಧಾನ ಜಾಣ್ಮೆಯನ್ನು ಮನಗಂಡು ಇದನ್ನು ಅಳವಡಿಕೆ ಎನ್ನುತ್ತಿದ್ದೇನೆ.) ಸ್ವತಃ ರನ್ನನ ಕಾವ್ಯವೂ ಪಂಪಭಾರತದ ಆ ಕಥಾಭಾಗದ ಅನುಸೃಷ್ಟಿ, ಪಂಪನ ಕಥಾನಕ ವ್ಯಾಸರ ಭಾರತ ಕೃತಿಗೆ ಋಣಿ. ಹೀಗೆ ಪ್ರಕೃತ ನಾಟಕದ ವಸ್ತು ಪಾತ್ರಾದಿಗಳಲ್ಲಿಯ ಸತ್ವವು ಪೂರ್ವಸಿದ್ಧವಾದವು. ಒಂದು ಬೆಳಕಿನ ಸೊಡರಿಂದ ಅನೇಕ ಸೊಡರುಗಳನ್ನು

ಹೊತ್ತಿಸಿಕೊಂಡಂತೆ ಈ ಕಥಾನಕಗಳ ಅವತಾರ. ರನ್ನನೇ ಬೇರೊಂದು ಸಂದರ್ಭದಲ್ಲಿ ಹೇಳುವ ಈ ಕೆಳಗಿನ ಮಾತುಗಳನ್ನು ಅವನ ಕೃತಿಗೂ, ಅಲ್ಪವ್ಯತ್ಯಾಸದಿಂದ, ಗದಾಯುದ್ಧ ನಾಟಕಕ್ಕೂ ಅನ್ವಯಿಸಿಕೊಳ್ಳಬಹುದಾಗಿದೆ.

ಬೆಳಗುವ ಸೊಡರೊಳ್ ಸೊಡರಂ
ಬೆಳಗಿ ಪಲರ್ಕೊಂಡು ಪೋಡೆಯುಂ ಕುಂದದೆ ಪ್ರ
ಜ್ವಳಿಸುವವೊಲ್ ಜಗಮೆಲ್ಲಂ
ಕೊಳಲುಂ ತವದಿತ್ತು ಮೆರೆವ (ಭಾರತ ಕಥೆ ತಾಂ)

ವ್ಯಾಸರ ಮಹಾಬೆಳಕಿನ ಸೊಡರಿನಿಂದ ಹೊತ್ತಿಸಿಕೊಂಡ ಪಂಪ, ರನ್ನರ ಸೊಡರುಗಳಲ್ಲಿ ಅವರ ವ್ಯಕ್ತಿ ವಿಶಿಷ್ಟವಾದ ಪ್ರತಿಭೆಗೆ ಆಸ್ಪದ ದೊರೆತಿದೆ. ಆದರೆ ಗದಾಯುದ್ಧ ನಾಟಕಕ್ಕೆ ಆ ಆಸ್ಪದ ದೊರೆತಿಲ್ಲ. ಅನಿವಾರ್ಯ ಕಾರಣಕ್ಕಾಗಿ ಅದು ಪರಪ್ರಕಾಶವನ್ನು ಸಮರ್ಥವಾಗಿ ಪ್ರತಿಫಲಿಸುಲ್ಲಿ ವಿಶ್ರಾಂತವಾಗಬೇಕಾಗಿದೆ.

ಈ ನಾಟಕವನ್ನು ರಚಿಸುವಾಗ ಶ್ರೀಯವರು ಮೂಲತಃ ಇಟ್ಟುಕೊಂಡ ಉದ್ದೇಶವೇ ಅವರ ಸೃಜನ ಶಕ್ತಿಯ ಅವಿರ್ಭಾವಕ್ಕೆ ತೀವ್ರವಾದ ಮಿತಿಯನ್ನು ಹಾಕಿದೆಯೆಂಬುದನ್ನು ಮರೆಯುವಂತಿಲ್ಲ. ಈ ನಾಟಕ ರಚನೆಗಿಳಿದಾಗ ಶ್ರೀಯವರಲ್ಲಿ ಸ್ಪಷ್ಟವಾಗಿ ಇಬ್ಬಗೆಯಾದ ಉದ್ದೇಶ ಪ್ರೇರಕವಾಗಿತ್ತು. ರನ್ನನ ಕಾವ್ಯದಲ್ಲಿ ಹುದುಗಿಕೊಂಡಿದ್ದ ನಾಟಕೀಯ ಸ್ವರ್ಣದ ಅದಿರನ್ನು ಹೊರತೆಗೆದು ಕಾಸಿ ಸೋಸಿ ಅದರ ಬೆಲೆಯನ್ನು ಆಧುನಿಕ ಸಾರಸ್ವತ ಲೋಕಕ್ಕೆ ಮನದಟ್ಟಾಗಿಸುವದು ಒಂದು; ಇದು ರನ್ನನಿಗೆ ಸಂದ ಗುಣಪೂಜೆ. ಎರಡನೆಯದಾಗಿ ಹಾಗೆ ಹೊರತೆಗೆದ ಅಮೂಲ್ಯ ಲೋಹವನ್ನು ಇಷ್ಟದೇವತಾ ವಿಗ್ರಹಕ್ಕಳವಡಿಸುವದು ಎಂದರೆ ಅದರ ಮೂಲ ಸತ್ವರಸರುಚಿಯಲ್ಲೇ ಮಿಂಚುವ ದುರಂತ ವಿನ್ಯಾಸವನ್ನು ಪಾಶ್ಚಾತ್ಯ-ಅದರಲ್ಲೂ ಗ್ರೀಕ್ ರುದ್ರನಾಟಕದ ಕಟ್ಟುಪಾಡಿಗೆ ಹೊಂದಿಸಿ ಹೊಸಕಳೆಯೊಂದನ್ನು ಸ್ಫುರಿಸುವಂತೆ ಮಾಡುವುದು. ಇದು ಅವರು ಸ್ವತಃ ಅನುಸರಿಸಿದ ಮತ್ತು ಹೊಸಗನ್ನಡ ಸಾರಸ್ವತ ಪ್ರಪಂಚಕ್ಕೆ ಮಾರ್ಗದರ್ಶಿಕೆಯಾಗಿ ನೀಡಿದ ಸಾಹಿತ್ಯೋಪಾಸನೆಯ ವ್ಯಾಪಕ ಧೋರಣೆಗೆ ಸಮ್ಮತವಾದುದು.

ನಮ್ಮ ನವ್ಯೋದಯ ಸಾಹಿತ್ಯ, ಮಧ್ಯಯುಗೀನ ಸಾಂಪ್ರದಾಯಿಕ ಪರಿಮಿತಿಗಳಿಂದ ಮುಕ್ತವಾಗಿ, ಆರೋಗ್ಯಕರ ನೈಜ ಶಕ್ತಿಯನ್ನು ಬೆಳೆಸಿಕೊಳ್ಳುತ್ತ ಮುನ್ನಡೆಯಬೇಕಾದರೆ, ಅದು ಎಲ್ಲ ದಿಸೆಯಿಂದಲೂ ಗಾಳಿ ಬೆಳಕುಗಳನ್ನು ಬರಮಾಡಿಕೊಳ್ಳಬೇಕು. ಸಾಹಿತ್ಯ ಸಂಸ್ಕೃತಿಯಲ್ಲಿ ಹಳತು-ಹೊಸತು, ಪೂರ್ವದ್ದು - ಪಶ್ಚಿಮದ್ದು ಎಂಬ ಕೃತಕ ತಾರತಮ್ಯಕ್ಕೆಡೆಗೊಡದೆ ಉದಾತ್ತವಾದ ಅಖಂಡತೆ ಮೈಗೂಡಬೇಕೆಂದು ಅವರು ಶ್ರಮಿಸಿದರು. ಮಾತೃಭೂಮಿ, ಮಾತೃಭಾಷೆ ಸಂಸ್ಕೃತಿಗಳನ್ನೆ ಸ್ಥಾಯಿಯಾಗಿ ಹೊಂದಿದ್ದ

ಅವರ ಭಾವಕ್ಕೆ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಯು ವಿಪುಲವಾದ ಪುಷ್ಟಿಯನ್ನಿತ್ತು ಅದನ್ನು ಉದಾರವಾಗಿ ಅವ್ಯಾಜ ಅಖಂಡ ರಸಾತ್ಮಕವಾಗಿ ಬೆಳೆಸಿತ್ತು. ಎರಡೂ ಸಂಸ್ಕೃತಿಗಳ ಈ ಅಖಂಡ ಪ್ರೇಮವೇ ಅವರನ್ನು "ಹೀಗೆ ನನಗೆ ಹಬ್ಬವಾಗಿ, ಇನಿಯರಿಬ್ಬರನ್ನು ತೂಗಿ, ಇವಳ ಸೊಬಗನವಳು ತೊಟ್ಟು ನೋಡಬಯಸಿದೆ, ಅವಳ ತೊಡಿಗೆ ಇವಳಿಗಿಟ್ಟು ಹಾಡ ಬಯಸಿದೆ" ಎಂದು ಹಾಡ ಹಚ್ಚಿತು. ಆ ಕಾರಣದಿಂದಾಗಿ ಅವರು ಹೊಸಹೆಜ್ಜೆ ಇಡುವಾಗ ಪಾಶ್ಚಾತ್ಯ, ಪೌರಾಸ್ತ್ಯ ಸಾಹಿತ್ಯಕ ಸಂಸ್ಕೃತಿಗಳಲ್ಲಿ ಮಧುರ ಮಿಲನವುಂಟಾಗ ಬೇಕೆಂಬ ಧೋರಣೆಯಿಂದಲೆ ಹೊರಟರು. ಇನ್ನಿತರ ತರುಣ ಪ್ರಗತಿವಾದಿಗಳಂತೆ ಹಳೆಯದೆಲ್ಲವನ್ನೂ ಕೊಚ್ಚಿಹಾಕಿ ಅಪ್ಪಟ ಹೊಸತನ್ನೆ ಆಮದು ಮಾಡಿಕೊಳ್ಳಲು ಹೊರಡಲಿಲ್ಲ. ಹೀಗೆ ಶ್ರೀಯವರು ನಮ್ಮ ಸಾಹಿತ್ಯದಲ್ಲಿ ಒಬ್ಬ ಸಂಪ್ರದಾಯ ನಿರ್ವಾಹಕ ರಾದರಲ್ಲದೆ ಸಂಪ್ರದಾಯ ಭಂಜಕರಾಗಲಿಲ್ಲ; 'ಗದಾಯುದ್ಧ ನಾಟಕಂ' ರಚಿಸಿ ಶ್ರೀಯವರು ರನ್ನನ ತಲೆಗೆ ಕಿರೀಟವಿಡಲು ಯತ್ನಿಸಿದರೇ ಹೊರತು ತಮ್ಮ ಪ್ರತಿಭಾ ಸಂಪತ್ತನ್ನು ಮೆರೆಯಲಪೇಕ್ಷಿಸಲಿಲ್ಲ. ಹಾಗೆಯೇ ರುದ್ರನಾಟಕದ ರಸರುಚಿಯನ್ನು ಈ ನಾಟಕದ ತಳಿಗೆಯಲ್ಲಿ ಬಡಿಸಿ ಕನ್ನಡ ಓದುಗರಿಗೆ ಹೊಸರುಚಿಯನ್ನು ರೂಢಿಸಲು ಆಶಿಸಿದರು. ಹೀಗೆ ಗದಾಯುದ್ಧ ನಾಟಕಂ ನಮ್ಮ ಸಾಹಿತ್ಯ ಚರಿತ್ರೆಯ ವಿಶಿಷ್ಟ ಸಂದರ್ಭದಲ್ಲಿ ಒಂದು ಪ್ರಯೋಗವಾಗಿ ರಚಿತವಾದುದು. ಆದುದರಿಂದ ಅದಕ್ಕಿರುವುದು ಇಂದು ಬಹುಮಟ್ಟಿಗೆ ಚಾರಿತ್ರಿಕ ಮಹತ್ವವೆನ್ನಬೇಕು.

ರನ್ನನಲ್ಲಿ ನಾಟಕೀಯತೆಯನ್ನು ಗರ್ಭೀಕರಿಸಿಕೊಂಡು ಕಾವ್ಯರೂಪದಲ್ಲಿ ಹೊಮ್ಮಿದ ಗದಾಯುದ್ಧ ವಸ್ತುವನ್ನು ನಾಟಕಕ್ಕೆ ಅಳವಡಿಸುವಾಗ ಶ್ರೀಯವರು ಬಹು ಸೂಕ್ಷ್ಮವಾದ ಎಚ್ಚರವಹಿಸಬೇಕಾಯಿತು. 'ಕಾಣಿಯುಗೆಲ್ಲ ಅದ್ದ ಗಾಣಿಯ ಸೋಲ' ಎಂಬಂತೆ ತೂಕ ಜೋಕೆಗಳಿಂದ ಮೂಲ ಕಾವ್ಯದ ಸಾರವತ್ತಾದ ನಾಟಕೀಯ ಭಾಗಗಳನ್ನೇ ಅವರು ಆಧರಿಸಿಕೊಂಡು ಸಾಗಿದರು. ಕವಿಯಲ್ಲಿ ಇಲ್ಲದ ಪದ್ಯಗಳನ್ನಾಗಲಿ, ಆತನನ್ನಾಗಲಿ ಸ್ವಕಪೋಲಕಲ್ಪಿತವಾಗಿ ಸೇರಿಸಲು ಯತ್ನಿಸಲಿಲ್ಲ. ಇದು ಅವರ ಪ್ರಾಮಾಣಿಕತೆಯ ಮತ್ತು ಗ್ರಂಥಕೌಶಲದ ನಿದರ್ಶನ. ಭಾರತೀಯ ಸಂಸ್ಕತಿಯ ಸತ್ವ ಪಡೆದು ರಚಿತವಾದ ಗದಾಯುದ್ಧ ವೃತ್ತಾಂತಕ್ಕೆ, ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದ ರುದ್ರನಾಟಕದ ಮಾರ್ಪುಕೊಡುವಾಗಲೂ ಅದರ ಮೂಲ ರೂಪಕ್ಕೆ ವಿದ್ರೂಪವಾಗದಂತೆ ಎಚ್ಚರ ವಹಿಸಿರುವದು ಅವರ ಇನ್ನೊಂದು ಜಾಣ್ಮೆ. ರನ್ನನಲ್ಲಿ (೧) ಭೀಮಸೇನ ಪ್ರತಿಜ್ಞೆ, (೨) ಸಂಜಯ ವಚನ (೩) ಧೃತರಾಷ್ಟ್ರವಚನ (೪) ದುರ್ಯೋಧನ ಪ್ರಲಾಪ (೫) ಭೀಷ್ಮವಚನ (೬) ಭೀಮಸೇನಾಡಂಬರ (೭) ಭೀಮಸುಯೋಧನ ಗದಾಯುದ್ಧ (೮) ದುರ್ಯೋಧನ ಮುಕುಟೋರುಭಂಗ (೯) ದುರ್ಯೋಧನೋತ್ಕ್ರಾಂತಿ ಮತ್ತು

(೧೦) ಭೀಮಸೇನ ಪಟ್ಟಾಭಿಷೇಕ ಎಂಬ ಹತ್ತು ಆಶ್ವಾಸಗಳಲ್ಲಿ ವಿನ್ಯಾಸಗೊಂಡ ಕಥನರೂಪ ಕಾವ್ಯವನ್ನು ಆಯ್ದು ರಂಗ (ಅಂಕ)ಗಳ ಕ್ರಿಯಾತ್ಮಕ ನಾಟಕವಾಗಿ ಅಳವಡಿಸುವಾಗ ನಾಟಕದ ತಂತ್ರಕ್ಕೆ ಅನುಗುಣವಾದ ಎಷ್ಟೋಭಾಗವನ್ನವರು ಕೈ ಬಿಟ್ಟರು. ಮೂಲದಲ್ಲಿ ೫೭೬ ಪದ್ಯ ೧/೭ ಪ್ರಮಾಣದ ಗದ್ಯವನ್ನು ಹೊಂದಿದ ವಸ್ತುವನ್ನು ಅದರ ಕಾಲುಭಾಗಕ್ಕೆ ಎಂದರೆ ೧೪೭ ಪದ್ಯ ಮತ್ತು ಅಲ್ಪ ಪ್ರಮಾಣದ ಗದ್ಯಕ್ಕೆ ಭಟ್ಟಿ ಇಳಿಸಿದರು. ಹೀಗೆ ಕರ್ತನ ನಡೆಸಿದಾಗ ಗದಾಯುದ್ಧ ಕಾವ್ಯದಲ್ಲಿಯ ಹಲಕೆಲವು ಸುಂದರವಾದ ಸನ್ನಿವೇಶ, ವರ್ಣನೆ ಪಾತ್ರಾದಿಗಳನ್ನು ಕೈಬಿಡಬೇಕಾಯಿತು. ನಾಟಕದ ಮೈಕಟ್ಟಿನಲ್ಲಿ ಹೊಂದಿಕೆಯಾಗದ ರನ್ನನ ಪೋಷಕ ದೊರೆಗೆ ಸಂಬಂಧಿಸಿದ ಪೀಠಿಕಾಭಾಗ, ರುದ್ರನಾಟಕಕ್ಕೆ ಹೊಂದಿಕೆಯಾಗದ ಭೀಮ ಪಟ್ಟಾಭಿಷೇಕ ಭಾಗ, ನಾಟಕದ ಪ್ರಾರಂಭದ ಹಾಗೂ ಅಂತ್ಯದಲ್ಲಿ ಸಾಮಾನ್ಯವಾಗಿ ಬರುವ ಮಂಗಳ ಪದ್ಯಗಳು, ಕುರುಕ್ಷೇತ್ರದ ಭೀಭತ್ಸಯುಕ್ತವಾದ ವರ್ಣನಾಭಾಗ, ಸಿಂಹಾವನಲೋಕನ ಕ್ರಮದಲ್ಲಿ ಸಮಸ್ತ ಭಾರತವನ್ನು ಕಥಿಸುವಭಾಗ, ಧ್ವನಿಪೂರಿತವಾದ ವೈಶಂಪಾಯನ ಸರೋವರ, ಅದರಲ್ಲಿ ದುರ್ಯೋಧನನು ಅಡಗಿಕೊಳ್ಳುವಾಗಿನ ಮತ್ತು ಹೊರ ಹೊರಡುವಾಗಿನ ವರ್ಣನಾಭಾಗ ಕೊನೆಯ ಆಶ್ವಾಸದಲ್ಲಿ ಬರುವ ಪಾಂಡವರು ಧೃತರಾಷ್ಟ್ರಾದಿಗಳ ದುಃಖದಭಾಗ-ಇವೆಲ್ಲವನ್ನು ನಾಟಕದಲ್ಲಿ ಬಿಟ್ಟುಕೊಡಲಾಗಿದೆ. ನಾಟಕ ರೂಪದಲ್ಲಿ ಹಿಡಿದಿಟ್ಟಿರುವ ಗದಾಯುದ್ಧ ಭಾಗದಲ್ಲಿ ಬಹುಮಟ್ಟಿಗೆ ರನ್ನನ ಕವಿತ್ವ ಸತ್ವವು ಹರಳುಗಟ್ಟಿದೆಯೆಂಬುದನ್ನು ಒಪ್ಪಲೇಬೇಕು. ಆದರೂ ಗದಾಯುದ್ಧವನ್ನು ಬಿಟ್ಟು ಕೇವಲ ನಾಟಕವನ್ನೇ ಓದಿದ ಸಹೃದಯನಿಗೆ ರನ್ನನ ಸಮಸ್ತಶಕ್ತಿ ವಿಶೇಷವನ್ನು ಗ್ರಹಿಸಿದಂತಾಗುವುದಿಲ್ಲ. ಗದಾಯುದ್ಧ ನಾಟಕ ಗದಾಯುದ್ಧ ಕಾವ್ಯಕ್ಕೆ ಪೂರಕವೆ ಹೊರತು ಪರ್ಯಾಯವಲ್ಲ.

'ಗದಾಯುದ್ಧ ನಾಟಕಂ' ಗ್ರೀಕ್ ರುದ್ರನಾಟಕಗಳ ಛಾಯೆಯನ್ನು ಪಡೆದಂತಹದೆಂದು ಮೊದಲಿನಿಂದಲೂ ವಿಮರ್ಶಕರು ವಿವರಿಸಿಕೊಂಡು ಬಂದಿದ್ದಾರೆ. ಗ್ರೀಕ್ ರತ್ನತ್ರಯರಲ್ಲಿ ಈಸ್ಕಿಲಸ್ ಸಾಫೋಕ್ಲಿಸರಲ್ಲಿ ಹೆಚ್ಚು ಪ್ರಬಲವಾಗಿದ್ದ ಮೇಳದ ನಾಟಕೀಯ ಪ್ರಭಾವ ಯುರಿಪಿಡೀಸ್‌ನಲ್ಲಿ ಕಡಿಮೆಯಾಗಿ ವಸ್ತು ಸಂವಿಧಾನಕ್ಕೂ ಅದಕ್ಕೂ ಇದ್ದ ನಿಕಟ ಸಂಬಂಧ ತಪ್ಪಿಹೋಗಿ ಅದು ನಡುನಡುವೆ ರಂಜನೆಗಾಗಿ ಬರುವ ಸಂಗೀತವಾಗಿ ಬಿಟ್ಟಿದ್ದಿತು. ಮುಂದೆ ಮೇಳವು ರುದ್ರನಾಟಕದ ಆಂತರಿಕ ಸಂಬಂಧವನ್ನು ಕಳೆದು ಕೊಂಡಿತು. ಇದನ್ನು ಗಮನಿಸಿಯೆ ಇರಬೇಕು ಶ್ರೀಯವರು 'ಗದಾಯುದ್ಧ ನಾಟಕಂ'ದಲ್ಲಿ ಮೇಳಗೀತಗಳನ್ನು ಅಳವಡಿಸಿಕೊಂಡಿಲ್ಲ. ಭಾರತೀಯ ಪ್ರಾಚೀನ ನಾಟಕಗಳಂತೆ ಪಾತ್ರಗಳ ಸಂವಾದರೂಪದಲ್ಲೆ ವೃತ್ತಾಂತ ವಿನ್ಯಾಸಗೊಳ್ಳುತ್ತದೆ.

ಗ್ರೀಕ್ ರುದ್ರನಾಟಕದ ಉಳಿದಂಶಗಳಲ್ಲಿ ತ್ರಿವಿಧೈಕ್ಯಗಳನ್ನು ಇಲ್ಲಿ ಪಾಲಿಸಿಕೊಂಡು ಬರಲಾಗಿದೆ. ಕಾಲೈಕ್ಯ, ಸ್ಥಳೈಕ್ಯ ಮತ್ತು ಕ್ರಿಯೈಕ್ಯಗಳು ಗದಾಯುದ್ಧ ವೃತ್ತಾಂತದಲ್ಲೆ ಮೂಲವಾಗಿ ಇರುವದನ್ನು ಶ್ರೀಯವರು ಇನ್ನೂ ಸ್ಫುಟವಾಗುವಂತೆ ಅಳವಡಿಸಿ ಕೊಂಡಿದ್ದಾರೆ. ನಾಟಕದ ಘಟನೆಗಳು ನಡೆಯುವ ಕಾಲ ಕೇವಲ ಅರ್ಧ ದಿವಸದ ಅವಧಿ. ಅವು ಜರುಗುವುದು ಕುರುಕ್ಷೇತ್ರ ಯುದ್ಧಭೂಮಿಯಲ್ಲಿ. ಹೀಗೆ ಕಾಲೈಕ್ಯ ಸ್ಥಳೈಕ್ಯಗಳು ಪರಿಪಾಲಿತವಾಗುವುದರ ಜೊತೆಗೆ ಅತಿಮುಖ್ಯವಾದ ಕ್ರಿಯೈಕ್ಯವೂ ಇಲ್ಲಿ ಯಶಸ್ವಿಯಾಗಿ ಪಾಲಿಸಲ್ಪಟ್ಟಿದೆ. ಅರಿಸ್ಟಾಟಲ್ ಪ್ರತಿಪಾದಿಸಿದ ಗ್ರೀಕ್ ರುದ್ರನಾಟಕದ ತತ್ವಗಳಂತೆ ನಾಟಕದ ವಸ್ತು ಒಂದು ನಿಯತ ಗಾತ್ರದ್ದಾಗಿರಬೇಕು, ಪರಿಪೂರ್ಣವಾದ ಕ್ರಿಯೆಯನ್ನೊಳಗೊಂಡಿರಬೇಕು. ಅರ್ಥಾತ್ ನಾಟಕದ ಆರಂಭದಿಂದ ಕೊನೆಮುಟ್ಟುವ ವೇಳೆಗೆ ಒಂದು ಉದ್ದೇಶ ನೆರವೇರಿದಂತೆ ರೂಪಿತವಾಗಿರಬೇಕು. ಅದಕ್ಕೆ ನಿಶ್ಚಿತವಾದ ಪ್ರಾರಂಭ, ಮಧ್ಯ ಮತ್ತು ಪರ್ಯವಸಾನಗಳಿರಬೇಕು. ಕ್ರಿಯೆ ಏಕ ಮುಖವಾಗಿ ಕೇಂದ್ರ ಉದ್ದೇಶಕ್ಕೆ ಸಂಬಂಧವಾಗಿರುವುದರ ಜೊತೆಗೆ ಇತರ ಚಿಕ್ಕ ಪುಟ್ಟ ಕ್ರಿಯೆಗಳೆಲ್ಲ ಆ ಕೇಂದ್ರ ಉದ್ದೇಶಕ್ಕೆ ಅನುವರ್ತಿಯಾಗಿರಬೇಕು. ಈ ಮಾನದಂಡದಿಂದ ಅಳೆದಾಗ 'ಗದಾಯುದ್ಧ ನಾಟಕಂ' ವಸ್ತು ಕ್ರಿಯೈಕ್ಯವನ್ನು ಔಚಿತ್ಯಪೂರ್ಣವಾಗಿ ಪರಿಪಾಲಿಸಿಕೊಂಡು ಬಂದಿರುವದು ಒಡೆದು ಕಾಣುತ್ತದೆ. ವಸ್ತುವಿನ ಉದ್ದೇಶ ದುರ್ಯೋಧನ ವಧೆ, ಆ ಮೂಲಕ ಬಹುಕಾಲದಿಂದಲೂ ಭೀಮನು ತವಕಿಸುತ್ತಿದ್ದ ಊರುಭಂಗ ಕಿರೀಟಭಂಗ, ವೇಣಿಸಂಹಾರ ಎಂಬ ಪ್ರತಿಜ್ಞೆಗಳ ಸಾಧನೆ ಮೊದಲನೆಯ ರಂಗ(ಅಂಕ)ದಲ್ಲಿಯೆ ಘೋಷಿತವಾಗುವ ಭೀಮನ

ಊರುಗಳನುಡಿವೆನೊದೆವೆಂ
ಕೌರವ ಪರಿವೃಢನ ಮುಕುಟಮಂ ವೇಣಿಸಂ
ಹಾರಂ ಮಾಡುವೆನದರಿಂ
ಭಾರಮದಿನತಿಲ್ಲದೆನ್ನ ಪರಿಭವಭಾವಂ

ಸತ್ಯ ಪ್ರತಿಜ್ಞನೆನೆ ಕುರು
ಪುತ್ರೂರು ಕಿರೀಟ ಭಂಗಮಂ ಪಡೆದು ಜಗತ್
ಸ್ತುತ್ಯ ಕೃತ್ಯಕೃತ್ಯನೆನಿಸದೆ
ಸತ್ಯಾಶ್ರಯ ವೆಸರ್ಗೆ ಮುಯ್ಯನಾಂಪನ್ ಭೀಮಂ.

ಎಂಬ ಪ್ರತಿಜ್ಞೆಯ ಪುನರುಚ್ಚರಣೆ ಮತ್ತು ಸ್ಥಿರೀಕರಣದೊಡನೆ ಪ್ರಕಟವಾಗುವ ಉದ್ದೇಶದ ಫಲಾಗಮ ಐದನೆಯ ಅಂಕದ ಕೊನೆಯಲ್ಲಾಗುತ್ತದೆ. ನಡುವೆ ಬರುವ ದುರ್ಯೋಧನನ ಮಾನಸಿಕ ಉದ್ವಿಗ್ನತೆ, ಮಡಿದ ವೀರರಿಗಾಗಿ ಆತನ ಪ್ರಲಾಸ, ಧೃತರಾಷ್ಟ್ರ–ಗಾಂಧಾರಿ, ಭೀಷ್ಮರು ನಡೆಸುವ ಸಂಧಾನದ ಪ್ರಯತ್ನ, ವೈಶಂಪಾಯನಕೊಳದಲ್ಲಡಗಿರುವುದು,

ಮರುಳುಗಳು ಮತ್ತು ರಾಜ್ಯಲಕ್ಷ್ಮಿಯರ ಪ್ರಸಂಗ ಮೊದಲಾದುವೆಲ್ಲ ಮೂಲೋದ್ದೇಶವನ್ನೇ ಪುಷ್ಟೀಕರಿಸುತ್ತವೆ.

ದುರ್ಯೋಧನನ್ನು ಸಾಂಪ್ರದಾಯಿಕ ಅವಹೇಳನಪರ, ಪಾಪಿ, ಲೋಕಕಂಟಕ ಎಂಬ ಕೀಳುಸ್ಥಾನದಿಂದ ಮೇಲೆತ್ತಿ ರುದ್ರನಾಟಕದ ದುರಂತ ನಾಯಕನನ್ನಾಗಿ ನಿಲ್ಲಿಸಿ ಆತನ ಬಗೆಗೆ ಮರುಕವುಂಟಾಗುವಂತೆ ಮಾಡಿದ ಮಾರ್ಪು ಗದಾಯುದ್ಧ ನಾಟಕದ ಅತ್ಯಂತ ಶ್ರೇಷ್ಠಕೊಡುಗೆ. ವ್ಯಾಸಪ್ರಣೀತ ಭಾರತ ಸಂಪ್ರದಾಯದಂತೆ ದುರ್ಯೋಧನ ಕೇವಲ ದುಷ್ಟ, ಸಜ್ಜನ ಪೀಡಕ, ಸ್ವಾರ್ಥ ಸಾಧನೆಗಾಗಿ ಎಂತಹ ವಂಚನೆ, ಹೀನ ಕೃತ್ಯಗಳನ್ನೆಸಗಲೂ ಹಿಂಜರಿಯದ ಪಾಪಕರ್ಮಿ ಆತನೆಂದೂ ನಮ್ಮ ಸಹಾನುಭೂತಿಗೆ ಪಾತ್ರನಲ್ಲ.

ಭಾರತೀಯ ಸಂಪ್ರದಾಯದಂತೆ ಮನುಷ್ಯ ಪ್ರಪಂಚವನ್ನು ಕೇವಲ ಕಪ್ಪು ಬಣ್ಣದವರು (ಪಾಪಿಗಳು) ಮತ್ತು ಕೇವಲ ಧವಳರು (ಪುಣ್ಯವಂತರು) ಎಂಬೆರಡೇ ವರ್ಣಗಳಲ್ಲಿ ಕಾಣುವುದು ನಡೆದುಬಂದ ಬದಲಾದ ರೂಢಿ. ಜೈನಕವಿಗಳು, ಭಾಸನಂತಹ ನಾಟಕಕಾರ ಇದಕ್ಕೆ ಅಪವಾದವಾಗಿ ಅಧಃಪತನಕ್ಕೆ ತಳ್ಳಿದ ವ್ಯಕ್ತಿಗಳ ಬಗೆಗೆ ಸಹಾನುಭೂತಿ ಹುಟ್ಟುವಂತೆ ಮಾರ್ಪು ತಂದಿದ್ದಾರೆ. ಪಂಪರನ್ನರಲ್ಲಿ ದುರ್ಯೋಧನನನ್ನು ಮೇಲೆತ್ತುವ ಯತ್ನ ಕಂಡುಬರುತ್ತದೆ. ಆತನ ಛಲಕ್ಕೆ ಮಾರುಹೋದ ಪಂಪ 'ಛಲದೊಳ್ ದುರ್ಯೋಧನಂ' ಎಂದೂ 'ಏನಭಿಮಾನಧನಂ ಸುಯೋಧನಂ' ಎಂದೂ ಉದ್ಗಾರ ತೆಗೆದು ಆತನ ಜಾಯಮಾನದಲ್ಲಿಯ ತೇಜಸ್ಸನ್ನು ಎತ್ತಿ ಕೊಂಡಿದ್ದ. ರನ್ನನು ಪಂಪನೀ ಆಶಯಕ್ಕೆ ವಿಸ್ತೃತ ಭಾಷ್ಯ ಬರೆದಂತೆ ಸುಯೋಧನನ ವೀರಧರ್ಮ, ಅಭಿಮಾನ, ಛಲ, ಸ್ನೇಹ, ಬಂಧುಪ್ರೇಮ ಪಿತೃವಾತ್ಸಲ್ಯ ಮುಂತಾದ ಗುಣಗಳು ಉಜ್ವಲವಾಗಿ ಪ್ರಕಟವಾಗುವಂತೆ ಆತನ ಚಿತ್ರಣ ನೀಡಿದ್ದ. ಶ್ರೀಯವರು ರನ್ನನು "ಭೀಮನನ್ನು ಇಳಿಸಿಲ್ಲ ಆದರೆ ದುರ್ಯೋಧನನನ್ನು ಏರಿಸಿದ್ದಾನೆ" ಎಂದು ಮನಗಂಡಿದ್ದರು. ಗದಾಯುದ್ಧದಲ್ಲಿ ದೊರೆಯುವ ಈ ಸಹಾನುಭೂತಿಪರ ಅಂಶದ ಸೂಚನೆಯನ್ನೇ ಮುಂದುವರಿಸಿ ಸುಯೋಧನನ ದುರಂತನಾಯಕ ಚಿತ್ರವನ್ನು ಅವರು ನಾಟಕದಲ್ಲಿ ಪೂರ್ಣಗೊಳಿಸಿದರು. ನಾಟಕದ ಮುಕ್ತಾಯವಾದಾಗ ಸಹೃದಯ ಸುಯೋಧನನಿಗುಂಟಾದ ದುರ್ಗತಿಯನ್ನು ನೆನೆದು ಮರುಕಪಡುವಂತೆ ಮಾಡಿದರು. ಮೂಲ ಗದಾಯುದ್ಧ ಕಾವ್ಯದಲ್ಲೂ ಈ ಪರಿಣಾಮ ಉಂಟಾಗುತ್ತಿದ್ದಿತೆಂಬುದನ್ನು ಇಲ್ಲಿ ಮರೆಯುವಂತಿಲ್ಲ.

ಗ್ರೀಕ್ ರುದ್ರ ನಾಟಕದ ಸಂಪ್ರದಾಯದಂತೆ ಅದರ ನಾಯಕ ಕೇವಲ ಸದ್ಗುಣಿಯೂ ಅಲ್ಲ ಅಥವಾ ಕೇವಲ ನೀಚನೂ ಅಲ್ಲ, ಮಹೋಜ್ವಲ, ಗುಣಗಳುಳ್ಳ ವ್ಯಕ್ತಿ. ದೈವೀದುರ್ವಿಪಾಕದಿಂದಲೋ ಆದರ್ಶಗಳ ಘರ್ಷಣೆಯಿಂದಲೋ ಇಲ್ಲವೆ ತನ್ನಲ್ಲಿಯ

ಯಾವುದೋ ಒಂದು ದೋಷದಿಂದಲೋ ಔನ್ನತ್ಯದ ಶಿಖರದಿಂದ ಕಳಚಿ ದುರ್ದೆಶೇಗೀಡಾಗುತ್ತಾನೆ. ಇಲ್ಲವೆ ಹೀನ ರೀತಿಯ ಮರಣಕ್ಕೆ ತುತ್ತಾಗುತ್ತಾನೆ. ಆಗ ಪ್ರೇಕ್ಷಕರಲ್ಲಿ ದೈವದ ಅಗಮ್ಯ ಕ್ರಿಯೆಯ ಬಗೆಗೆ ಭಯವೂ ದುರಂತನಾಯಕನ ಬಗೆಗೆ ಅನುಕಂಪವೂ ಉಂಟಾಗುತ್ತದೆ. ದುಃಖದ ಉಣಿಸಿನಿಂದ ಭಾವವಿರೇಚನವಾಗಿ ಸ್ವಭಾವ ಶುದ್ಧಿಯುಂಟಾಗುತ್ತದೆ. ಗದಾಯುದ್ಧ ನಾಟಕದ ದುರ್ಯೋಧನನ ಚರಿತ್ರೆಯಲ್ಲಿ ಹೆಜ್ಜೆ ಹೆಜ್ಜೆಗೂ ಇಂತಹ ದುರಂತನಾಯಕನ ವಿನ್ಯಾಸ ಒಡೆದು ಕಾಣುತ್ತಿದೆ.

ಗದಾಯುದ್ಧ ಕಾವ್ಯ ಮತ್ತು ನಾಟಕಗಳು ನಿರೂಪಿಸುವದು ಸುಯೋಧನನ ಜೀವಿತದ ಕೊನೆಯ ದಿನದ ಚರಿತ್ರೆಯನ್ನು ಮಾತ್ರ. ಹಿಂದೆ ಆತ ಇಡಿಯ ಜೀವಿತಾವಧಿಯಲ್ಲಿ ಪಾಂಡವರಿಗೆ ಮಾಡುತ್ತ ಬಂದ ಅನ್ಯಾಯದ ಕೃತ್ಯಗಳು ಪ್ರತ್ಯಕ್ಷ ಕಥನದಲ್ಲಾಗಲಿ ಕ್ರಿಯೆಯಲ್ಲಾಗಲಿ ಅಲ್ಲಿ ಬರುವುದಿಲ್ಲ. ಅವುಗಳ ನೆನಪು ಮಾತ್ರ ಆಗೀಗ ಭೀಮ ದುರ್ಯೋಧನರು ತಂದುಕೊಳ್ಳುತ್ತಾರೆ. ಇದರಿಂದಾಗಿ ಸಹೃದಯರ ಮನಸ್ಸಿನಲ್ಲಿ ದುರ್ಯೋಧನನ ದುಷ್ಕೃತ್ಯಗಳ ಪ್ರತ್ಯಕ್ಷ ಪ್ರಭಾವವಾಗುವದಿಲ್ಲ. ರಂಗದಲ್ಲಿ ನಾವು ಕಾಣುವದು ಏಕಾಂಗಿಯಾದ ಸುಯೋಧನನನ್ನು. ಆತನ ಪಕ್ಷದ ವೀರಾಧಿವೀರರೆಲ್ಲ ಮಡಿದುಹೋಗಿದ್ದಾರೆ. ನೂರು ಜನ ಸೋದರರೂ ಮಕ್ಕಳೂ ಅಳಿದಿದ್ದಾರೆ. ಹನ್ನೊಂದಕ್ಷೋಹಣಿ ಸೈನ್ಯ ನಿಃಶೇಷವಾಗಿದೆ. ಕುರುಭೂಮಿಯಲ್ಲಿಯೆ ಕುರುಪತಿಯನ್ನು ಅರಸುವ ಪರಿಸ್ಥಿತಿಯುಂಟಾಗಿದೆ. "ಧವಳಗಜೇಂದ್ರ, ಮುಂದೆ ಧವಳಚಾಮರಮುಂ ಧವಳಾತಪತ್ರಮುಂ" ಯಾವುದೂ ಇಲ್ಲದೆ ಈಗ ದೇಶಿಗನಂತೆ ಒಬ್ಬನೆ ಸುಳಿಯು ವಂತಾಗಿದೆ. ಈ ಚಿತ್ರ ಆತನ ವಿಷಯದಲ್ಲಿ ಸಹಜ ಮಾನವೀಯ ಅನುಕಂಪ ಹರಿಯುವಂತೆ ಮಾಡುತ್ತದೆ. ದುರ್ಯೋಧನನ ವಿನಾಶಕ್ಕೆ ಕಾವ್ಯನಾಟಕಗಳೆರಡರಲ್ಲೂ ಒಡೆದು ಕಾಣುವ ಪ್ರಮುಖ ಕಾರಣವೆಂದರೆ ಆತನ ಛಲ-ಅಭಿಮಾನ. ಯಾವುದನ್ನು ನಾವು ಆತನ ಉಜ್ವಲಗುಣವಿಶೇಷವೆಂದು ಮೆಚ್ಚುವೆವೊ ಅದೇ ಆತನನ್ನು ದುರಂತ ಕೂಪಕ್ಕೆ ತಳ್ಳುತ್ತದೆ. ಪ್ರತಿಕ್ಷಣದಲ್ಲೂ ಆತ ತನ್ನ ಛಲವನ್ನೆ ಬಲ್ವಿಡಿವಿಡಿಯುತ್ತಾನೆ. ಅದರ ಮುಂದೆ ಆತನಿಗೆ ಇತರ ಮೌಲ್ಯಗಳೆಲ್ಲ ಕಃಪದಾರ್ಥಗಳಾಗಿ ಕಾಣುತ್ತವೆ. "ನೆಲಕಿರೆವೆನೆಂದು ಬಗೆದಿರೆ ಜಲಕಿರಿವೆಂ" ಎಂಬುದು ಆತನ ಅಚಲನಿಷ್ಠೆ. ನಂದುವ ದೀಪ ಕೊನೆಯಲ್ಲಿ ಉದ್ದನೆ ಉರಿವಂತೆ ಭೀಷ್ಮ, ದ್ರೋಣ, ಕರ್ಣ, ದುಶ್ಯಾಸನ, ಅಭಿಮನ್ಯು ಮುಂತಾದವರ ಯೋಗ್ಯತಾ ವಿಶೇಷವನ್ನು ನೆನೆದು ಶ್ರದ್ಧಾಂಜಲಿಯನ್ನರ್ಪಿಸು ತ್ತಾನೆ. ಇದು ಸಹೃದಯರ ಮೆಚ್ಚುಗೆಯನ್ನು ಆತನೆಡೆಗೆ ತೀವ್ರವಾಗಿ ಸೆಳೆಯುತ್ತದೆ. ಕೊಳದಲ್ಲಿ ಕಾಲವಂಚಕನಾಗಿ ಮರೆಯಾಗಿದ್ದವ, ಭೀಮನ ಅವಹೇಳನನುಡಿ ಕೇಳಿದೊಡನೆ, ಸ್ವಾಭಿಮಾನ ಕೆರಳಿ ಸಿಡಿದು ಹೊರಚಿಮ್ಮುತ್ತಾನೆ. ಮೂರ್ಛೆಹೋಗಿ ಬಿದ್ದಿದ್ದ ಭೀಮನನ್ನು ಸುಲಭವಾಗಿ ಸಂಹರಿಸಿ ಬಿಡಬಹುದಾಗಿದ್ದ ಸಂದರ್ಭದಲ್ಲೂ

ತನ್ನ ಸ್ವಾಭಿಮಾನಾತಿರೇಕದಿಂದ "ಬಿದ್ದಿನನಿರಿಯಲಾಗದೆಂದು" ಕೈ ಕಾಯ್ದು ತನಗೆ ಮೃತ್ಯುತಂದುಕೊಳ್ಳುತ್ತಾನೆ. ಅವನ ವಿನಾಶಕ್ಕೆ ಅವನ ಪಾಪಕರ್ಮ, ಪ್ರತಿಕೂಲದೈವ, ಮೈತ್ರೇಯರ ಶಾಪ ಎಂಬಿತ್ಯಾದಿ ಅಂಶಗಳೂ ಕಾರಣವೆಂಬುದು ಎಡೆಎಡೆಯಲ್ಲಿ ಸೂಚಿತವಾಗಿದೆಯಾದರೂ ಇವೆಲ್ಲವೂ ಕೇಂದ್ರಿಕೃತವಾಗುವುದು. ಆತನ ಅದಮ್ಯ ಛಲದ ಸುತ್ತುಮುತ್ತಲೆ ಎನ್ನಬೇಕು. ಇದನ್ನೂ ಚೆನ್ನಾಗಿ ಅರ್ಥೈಸಿಕೊಂಡ ಪಂಪ ಆತನಿಗೆ

"ನುಡಿದುದನೆಯ್ದೆ ತುತ್ತ ತುದಿಯೆಯ್ದುವಿನಂ ನುಡಿದಂ ವಲಂ ಚಲಂ
ಪಿಡಿದುದನೆಯ್ದೆ ಮುಂ ಪಿಡಿದಂ ಸಲೆ ಪೂಣ್ದ ಪೂಣ್ಕೆ ಸೇ
ರ್ವಡೆ ನಡೆವನ್ನೆಗಂ ನಡೆದನಳ್ಕದೆ ಬಿಳ್ಕದೆ ತನ್ನೊಡಲೆ ಪಡ
ಲ್ವಡೆವಿನ ಮಣ್ಮುಗುಂದದ ದಲೇನಭಿಮಾನಧನಂ ಸುಯೋಧನಂ"

ಎಂದು ಗೌರವಾರ್ಪಣೆಮಾಡುತ್ತಾನೆ. ರನ್ನನು "ಕುರುಕುಲಾರ್ಕನುಂ ಅರ್ಕನುಂ ಅಸ್ತಮನೆಯ್ದಿದರ್" ಎಂದು ಆ ತೇಜಸ್ವಿ ಜೀವಿತಾಂತ್ಯಕ್ಕೆ ಚರಮಗೀತೆ ಹೇಳುತ್ತಾನೆ. ಶ್ರೀಯವರು ಈ ಅಂಶವನ್ನು ನಾಟಕಾಂತ್ಯದಲ್ಲಿ ಸೇರಿಸುವದರ ಜೊತೆಗೆ ದುರ್ಯೋಧನನ ಬಾಯಲ್ಲಿ "ಇದೆಲ್ಲ ಕೃಷ್ಣನ ಮಾಯೆ! ಹರಿಹರ...................ದೈವದ ಮುಂದೆ ನಾವಲ್ತು" ಎಂದು ಗ್ರೀಕ್ ರುದ್ರನಾಟಕಾಂತ್ಯಕ್ಕೆ ಉಚಿತವಾದ ಮಾತುಗಳನ್ನು ಹೆಚ್ಚಿಗೆ ಸೇರಿಸುತ್ತಾರೆ. ಕೊನೆಗಳಿಗೆಯಲ್ಲಿ ಆತನಿಗೆ, ದೈವೀಶಕ್ತಿಯೆದುರು ಮಾನುಷ ಶಕ್ತಿಸಾಹಸಗಳು ಎಷ್ಟರವು; ಎಂಬ ವಿವೇಕೋದಯವಾಯ್ತೆಂಬುದನ್ನು ಎತ್ತಿ ತೋರಿಸುತ್ತಾರೆ. ತೊಡೆಯುಡಿದು ಅವಮಾನಿತನಾಗಿ ಹುಡಿಯಲ್ಲಿ ಬಿದ್ದಿದ್ದ ದುರ್ಯೋಧನ ಅಶ್ವತ್ಥಾಮನಿಗೆ

"ಹತದೇಹ, ಭುಜದ್ವಯ
ಹತೋರು ಹತಹೃದಯ ಹತಕಿರೀಟಂಗೆನಗಂ
ಪ್ರತೀಕಾರಮೆಂಬುದುಂಟೇ?
ಗತಿಯಂ ಸಾಧಿಸುವುದಲ್ತೆ ತಾಂ ಪ್ರತೀಕಾರಂ"

ಎಂದು ಹೇಳಿದ ಮಾತುಗಳು ಗದಾಯುದ್ಧದಲ್ಲಿಯೇ ಇವೆ. ಈ ಸೂಚನೆಯನ್ನು ಗ್ರಹಿಸಿ ಬಹುಶಃ ಶ್ರೀಯವರು ದುರ್ಯೋಧನನಲ್ಲಿ ಹೀಗೆ ಕೊನೆಗೆ ವಿವೇಕೋದಯ ವಾಯಿತೆಂದು ಸೇರಿಸಿದರೆನ್ನಬೇಕು.

ಈ ಹಿಂದೆ ಹೇಳಿದಂತೆ ಗದಾಯುದ್ಧ ನಾಟಕ ಮುಗಿವುದು ದುರ್ಯೋಧನನ ಪ್ರಾಣೋತ್ಕ್ರಮಣದೊಡನೆ. ಭೀಮಸೇನ ಪಟ್ಟಬಂಧವನ್ನು ಇಲ್ಲಿ ಬಿಟ್ಟು ಕೊಡಲಾಗಿದೆ. ನಾಟಕದ ಪ್ರಾರಂಭ – ಅಂತ್ಯದಲ್ಲಿ ಮಂಗಳ ಪಠನವೂ ಇಲ್ಲ. ಇದೆಲ್ಲ ರುದ್ರನಾಟಕಕ್ಕೆ ಉಚಿತವಾದ ಕ್ರಮವೇ. ಶ್ರೀಯವರು ಎತ್ತಿತೋರಿಸಿದ ಇನ್ನೊಂದು ಅಂಶ :– ಇದು, ಬಿದ್ದ ದುರ್ಯೋಧನನ ದೃಷ್ಟಿಯಲ್ಲಿ ಮಾತ್ರವಲ್ಲ ಗೆದ್ದ ಪಾಂಡವರ ದೃಷ್ಟಿಯಲ್ಲೂ

ದುರಂತವೆ ಎಂಬುದು. ಗೆದ್ದು ಬೀಗಿದ್ದ ಭೀಮ, ದ್ರೌಪದಿ ಮತ್ತರಾಗಿ ಬೀಡಿಗೆ ತೆರಳುತ್ತಿದ್ದಾಗ ಧರ್ಮಜ 'ಕೃಷ್ಣಾ, ಕೃಷ್ಣಾ ! ವಿಜಯೋನ್ಮತ್ತರಿವರ್ ಕಾಣರ್, ನಾನ್ ಕಾಣ್ಬೆಂ, ಭೀಮನ ತಲೆಯ ಮೇಲಾಡುವ ಘೋರ ಮೂರ್ತಿಗಳಂ, ಮಹಾಪಾತಕಂ ಭ್ರಾತೃಹತ್ಯಂ ಕಾವುದು ಕಾವುದು ವತ್ಸನಂ' ಎಂದು ನರಳುತ್ತಾನೆ. ಪಾಪ, ಮರಿಗೆ ಮರಿಯನ್ನಿಡುವುದಷ್ಟೆ. ಗೆದ್ದ ಪಾಂಡವರಿನ್ನೂ ಈ ಯಾತನೆಯನ್ನನುಭವಿಸುವ ಸಂಧಿಯಿಂದ ತಪ್ಪಿಸಿಕೊಳ್ಳಲಾರರು ಎಂಬುದಿಲ್ಲಿ ಸೂಚಿತವಾಗಿವೆ. ಹೀಗೆ ಇಡಿಯಾದ ಗದಾಯುದ್ಧ ನಾಟಕ ಸ್ಫುಟವಾಗಿ ರುದ್ರನಾಟಕದ ಲಕ್ಷಣ ಬದ್ಧವಾಗಿ ಅಳವಡಿಸಲ್ಪಟ್ಟಿದೆ. ಆದರಿಷ್ಟೆ ಈ ಲಕ್ಷಣಗಳ ಸೂಕ್ಷ್ಮವೆಲ್ಲ ವೇದ್ಯವಾಗುವುದು ಪಾಶ್ಚಾತ್ಯ ರುದ್ರನಾಟಕಾಧ್ಯಯನ ಮಾಡಿದ ಪರಿಣತರಿಗೆ ಮಾತ್ರ. ಇತರ ಸಾಮಾನ್ಯ ವಾಚಕರು ಅಥವಾ ನೋಟಕರು ಇದನ್ನು ಸವಿಯುವದು ಗದಾಯುದ್ಧದ ಅಳವಡಿಕೆಯೆಂದೇ 'ಅಶ್ವತ್ಥಾಮನ್' ಮತ್ತು 'ಪಾರಸಿಕರು' ಎಂಬಂತಹ ನಾಟಕಗಳನ್ನು ರಚಿಸಿದ ಶ್ರೀ ಅವರಿಗೆ ಬೇಕೆಂದರೆ, ಶುದ್ಧ ಹಳಗನ್ನಡದಲ್ಲೇ, ಗದಾಯುದ್ಧ ವೃತ್ತಾಂತವನ್ನು ಸ್ವತಂತ್ರವಾದ ಗ್ರೀಕ್ ಮಾದರಿಯ ರುದ್ರನಾಟಕವಾಗಿ ರಚಿಸಲು ಅಸಾಧ್ಯವೇನೂ ಇದ್ದಿರಲಿಲ್ಲ. ಆದರೆ ಪ್ರಾಂಜಲಮನಸ್ಸಿನ ಸಾಹಿತ್ಯೋಪಾಸಕರಾದ ಅವರು 'ಊರ ಮುಂದೆ ಹಾಲುಹಳ್ಳ ಹರಿಯುತ್ತಿರಲು ಓರೆಯಾವಿನ ಬೆನ್ನಲ್ಲಿ ಹರಿಯಲೇಕಯ್ಯ' ಎಂಬಂತೆ ಪೂರ್ವಸಿದ್ಧವಾದ ವೃತ್ತಾಂತವನ್ನೇ ಅಳವಡಿಸಿ ಕನ್ನಡ ಕಾವ್ಯಕ್ಕೆ ಗೌರವತರಲು ಯತ್ನಿಸಿದ್ದಾರೆನ್ನಬೇಕು.

ಈ ಅಳವಡಿಕೆಯಲ್ಲಿ ಇನ್ನೂ ಒಂದೆರಡು ವೈಶಿಷ್ಟ್ಯಗಳನ್ನು ಕುರಿತು ಇಲ್ಲಿ ಸಂಕ್ಷಿಪ್ತವಾಗಿ ಸಮಾಲೋಚಿಸಬಹುದಾಗಿದೆ.

ಗದಾಯುದ್ಧ ನಾಟಕದಲ್ಲಿ ಪಾತ್ರಗಳ ಸಂಖ್ಯೆಯನ್ನು ಮಿತಗೊಳಿಸಲಾಗಿದೆ. "ಎಲ್ಲ ಪ್ರದೇಶಗಳಲ್ಲಿಯೂ ವೇದಿಕೆಯ ಮೇಲೆ ಅಲ್ಪಸಂಖ್ಯೆಯ ಪಾತ್ರಗಳು; ಗದಾಯುದ್ಧ ಕಾಲದಲ್ಲಿ ಮಾತ್ರ ನಾಲ್ಕು; ವೇಣಿಸಂಹಾರಕ್ಕಾಗಿ ದ್ರೌಪದಿಬಂದಾಗ ಐದು, ಧೃತರಾಷ್ಟ್ರ ಗಾಂಧಾರಿಯರು ಮಗನನ್ನು ಸಂಧಿಸಿದಾಗ ಐದು. ಮಿಕ್ಕೆಲ್ಲ ಕಡೆಗಳಲ್ಲಿಯೂ ಎರಡು ಅಥವಾ ಮೂರು; ಅರ್ಜುನನಿಗಾಗಲಿ ಕೊನೆಗೆ ಬಲರಾಮನಿಗಾಗಲಿ ಅವಕಾಶ ದೊರಕದು" (ಎಸ್.ವಿ.ರಂ. ಸಂಭಾವನೆ ಪು. ೨೭) ನಾಟಕದ ತುಂಬೆಲ್ಲ ಗದಾಯುದ್ಧ ದಲ್ಲಿಯಂತೆ ದುರ್ಯೋಧನನದೇ ಬೆಳಕು ಐದಂಕಗಳಲ್ಲಿ. ಮೂರರಲ್ಲಿ ಆತ ಪ್ರತ್ಯಕ್ಷ ಕಾಣಿಸಿಕೊಂಡರೆ ಉಳಿದೆರಡರಲ್ಲಿ ಅಪ್ರತ್ಯಕ್ಷವಾಗಿ ಆತನ ಕರಿನೆರಳಿದೆ.

ರನ್ನನ ಪದ್ಯಗಳನ್ನೂ ಗದ್ಯವನ್ನೂ ನಾಟಕದ ಸಂಭಾಷಣೆಗೆ ಅಳವಡಿಸುವಾಗ ಪಾತ್ರಗಳ ಚಿತ್ತವೃತ್ತಿಯ ಕ್ರಿಯೆ ಪ್ರತಿಕ್ರಿಯೆಗಳನ್ನು ಬಿಂಬಿಸುವಂತೆ ಕ್ರಮವ್ಯತ್ಯಾಸ ಗೊಳಿಸಲಾಗಿದೆ. ಕೊನೆಗೆ ಬರುವ 'ಸುಡಿಮುದಸೆಯ್ದು ತುತ್ತತುದಿ.........' ಎಂಬ ಪಂಪನ

ಪದ್ಯವನ್ನು ಸಮುಚಿತವಾಗಿಲ್ಲಿ ಅಳವಡಿಸಿಕೊಳ್ಳಲಾಗಿದೆ. ಇತರ ಪಾತ್ರಗಳಿಂದ ಮತ್ತು ಕವಿಯ ಬಾಯಿಂದ ಬಂದ ಮಾತುಗಳನ್ನು ನಾಟಕದಲ್ಲಿ ಬಳಸಿಕೊಂಡ ಪಾತ್ರಗಳ ಬಾಯಲ್ಲೆ ಹೇಳಿಸಲಾಗಿದೆ.

ಶ್ರೀಯವರು 'ಗದಾಯುದ್ಧ', 'ಅಶ್ವತ್ಥಾಮನ್' 'ಪಾರಸಿಕರು' ಈ ನಾಟಕಗಳ ಮೂಲಕ ಗಂಭೀರ ನಾಟಕಗಳಿಗೆ ಹಳಗನ್ನಡ ಮತ್ತು ಲಯಬದ್ಧವಾದ ಪದ್ಯಗಂಧಿ ಭಾಷೆಯನ್ನು ಪ್ರಯೋಗಿಸುವುದನ್ನು ರೂಢಿಗಿಳಿಸಲೆತ್ನಿಸಿರುವರು. ಇದು ಮುಂದೆ ಕೆಲವು ಕಾಲ ಸಾಗಿಕೊಂಡು ಬಂದಿತು. ಆದರೆ ಇಂದು ಗಂಭೀರ ಮತ್ತು ಪೌರಾಣಿಕ ವಸ್ತುಗಳಿಗೆ ಇಂತಹ ವಿಲಕ್ಷಣ ಭಾಷೆಯೆ ಬೇಕೆಂಬ ಅನಿವಾರ್ಯವುಳಿದಿಲ್ಲ. ಹೊಸಗನ್ನಡದ ಸರಳಗದ್ಯದಲ್ಲೂ ಇಂತಹ ಭಾವಾಭಿವ್ಯಕ್ತಿ ಸಾಧ್ಯವೆಂಬುದು ಈಗ ಸ್ಥಿರಪಟ್ಟಿದೆ. ನಮ್ಮ ಭಾಷೆಯ ಬಗೆಗೆ ವಾಚಕ ನೋಟಕರು ಓೀಗೆ ಪೂರ್ಣವಾದ ಅಭಿರುಚಿಯನ್ನು ಈಗ ಪಳಗಿಸಿಕೊಂಡಿರುವದು ಇದಕ್ಕೆ ಕಾರಣವೆನ್ನಬೇಕು.

ಕೊನೆಯದಾಗಿ ರುದ್ರನಾಟಕ ಮಾದರಿಯ ಗಂಭೀರ ನಾಟಕಗಳ ಪ್ರಯೋಗಕ್ಕೆ ಶ್ರೀಯವರು ಬುನಾದಿಯನ್ನು ಹಾಕಿದರಾದರೂ ಅಂತಹ ಬೆಳೆಸು ಮುಂದೆ ಹುಲುಸಾಗಲಿಲ್ಲ. ಬಹುಶಃ ಇದಕ್ಕೆ ಚಾರಿತ್ರಿಕ ಕಾರಣ ಹೇಳಬೇಕೆಂದು ತೋರುತ್ತದೆ. ನಮ್ಮ ಸಾಮಾಜಿಕ ಜೀವನ ಪ್ರಬಲವಾದಂತೆಲ್ಲ ಇಂತಹ ಪ್ರಾಚೀನ ವಸ್ತುವನ್ನು ಬಳಸಿದ ಗಂಭೀರ ನಾಟಕಗಳಿಗೆ ಪ್ರೇಕ್ಷಕರಲ್ಲಿ ಅಭಿರುಚಿ ಇಳಿಮುಖವಾಯಿತೆನ್ನಬೇಕು. ಕಂಪನಿನಾಟಕಗಳಲ್ಲೂ ಇದೇ ಚರಿತ್ರೆ ಕಾಣುತ್ತೇವೆ. ನವೋದಯ ಪ್ರಾರಂಭ ಕಾಲದಲ್ಲೇ ಪ್ರತಿಭಾವಂತರಾದ ಕೈಲಾಸಂ ಮತ್ತು ಶ್ರೀರಂಗರು ಸಾಮಾಜಿಕ ವಿಮರ್ಶೆ, ವಿಡಂಬನೆ ಹಾಸ್ಯದಿಂದೊಡಗೂಡಿದ ಮಹತ್ವಪೂರ್ಣ ಕೃತಿಗಳನ್ನು ನೀಡುತ್ತ ಬಂದುದರಿಂದ ನಮ್ಮ ನಾಟಕದ ಚರಿತ್ರೆ ಬೇರೆ ದಾರಿಯನ್ನೇ ಹಿಡಿಯಿತೆನ್ನಬೇಕು. ಏನಿದ್ದರೂ ಶ್ರೀಯವರ ಗಂಭೀರ ನಾಟಕಗಳಿಗೆ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಪ್ರಾಯೋಗಿಕ ಮತ್ತು ಚಾರಿತ್ರಿಕ ಮಹತ್ವ ಇದ್ದೇ ಇದೆ. ರನ್ನನ ವಿಷಯದಲ್ಲಿ ಹೊಸ ಜಾಗೃತಿಯನ್ನು ರುದ್ರನಾಟಕದ ರುಚಿಯನ್ನು ರೂಢಿಸಲು ಕಾರಣವಾದ 'ಗದಾಯುದ್ಧ ನಾಟಕಂ' ಬಗೆಗೆ ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ಅವಕಾಶವಿತ್ತುದಕ್ಕೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

❐

೮. 'ಶ್ರೀ' ಅವರ ಸಾಹಿತ್ಯ ವಿಮರ್ಶೆ, ಕಾವ್ಯ ಮೀಮಾಂಸೆ...

■ ಡಾ. ಜಿ.ಎಸ್. ಕಾಪಸೆ

ನವೋದಯ ಕಾವ್ಯದ ಪ್ರವರ್ತಕರಾದ ಬಿ.ಎಂ.ಶ್ರೀ ಅವರು ನವೋದಯ ವಿಮರ್ಶೆಯ ಪ್ರವರ್ತಕರೂ ಅಹುದು. ಹೊಸಗನ್ನಡ ಸಾಹಿತ್ಯವನ್ನು ಸೃಷ್ಟಿಸುವ, ಬೆಳೆಸುವ, ಕನ್ನಡದ ಕಾವ್ಯ ಪರಂಪರೆಯನ್ನೂ ಅದರ ಘನತೆಯನ್ನೂ ಗುರುತಿಸುವ, ಕೊಂಡಾಡುವ, ಕನ್ನಡ ಜನತೆಯಲ್ಲಿ ಕನ್ನಡದ ಅರಿವು, ಆಸಕ್ತಿಗಳನ್ನು ಹುಟ್ಟಿಸುವ, ಹೆಚ್ಚಿಸುವ ಅನಿವಾರ್ಯತೆಯಿದ್ದ ಕಾಲದಲ್ಲಿ ಶ್ರೀಯವರು ಬೆಳ್ಳಿಚುಕ್ಕೆಯಾಗಿ ಮೂಡಿಬಂದರೆಂದು ಹೇಳಬಹುದು. ಇಂಗ್ಲೀಷ್ ಪ್ರೊಫೆಸರರಾಗಿ ಇಂಗ್ಲೀಷ್ ಸಾಹಿತ್ಯದ ಬೆಳವಣಿಗೆ, ಬದಲಾವಣೆಗಳನ್ನು ಚೆನ್ನಾಗಿ ಅರಿತುಕೊಂಡು, ಅದರ ವಿಶೇಷತೆಗಳಿಗೆ ಮಾರುಹೋದ ಶ್ರೀಯವರು ಕನ್ನಡದಲ್ಲಿಯೂ ಅಂಥ ಕಾರ್ಯ ನಡೆಯಬೇಕಾದುದರ ಅಗತ್ಯವನ್ನು ಬಹುಬೇಗನೇ ಕಂಡುಕೊಂಡಿದ್ದುದು ಕನ್ನಡದ ಸುದೈವವೆಂದೇ ಹೇಳಬೇಕು. 'ಅವಳ ತೊಡಿಗೆ ಇವಳಿಗಿಟ್ಟು ಹಾಡಬಯಸಿದ' ಅವರ ಅಪೇಕ್ಷೆ ಕನ್ನಡ ಸಾಹಿತ್ಯಕ್ಕೆ ಒಂದು ಹೊಸತಿರುವು ತಂದುಕೊಟ್ಟಿತೆಂಬುದು ಇಂದು ಐತಿಹಾಸಿಕ ದಾಖಲೆಯಾಗಿರುವ ಸಂಗತಿ.

ಶ್ರೀಯವರು ಇಂಗ್ಲೀಷ್ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಬಲ್ಲವರಾಗಿದ್ದರೂ ಆ ಎಲ್ಲ ವೈವಿಧ್ಯವನ್ನು ಏಕಕಾಲಕ್ಕೆ ಕನ್ನಡಕ್ಕೆ ತರುವ ಪ್ರಯತ್ನವನ್ನೇನೂ ಮಾಡಲಿಲ್ಲ. ಅವರು ಮುಖ್ಯವಾಗಿ ಗಮನಕ್ಕೆ ತೆಗೆದುಕೊಂಡದ್ದು ಮೂರು ಪ್ರಕಾರಗಳನ್ನು: (೧) ಕಾವ್ಯ (೨) ನಾಟಕ (೩) ಪ್ರಬಂಧ. ಕಾವ್ಯದಲ್ಲಿ ಅವರ ಸ್ವತಂತ್ರ ಪ್ರತಿಭೆ ಕೆಲಸ ಮಾಡಿದ್ದು ಬಹಳಷ್ಟಿಲ್ಲ. ಇದು ನಾಟಕಕ್ಕೂ ಅನ್ವಯಿಸುವ ಮಾತು. ಕಾವ್ಯ, ನಾಟಕಗಳಲ್ಲಿ ಇಂಗ್ಲೀಷ್‌ನ ಮೂಲಭಿತ್ತಿಯ ಮೇಲೆ ಕನ್ನಡ ಚಿತ್ರವನ್ನು ಕಂಡರಿಸಲು ಅವರು

ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಅವರು ಸಾಧಿಸಿದ ಯಶಸ್ಸೂ ಗಮನಾರ್ಹವಾಗಿದೆ. ಪ್ರಬಂಧ ಸಾಹಿತ್ಯದಲ್ಲಿ ಅವರ ಪಾಂಡಿತ್ಯ ಮತ್ತು ಚಿಂತನಶೀಲಗಳೆರಡೂ ವಿಶೇಷವಾಗಿ ಕಾರ್ಯಮಾಡಿದ್ದುದನ್ನು ಮರೆಯುವಂತಿಲ್ಲ. ಶ್ರೀಯವರನ್ನು ಕವಿಗಳೆಂದು ಗುರುತಿಸುವುದಕ್ಕಿಂತ, ಅವರೊಬ್ಬ ಗಣ್ಯ ಗದ್ಯಲೇಖಕರೆಂದು ಗುರುತಿಸುವುದು ಹೆಚ್ಚು ಪ್ರಶಸ್ತವಾಗಿ ತೋರುತ್ತದೆ.

ಕನ್ನಡ ವಿಮರ್ಶೆ ಅದೇ ತಾನೇ ಕಣ್ಣು ತೆರೆಯುತ್ತಿರುವ ಕಾಲದಲ್ಲಿ ಶ್ರೀಯವರು ವಿಮರ್ಶೆಯ ಕಾರ್ಯವನ್ನು ಕೈಗೆತ್ತಿಕೊಂಡಿದ್ದುದು ಒಂದು ಶುಭಸೂಚನೆಯಾಗಿದೆ. ಇ.ಪಿ.ರೈಸ್, ಕಿಟೆಲ್, ಆರ್. ನರಸಿಂಹಾಚಾರ್ಯ ಈ ಮುಂತಾದವರು 'ಶ್ರೀ' ಅವರಿಗಿಂತ ತುಸು ಮುಂಚೆ ಕನ್ನಡ ಸಾಹಿತ್ಯದ ಚಾರಿತ್ರಿಕ ಅವಲೋಕನ ಪ್ರಾರಂಭಿಸಿ ವಿಮರ್ಶೆಗೆ ಶ್ರೀಕಾರ ಹಾಕಿದ್ದರು. ಶ್ರೀಯವರು ಕನ್ನಡ ಕಾವ್ಯಗಳ ಉತ್ತಮಿಕೆಯನ್ನು ಪಾಶ್ಚಾತ್ಯ ವಿಮರ್ಶೆಯ ದೃಷ್ಟಿಕೋನದಿಂದ, ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ, ತಮ್ಮದೇ ಆದ ರೀತಿಯಲ್ಲಿ ನೋಡಲು ಯತ್ನಿಸಿ ಕನ್ನಡಕ್ಕೆ ವಿಮರ್ಶಾ ಸಾಹಿತ್ಯವನ್ನು ನೀಡಿದರು. ಹೀಗೆ ವಿಮರ್ಶಾ ಸಾಹಿತ್ಯವನ್ನು ನೀಡುವಾಗ ಅವರು ಹೆಚ್ಚು ಸಹೃದಯರಾಗಿ, ಗುಣಗ್ರಾಹಿಗಳಾಗಿ, ಪ್ರಶಂಸಾಪರರಾಗಿ ಕಾಣುತ್ತಿದ್ದರೆ, ಅದು ಅವರ ಸಂಸ್ಕೃತಿಯ ಪ್ರತೀಕವೆಂದು ಹೇಳಬೇಕಾಗುತ್ತದೆ. ಹಾಗೆ ನೋಡಿದರೆ ಶ್ರೀಯವರದು ಭಾವಪರವಶವುಳ್ಳ ರೋಮ್ಯಾಂಟಿಕ್ ವಿಮರ್ಶೆಯೇ ಹೊರತು ಬೌದ್ಧಿಕ ಸ್ತರದ ಮೇಲೆ ನಿಂತ ನವ್ಯ ವಿಮರ್ಶೆಯಲ್ಲ. ಆಗಿನ ಕನ್ನಡ ಸಾಹಿತ್ಯಕ್ಕೆ ದೊರೆತ ಪ್ರೇರಣೆಗಳೂ ಕೂಡ ಇಂಗ್ಲೀಷ್ ರೋಮ್ಯಾಂಟಿಕ್ ಸಂಪ್ರದಾಯದಿಂದ ಎಂಬುದನ್ನು ಮರೆಯುವಂತಿಲ್ಲ.

ಶ್ರೀಯವರು ವಿಮರ್ಶೆ ನೀಡಲು ದೊರೆತ ಸಂದರ್ಭಗಳು ಮೂರು ಮಾತ್ರ:

೧. ಕನ್ನಡ ಸಾಹಿತ್ಯ ಚರಿತ್ರೆ ಬರೆಯುವಾಗ.
೨. ಕೆಲವು ಗ್ರಂಥಗಳಿಗೆ ಮುನ್ನುಡಿ ಅಥವಾ ಪ್ರಸ್ತಾವನೆ ಬರೆಯುವ ಅವಕಾಶ ದೊರೆತಾಗ.
೩. ಕೆಲವು ಪತ್ರಿಕೆಗಳಿಗೆ ಲೇಖನಗಳನ್ನು ಪೂರೈಸಿದಾಗ.

ಸಾಹಿತ್ಯ ಚರಿತ್ರೆಯಲ್ಲಿ ಕವಿ, ಕೃತಿಗಳನ್ನು ಪರಿಚಯಿಸುವುದು ಮುಖ್ಯ ಉದ್ದೇಶವಾಗಿದ್ದರೂ ಶ್ರೀಯವರು ಕಾವ್ಯದಲ್ಲಿಯ ರಸಸ್ಥಾನಗಳನ್ನೂ ವೈಶಿಷ್ಟ್ಯಗಳನ್ನೂ ಗುರುತಿಸಿ ಅದರ ನ್ಯೂನತೆಗಳನ್ನು ಎತ್ತಿತೋರಿಸಲು ಪ್ರಯತ್ನಿಸಿರುವುದು ಅವರ ವಿಮರ್ಶಾ ಪ್ರಜ್ಞೆಗೆ ನಿದರ್ಶನವಾಗಿದೆ. ಮಹಾಕವಿ ಪಂಪನ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಗಳ ಉತ್ಕೃಷ್ಟ ಸನ್ನಿವೇಶಗಳನ್ನು ಎತ್ತಿ ತೋರಿಸಿದ ಅವರು ಕವಿಯ ರಚನಾ ಶಿಲ್ಪದಲ್ಲಿ ಕಂಡುಬರುವ ದೋಷಗಳ ಕಡೆಗೂ ಬೆರಳು ಮಾಡಿ ತೋರಿಸಿರುವರು.

'ವಿಕ್ರಮಾರ್ಜುನ ವಿಜಯ'ದಲ್ಲಿಯ ಪಂಪನ ಸಾಧನೆ ಹಾಗೂ ಕೊರತೆಗಳನ್ನು ಗಮನಿಸುತ್ತ "...ಭಾರತ ಕಥೆಯನ್ನು ಮುಖ್ಯಕಥೆ ಎದ್ದು ನಿಲ್ಲುವಂತೆ ಸ್ವಾರಸ್ಯವಾಗಿ ಸಿಂಹಾವಲೋಕನದಿಂದ ಸಂಕ್ಷೇಪಿಸಬಲ್ಲನು. ಅದರ ಅತಿರಥಮಹಾರಥರನ್ನು ತನ್ನ ಕಲ್ಪನಾ ಶಕ್ತಿಯಿಂದ ಸ್ಪಷ್ಟವಾಗಿ ಗುಣಾವಗುಣಮಿಶ್ರಿತರಾದ ಲೌಕಿಕ ಮನುಷ್ಯರಂತೆ ಚಿತ್ರಿಸಬಲ್ಲನು. ಅದರಲ್ಲಿ ಮೆಚ್ಚುಗೆಯನ್ನು ಸಂತಾಪವನ್ನೂ ಹುಟ್ಟಿಸಬಲ್ಲನು. ತನ್ನ ರೀತಿಯ, ಪ್ರತಿಭೆಯ, ಸಂಸಾರಾನುಭವದ, ಉದಾತ್ತಧ್ಯೇಯಗಳ ಚಮತ್ಕಾರ, ಸೌಂದರ್ಯ, ಸತ್ವ, ಗಾಂಭೀರ್ಯಗಳನ್ನೆಲ್ಲಾ ತನ್ನ ಕಾವ್ಯಕ್ಕೆ ಧಾರೆಯೆರೆಯಬಲ್ಲನು...... ಆದರೂ ಮಹಾಭಾರತದ ಉಜ್ವಲ ಸ್ವಲ್ಪ ಮಂಕು ಹಚ್ಚದೆ ಹೋಗಲಿಲ್ಲ. ಸ್ವೇಚ್ಛೆಯಾಗಿ ಪಂಪನು ಭಾರತವನ್ನು ವ್ಯತ್ಯಾಸಪಡಿಸದೆ ಹೋದರೂ ಕಥಾವಸ್ತುವಿನಲ್ಲಿ, ಪಾತ್ರರಚನೆಯಲ್ಲಿ, ಸೂಕ್ತಿಮಾಲೆಗಳಲ್ಲಿ, ವ್ಯಾಸಮಹರ್ಷಿಗಳ ಹಿಂದೆಯೇ ಪಂಪನು ನಮ್ರವಾಗಿ ನಡೆದಿದ್ದರೂ, ಒಂದು ವೇಳೆ ತನ್ನ ಕೆಲವು ವ್ಯತ್ಯಾಸಗಳಿಂದ, ರಚನಾ ಕೌಶಲ್ಯದಿಂದ ಮೂಲಗ್ರಂಥಕ್ಕೆ ಒಂದು ಕಳೆಯನ್ನು ಏರಿಸಿದ್ದಾನೆಂದು ಹೇಳಬಹು ದಾದರೂ, ಎಲ್ಲಕ್ಕೂ ಬಹುಮುಖ್ಯವಾದ ಅಂಶದಲ್ಲಿ ಮಹಾಭಾರತವೆಂಬ ವೇದಕ್ಕೆ ಬೃಹದ್ದೇವತೆಯಾದ ಶ್ರೀಕೃಷ್ಣನ ವಿಷಯದಲ್ಲಿ, ಆತನ ದಿವ್ಯಾವತಾರ, ದಿವ್ಯೋಪದೇಶ, ದಿವ್ಯಲೀಲೆಗಳ ವಿಷಯದಲ್ಲಿ, ಆದಿತೀರ್ಥೇಶ್ವರನಲ್ಲಿ ಪಂಪನಿಗಿದ್ದ ಅನನ್ಯ ಶರಣಭಾವ ವಿಲ್ಲದೆ ಇದ್ದುದರಿಂದ, ತನ್ನ ಜೈನಶ್ರದ್ಧೆಗೂ ತನ್ನ ಪೂರ್ವಿಕರ ವೈದಿಕ ಸಂಸ್ಕಾರಕ್ಕೂ ಹೋರಾಟ ಹುಟ್ಟಿ, ಒಳಗೆಯೇ ಪಂಪನ ಮನಸ್ಸು ಎರಡು ಕವಲಾಗಿ ಒಡೆದು, ಆತನ ಕವಿದೃಷ್ಟಿಯನ್ನು, ಆತನ ಉತ್ಸಾಹ ಧ್ವನಿಯನ್ನೂ ಸ್ವಲ್ಪಮಟ್ಟಿಗೆ ಕುಗ್ಗಿಸಿತೆಂದು ಹೇಳಬೇಕಾದ ನಿರ್ಬಂಧ ಒದಗಿದೆ..." ಎಂದು ಮುಂತಾಗಿ ಅಭಿಪ್ರಾಯಪಡುವಾಗ, ಮೂಲಮಹಾಭಾರತವನ್ನು ಪಂಪಭಾರತದೊಂದಿಗೆ ಹೋಲಿಸಿ, ಇಲ್ಲಿಯ ವಿಶೇಷತೆ ಗಳನ್ನೆಲ್ಲಾ ಗಮನಿಸಿ, ಪಂಪನಿಗೆ ಸಲ್ಲಬೇಕಾದ ಗೌರವವನ್ನೆಲ್ಲ ಸಲ್ಲಿಸಿ, ಕೊರತೆಯನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದ್ದು ಒಂದು ಸಮತೂಕದ ವಿಮರ್ಶೆಗೆ ಕುರುಹಾಗಿದೆ.

ಅರಿಕೇಸರಿಯನ್ನು ಅರ್ಜುನನೊಂದಿಗೆ ಸಮೀಕರಣಗೊಳಿಸುವುದರಿಂದಾದ ಅಚಾತುರ್ಯವನ್ನು ಗುರುತಿಸುತ್ತ ಶ್ರೀಯವರು "ಅರಿಕೇಸರಿಯ ದಾಕ್ಷಿಣ್ಯದಲ್ಲಿ ಭಾರತದ ಕವಿ ಜಾರಿದನು(ಕಣ್ಣು ಬಿಟ್ಟುಕೊಂಡೇ ಜಾರಿದನು)." ಎಂದಿರುವರು. ದ್ರೌಪದಿಯ ಮಾನಭಂಗದ ನಂತರ ಭೀಮನಿಗೆ ದೊರೆಯುವ ಪ್ರಾಮುಖ್ಯತೆ, ಕೊನೆಗೆ ಪಟ್ಟಾಭಿಷೇಕ ಅರ್ಜುನನಿಗೆ ಸಂದಾಗ ಸುಭದ್ರೆಗೆ ಪಟ್ಟಮಹಿಷಿತ್ವ ದೊರೆಯುವ ಸಂದರ್ಭ ಮುಂತಾದವುಗಳಲ್ಲಿ ಕಂಡುಬರುವ ಪಂಪನ ಔಚಿತ್ಯ ಪ್ರಜ್ಞೆಯನ್ನೂ ಶ್ರೀಯವರು ಪ್ರಶ್ನಿಸದೆ ಬಿಟ್ಟಿಲ್ಲ.

ರನ್ನನ ಅಜಿತ ಪುರಾಣವನ್ನು ವಿಮರ್ಶಿಸುತ್ತ "....ಈ ಗ್ರಂಥದಲ್ಲಿ ಕವಿಗಿಂತಲೂ ಶಾಸ್ತ್ರಜ್ಞನು ಹೆಚ್ಚು ಕಾಣಿಸಿಕೊಳ್ಳುವನು. ಗದಾಯುದ್ಧದ ಯೌವನದ ಉತ್ಸಾಹವೂ ಕಳಕಳಿಯೂ ಕವಿತಾವೇಶವೂ ಇದರಲ್ಲಿ ಮುಳುಗುವ ಸೂರ್ಯನ ಕಾಂತಿಯಂತೆ ತಂಪುಗೊಂಡಿದೆ" ಎನ್ನುವಾಗ ರನ್ನ ತನ್ನ ಕವಿತ್ವಕ್ಕಿಂತ ಧರ್ಮಶಾಸ್ತ್ರಜ್ಞತ್ವವನ್ನು ಪ್ರದರ್ಶಿಸುವುದು ಸ್ಪಷ್ಟವಾಗುತ್ತದಲ್ಲದೆ. ಉರಿಯುವ ಸೂರ್ಯನ ಅಂದರೆ ಗದಾಯುದ್ಧದ ಅವೇಶ ಇಳಿದು ಮುಳುಗುವ ಸೂರ್ಯನ ಶಾಂತಭಾವವು ಇಲ್ಲಿ ವ್ಯಕ್ತವಾಗಿದ್ದುದು ಸೂಚಿತವಾಗುತ್ತದೆ." ಇಂಥ ಕೆಲವು ಸಂದರ್ಭಗಳಲ್ಲಿ ಶ್ರೀಯವರ ವಿಮರ್ಶೆ ಅಲಂಕಾರಿಕವಾಗುತ್ತಿರುವುದನ್ನು ಗಮನಿಸಬಹುದು.

'ಪಂಪಭಾರತ' ಮತ್ತು 'ಪಂಪರಾಮಾಯಣ'ಗಳ ಅಭಿವ್ಯಕ್ತಿ ಸಾಮರ್ಥ್ಯ ಅಸಾಧಾರಣವಾಗಿರುವುದನ್ನು ವಿಮರ್ಶಕರೆಲ್ಲ ಬಲ್ಲರು. ಇವುಗಳ ಮೇಲ್ಮೆಯನ್ನು ಎತ್ತಿ ಹೇಳುವಾಗ ವಿಮರ್ಶೆ ಪ್ರಶಂಸೆಯಾಗುವುದು ಸ್ವಾಭಾವಿಕ. ಇಂಥ ವಿಮರ್ಶಾತ್ಮಕ ಪ್ರಶಂಸೆ (critical appreciation) ಕೂಡ ವಿಮರ್ಶೆಯ ಒಂದು ಮಹತ್ವದ ಮುಖವಾಗಿರುವುದರಿಂದ ಶ್ರೀಯವರ ಈ ಬಗೆಯ ವಿಮರ್ಶೆಯ ವೈಶಿಷ್ಟ್ಯವನ್ನು ಗಮನಿಸಬೇಕಾಗುತ್ತದೆ. ಪಂಪರಾಮಾಯಣವನ್ನು ಕುರಿತು ಬರೆಯುತ್ತ ಒಂದೆಡೆಯಲ್ಲಿ ಶ್ರೀಯವರು "ರಾಮಾಯಣ ಕಾವ್ಯಕಥೆ ಜೈನ ಪುರಾಣದಿಂದ ಮುಸುಗಿಹೋಗಿದೆ" ಎಂದು ಹೇಳಿಯೂ ಅದರ ವೈಶಿಷ್ಟ್ಯ ಘನತೆಗಳನ್ನು ಗುರುತಿಸಿದ್ದಾರೆ. ರಾವಣ-ಸೀತೆಯರ ಕೊನೆಯ ಸಂದರ್ಶನವನ್ನು ಗಮನಿಸಿ "ಇಂಥ ಬರವಣಿಗೆ ಕನ್ನಡ ಸಾಹಿತ್ಯದಲ್ಲಿ ಅಪೂರ್ವ; ಪದ, ಅರ್ಥ, ಭಾವ, ರಸ, ಮನುಷ್ಯ ಹೃದಯ ಜ್ಞಾನ, ಔದಾರ್ಯ, ಸೀತೆಯ ರಾವಣನ ಉದಾತ್ತ ಚಿತ್ರ-ಎಲ್ಲಕ್ಕೂ ಮೇಲೆ ಧರ್ಮದೃಷ್ಟಿ; ಒಂದು ನುಡಿ ಬಿಡದ ಹಾಗೆ, ಒಂದು ನುಡಿ ಸೇರಿಸದ ಹಾಗೆ ಕನ್ನಡದ ಸಂಸ್ಕೃತದ ಶಬ್ದವಿನ್ಯಾಸ, ಸರಳ, ಗಂಭೀರ, ನಾಟಕೀಯ ಶೈಲಿ. ವೃತ್ತಕಂಡ ವಚನಗಳ ಸಮಕಟ್ಟು" ಎಂದು ಮುಂತಾಗಿ ವರ್ಣಿಸಲಾಗಿದೆಯಲ್ಲದೆ "ಇಂತಹ ಕಾವ್ಯಪಟ್ಟಿಗಳೇ ನಮಗೆ ಹೆರರ ಗೌರವವನ್ನು ತರತಕ್ಕವು" ಎಂದಿರುವುದು ಕನ್ನಡ ಕಾವ್ಯದ ಕೊಡುಗೆಯನ್ನು ಮುಕ್ತ ಮನಸ್ಸಿನಿಂದ ಗುರುತಿಸುವ ದೃಷ್ಟಿಕೋನಕ್ಕೆ ಒಂದು ನಿದರ್ಶನವಾಗಿದೆಯೆಂದು ಹೇಳಬೇಕು.

ಪಂಪ, ರನ್ನ, ನಾಗಚಂದ್ರ, ಕುಮಾರವ್ಯಾಸ ಇವರನ್ನು ಕುರಿತು ಬರೆದ ಕೆಲವು ಸಾಂದರ್ಭಿಕ ಲೇಖನಗಳು ಸಂಪೂರ್ಣವಾಗಿ ವಿಮರ್ಶೆಗೆಂದೇ ಸೃಷ್ಟಿಯಾದವಲ್ಲ. ಅವು ಹೆಚ್ಚಾಗಿ ಪ್ರಶಸ್ತಿಗ್ರಂಥಗಳಿಗೆ ಬರೆದ ಮುನ್ನುಡಿಗಳಾಗಿವೆ. ಇಲ್ಲಿ ನಾವು ಸಾಮಾನ್ಯವಾಗಿ ಕಾಣುವುದು ಕವಿ ಪ್ರಶಂಸೆಯನ್ನೇ. ಹಾಗಿದ್ದರೂ ಶ್ರೀಯವರು ಅಲ್ಲಲ್ಲಿ ಮೌಲ್ಯಮಾಪನಕ್ಕೂ

ತೊಡಗಿದ್ದುದುಂಟು, ಒಂದೆರಡು ಸಂದರ್ಭಗಳಲ್ಲಿ ಕಾಲ್ಪನಿಕ ದೃಷ್ಟಿಯಿಂದ ತೂಗಿ ನೋಡಿದ್ದೂ ಉಂಟು.

ನಾಗಚಂದ್ರನ ಮಲ್ಲಿನಾಥ ಪುರಾಣವನ್ನು ಕುರಿತು ಬರೆಯುತ್ತ "ಇದ್ದ ನೂಲು ಸ್ವಲ್ಪ" ಎಂದು ಕಥಾವಸ್ತುವಿನ ಬಗ್ಗೆ ಒಂದು ಮಾತು ಹೇಳಿ, ಆತನ ಕಾವ್ಯಶಕ್ತಿಯನ್ನು ಪರಾಮರ್ಶಿಸುತ್ತ "ಜಿನಭಕ್ತನಿಗೂ ಸರಿ, ಕವಿತಾಪದ್ಧತಿಯನ್ನು ಪ್ರದರ್ಶಿಸುವವನಿಗೂ ಸರಿ, ಇದರ ಮೇಲೆ ಇನ್ನೂ ಪ್ರಾಯಃ ಕವಿತ್ವ ದುಡುಕುತ್ತಿದೆ–ಜಿನಧರ್ಮ ಕಡಿವಾಣವನ್ನೂ ಸೆಳೆಯುತ್ತಿದೆ" ಎಂದು ಮುಂತಾಗಿ ಕೆಲವು ನ್ಯೂನತೆಗಳನ್ನು ನಯವಾಗಿ ಎತ್ತಿ ತೋರಿಸಿ; 'ಈ ಗ್ರಂಥ ಸತ್ಕೃತಿಯೇ ಸರಿ–ಉತ್ಕೃಷ್ಟ ಕೃತಿಯೂ ಅಹುದೆ? ಮೊದಲನೆಯ ಪಂಕ್ತಿಯ ಕಾವ್ಯಗಳಲ್ಲಿ ಸೇರುವುದೆ?" ಎಂಬ ಪ್ರಶ್ನೆಗಳನ್ನೆತ್ತಿ ತಮ್ಮ ಅಭಿಪ್ರಾಯಗಳನ್ನು ಪರ್ಯಾಯವಾಗಿ ಸೂಚಿಸುತ್ತಾರೆ. ಇದು ನವೋದಯ ಕಾಲದ ಒಂದು ವಿಮರ್ಶೆಯ ಮಾದರಿಯೆಂದು ಹೇಳಬಹುದು.

'ಕುಮಾರವ್ಯಾಸ ಪ್ರಶಸ್ತಿ'ಗೆ ಮುನ್ನುಡಿ ಬರೆಯುತ್ತ ಶ್ರೀಯವರು ಪಂಪ ಹಾಗು ಕುಮಾರವ್ಯಾಸರನ್ನು ಒಂದು ಘಟ್ಟದಲ್ಲಿ ತೂಗಿ ನೋಡಿರುವರು. ಯಾಕೆಂದರೆ ಇಬ್ಬರ ಕಥಾವಸ್ತು ವ್ಯಾಸಭಾರತದ್ದು. ಒಂದು ವಸ್ತುವನ್ನು ಇಬ್ಬರು ಕವಿಗಳು ಆಯ್ದುಕೊಂಡಾಗ ಅವರು ಮಾಡಿಕೊಂಡ ಸನ್ನಿವೇಶದಲ್ಲಿಯ ಮಾರ್ಪಾಟುಗಳನ್ನು, ಪಾತ್ರಚಿತ್ರಣದಲ್ಲಿಯ ಬದಲಾವಣೆಗಳನ್ನು ಗಮನಿಸಬೇಕಾದುದು ಅನಿವಾರ್ಯವಾಗುತ್ತದೆ. ಪಂಪ ದೊಡ್ಡಕವಿ ಎಂಬುದಕ್ಕೆ ಎರಡಿಲ್ಲ. ಆತನು ಅರ್ಜುನನನ್ನು ಅರಿಕೇಸರಿಯನ್ನಾಗಿ ಮಾಡಿದಾಗ ಕೆಲವು ಆತಂಕಗಳನ್ನು ಎದುರಿಸಬೇಕಾಯಿತು. "ದ್ರೌಪದಿ ಯಾರ ಹೆಂಡತಿ? ಭೀಮನಿಗೂ ಅವಳಿಗೂ ಏನು ಎಷ್ಟು ಸಂಬಂಧ?" ಎಂದು ಮುಂತಾಗಿ ಪ್ರಶ್ನಿಸುವ ಅಗತ್ಯ ವಿಮರ್ಶಕರಲ್ಲಿ ಉಂಟಾಯಿತು. "ಇವರ್ಗಳಿಗೀ ಭಾರತಂ ಲೋಕಪೂಜ್ಯಂ" ಎಂದು ಹೇಳುವಲ್ಲಿ ಕೃಷ್ಣನಿಗೆ ಅವಕಾಶವೇ ದೊರೆಯಲಿಲ್ಲ. ಅಂತೆಯೇ ಶ್ರೀಯವರು "ಪಂಪನ ದರ್ಶನದಲ್ಲಿ ಕೃಷ್ಣ ಬಣ್ಣವಿಳಿದ; ಭಗವದ್ಗೀತೆ, ಅಕ್ಷಯ ವಸ್ತ್ರ ಮುಂತಾದವು ಕಣ್ಣು ಮರೆಯಾದವು; ಇಲ್ಲ, ಸಣ್ಣ ಚಿಕ್ಕಿಗಳಾದವು" ಎಂದಿರುವುದು. "ನಾರಣಪ್ಪನ ನೋಟ, ಕುಮಾರವ್ಯಾಸನ ದರ್ಶನ, ಭಕ್ತಿಯ ಆವೇಶ ಬೇರೆ" ಎಂದು ನುಡಿಯುತ್ತ ಅವನಲ್ಲಿಯೂ ಇರುವ ವ್ಯಕ್ತಿದೋಷವನ್ನು ಒಂದಿಷ್ಟು ತೋರಿಸಿ, "ಆಧ್ಯಾತ್ಮಿಕದ ಕಿಚ್ಚು, ವೇದಾಂತದ ತಿರುಳು, ಕಾವ್ಯದ ಕಾವು, ಪಾತ್ರದ ಬೆಡಗು, ಸಂಭಾಷಣೆಯ ಸಾರ – ಯಾವ ರಸವೆಂದರೆ ಆ ರಸ ಭಟ್ಟಿ ಇಳಿಸಿ, ಭಗವದ್ಗೀತೆಯನ್ನು ಸಿಂಹಾವಲೋಕನದಿಂದ ತನ್ನತನದಲ್ಲಿ ತಾನು ಹಾಡಿರುವುದನ್ನು.........." ಗಮನಿಸುತ್ತಾರೆ. ಹೀಗೆ ಕುಮಾರವ್ಯಾಸನ ಕಡೆಗೆ ಅವರ ರಸಜ್ಞತೆ ವಾಲುತ್ತಿದ್ದರೂ ಒಟ್ಟು ನೋಟದಲ್ಲಿ ಅವರು ತೂಕ ತಪ್ಪುವುದಿಲ್ಲ.

ಅವರವರ ದರ್ಶನದ ವೈಶಿಷ್ಟ್ಯ ಅವರವರಿಗೆ ಇರುವುದನ್ನು ಅವರು ಬಲ್ಲರು. "ನಮ್ಮ ಸಾಹಿತ್ಯದ ಉತ್ತಮ ರತ್ನಗಳಲ್ಲಿ ನಾಯಕರತ್ನ: ಪಂಪ, ರನ್ನ, ಬಸವಣ್ಣ, ಹರೀಶ್ವರ, ಪುರಂದರ, ಲಕ್ಷ್ಮೀಶ – ಇವರ ಜೊತೆಯಲ್ಲಿ ನಾರಣಪ್ಪನನ್ನು ನಿಲ್ಲಿಸಿ, ಕೈಯಲ್ಲಿ ಕನ್ನಡ ಬಾವುಟಕೊಟ್ಟು, ಲೋಕದ ಯಾವ ದೊಡ್ಡಕವಿಯನ್ನಾದರೂ ಧೈರ್ಯದಿಂದ ಪ್ರೇಮದಿಂದ ಎದುರುಗೊಳ್ಳಬಹುದು." ಎಂಬುದು ಶ್ರೀಯವರ ಸಮನ್ವಯ ಭಾವದ, ಸಮುಚಿತ ನೋಟದ ಸ್ಪಷ್ಟ ನಿಲುವು. ಇದು ಕನ್ನಡದ ಅಭಿಮಾನದ ನಿಲುವೂ ಅಹುದು.

ಇಬ್ಸನ್‌ನನ್ನು ಕುರಿತು ಬರೆಯುವಾಗ, ಸಂಸ್ಕೃತ ನಾಟಕಗಳನ್ನು ಕುರಿತು ಬರೆಯುವಾಗ ಶ್ರೀಯವರ ಕಾಲ್ಪನಿಕ ವಿಮರ್ಶಾದೃಷ್ಟಿ ಜಾಗೃತವಾಗಿಯೇ ಕಾರ್ಯ ಮಾಡುತ್ತದೆ. ಇಬ್ಸನ್‌ನ ನಾಟಕಗಳು ಕಥಾಸಂವಿಧಾನ, ಸ್ವಾಭಾವಿಕವಾದ ಸಾರವತ್ತಾದ ಸಮವಾದ, ಸಮಾಜ ವಿಮರ್ಶನ ಬುದ್ಧಿ ಇವುಗಳ ವೈಶಿಷ್ಟ್ಯದಿಂದ ವಿಮರ್ಶಕರ ಹೊಗಳಿಕೆಗೆ ಪಾತ್ರವಾಗಿರುವವೇನೋ ನಿಜ. ಆದರೆ ಶ್ರೀಯವರು "ಗ್ರೀಕರು ಮೂವರು, ಷೇಕ್ಸ್‌ಪಿಯರ್, ಕಾಳಿದಾಸ – ಇವರ ಮಟ್ಟಕ್ಕೆ ಇಬ್ಸನ್ ಏರಬಲ್ಲನೇ ಎಂಬುದು ಸಂಶಯದ ವಿಷಯ" ಎನ್ನುತ್ತಾರೆ. ಗ್ರೀಕ್, ಇಂಗ್ಲೀಷ್ ಮತ್ತು ಸಂಸ್ಕೃತ ನಾಟಕಗಳನ್ನು ಆಳವಾಗಿ ಅಧ್ಯಯನ ಮಾಡಿದ ಅವರು ಹೀಗೆ ಸಂಶಯಪಟ್ಟುದರಲ್ಲಿ ಅರ್ಥವಿಲ್ಲದಿಲ್ಲ. 'ಸಂಸ್ಕೃತ ನಾಟಕ' ಎಂಬ ಗ್ರಂಥಕ್ಕೆ ಅವರು ಬರೆದ ಮುನ್ನುಡಿಯು ಗ್ರೀಕ್, ಸಂಸ್ಕೃತ ಮತ್ತು ಇಂಗ್ಲೀಷ್ ನಾಟಕಗಳ ಒಂದು ಸಂಶೋಧನಾತ್ಮಕ ಮತ್ತು ವಿಮರ್ಶಾತ್ಮಕ ಪ್ರಬಂಧವಾಗಿದೆ. ಈ ಪ್ರಬಂಧದ ಆಲೋಚನೆಯ ಒಂದು ಹಂತದಲ್ಲಿ "ಸಂಸ್ಕೃತ ನಾಟಕ ವಿದ್ಯಾರ್ಥಿಗಳು ಗ್ರೀಕ್ ಲಕ್ಷ್ಯ ಲಕ್ಷಣಗಳನ್ನು ಸಂಸ್ಕೃತದವುಗಳೊಡನೆ ಹೋಲಿಸಿ ವಿಮರ್ಶೆ ಮಾಡಿಕೊಳ್ಳಬೇಕು. ಮತ್ತು ಆಮೇಲೆ ೧೬ನೆಯ ಶತಮಾನದಿಂದ ಬೆಳೆದ ಯುರೋಪಿನ, ಮುಖ್ಯವಾಗಿ ಷೇಕ್ಸ್‌ಪಿಯರ್ ಪ್ರಧಾನವಾದ ಇಂಗ್ಲೀಷ್ ನಾಟಕದ ಲಕ್ಷ್ಯ ಲಕ್ಷಣಗಳನ್ನು ದೃಷ್ಟಿಸಬೇಕು" ಎಂದು ಸಲಹೆ ಮಾಡಿರುವರು. ಅಷ್ಟಲ್ಲದೆ ಸ್ವತಃ ಅವರು ಮುನ್ನುಡಿಯ ವ್ಯಾಪ್ತಿಯನ್ನು ಸ್ವಲ್ಪ ಮೀರಿ ಅಲ್ಲಲ್ಲಿಗೆ ಗ್ರೀಕ್, ಸಂಸ್ಕೃತ, ಇಂಗ್ಲೀಷ್ ನಾಟಕಗಳ ವಿಶೇಷತೆಗಳನ್ನು ಗುರುತಿಸುತ್ತ ಹೋಗಿರುವರು. ಅವರಿಗೆ ಸ್ವಭಾವ ಸಹಜವಾದ ನಾಟಕಗಳ ಮೇಲಿನ ಪ್ರೀತಿ ಮತ್ತು ಅವುಗಳ ಅಧ್ಯಯನದಲ್ಲಿರುವ ಪರಿಣತಿ ಎರಡೂ ಈ ಪ್ರಬಂಧದಲ್ಲಿ ಎದ್ದು ಕಾಣುತ್ತಿರುವುದನ್ನು ಗಮನಿಸಬಹುದು.

ಪ್ರಾಚೀನ ಕಾವ್ಯ, ನಾಟಕಗಳನ್ನು ವಿಮರ್ಶಿಸಿದ ಶ್ರೀಯವರು ತಮ್ಮ ಸಮಕಾಲೀನ ಕೃತಿಗಳನ್ನು ಆತ್ಮೀಯತೆಯಿಂದ ಅವಲೋಕಿಸಿದ್ದಾರೆ. ಮಾಸ್ತಿ, ಕುವೆಂಪು, ಕಾರಂತ ಈ ಮೊದಲಾದವರ ಕೃತಿಗಳಿಗೆ ಏನನ್ನೇ ಬರೆಯಲಿ, ಅವರು ತುಂಬ

ಸಹೃದಯದೆಯಿಂದ, ಗುಣಗ್ರಾಹತೆಯಿಂದ, ಪ್ರೋತ್ಸಾಹಿಸುವ ದೃಷ್ಟಿಯಿಂದ ಬರೆದದ್ದೇ ಹೆಚ್ಚು. ಹಾಗಿದ್ದರೂ ಕೆಲವು ವಿಮರ್ಶಾ ಮಾತುಗಳನ್ನು ಅವರು ಹೇಳದೇ ಬಿಟ್ಟಿಲ್ಲ. ಮಾಸ್ತಿಯವರ 'ಶಾಂತಾ' ಎಂಬ ಕೃತಿಯನ್ನು ಕುರಿತು ಬರೆಯುತ್ತ "ಈ ಗ್ರಂಥದಲ್ಲಿ ಅಲ್ಲಲ್ಲಿ ಅಸಾಧುವಾದ ಶಬ್ದ ಪ್ರಯೋಗಗಳೂ, ಶಬ್ದ ರೂಪಗಳು, ವೃತ್ತದೋಷವೂ ಭಾಷಾಸರಣಿಯೂ ವೈಯಾಕರಣಿಗಳ ದೃಷ್ಟಿಗೆ ಬೀಳದೆ ಇರಲಾರವು. ಒಂದೆರಡು ಕಡೆ ಸರಸ ಸಲ್ಲಾಪಕ್ಕೆ ಹೆಚ್ಚು ಗಮನಕೊಟ್ಟು ಗಾಂಭೀರ್ಯದ ಕಡೆಗೆ ಸ್ವಲ್ಪ ಕಡಿಮೆ ಗಮನಕೊಟ್ಟಂತೆ ನಮ್ಮ ಬುದ್ಧಿಗೆ ತೋರುತ್ತದೆ." ಎಂದು ಮುಂತಾಗಿ ಹೇಳುವಾಗ ದಾಕ್ಷಿಣ್ಯಕ್ಕೆ ಒಳಗಾಗದೆ, ಸೌಹಾರ್ದತೆಗೆ ಭಂಗತಂದುಕೊಳ್ಳದೆ ವಿಮರ್ಶನ ಕಾರ್ಯಕ್ಕೆ ತೊಡಗಿದ್ದು ಆ ಕಾಲದಲ್ಲಿಯ ಒಂದು ವಿಶೇಷವಾಗಿಯೇ ಕಾಣದಿರದು.

ಶ್ರೀಯವರ ವಿಮರ್ಶೆ ಅವರ ವ್ಯಾಪಕವಾದ, ಉನ್ನತವಾದ ವ್ಯಾಸಂಗ ಪರಿಣತಿಯನ್ನು ಅವಲಂಬಿಸಿದೆ. ಒಂದು ಕೃತಿಯನ್ನು ಅರ್ಥೈಸುವ, ವಿಶೇಷತೆಗಳನ್ನು ವಿವರಿಸಿ ತೋರಿಸುವ, ಘನತೆಯನ್ನು ಎತ್ತಿಹೇಳುವ ಅಥವಾ ಕೊಂಡಾಡುವ ದೃಷ್ಟಿ ಅವರಿಗಿರುವಂತೆ ಅದರ ಲೋಪದೋಷಗಳನ್ನು ಗುರುತಿಸುವ, ಬೇರೆ ಕೃತಿಯೊಂದಿಗೆ ಹೋಲಿಸಿ ನೋಡುವ ದೃಷ್ಟಿಕೋನವೂ ಅವರಿಗಿದ್ದುದು ಸ್ಪಷ್ಟವಾಗಿ ಕಂಡುಬರುತ್ತದೆ. ಅವರು ಒಂದು ಕೃತಿಯಲ್ಲಿ ಉತ್ತಮಾಂಶಗಳನ್ನು ಕಂಡಾಗ ಭಾವಪರವಶರಾಗಿ ವರ್ಣಿಸಬಲ್ಲರು, ಭಾಷೆ, ಅಲಂಕಾರದ, ಪಾತ್ರಚಿತ್ರಣದ, ಸನ್ನಿವೇಶದ ಕೊರತೆಗಳು ಕಂಡಾಗ ಸೂಚ್ಯವಾಗಿ ಒಮ್ಮೊಮ್ಮೆ ಸ್ಪಷ್ಟವಾಗಿ ವಿಮರ್ಶಿಸಬಲ್ಲರು. ಅವರು ಸುಸಂಸ್ಕೃತ ಸಹೃದಯರಾಗಿರುವಂತೆ ಜ್ಞಾನಸಂಪನ್ನ ವೈಚಾರಿಕರೂ ಆಗಿರುವರು. ಅವರು ತಮ್ಮ ಆಲೋಚನೆಯ, ಚಿಂತನೆಯ ವ್ಯಾಪ್ತಿಯೊಳಗೆ ನಾಡು, ನುಡಿ, ಭಾಷೆ, ವ್ಯಾಕರಣ, ಅಲಂಕಾರ, ಕಾವ್ಯಮೀಮಾಂಸೆ, ಧರ್ಮ, ತತ್ವ ಮುಂತಾದವುಗಳನ್ನು ಅಳವಡಿಸಿಕೊಂಡಿರುವುದು ಅವರ ಬಹುಶ್ರುತತ್ವಕ್ಕೆ ಒಂದು ಕುರುಹು. ಅಷ್ಟಲ್ಲದೆ ಗ್ರೀಕ್, ಸಂಸ್ಕೃತ, ತಮಿಳು, ಇಂಗ್ಲೀಷ್‌ಗಳ ಮೇಲಿನ ಅವರ ಅಗಾಧವಾದ ಪಾಂಡಿತ್ಯ ಕನ್ನಡದ ಚಿಂತನೆಗೆ ಒಂದು ಮೆರಗು ತಂದು ಕೊಟ್ಟಿರುವುದು ಸಾಮಾನ್ಯವಾದ ಮಾತಾಗಿಲ್ಲ.

ಸ್ವತಃ ಹಲವು ಕೃತಿಗಳನ್ನು ವಿಮರ್ಶೆಗೆ ಒಳಪಡಿಸಿದ ಶ್ರೀಯವರು ಅವಕಾಶ ದೊರೆತಾಗಲೆಲ್ಲ ವಿಮರ್ಶೆಯ ಅಗತ್ಯವನ್ನೂ ತತ್ಸಂಬಂಧವಾದ ವಿಚಾರಗಳನ್ನೂ ಪ್ರತಿಪಾದಿಸುತ್ತಲೇ ಬಂದಿರುವುದು ಮಹತ್ವದ ಸಂಗತಿಯಾಗಿದೆ. ಉದಾಹರಣೆಗಾಗಿ ಈ ಕೆಳಗಿನ ಅವರ ಕೆಲವು ಉಕ್ತಿಗಳನ್ನು ಗಮನಿಸಬಹುದು.

೧. "ಕನ್ನಡ ಕಾವ್ಯರಾಶಿಯನ್ನು ಹೊರಕ್ಕೆ ತಂದು ಹೆಮ್ಮೆ ಪಟ್ಟುದಾಯಿತು. ಈಗ ಬೇಕಾಗಿರುವುದು ಅದರ ಯೋಗ್ಯತೆಯನ್ನು ಗೊತ್ತುಮಾಡುವ ವಿಮರ್ಶೆ. ಜಳ್ಳನ್ನು

ತೂರಿ, ಕಾಳನ್ನು ತುಂಬಿಕೊಳ್ಳಬೇಕಾಗಿದೆ ಈಗ, ಸಾಹಿತ್ಯ ಕಲಾಪುತ್ರರ ಆತ್ಮಪುಷ್ಟಿಗಾಗಿ". ('ರನ್ನನ ಪ್ರಶಸ್ತಿ' ಮುನ್ನುಡಿ)

೨. "ನಮ್ಮದು ಆದದ್ದರಿಂದ ಹೆಮ್ಮೆಯದು ಎಂಬ ದುರಭಿಮಾನವನ್ನು ಬಿಡೋಣ. ತಾರತಮ್ಯವನ್ನೂ ಬಲ್ಲ ವಿಮರ್ಶೆಯನ್ನು ಅಭ್ಯಾಸಮಾಡೋಣ." (ಕಲಬುರ್ಗಿ ಸಾಹಿತ್ಯ ಸಮ್ಮೇಳನ ಅಧ್ಯಕ್ಷ ಭಾಷಣ)

೩. "ಸತ್ಯ, ಸೌಂದರ್ಯ, ಸ್ವಾತಂತ್ರ್ಯ, ಸಹಾನುಭೂತಿ, ಸರ್ವಸಮತೆ–ಇವೆಲ್ಲಾ ಸಧರ್ಮದ ಲಕ್ಷಣಗಳು. ಚಿನ್ನದೊಡನೆ ಕೂಡುವುದು ಚಿನ್ನ – ಹಿತ್ತಾಳೆಯಲ್ಲ; ಪಾದರಸದೊಡನೆ ಹೊಂದಿಕೊಳ್ಳುವುದು ಪಾದರಸ, ಕಸವಲ್ಲ, ತೂರಬೇಕು, ಸೋಸಬೇಕು, ಒರೆಗಲ್ಲಿಗೆ ತೀಡಬೇಕು, ನೋಡಬೇಕು." ("ವಚನಧರ್ಮಸಾರ" ಮುನ್ನುಡಿ)

ನಿರ್ವಂಚನೆಯಿಂದ, ನಿಷ್ಪಕ್ಷಪಾತದಿಂದ ವಿಮರ್ಶನ ಕಾರ್ಯ ನಡೆಯಬೇಕಾದುದರ ಅಗತ್ಯವನ್ನು ಶ್ರೀಯವರಿಂದ ನಾವು ಕಲಿತುಕೊಳ್ಳಬೇಕಾಗಿದೆ. "ಶ್ರೀಯವರು ಆಧುನಿಕ ವಿಮರ್ಶಾ ಸಾಹಿತ್ಯವನ್ನು ಪ್ರೇರಿಸಿದರಾದರೂ ಭದ್ರವಾದ ತಳಹದಿಯನ್ನು ಹಾಕಲಿಲ್ಲ" ಎಂಬ ಅಭಿಪ್ರಾಯವೂ ಬಂದಿದೆ. ಶ್ರೀಯವರು ವಿಮರ್ಶೆಯಲ್ಲಿ ಮಾಡಿದ ಕಾರ್ಯವನ್ನು ಗಮನಿಸಿದರೆ ಈ ಅಭಿಪ್ರಾಯವನ್ನು ಇದ್ದಕ್ಕಿದ್ದಂತೆ ಒಪ್ಪಿಕೊಳ್ಳುವುದು ಕಷ್ಟದಾಯಕ. ಕನ್ನಡ ವಿಮರ್ಶೆಯ ಶೈಶವಾವಸ್ಥೆಯಲ್ಲಿ ಮುಗ್ಧತೆ, ಭಾವುಕತೆಗಳು, ಅಲ್ಲಿ–ಇಲ್ಲಿ ಅಸ್ಪಷ್ಟತೆಗಳು, ತಿಳುವಳಿಕೆಯ ತಾಕಲಾಟಗಳು ಕಂಡುಬಂದಿರಬಹುದು. ಉತ್ತಮ ವಾದುದನ್ನು ಕಂಡಾಗ ಅಮಿತೋತ್ಸಾಹದಿಂದ ವೈಭವೀಕರಿಸಿ ಬಣ್ಣಿಸಿರಲೂಬಹುದು. ಹಾಗಿದ್ದೂ ಶ್ರೀಯವರು ವೈಚಾರಿಕತೆಯನ್ನು, ವಿವೇಚನಾಪರತೆಯನ್ನು, ಕಾಲ್ಪನಿಕ ದೃಷ್ಟಿಯನ್ನೂ ಬೆಲೆಕಟ್ಟುವ ಧೋರಣೆಯನ್ನು ತಳೆದದ್ದು ನಮ್ಮ ವಿಮರ್ಶಾ ಸಾಹಿತ್ಯದಲ್ಲಿ ಮಹತ್ವದ ಸಂಗತಿಯೇ ಆಗಿದೆ. ಈ ನಿಟ್ಟಿನಿಂದ ನೋಡಿದಾಗ ಶ್ರೀಯವರು ಕನ್ನಡ ವಿಮರ್ಶೆಗೆ ಒಂದು ದಾರಿಯನ್ನು ನಿರ್ಮಿಸಿಕೊಟ್ಟಿದ್ದುದು ಸ್ಪಷ್ಟವಾಗಿ ಕಂಡುಬರುತ್ತದೆ. ನವೋದಯ ಕಾಲದ ಬಹುಪಾಲು ವಿಮರ್ಶೆ ಶ್ರೀಯವರಿಗೆ ಋಣಿಯಾಗಿದೆಯೆಂದು ಹೇಳಬಹುದು.

ಕಾವ್ಯದ ಮುಖ್ಯ ಅಂಗಗಳಾದ ಛಂದಸ್ಶಾಸ್ತ್ರ, ಅಲಂಕಾರ ಶಾಸ್ತ್ರ, ಕಾವ್ಯಮೀಮಾಂಸೆ ಮತ್ತು ವಿಮರ್ಶೆ ಈ ಎಲ್ಲ ವಿಷಯಗಳನ್ನು ಶ್ರೀಯವರು ತಮ್ಮ ಅಧ್ಯಯನ ಕಕ್ಷೆಯೊಳಗೆ ಒಮ್ಮೆಗೆ ಬರಮಾಡಿಕೊಂಡಿದ್ದು ಒಂದು ಅಚ್ಚರಿಯ ಹಾಗೂ ಅನನ್ಯವಾದ ಸಂಗತಿ ಯಾಗಿದೆ. ಸಾಹಿತ್ಯ ವಿಮರ್ಶೆಗೆ ತೊಡಗುವುದರ ಜೊತೆಗೆ ಕಾವ್ಯಮೀಮಾಂಸೆಯ ಕಡೆಗೂ ಅವರು ಲಕ್ಷ್ಯ ಹರಿಸಿದ್ದಾರೆ. ಒಂದು ಮಾತು ಮಾತ್ರ ನಿಜ. ಅವರು ಲಕ್ಷ್ಯ ಹರಿಸಿದ ಕಾವ್ಯಮೀಮಾಂಸೆ ಪೌರ್ವಾತ್ಯ ಲಕ್ಷಣ ಶಾಸ್ತ್ರಕ್ಕೆ ಸಂಬಂಧಿಸಿರದೆ, ಪಾಶ್ಚಾತ್ಯ

ಲಕ್ಷಣ ಶಾಸ್ತ್ರಕ್ಕೆ ಬದ್ಧವಾಗಿದೆ. ಪೌರ್ವಾತ್ಯ ಕಾವ್ಯಗಳನ್ನು ಅಥವಾ ನಾಟಕಗಳನ್ನು ವಿಮರ್ಶಿಸುವಾಗ ತತ್ಸಂಬಂಧವಾದ ಮೀಮಾಂಸೆಯ ವಿಷಯವೂ ಬಂದಿರಬಹುದು. ಆದರೆ ಅದು ಅನುಷಂಗಿಕ ಮತ್ತು ಪ್ರಾಸಂಗಿಕ.

'A Hand Book of Rhetoric' ಶ್ರೀಯವರ ಕಾವ್ಯಮೀಮಾಂಸೆಯ ಗ್ರಂಥ. ಇದನ್ನು ಇಂಗ್ಲೀಷ್ ವಿದ್ಯಾರ್ಥಿಗಳನ್ನು ಅದರಲ್ಲೂ ಪದವಿವರ್ಗಗಳ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಮದ್ರಾಸ್ ವಿಶ್ವವಿದ್ಯಾಲಯದ ಪಾಠಕ್ರಮಕ್ಕೆ ಬಳಸುವಂತೆ ಬರೆದುದಾಗಿ ತಿಳಿದುಬರುತ್ತದೆ. ಗ್ರಂಥದ ಹೆಸರೇ ಸೂಚಿಸುವಂತೆ ಇದು ಅಲಂಕಾರಶಾಸ್ತ್ರದ ಕೈಪಿಡಿ. ಕಾವ್ಯಮೀಮಾಂಸೆ ಇದರಲ್ಲಿ ಒಂದು ಭಾಗ ಮಾತ್ರ.

ಪ್ರಸ್ತುತ ಗ್ರಂಥದ ಪ್ರಥಮ ಭಾಗ – ಆಗಿದ್ದರೆ ದ್ವಿತೀಯ ಭಾಗ – Literary Form ಆಗಿದೆ. Composition ದಲ್ಲಿ ಚರ್ಚಿತವಾದ ವಿಷಯಗಳಲ್ಲಿ ಶೈಲಿ(style) ಮತ್ತು ಕಾವ್ಯಪದಪ್ರಯೋಗ (poetic diction) ಇವು ಕಾವ್ಯಮೀಮಾಂಸೆಗೂ ಸಂಬಂಧಿಸಿದ ವಿಷಯಗಳಾಗಿವೆ. ಶೈಲಿ, ಅದರ ಅಂಗಗಳು–ಗುಣಗಳು; ಅಲಂಕಾರಗಳು – ಅವುಗಳಲ್ಲಿಯ ಪ್ರಕಾರಗಳು ಅತ್ಯಂತ ಶಾಸ್ತ್ರೀಯವಾಗಿ ವಿವೇಚಿಸಲ್ಪಟ್ಟಿವೆ. ಕಾವ್ಯ ಪದಪ್ರಯೋಗದಲ್ಲಿಯೂ ಅದೇ ಕ್ರಮವನ್ನು ಅನುಸರಿಸಲಾಗಿದೆ. ಇವುಗಳ ಜೊತೆಗೆ ಛಂದಸ್ಸಿನ ವಿಷಯವೂ ಈ ಭಾಗದಲ್ಲಿ ಬಂದಿರುವುದುಂಟು.

Literary Form ಎಂಬ ವಿಭಾಗದಲ್ಲಿ ಸಾಹಿತ್ಯ ಅದರ ಸ್ವರೂಪ, ಅದರ ವಸ್ತು, ಅದರ ಪ್ರಕಾರ ಮುಂತಾದವುಗಳನ್ನು ಚರ್ಚಿಸಿ, The Forms of Poetry ಕುರಿತು ವಿವರವಾಗಿ ಚರ್ಚಿಸುತ್ತಾರೆ. ಈ ಚರ್ಚೆಯಲ್ಲಿ ಸ್ವತಂತ್ರವಾದ ಆಲೋಚನೆಯಿರುವುದಕ್ಕಿಂತ ಹೆಚ್ಚಾಗಿ ಈಗಾಗಲೇ ಚರ್ಚಿತವಾದ ಪಾಶ್ಚಾತ್ಯ ಲಾಕ್ಷಣಿಕರ, ಕವಿಗಳ ವಾಖ್ಯೆ–ವಾಖ್ಯಾನಗಳನ್ನು ಕ್ರೋಢೀಕರಿಸಿ ಪ್ರತಿಪಾದಿಸಲಾಗಿದೆ. ಕಾವ್ಯದ ವ್ಯಾಖ್ಯೆಯಲ್ಲಿ ಪ್ಲೇಟೋನ ವಿಚಾರಗಳಿಂದ ಪ್ರಾರಂಭಿಸಿ ವಾಟ್ಸ್ – ಡಂಟನ್‌ನವರೆಗಿನ ಆಲೋಚನೆಗಳನ್ನು ಶ್ರೀಯವರು ತಮ್ಮ ತಿಳಿಯಾದ ಭಾಷೆಯಲ್ಲಿ ಹಿಡಿದಿಟ್ಟಿರುವುದನ್ನು ಗಮನಿಸಬಹುದು. ಕಾವ್ಯದ ಪ್ರಕಾರ (Kinds of Poetry) ಕುರಿತು ಮಾತನಾಡುವಾಗ ಇತ್ತೀಚಿನ ವಿಚಾರಗಳನ್ನು ಅವರು ಗಮನಿಸುತ್ತಾರೆ. "Modern criticism is anxious to limit poetry to epic, drama and lyric. But certain other kinds have been prevalent in ancient times and have their modern representatives; and including these, we may divide poetry into Lyric Poetry, Narrative Poetry, Dramatic Poetry and minor kinds." ಎಂದು ಮುಂತಾಗಿ ವಿವರಿಸಿರುವರು. ಕಾವ್ಯ ಪ್ರಕಾರಗಳನ್ನಲ್ಲದೆ ಗದ್ಯದ ಹಲವು ಪ್ರಕಾರಗಳನ್ನು ಕುರಿತೂ

ಈ ಗ್ರಂಥದಲ್ಲಿ ವಿವರವಾದ ವಿವೇಚನೆ ಇದೆ. ಒಬ್ಬ ಆದರ್ಶ ಶಿಕ್ಷಕ ಸುವ್ಯವಸ್ಥಿತವಾಗಿ, ವಿವರವಾಗಿ ಬರೆದಿಟ್ಟುಕೊಂಡ ಟಿಪ್ಪಣಿಗಳ ತರಹ ಈ ಕೃತಿಯ ರಚನೆಯಿದೆ. 'ಕನ್ನಡ ಕೈಪಿಡಿ'ಯಂತೆ A Hand Book of Rhetric ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ ತುಂಬ ಉಪಯುಕ್ತವಾದ ಪುಸ್ತಕ.

ಕನ್ನಡದಲ್ಲಿ ಶ್ರೀಯವರ ಕಾವ್ಯಮೀಮಾಂಸೆಯ ವಿಚಾರಗಳಿರುವುದು ಬಹಳ ಕಡಿಮೆ. 'ರುದ್ರನಾಟಕ'ವನ್ನು ಕುರಿತು ಮಾಡಿದ ಅವರ ಭಾಷಣ ಅಷ್ಟರಮಟ್ಟಿಗೆ ಕಾವ್ಯಮೀಮಾಂಸೆಯು ವಿಷಯವಾಗಿದೆ. ಶ್ರೀ ಕೃಷ್ಣಶಾಸ್ತ್ರಿಗಳ 'ಸಂಸ್ಕೃತ ನಾಟಕ'ಕ್ಕೆ ಬರೆದ ಮುನ್ನುಡಿ ಗ್ರೀಕ್, ಇಂಗ್ಲೀಷ್ ಮತ್ತು ಸಂಸ್ಕೃತ ನಾಟಕಗಳ ವಸ್ತು, ಪಾತ್ರ, ಮನೋಧರ್ಮ ಮುಂತಾದವುಗಳನ್ನು ಚರ್ಚಿಸುತ್ತದೆ. ಇಲ್ಲಿ ಶ್ರೀಯವರು ಮೂರು ಭಾಷೆಗಳ ನಾಟಕಗಳ ಹುಟ್ಟು, ಬೆಳವಣಿಗೆಗಳನ್ನು ಪರಿಶೀಲಿಸಿ, ನಾಟಕಕ್ಕೆಲ್ಲಾ ಸಾಮಾನ್ಯವಾಗಿರುವ ಕೆಲವು ಅಂಶಗಳನ್ನು ಗುರುತಿಸಿರುವುದು ಒಂದು ವಿಶೇಷ. ಅವರು ಕ್ರಮವಾಗಿ ನಾಟಕದ ಸ್ವರೂಪ (Nature), ನಾಟಕದ ಉತ್ಪತ್ತಿ, ಜೀವಾಳ, (Origin and Essence), ನಾಟಕದ ಆಕಾರ, (Form), ನಾಟಕದ ವಾಹಕ (Medium), ನಾಟಕದ ವಿಷಯ, ವಸ್ತು, ಉದ್ದೇಶ (Matter, Fable, Myth Purpose, Aim) ಈ ಐದು ಅಂಶಗಳಿಗೆ ಮಹತ್ವಕೊಡುತ್ತಾರೆ. ಈ ಎಲ್ಲ ಅಂಶಗಳನ್ನು ಅವರು ಶಾಸ್ತ್ರೀಯವಾಗಿಯೇ ವಿವೇಚಿಸಿದ್ದುಂಟು. ಕೊನೆಯಲ್ಲಿ ನಾಟಕ ವಿಮರ್ಶೆಯನ್ನು ಬರೆಯುತ್ತ "ಒಟ್ಟಿನಲ್ಲಿ ಮೇಲೆ ನಾಟಕ ಸ್ವರೂಪದ, ನಾಟಕೀಯತೆಯ ಮುಖ್ಯಲಕ್ಷಣಗಳನ್ನು, ಜೀವಾಳವನ್ನು ಅರಿಸ್ಟೋಟಲನ, 'ಕಾವ್ಯಮೀಮಾಂಸೆ'ಯಲ್ಲಿಯೂ ಭರತನ 'ನಾಟ್ಯಶಾಸ್ತ್ರ'ದಲ್ಲಿಯೂ, ಈಸ್ಕಿಲಸ್, ಕಾಳಿದಾಸ, ಷೇಕ್ಸ್‌ಪಿಯರ್ ಮುಂತಾದ ಮಹಾಕವಿಗಳ ನಾಟಕ ಸೃಷ್ಟಿಯಲ್ಲಿಯೂ, ನೂತನ ಯುರೋಪಿನ ವಿಮರ್ಶೆಯಲ್ಲಿಯೂ ತಿಳಿಯಬಹುದು" ಎಂದಿದ್ದಾರೆ. ಮೂರೂ ಭಾಷೆಗಳಲ್ಲಿಯ ನಾಟಕಗಳನ್ನು ಗಮನಿಸಿ ಪೌರಾಣಿಕ, ಗಂಭೀರ, ರುದ್ರನಾಟಕ (Tragedy), ಹರ್ಷನಾಟಕ (Comedy), ಪ್ರಹಸನ (Farce), ಚರಿತ್ರೆ ನಾಟಕ (Historical Play), ಸಾಮಾಜಿಕ ನಾಟಕ (Social Play, Problem Play) ಎಂದು ವಿಂಗಡಿಸಿದ್ದಾರೆ.

ಈ ಎಲ್ಲ ನಾಟಕಗಳಲ್ಲಿ ಶ್ರೀಯವರಿಗೆ ಅತ್ಯಂತ ಪ್ರಿಯವಾದದ್ದು ರುದ್ರನಾಟಕ. ಅಂತೆಯೇ ಅವರು 'ಗದಾಯುದ್ಧ ನಾಟಕಂ', 'ಅಶ್ವತ್ಥಾಮನ್' ಮತ್ತು 'ಪಾರಸಿಕರು' ನಾಟಕಗಳನ್ನು ಸೃಷ್ಟಿಮಾಡಿದ್ದು; ಪಂಪನ ಕರ್ಣ, ರನ್ನನ ದುರ್ಯೋಧನ, ನಾಗಚಂದ್ರನ ರಾವಣ ಇವರನ್ನು ದುರಂತ ನಾಯಕರಾಗಿ ಕಂಡದ್ದು. ಎಂಬ ಅವರ ದೀರ್ಘ ಲೇಖನ ಅವರ ಒಲವಿಗೆ ಇನ್ನೊಂದು ಸಾಕ್ಷಿ. ಕನ್ನಡ ಕಾವ್ಯಗಳಲ್ಲಿ ದುರಂತ ನಾಯಕರಿರುವುದನ್ನು ಗುರುತಿಸಿದ್ದು, ರುದ್ರನಾಟಕಕ್ಕೆ ಬೇಕಾದ ವಸ್ತು ನಮ್ಮಲ್ಲಿಯೂ

ಇರುವುದನ್ನು ಪ್ರಾಯೋಗಿಕವಾಗಿ ಅವರು ತೋರಿಸಿಕೊಟ್ಟಿದ್ದು ನಮ್ಮ ನಾಟಕ ಸಾಹಿತ್ಯಕ್ಕೇ ಅವರು ನೀಡಿದ ಕೊಡುಗೆಯೆಂದು ಹೇಳಬಹುದು.

ಕಾವ್ಯದ ಸ್ವರೂಪ, ಗುಣ, ಪ್ರಯೋಜನಗಳನ್ನು ಗುರುತಿಸುವಂತೆ ಅದರ ದೋಷಗಳನ್ನು ಪಟ್ಟಿ ಮಾಡುವುದು ಕಾವ್ಯಮೀಮಾಂಸೆಯ ಕೆಲಸವಾಗಿದೆ. ಶ್ರೀಯವರು ಮುದ್ದಣನ ರಾಮಾಶ್ವಮೇಧದ ನಾವಿನ್ಯವನ್ನು ಗಮನಿಸುತ್ತಿರುವವಾಗಲೇ ಹಿಂದಿನ ಕಾವ್ಯಗಳಲ್ಲಿಯ ದೋಷಗಳನ್ನು ಎತ್ತಿ ತೋರಿಸಿದುದು ಒಂದಿಷ್ಟು ಮೋಜಿನದಾಗಿದ್ದರೂ ಅರ್ಥಪೂರ್ಣವಾಗಿರುವುದನ್ನು ಗಮನಿಸಬಹುದು. ಅವರು ಹೇಳುವಂತೆ ಹಿಂದಿನ ಕವಿಗಳಲ್ಲಿಯ ಮುಖ್ಯ ದೋಷಗಳು ನಾಲ್ಕು: "ತಮಗೆಯೇ ಹೊಳೆಯುವ ಹೊಸ ದಾರಿಗಳಲ್ಲಿ ಕಾಲಿಕ್ಕದೆ, ಹಿಂದಿನವರು ಹೋದ ಕಡೆಯೇ ಹೋಗಿ, ಅವರು ಹೇಳಿದ್ದನ್ನೇ ಹೇಳುವುದು; ಅಷ್ಟಾದಶವರ್ಣನೆ ಮೊದಲಾದವು ಇದ್ದೇ ತೀರಬೇಕೆಂಬ ಕಟ್ಟಳೆಗೆ ಕಟ್ಟುಬಿದ್ದಿರುವುದು; ಕೊಂಚವಾದರೂ ನಾಚಿಕೆಯಿಲ್ಲದೆ, ಹೊಲಸು ವಿಷಯಗಳನ್ನು ವಿಸ್ತರಿಸುವುದು; ಕೆಲವು ಮಾತುಗಳಲ್ಲಿ ಸೊಗಸಾಗಿ ವರ್ಣಿಸದೆ, ನೊಂದ ಕರಡಿಯು ಒರಲುವಂತೆ, ಹನಿಹಾಕದ ಮೋಡವು ಗುಡುಗುವಂತೆ ವರ್ಣಿಸುವುದು."

ಹೀಗೆ ಕಾವ್ಯದ ಗುಣ-ದೋಷಗಳನ್ನು ಕಾವ್ಯ ಮೀಮಾಂಸೆಯ ದೃಷ್ಟಿಯಿಂದಲೂ, ಸಾಹಿತ್ಯ ವಿಮರ್ಶಾ ದೃಷ್ಟಿಯಿಂದಲೂ ಗುರುತಿಸುವ ಶ್ರೀಯವರು ಹದಿನಾರಣೆ ಶಾಸ್ತ್ರಕಾರರಾಗಿ ಕಂಡುಬರುವುದಿಲ್ಲ. ಅವರ ಭಾವಪರವಶತೆ ಅವರ ವಿವೇಚನಾ ಸಾಮರ್ಥ್ಯವನ್ನು ಮರೆಸುವಂತೆ ಮಾಡಿದುದೇ ಅದಕ್ಕೊಂದು ಉದಾಹರಣೆ. ಅದು ಏನಿದ್ದರೂ, ಕನ್ನಡ ವಿಮರ್ಶಾ ಪರಂಪರೆಗೆ ಒಂದು ವಾತಾವರಣವನ್ನೂ ನಿರ್ಮಿಸಿ, ತಮ್ಮ ಸಮಕಾಲೀನ ಹಾಗೂ ಮುಂದಿನ ಜನಾಂಗಕ್ಕೆ ಅವರು ತೋರಿದ ದಾರಿ ಅವಿಸ್ಮರಣೀಯವಾದದ್ದಾಗಿದೆ.

❐

೯. ಇಂಗ್ಲಿಷ್ ಗೀತಗಳು

■ ಡಾ. ಸಿ.ವಿ. ವೇಣುಗೋಪಾಲ

ಶ್ರೀ ಅವರ ಇಂಗ್ಲಿಷ್ ಗೀತಗಳು ಪುಸ್ತಕರೂಪದಲ್ಲಿ ಪ್ರಕಟವಾದದ್ದು ಸುಮಾರು ಅರವತ್ತು ವರ್ಷಗಳ ಹಿಂದೆ. ಅರವತ್ತಕ್ಕೂ ಮಿಕ್ಕಿ ಕವನಗಳು, ಕವಿಗಳ ಸಂಖ್ಯೆ ೨೦ಕ್ಕೂ ಹೆಚ್ಚು. ಆದರೆ ಒಟ್ಟು ಗೀತಗಳ ಅರ್ಧಕ್ಕಿಂತ ಹೆಚ್ಚು ಕೇವಲ ಆರು ಕವಿಗಳು – ಶೆಲ್ಲಿ, ಬರ್ನ್ಸ್, ವರ್ಡ್ಸ್‌ವರ್ತ್, ಸ್ಕಾಟ್, ಟೆನಿಸನ್ ಮತ್ತು ಬ್ರೌನಿಂಗ್. ವಿಶ್ವಕವಿ ಶೇಕ್ಸ್‌ಪಿಯರನಂತೆಯೇ ಇಂಗ್ಲೀಷ್ ಸಾಹಿತ್ಯ ಚರಿತ್ರೆಯಲ್ಲಿ ಎಲ್ಲೋ ಒಮ್ಮೆ ಇಣುಕು ಹಾಕಿ ಮರೆಯಾಗುವಂತಹ ಕವಿಗಳೂ ಇಲ್ಲುಂಟು – ಕ್ಯಾರೊಲೀನ್ ಸಾರ್ಟ್ಸನ್, ಲೇಡಿ ನೆಯರ್ನ್, ಎಚ್. ಕಾಲರಿಚ್ ಮುಂತಾದವರು. ಇಲ್ಲಿರುವ ಇನ್ನೂ ಕೆಲವರನ್ನು ಇಂದು ವಿಮರ್ಶಕರು ಗಂಭೀರವಾಗಿ ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಇದನ್ನು ಗಮನಿಸಿ ಶ್ರೀ ಅವರು ಅನುವಾದಕ್ಕಾಗಿ ಕವನಗಳನ್ನು ಆರಿಸುವಾಗ ಕಾವ್ಯ ಮೌಲ್ಯವನ್ನೇ ಗೌಣವಾಗಿ ಕಂಡರು. ಹಾಗಾಗಿ ಇಂಗ್ಲಿಷ್ ಗೀತಗಳು – ಅಂದರೆ ಕಾವ್ಯಗುಣಮಟ್ಟದ ದೃಷ್ಟಿಯಿಂದ ಎರಡನೆಯ ದರ್ಜೆಯದೆನ್ನಬಹುದಾದ ಅನೇಕ ಕವನಗಳನ್ನೊಳಗೊಂಡ ಈ ಕೃತಿ – ಇಂದು ನಮಗೆ ಮೌಲಿಕ ಕೃತಿಯೇ ಅಲ್ಲ ಎನ್ನುವ ಹಲವರ ಪರಿಚಯ ನನಗಿದೆ. ಅವರ ಬಗ್ಗೆ ನನಗೆ ಅನುಕಂಪವೂ ಇದೆ. ತಮ್ಮ ಇಂಗ್ಲಿಷ್ ಗೀತಗಳಿಗೆ ಶ್ರೀ ಅವರೇ ಬರೆದಿರುವ ಎರಡು ಪುಟದ 'ಅರಿಕೆ'ಯನ್ನು ಓದಿದವರಾರೂ ಈ ಮತಕ್ಕೆ ಬರಲು ಸಾಧ್ಯವೇ ಇಲ್ಲ. ಅಲ್ಲಿ ಅವರು ಹೇಳುವಂತೆ 'ಇಲ್ಲಿ ಕೊಟ್ಟಿರುವ ಕವನಗಳೆಲ್ಲಾ ಇಂಗ್ಲೀಷ್ ಕಾವ್ಯಮಾಲೆಯ ನಾಯಕರತ್ನಗಳೆಂದು ಆಯ್ದುಕೊಂಡುವಲ್ಲ. ಉತ್ತಮರಾದ ಕವಿಗಳೂ ಇಲ್ಲಿ ಎಲ್ಲರೂ ಇಲ್ಲ. ಹಾಗಾದರೆ ಇಲ್ಲಿಯ ಪದ್ಯಗಳ ಆಯ್ಕೆಗೆ ಕಾರಣವಾದರೂ ಏನು? ಮುಖ್ಯವಾಗಿ ಎರಡು. ಮೊದಲನೆಯದು, ಅವುಗಳ ಬಗ್ಗೆ ವೈಯಕ್ತಿಕ ಒಲುಮೆ – 'ಆಗಾಗ್ಗೆ ಓದುತ್ತಿರುವಾಗ ನನ್ನ ಮನಸ್ಸಿಗೊಪ್ಪಿ, ನನ್ನ ಕೈ ಮೀರದುವಾಗಿ ಕಂಡುಬಂದ

ಗೀತಗಳಿವು' ಎನ್ನುತ್ತಾರೆ. ಎರಡನೆಯದು ಹೆಚ್ಚು ಗಂಭೀರವಾದದ್ದು. ಕನ್ನಡ ನುಡಿ, ಕನ್ನಡ ನಾಡಿನ ಶ್ರೇಯಸ್ಸಿಗೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದ 'ಶ್ರೀ' ಅವರು ಇಂಗ್ಲಿಷ್ ಭಾಷೆಯ ಪ್ರಾಧ್ಯಾಪಕರಾಗಿ ಇಂಗ್ಲಿಷ್ ಸಾಹಿತ್ಯದ, ಅದರಲ್ಲಿಯೂ ಕಾವ್ಯಸಾಹಿತ್ಯದ ವೈವಿಧ್ಯತೆ, ಆಡುಮಾತಿಗೆ ಅತಿ ಸಮೀಪವಾದ ಅದರ ಭಾಷೆ ಹಾಗೂ ಲಯ, ಛಂದಸ್ಸು ಹಾಗೂ ಶೈಲಿಯಲ್ಲಿ ಅಲ್ಲಿಯ ಕವಿಗಳ ಅವಿರತ ಪ್ರಯೋಗಗಳು, ಜೀವನದ ಎಲ್ಲ ಮುಖಗಳನ್ನೂ ಕಾವ್ಯದಲ್ಲಿ, ಅವಕ್ಕೆ ತಕ್ಕ ಪದ್ಯಪ್ರಕಾರಗಳಲ್ಲಿ ಹಿಡಿದಿಡುವ ಅವರ ಜಾಣ್ಮೆ ಇವುಗಳಿಗೆ ಮಾರುಹೋಗಿದ್ದರು. ಸಾಮಾನ್ಯವಾಗಿ ಸಾಹಿತ್ಯದಲ್ಲಿಯೂ ಮಡಿವಂತಿಕೆಗೇ ಅಂಟಿಕೊಂಡು ವೃತ್ತ, ಕಂದ, ಷಟ್ಪದಿ ಮೊದಲಾದ ಪರಂಪರಾಗತ ರೂಪಗಳನ್ನೇ ಕಟ್ಟುನಿಟ್ಟಾಗಿ ಪಾಲಿಸುತ್ತಾ ಕಾವ್ಯ ಭಾಷೆ ಹಾಗೂ ವಸ್ತುವಿಗೂ, ಆಡುಭಾಷೆ ಹಾಗೂ ದೈನಂದಿನ ಜೀವನಕ್ಕೂ ನಡುವೆ ಯಾವ ಸಂಬಂಧವೂ ಇಲ್ಲವೆನ್ನುವಂತೆಯೇ ನಡೆದಿದ್ದ ನಮ್ಮ ಕವಿಗಳನ್ನೆಚ್ಚರಿಸಿ, ಇಂಗ್ಲಿಷ್ ಸಾಹಿತ್ಯದ ಮುನ್ನಡೆಯತ್ತ ಅವರ ಗಮನ ಹರಿಸಿ, ಕನ್ನಡ ಕಾವ್ಯಸಾಹಿತ್ಯವನ್ನೂ ಅಲ್ಲಿಯಂತೆಯೇ ಎಲ್ಲರ ಹೃದಯವನ್ನು ಮುಟ್ಟುವ, ಕಾಲಕಳೆದಂತೆ ಬೆಳೆಯುತ್ತಾ, ವೈವಿಧ್ಯತೆಯನ್ನು ಗಳಿಸಿಕೊಳ್ಳುತ್ತಾ ಮುನ್ನಡೆಯುವ ಸಾಹಿತ್ಯವನ್ನಾಗಿ ಮಾಡಬೇಕೆಂಬ ಕಾತುರ ಅವರದಾಗಿತ್ತು.

"ಇಂಗ್ಲಿಷ್ ಕಾವ್ಯಮಾರ್ಗವನ್ನು ಕನ್ನಡಿಗರು ಈ ಸಣ್ಣ ಗ್ರಂಥದಿಂದ ಸ್ವಲ್ಪ ಮಟ್ಟಿಗೆ ತಿಳಿಯಬಹುದಾಗಿದೆ" ಎನ್ನುತ್ತಾರೆ. 'ಶ್ರೀ ಅವರು; ಮುಂದುವರೆದು "ಹೇಳಿದ್ದೇ ಹೇಳುವರು, ಕೇಳಿದ್ದೇ ಕೇಳುವರು, ಕೇಳಿದ್ದೇ ಕೇಳಿ ಸುಖಿಸುವರು-ಗುರುಗಳ ಹೇಳಿಕೆಯೆ, ಬೇರೆ ಎಂಬ ಸರ್ವಜ್ಞ ವಚನದಂತೆ, ಸಂಪ್ರದಾಯ ಮಾರ್ಗವನ್ನೇ ಛಲಹಿಡಿಯದೆ, ವಿಶ್ವಕವಿತಾ ವಿಷಯಗಳಾದ ಯುದ್ಧ, ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿ ಸೌಂದರ್ಯ, ಮಾನವ ಜನ್ಮದ ಸುಖದುಃಖಗಳು, ರಾಗದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರ ದರ್ಶನಗಳು ಮುಂತಾದ ಕಾವ್ಯವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜಭಾಷೆಯಲ್ಲಿ ಸೌಂದರ್ಯರಚನೆ ಯನ್ನು ಮಾಡಿರುವರೋ ಅದನ್ನೆಲ್ಲಾ ಶ್ರದ್ಧೆಯಿಂದ ಪರಾಮರ್ಶಿಸಿ, ಧೈರ್ಯವನ್ನೂ ಶಿಕ್ಷಣಬದ್ಧ ವಾದ ಸ್ವಾತಂತ್ರ್ಯವನ್ನೂ ವಹಿಸಿ ಕನ್ನಡ ಕವಿಗಳು ಹಿಂದಕ್ಕಿಂತಲೂ ಮುಂದೆ ಇನ್ನೂ ಶ್ರೇಯಸ್ಸನ್ನು ತಾಳಲಿ ಎನ್ನುವುದೇ ನಮ್ಮೆಲ್ಲರ ಹಾರೈಕೆಯಾಗಿರತಕ್ಕದ್ದಾಗಿದೆ" ಎನ್ನುತ್ತಾರೆ. ಹೀಗಾಗಿ ಇಲ್ಲಿ ಕವಿಯ ಮುಖ್ಯ ಉದ್ದೇಶ.

'ಇವಳ ಸೊಬಗನವಳು ತೊಟ್ಟು
ನೋಡಬಯಸಿದೆ
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ'

ಎನ್ನುವ ಆಶಯವನ್ನು ಮೀರಿ ನಿಂತಿದೆ!

ಇಂಗ್ಲಿಷ್ ಗೀತಗಳ ಪ್ರಕಟಣೆ ಕನ್ನಡ ಕಾವ್ಯಮಾರ್ಗಕ್ಕೆ ಹೊಸ, ಆರೋಗ್ಯಕರ ತಿರುವು ಕೊಟ್ಟು ಪ್ರಮುಖ ಮೈಲಿಗಲ್ಲಾಗಿರುವುದು ಇಂದು ಇತಿಹಾಸದ ಮಾತಾಗಿದೆ. ಅನಂತರದ ದಶಕಗಳಲ್ಲಿ ಬಂದ ರಮ್ಯ, ನವೋದಯ, ನವ್ಯಕವಿಗಳೆಲ್ಲರಿಗೂ ದಾರಿ ಸುಗಮವಾಗಿ ಮಾಡಿದುದು ಇಂಗ್ಲಿಷ್ ಗೀತೆಗಳೇ. ರಷ್ಯದ ಕತೆಗಾರ ಗೋಗೋಲನ ಸಣ್ಣ ಕತೆ Overcoat ನಿಂದ ತಾವೆಲ್ಲ ಹುಟ್ಟಿ ಬಂದೆವೆಂದು ಪಾಶ್ಚಾತ್ಯ ಸಣ್ಣಕತೆಗಾರರು ಹೇಳಿಕೊಳ್ಳುವಂತೆ ಈ ಶತಮಾನದ ಕನ್ನಡ ಕವಿಗಳೆಲ್ಲ 'ಇಂಗ್ಲಿಷ್‌ಗೀತ'ಗಳಿಂದ ಹುಟ್ಟಿಬಂದವರೆಂದರೆ ಉತ್ಪ್ರೇಕ್ಷೆಯಾಗಲಾರದು.

ಇಲ್ಲಿ ಒಂದು ಪ್ರಶ್ನೆ ಸಹಜವಾಗಿಯೇ ಏಳುತ್ತದೆ. ಇಂಗ್ಲಿಷ್ ಗೀತಗಳ ಮೌಲ್ಯ ಐತಿಹಾಸಕ ಮೌಲ್ಯ ಮಾತ್ರವೇ? ಅಷ್ಟೇ ಇದ್ದರೆ ಈಗ ಅವುಗಳ ಅಧ್ಯಯನಕ್ಕೆ ಯಾವ ಕಾರಣವೂ ಇರುತ್ತಿರಲಿಲ್ಲ. ಶರವೇಗದಿಂದ ಎಲ್ಲ ದಿಕ್ಕುಗಳಲ್ಲೂ ಹರಡುತ್ತಿರುವ ಜ್ಞಾನಭಂಡಾರದ ಯಾವುದೇ ಒಂದು ಪ್ರಕಾರದಲ್ಲಿಯೂ ಸರಿಸಮನಾಗಿ ಹೆಜ್ಜೆಯಿಟ್ಟು ಮುನ್ನಡೆಯುವುದೇ ದುಸ್ತರವಾಗಿರುವಾಗ ಬರಿಯ ಐತಿಹಾಸಿಕ ಮೌಲ್ಯವುಳ್ಳ ಗ್ರಂಥಗಳು ಇತಿಹಾಸಕಾರರಿಗಲ್ಲದೆ ಇತರರಿಗೆ ಗೌಣವಾಗುವುದು ಸಹಜ, ಹಾಗೂ ಅವಶ್ಯ. ಈ ನಿಟ್ಟಿನಿಂದ ಇಂಗ್ಲಿಷ್ ಗೀತಗಳು ಇಂದು ನಮಗೆಷ್ಟು ಪ್ರಸ್ತುತ?

ಇಂಗ್ಲಿಷ್ ಗೀತಗಳಲ್ಲಿನ ಕವನಗಳು ನಮಗೆ ಇಂದು ಸಾಮಾನ್ಯವಾಗಿ ಕಾಣಸಿಗುವುದು ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಕನ್ನಡ ಪಠ್ಯ ಪುಸ್ತಕಗಳಲ್ಲಷ್ಟೇ – ಅವೂ ಆರಿಸಿದ ಕೆಲವೇ ಕವನಗಳು – ಕರುಣಾಳು ಬಾ ಬೆಳಕೆ, ವಸಂತ, ರಾವುತರ ದಾಳಿ ಮುಂತಾದವು. ಪ್ರೌಢ ವ್ಯಾಸಂಗಕ್ಕೆ ಇವು ಹೊರತು ಏಕೆ? ಉತ್ತರ: ಇವುಗಳಲ್ಲೇನಿದೆ? ಪ್ರೇಮ, ಪ್ರಕೃತಿ, ವಾತ್ಸಲ್ಯ, ದಿನನಿತ್ಯದ ಸಣ್ಣದೊಡ್ಡ ಸುಖದುಃಖಗಳು ಇವುಗಳ ಬಗ್ಗೆ ಸಹಜ ಸರಳ ಭಾಷೆಯಲ್ಲಿ ಹೇಗೆ ಬರೆಯಬಹುದೆಂಬುದನ್ನು ಶ್ರೀ ಅವರು ತಿಳಿಸಿಕೊಟ್ಟರು. ಅದಕ್ಕಾಗಿ ಅವರಿಗೆ ಅನಂತ ಧನ್ಯವಾದಗಳು. ಈಗ ಅದೇ ಕಾವ್ಯ ವಸ್ತುಗಳಲ್ಲದೆ ಇತರವುಗಳನ್ನೂ ಆರಿಸಿಕೊಂಡು, ಭಾಷೆ ಛಂದಸ್ಸುಗಳೆರಡರಲ್ಲಿಯೂ ಸಾಕಷ್ಟು ಪ್ರಯೋಗ ಗಳನ್ನು ನಡೆಸಿ, ಮಾನವ ಜೀವನದ ಎಲ್ಲ ಪದರಗಳನ್ನೂ ಕಾವ್ಯಮಯವಾಗಿ ಪ್ರೌಢವಿಶ್ಲೇಷಣೆಗೊಳಪಡಿಸಿ ನೂರಾರು ಪ್ರಶಸ್ತಿಗಳನ್ನು ಗಳಿಸಿ ಪ್ರಸಿದ್ಧಿ ಹೊಂದಿರುವ ಹತ್ತಾರು ಕವಿಗಳಿರುವಾಗ ಕಾವ್ಯರಚನೆಯ ಬಗ್ಗೆ ಬರಿಯ ಪರಿಚಯಾತ್ಮಕ ಕೃತಿಯಂತಿರುವ ಇಂಗ್ಲಿಷ್ ಗೀತಗಳಿಗೆ ಸ್ಥಾನವೆಲ್ಲಿ?

ಸ್ಥಾನ ಇದೆ. ಅತಿಮುಖ್ಯವಾದ ಸ್ಥಾನವೇ ಇದೆ. ಒಂದು ರೀತಿಯಲ್ಲಿ ಈ ಕೃತಿಯ ಬೆಲೆ, ಅದು ಇನ್ನೂ ಎಲ್ಲರ ಅರಿವಿಗೆ ಬರದಿದ್ದರೂ, ಹೆಚ್ಚುತ್ತಲೇ ಹೋಗುತ್ತಿದೆ. ಭಾಷಾಂತರ ಪ್ರಪಂಚದಲ್ಲಿ, ಜ್ಞಾನವನ್ನು ಎಲ್ಲ ಕ್ಷೇತ್ರಗಳಲ್ಲೂ ಊಹೆಗೂ ನಿಲುಕದ

ವೇಗದಲ್ಲಿ ವೃದ್ಧಿಯಾಗುತ್ತ ನಡೆದಿರುವಾಗ, ಮಾನವ ತನ್ನ ಅಗಾಧ ಸಾಧನೆಗಳನ್ನು ಆಗಿಂದಾಗ್ಗೆ ಕೃತಿರೂಪದಲ್ಲಿ ಪ್ರಕಟಿಸುತ್ತಿರುವಾಗ ವಿಶ್ವದಾದ್ಯಂತ ಅವುಗಳ ಪರಿಚಯ ಮಾಡಿಕೊಳ್ಳಲು ಇಂದಿರುವ ಏಕೈಕ ಸಾಧನ ಬೇರೆ ಬೇರೆ ಭಾಷೆಗಳಲ್ಲಿ ಅವುಗಳ ಕ್ಷಿಪ್ರ ಹಾಗೂ ಚೊಕ್ಕ ಭಾಷಾಂತರ. ವಿಜ್ಞಾನ ಹಾಗೂ ಇತರ ಕ್ಷೇತ್ರಗಳಲ್ಲಿ ಉತ್ತಮ ಭಾಷಾಂತರದ ಅವಶ್ಯಕತೆ ಹೆಚ್ಚಿನದಾದರೂ ಸಾಹಿತ್ಯ ಲೋಕದಲ್ಲಿಯೂ ಅದರ ಅವಶ್ಯಕತೆ ಕಡಿಮೆಯೇನಿಲ್ಲ. ನೊಬೆಲ್ ಪಾರಿತೋಷಕಗಳ ಪಟ್ಟಿಯನ್ನು ನೋಡಿದರೆ ಆ ಪ್ರಶಸ್ತಿ ಬರಿಯ ಆಂಗ್ಲ ಬರಹಗಾರರಿಗಷ್ಟೇ ಸೀಮಿತಾಗಿಲ್ಲವೆನ್ನುವುದು ಸ್ಪಷ್ಟ. ಆಂಗ್ಲೇತರರು ಈ ವಿಶ್ವಮಾನ್ಯ ಪ್ರಶಸ್ತಿಯನ್ನು ಗಳಿಸಿದಾಗೆಲ್ಲ ಅಂತಹವರ ಕೃತಿಗಳ ಉತ್ತಮ ಹಾಗೂ ಕ್ಷಿಪ್ರ ತರ್ಜಮೆ ಇಂಗ್ಲಿಷ್‌ನಲ್ಲಿ ಹೊರಬರುತ್ತದೆ. ಆದರೆ ನಮ್ಮಲ್ಲಿ? ವಿಶ್ವವಿಖ್ಯಾತ ಬರಹಗಾರರು ಒತ್ತಟ್ಟಿಗಿರಲಿ, ನಮ್ಮ ದೇಶದ ಉತ್ತಮ ಬರಹಗಾರರ ಕೃತಿಗಳ ಭಾರತೀಯ ಭಾಷೆಯಲ್ಲಿಯ ಅನುವಾದಗಳು ಮೂಲವನ್ನು ಪೂರ್ಣವಾಗಿ ಪ್ರತಿಬಿಂಬಿಸಲು ಅಸಮರ್ಥವಾಗಿರುವ ವಿಷಾದನೀಯ ಸಂದರ್ಭ ಕಂಡುಬಂದಲ್ಲಿ ಆಶ್ಚರ್ಯವೇನಿಲ್ಲ. ಇದಕ್ಕೆ ಸ್ವಲ್ಪಮಟ್ಟಿಗೆ ಕಾರಣ ಕಾಂಟ್ರಾಕ್ಟ್ ಭಾಷಾಂತರಕಾರರಿರಬಹುದಾದರೂ, ಮುಖ್ಯವಾಗಿ ನಾವು ಭಾಷಾಂತರವನ್ನೂ ಒಂದು ಸೃಜನಶೀಲ ಕಲೆಯೆಂದೂ, ಕಾವ್ಯ ವೊಂದನ್ನು ಭಾಷಾಂತರಿಸುವಲ್ಲಿ ಕವಿ ಸಹಜ ಸಹೃದಯತೆಯ ಅವಶ್ಯವಿರುವು ದೆಂದೂ ಅರಿಯುವ ಪ್ರಯತ್ನವನ್ನು ಮಾಡಿಲ್ಲ.

ಕವಿತೆ ಮುಖ್ಯವಾಗಿ ಆತ್ಮನಿವೇದನೆ. ಕವಿತೆಯೊಂದರ ಭಾಷಾಂತರದಲ್ಲಿ ಈ ಆತ್ಮದ ಸ್ವರೂಪವನ್ನು ಕಾಣಿಸಬೇಕೇ ಹೊರತು ಪ್ರತಿಪದಾರ್ಥವಲ್ಲ. ಒಂದು ಹೃದಯ ಇನ್ನೊಂದು ಹೃದಯವನ್ನು ಒಂದು ಮನ ಇನ್ನೊಂದು ಮನವನ್ನು ನೇರವಾಗಿ ತಲುಪಿಸುವ ಸಾಹಿತ್ಯಪ್ರಕಾರ ಕಾವ್ಯ. ಇದಕ್ಕೆ ಕಾಲದೇಶಗಳ ಬಂಧನವಿಲ್ಲ. ಉತ್ತಮ ಕವಿಯೊಬ್ಬ ತಾನು ಯಾವ ಪರಿಸರದಲ್ಲಿಯೇ ಕಾವ್ಯರಚನೆ ಮಾಡಿದರೂ ಅವನ ವಸ್ತು ಮಾನವ–ಮಾನವರ ನಡುವಿನ ಸಂಬಂಧ ಅಥವಾ ಮಾನವ–ಪ್ರಕೃತಿಯ ನಡುವೆ ನಡೆಯುವ ಕ್ರಿಯೆ ಪ್ರತಿಕ್ರಿಯೆಗಳೇ ಆಗಿರುತ್ತವೆಯೇ ಹೊರತು ಪ್ರತ್ಯೇಕ ವ್ಯಕ್ತಿಯೊಬ್ಬನ ಪ್ರತ್ಯೇಕ ಭಾವನೆಗಳಲ್ಲ. ಈ ಗುಟ್ಟನ್ನರಿತ ಭಾಷಾಂತಕಾರ ಮೂಲಕೃತಿಯನ್ನು ಭಾಷಾಂತರದಲ್ಲಿ ಭಟ್ಟಿ ಇಳಿಸುವಲ್ಲಿ ಸಾಕಷ್ಟು ಸ್ವಾತಂತ್ರ್ಯವನ್ನು ತೆಗೆದುಕೊಳ್ಳಬಲ್ಲ – ಮೂಲಕೃತಿಗೆ, ಮೂಲ ಕವಿಗೆ ಯಾವ ರೀತಿಯಲ್ಲಿಯೂ ಅಪಚಾರವೆಸಗದಂತೆ ಎಚ್ಚರವಹಿಸಬೇಕಾದುದಿಷ್ಟೇ – ಈ ಸ್ವಾತಂತ್ರ್ಯ ಬಾಹ್ಯಲಕ್ಷಣಗಳಿಗಷ್ಟೇ ಸೀಮಿತವಾಗಿರ ತಕ್ಕದ್ದು – ಕವಿಯ ಜೀವನ ದರ್ಶನವನ್ನು ವಿರೂಪಗೊಳಿಸುವ ಹಕ್ಕು ಭಾಷಾಂತರ ಕಾರರಿಗಿಲ್ಲ. ಇಂತಹ ಸ್ವಾತಂತ್ರ್ಯವನ್ನು ಪದವರಿತು ಉಪಯೋಗಿಸಿಕೊಂಡಷ್ಟೂ ಕಾವ್ಯ ನಮಗೆ ಹತ್ತಿರವಾಗುತ್ತದೆ, ವಿಶ್ವಮಾನ್ಯವಾಗುತ್ತದೆ. ಒಂದು ರೀತಿಯಲ್ಲಿ ಸ್ವಂತಕೃತಿಯೇ

ಆಗುತ್ತದೆ. ಭಾಷಾಂತರಕಾರನೇ ತಿಳಿಸದಿದ್ದರೆ (ಇತ್ತೀಚಿನ ದಶಕಗಳ ಹೆಸರಾಂತ ಬರಹಗಾರರೂ ಇಂತಹ ಪ್ರಾಮಾಣಿಕತೆಯನ್ನು ಒಮ್ಮೊಮ್ಮೆ ಮೆರೆದಿಲ್ಲವೆಂಬುದು ವಿಷಾದನೀಯ ಸಂಗತಿ) ಅದು ನಮ್ಮ ಅರಿವಿಗೇ ಬರದಿರಬಹುದು. ಇಂತಹ ಭಾಷಾಂತರಕಾರರು ನಮ್ಮಲ್ಲಿ ಅತಿ ವಿರಳ. ಶ್ರೀ ಅವರ ಸಾಧನೆ ಬಹುಶಃ ಏಕಮೇವಾದ್ವಿತೀಯ. ತಮ್ಮ ಭಾಷಾಂತರದ ಬಗ್ಗೆ ತಾವೇ ಹೇಳಿಕೊಳ್ಳುವ ಅವರ ಮಾತುಗಳು ಹೀಗಿವೆ.

'ಭಾಷಾಂತರಕಾರರು ಕೊಲೆಗಾರರು' ಎಂದು ಪಾಶ್ಚಾತ್ಯರಲ್ಲಿ ಒಂದು ಗಾದೆಯುಂಟು. ಆ ಅಪವಾದವನ್ನು ತಪ್ಪಿಸಿಕೊಂಡಿರುವೆನೆಂದು ನಾನು ತಿಳಿದುಕೊಂಡಿಲ್ಲ. ಆದರೆ, ನನ್ನ ಬುದ್ಧಿಬಲವಿರುವ ಮಟ್ಟಿಗೂ ಮೂಲವನ್ನು ಪ್ರತಿಬಿಂಬಿಸುವ ಕರ್ತವ್ಯವನ್ನೇ ಮುಂದಿಟ್ಟುಕೊಂಡು ಕೆಲಸಮಾಡಿದ್ದೇನೆ. ಕೆಲವು ಕಡೆ ಹೆಸರು, ಭಾವ ಮುಂತಾದುವು ಕನ್ನಡ ಜನಕ್ಕೆ ಹೊಂದಿಕೆಯಾಗುವಂತೆ ಮಾರ್ಪಾಡಾಗಿದ್ದರೂ, ಸಾಮಾನ್ಯವಾಗಿ ಪದಪ್ರಯೋಗ, ಶೈಲಿ, ಛಂದಸ್ಸು, ಭಾವ, ರಸ–ಇವೆಲ್ಲವೂ ಮೂಲ ಕವಿಯ ವ್ಯಕ್ತಿತ್ವವನ್ನೇ ಅನುಸರಿಸಿವೆ. ಕನ್ನಡ ಜಾಯಮಾನವನ್ನು ಮೀರದೆ ಎಷ್ಟುಮಟ್ಟಿಗೆ ಛಂದಸ್ಸು ಇಂಗ್ಲಿಷ್ ಛಂದಸ್ಸುಗಳನ್ನು ಹೋಲಬಹುದೋ ಅಷ್ಟುಮಟ್ಟಿಗೂ ಆ ಪದ್ಯಗಳನ್ನು ಕನ್ನಡಕ್ಕೆ ಇಳಿಸುವುದಕ್ಕೆ ಪ್ರಯತ್ನ ಪಟ್ಟಿರುತ್ತೇನೆ."

ಶ್ರೀ ಅವರು ಈ ಪ್ರಯತ್ನದಲ್ಲಿ ಸಂಪೂರ್ಣ ಸಾಫಲ್ಯತೆಯನ್ನು ಗಳಿಸಿರುವುದನ್ನು ಇಂಗ್ಲೀಷ್ ಗೀತಗಳ ಅನೇಕ ಕವನಗಳಲ್ಲಿ ಕಾಣಬಹುದು. ಉತ್ತಮ ಕವಿತೆಯೊಂದರಲ್ಲಿ ಮೂಡಿಬರುವ ಭಾವನೆಗಳು ಪ್ರತ್ಯೇಕ ವ್ಯಕ್ತಿಯೊಬ್ಬ ವಿಶಿಷ್ಟ ಪರಿಸ್ಥಿತಿಯಲ್ಲಿ ಪ್ರಕಟಪಡಿಸುವ ಭಾವನೆಗಳಷ್ಟೇ ಅಲ್ಲ. ಹಾಗಿದ್ದರೆ ಅದು ಇತರರನ್ನು ತಟ್ಟಲು ಸಾಧ್ಯವೇ ಇಲ್ಲ. ಕಾರ್ಡಿನಲ್ ನ್ಯೂಮನ್ನನ ಕವಿತೆ ಆ್ಯಂಗ್ಲಿಕನ್ ಕ್ರಿಸ್ತಧರ್ಮಕ್ಕೂ, ರೋಮನ್ ಕ್ಯಾಥೊಲಿಕ್ ಧರ್ಮಕ್ಕೂ ನಡುವೆ ಅಂತರವಿಲ್ಲವೆಂದರಿತ ಮೇಲೆ ಅವನ ಮನಸ್ಸಿನೊಳಗಾದ ತುಮುಲದ ಚಿತ್ರಣವೇ ಆದರೂ ಅದು ತಾನೇ ಸೃಷ್ಟಿಸಿಕೊಂಡ (ಅಥವಾ ಮಾನವ ನಿರ್ಮಿತ ಎನ್ನಬಹುದು) ಸುತ್ತ ಮುಸುಕಿದ ಮಬ್ಬಿನಲ್ಲಿ ದಾರಿಕಾಣಲಾಗದೆ ಕಂಗೆಟ್ಟು ಮಾರ್ಗದರ್ಶಿಗಾಗಿ ಹಾತೊರೆಯುತ್ತಿರುವ ಯಾವನೊಬ್ಬನ ಆರ್ತನಾದವಾದರೂ ಆಗಬಹುದು. ಎಂಬ Pride goeth before a fall ವಿಶ್ವಸತ್ಯವನ್ನು ನಿರೂಪಿಸುವ:

"ಮುನ್ನ ಇಂತಿರದಾದೆ; ನಿನ್ನ ಬೇಡದೆ ಹೋದೆ
ಕೈ ಹಿಡಿದು ನಡಸು ಎನುತ
ನನ್ನ ದಾರಿಯ ನಾನೆ ನೋಡಿ ಹಿಡಿದೆನು; ಇನ್ನು
ಕೈ ಹಿಡಿದು ನಡಸು ನೀನು.
ಮಿರುಗು ಜಣ್ಣಕೆ ಬೆರೆತು. ಭಯಮರತು. ಕೊಬ್ಬಿದೆನು;
ಮರೆದಾಯ್ತು; ನೆನೆಯದಿರು ಹಿಂದಿನದೆಲ್ಲ"

ಈ ಸಾಲುಗಳು ಯಾವುದೇ ಧರ್ಮಾಲಂಬಿಯಾದ ನೈಜ ಭಕ್ತನ ಪ್ರಾರ್ಥನೆಯೇ ಅಲ್ಲವೇ? ಇದು ನಿಜವಾದ ಅನುವಾದ. ಇಲ್ಲಿ ಭಾಷಾಂತರಗೊಂಡಿರುವುದು ಮೂಲದ ಹೃದಯ, ಭಾಷೆಯಲ್ಲ.

ಶ್ರೀ ಅವರ ಭಾಷಾಂತರದಲ್ಲಿ Lord Ullin`s Daughter ಕಾರಿಹೆಗ್ಗಡೆಯ ಮಗಳಾಗುತ್ತಾಳೆ. Thomas Hoodನ Bridge of Sighs (ಈ ಕವನದ ಭಾವಾನುವಾದ ಮೂಲವನ್ನೇ ಮೀರಿದೆ ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ) ನಲ್ಲಿ ಬರುವ

Alas! for the rarity
Of Christian Cherity
Under the Sun!-

ಎನ್ನುವ ಸಾಲುಗಳು ಶ್ರೀ ಅವರ ಕೈಯಲ್ಲಿ

ಅಹ; ಎಲ್ಲಡಗಿತೋ
ಆರ್ಯಧರ್ಮದ ಕರುಣ
ಆರ್ಯಜನಗಳ ಮರುಕ
ಉರಿಯುವನೆ ಬಲ್ಲ–

ಎಂದಾಗಿ ಅನಾಥರ ಬಗೆಗಿನ ಅನಾಸ್ಥೆ ಯಾವೊಂದು ಧರ್ಮದ ಸೊತ್ತಲ್ಲ ಎಂದು ಮನದಟ್ಟಿಸುತ್ತವೆ.

Light Brigade ನ ನಾಯಕನಿತ್ತ ಆದೇಶ ಹುಚ್ಚುತನದ್ದೆಂದು ತಿಳಿದು ಶಿಸ್ತಿನ ಸೈನಿಕರಂತೆ ಎದುರಾಡದೆ ಮೃತ್ಯುವಿನ ಪಂಜರಕ್ಕೆ ನುಗ್ಗಿ ಪ್ರಾಣಾರ್ಪಣೆ ಮಾಡಿದ ಧೀರರನ್ನು ಸ್ಮರಿಸುವ ಕವಿಯ ಗೀತೆಯನ್ನು ಅದೇ ಲಯ ಛಂದಸ್ಸಿನಲ್ಲಿ ಕನ್ನಡಕ್ಕಿಳಿಸಿ ಶಿಸ್ತಿನ ಯಾವುದೇ ಸಿಪಾಯಿಯನ್ನು ನಮ್ಮ ಮನಃಪಟಲದ ಮೇಲೆ ನಿಲ್ಲಿಸುತ್ತಾರೆ ಶ್ರೀ:

"ನುಗ್ಗಿ ಮುಂದಕೆ, ಕುದುರೆ!
ಕುಗ್ಗಿದವನೊಬ್ಬುಂಟೆ?
ಯಾರೋ ತಪ್ಪಿದರೆಂದು
    ಧೀರರವರರಿದೂ?
ಹೇಳುವುದಕವರಲ್ಲ
ಕೇಳುವುದಕವರಲ್ಲ
ಮಾಡಿಮಡಿವುದಕವರು
ಅರ್ನೂರು ರಾವುತರು
ಮೃತ್ಯುವಿನ ಪಂಜರಕೆ
ನುಗ್ಗಿದರು ಹರಿದು."

ಗದ್ಯ ಹಾಗೂ ಪದ್ಯ ಭಾಷೆಗಳಲ್ಲಿ ಯಾವುದೇ ಅಂತರವಿರಬಾರದೆಂದು ಪ್ರತಿಪಾದಿಸಿದ

ವರ್ಡ್ಸ್‌ವರ್ತನ ಭಾಷಾಂತರ ಆ ಪ್ರಕೃತಿಯಾರಾಧಕನನ್ನು ಇಡಿಯಾಗಿ ಹಿಡಿದಿಟ್ಟಿದೆ. ಈ ಕವಿತೆಯ – ಮುದ್ದಿನ ಕುರಿಮರಿ – ಮೊದಲ ನಾಲ್ಕು ಸಾಲುಗಳು:

"ಒಡಿದು ಮಂಜು ಬೀಳುತ್ತಿತ್ತು, ಚುಕ್ಕೆ ಕಣ್ಣು ಮಿಟುಕುತ್ತಿತ್ತು"
"ಕುಡಿಯೊ ಕಂದ ಕುಡಿಯೊ" ಎಂದು ನುಡಿದ ಮಾತು ಕಿವಿಗೆ ಬಿತ್ತು;
ತಿರುಗಿ ನೋಡಲೊಪ್ಪಿಯಾಚೆ, ಒಬ್ಬಳಲ್ಲಿ ಹೆಣ್ಣು ಮಗಳು
ನೊರೆಯ ಬಿಳುಪು ಕುರಿಯ ಮರಿಯ ತಲೆಯ ತಡವುತಿದ್ದಳು".

ಕನ್ನಡ ಗೊತ್ತಿದ್ದರೆ ವರ್ಡ್ಸ್‌ವರ್ತನೇ ಬೆರಳು ಕಚ್ಚಬೇಕು! ಶ್ರೀ ಅವರ ಅನುವಾದದ ಉನ್ನತ ಮಟ್ಟವನ್ನು ಬಿಂಬಿಸಲು ವರ್ಡ್ಸ್‌ವರ್ತನದೇ ಒಂದು ಸಣ್ಣದು, ಆದರೆ ವಿಖ್ಯಾತ ಕವನ Rainbow ವನ್ನೂ ನಂತರ ಶ್ರೀ ಅವರ ಅನುವಾದ 'ಮಳೆಬಿಲ್ಲು'ವನ್ನೂ ನಿಮ್ಮ ಮುಂದಿಡುತ್ತೇನೆ. ಮೊದಲು ಮೂಲಕೃತಿ:

My heart leaps up when I behold
A rainbow in the sky:
So was it when my life begin;
So is it now I am a man;
So be it when I shall grow old;
Or let me die!
The Child is father of the Man;
And I could wish my days to be
Bound each to each by natural piety.

"ಮುಗಿಲಿನಲಿ ಮಳೆಬಿಲ್ಲ ಕಾಣುತಲೆ ನಾನು
ನೆಗೆದು ಕುಣಿದಾಡುವುದು ಹೃದಯ ತಾನು!
ಅಂತೆ ಇದ್ದುದು ಮೊದಲು ಚಿಕ್ಕಂದಿನಂದು;
ಅಂತೆ ಇಹುದೀ ಮೆರೆವ ಯೌವನದಲಿಂದು,
ಅಂತೆ ಇರಲೆನಗಿನ್ನು ಮುಪ್ಪಿನಲೆ ಮುಂದೆ –
ಅಂತಿರದೆ, ಸಾವು ಬರಲಂದೆ!
ಮನುಜನಿಗೆ ಮಗು ತಂದೆ – ನಾನದನು ಬಗೆದು,
ಹೊಂದಿಸಲು ಬಯಸುವೆನು ದಿನಗಳನು ತೆಗೆದು
ಒಂದಕೊಂದನು ಪ್ರಕೃತಿ ಭಕ್ತಿಯಲಿ ಬಿಗಿದು".

ಇಲ್ಲಿ ಕಡೆಯ ಮೂರು ಸಾಲುಗಳು ಮೂಲದಲ್ಲಿರಬಹುದಾದ ಅಲ್ಪ ಅಸ್ಪಷ್ಟತೆಯನ್ನು ಹೋಗಲಾಡಿಸಿರುವುದು ಗಮನಾರ್ಹ.

ಇಂಗ್ಲಿಷ್ ಸಾಹಿತ್ಯದಿಂದ ಭಾವಗೀತೆಯನ್ನು ಕನ್ನಡಕ್ಕೆ ತಂದು ನಮ್ಮ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಇಂಗ್ಲಿಷ್ ಗೀತಗಳು ಇಂಗ್ಲಿಷೆ ಬೇಡವೆಂದು ಹೊರಟಿರುವ

ಇಂದಿನ ಪೀಳಿಗೆಯವರ ಸಂಕುಚಿತ ಭಾವನೆಯತ್ತ ಬೆರಳೆತ್ತಿ ತೋರಿಸುತ್ತಿದೆ. ವಿ.ಸೀ. ಅವರು ಹೇಳುವಂತೆ 'ಎಷ್ಟು ಹೆಚ್ಚು ಜನ ಎಷ್ಟು ಬೇರೆ ಭಾಷೆಗಳಿಂದ ಮೂಲದ ಹೃದಯವು ಅರಿತು ಬರೆದರೆ ಅಷ್ಟೂ ಅಷ್ಟೂ ನಮ್ಮ ಕಣಜ ತುಂಬಿ ನಮ್ಮ ಸಾಹಿತ್ಯ ಬೆಲೆಯುಳ್ಳದ್ದಾಗುತ್ತದೆ.' ಈ ದಿಸೆಯಲ್ಲಿ ಕನ್ನಡ ಸಾಹಿತ್ಯವನ್ನು ಪ್ರೀತಿಸುವ, ಅದರ ಬೆಳವಣಿಗೆಯ ಬಗ್ಗೆ ಕಾಳಜಿ ಹೊಂದಿ ಇತರ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಓದಿಕೊಂಡು ಅವುಗಳನ್ನು ಕನ್ನಡ ಓದುಗರಿಗೆ ಪರಿಚಯಿಸಲಿಚ್ಛಿಸುವ ಎಲ್ಲರಿಗೂ ಶ್ರೀ ಅವರ ಇಂಗ್ಲಿಷ್ ಗೀತಗಳಂತಹ ಮೌಲಿಕ ಕೃತಿ ಇನ್ನೊಂದು ದೊರಕುವುದು ವಿರಳ.

❐

೧೦. ಶ್ರೀಯವರ 'ಹೊಂಗನಸುಗಳು'

■ *ಡಾ. ಪ್ರಹ್ಲಾದಕುಮಾರ ಭಾಗೋಜಿ*

ಇಂದು ಕನ್ನಡದಲ್ಲಿ ವಿಪುಲವಾಗಿ ಮೂಡಿ ಬರುತ್ತಿರುವ ಕಾವ್ಯ ಸಾಹಿತ್ಯವನ್ನು ನೋಡುವದೆಂದರೆ ಸಾಗರದ ತಡಿಯಲ್ಲಿ ನಿಂತು ಸಾಗರದರ್ಶನ ಪಡೆದಂತೆ. ಈ ವಿಸ್ತೀರ್ಣವಾದ ಸಾಗರದಲ್ಲಿ ನೀರು ಹಲವಾರು ಪ್ರವಾಹಗಳಿಂದ ಬಂದು ಸೇರುತ್ತಿದೆ. ಚಂಪೂಕಾವ್ಯಗಳ ಮಹಾಪ್ರವಾಹದೊಡನೆ, ಷಟ್ಪದೀ ಕಾವ್ಯಗಳ ಮಹಾಪ್ರವಾಹವೂ ಬೆರೆತು ನಿರ್ಮಾಣಗೊಂಡ ಮಹಾಸಾಗರಕ್ಕೆ ಇಪ್ಪತ್ತನೆಯ ಶತಮಾನದಲ್ಲಿ ನವೋದಯ, ನವ್ಯ, ನವ್ಯೋತ್ತರ, ದಲಿತ, ಬಂಡಾಯಗಳ ವಿವಿಧ ಪ್ರವಾಹಗಳು ತಮ್ಮ ಪಾಲಿನ ಕಾಣಿಕೆಯನ್ನು ಸಲ್ಲಿಸಿ ಕೃತಾರ್ಥವಾಗಿವೆ; ಆಗುತ್ತಿವೆ.

ಒಂದೊಂದು ಹೊಸ ಪ್ರವಾಹ ಆರಂಭವಾಗುವಾಗಲೂ ಒಂದೊಂದು ಬಗೆಯ ಕ್ರಾಂತಿ ಅನಿವಾರ್ಯವೆಂದು ಕಾಣುತ್ತದೆ. ಕನ್ನಡ ಸಾಹಿತ್ಯಕ್ಕೆ ಈ ಬಗೆಯ ಕ್ರಾಂತಿಗಳೇನೂ ಹೊಸವಲ್ಲ. ಒಂದು ಸಾಹಿತ್ಯರೂಪದಲ್ಲಿ ಅಭಿವ್ಯಕ್ತಿ ತನ್ನ ಸತ್ವವನ್ನು ಕಳೆದುಕೊಳ್ಳುತ್ತಿದೆ. ಎಂಬ ಭ್ರಮೆಯಾದಾಗ ತಾನೇತಾನಾಗಿ 'ಸಾಹಿತ್ಯ ಕ್ರಾಂತಿ' ರೂಪುಗೊಳ್ಳುತ್ತದೆ. ಅದಕ್ಕೆ ಕಾರಣಪುರುಷನಾಗಿ ಒಬ್ಬ ಧೀಮಂತವ್ಯಕ್ತಿ ಮೂಡಿಬರುವುದೂ ಸಹಜ.

ನವೋದಯ ಸಾಹಿತ್ಯದ ವಿಶಿಷ್ಟ ಕ್ರಾಂತಿಗೆ ಕಾರಣಪುರುಷರಾಗಿ ಬಂದವರು ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರು. 'ಇಂಗ್ಲಿಷ್ ಗೀತಗಳು' ಆಂಗ್ಲಭಾಷೆಯ ಭಾವಗೀತೆಗಳ ಅನುವಾದ ಗ್ರಂಥವಾಗಿಯೂ 'ರಾತ್ರಿ ಕಳೆದು ಬೆಳಗಾಯಿತು' ಎಂಬುದಕ್ಕೆ ಸಾಕ್ಷಿಯಾಯಿತು. ನಾಡಿನ ಎಲ್ಲೆಡೆಯಿಂದಲೂ ಭಾವಗೀತೆಗಳ ಮಂಜುಳನಿನಾದ ಕೇಳಿಬರಲಾರಂಭಿಸಿತು. ಕನ್ನಡದ ಕೋಗಿಲೆ-ಗಿಳಿ-ಕಾಜಾಣಗಳಿಗೆ ವಸಂತಮಾಸ ಪ್ರಾಪ್ತವಾಗಿ ಸ್ವತಂತ್ರ ಭಾವಗೀತೆಗಳ ಧ್ವನಿ ನಾಡನ್ನೆಲ್ಲ ತುಂಬಿತು. ಕನ್ನಡ ಛಂದಸ್ಸಿನ ಲಯ-ಗತಿಗಳ ಸ್ವಾಭಾವಿಕವಾದ ಪರಿಣಾಮ ಕನ್ನಡ ಕಾವ್ಯದಲ್ಲಿ ಕಾಣತೊಡಗಿತು.

ಅಕ್ಷರವೃತ್ತ, ಮಾತ್ರಾವೃತ್ತಗಳ, ಪ್ರಾಸಾನುಪ್ರಾಸಗಳ ಕೋಟಲೆಯಿಂದ ಕಾವ್ಯಕನ್ನಿಕೆ ಹೊರಬಂದು ಸಹಜ ಸುಂದರಿಯಾಗಿ ಮೆರೆಯಲಾರಂಭಿಸಿದಳು.

ಹೊಸಮಾರ್ಗದ ಬಾಗಿಲು ತೆರೆದ ಕವಿ ಬಿ.ಎಂ.ಶ್ರೀಯವರು ಕೇವಲ ಅನುವಾದ ಗಳನ್ನೇ ಕೊಟ್ಟವರಲ್ಲ! 'ಅವಳ ತೊಡವನಿವಳಿಗಿಟ್ಟು ನೋಡ ಬಯಸಿದರೂ ಇವಳ ಸಹಜಸೌಂದರ್ಯಕ್ಕೆ ತಮ್ಮ ಭಾವಸಂಪತ್ತನ್ನು ಭಕ್ತಿಪೂರ್ವಕವಾಗಿ ಅರ್ಪಿಸಿದವರು.

ಆಚಾರ್ಯ ಬಿ.ಎಂ.ಶ್ರೀಯವರ ಕಾರ್ಯರಂಗ ಬಹುಮುಖವಾದುದು. ಒಂದೊಂದು ಮುಖದಿಂದಲೂ ಬೆಳಕು ಬೀರಿ, ಆಯಾ ಮಾರ್ಗದಲ್ಲಿ ಮುನ್ನಡೆಯುವುದಕ್ಕೆ ಯೋಗ್ಯರನ್ನು ಅಣಿಗೊಳಿಸಿದವರು. ಅಂತೆಯೆ ಅವರ ಸ್ವತಂತ್ರವಾದ ಭಾವಗೀತೆಗಳ ಸಂಖ್ಯೆ ಕಡಿಮೆ. ಈ ಬಗೆಯ ಹನ್ನೊಂದು ಸ್ವತಂತ್ರ ಭಾವಗೀತೆಗಳು ಸಂಗ್ರಹವಾಗಿ 'ಹೊಂಗನಸುಗಳು' ಎಂಬ ಹೆಸರಿನಿಂದ ೧೯೩೩ರಲ್ಲಿ ಪ್ರಕಟವಾದುವು. ಮದರಾಸು ನಗರದಲ್ಲಿ ಸೇರಿದ ೨೯ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕಳಿಸಿದ 'ಹಾರೈಕೆ'ಯನ್ನು ಸೇರಿಸಿ ೧೯೪೯ರಲ್ಲಿ ಪುನರ್ಮುದ್ರಣ ಮಾಡಲಾಯಿತು. ೧೯೭೬ರಲ್ಲಿ ಮೂರನೆಯ ಸಲ ಮುದ್ರಣವನ್ನು ಈ ಸಂಗ್ರಹ ಕಂಡಿತು. ೧೯೮೩ರಲ್ಲಿ ಪ್ರಕಟವಾದ 'ಶ್ರೀ ಸಾಹಿತ್ಯ'ದ ಭಾಗವಾಗಿ ಮತ್ತೆ ಮುದ್ರಣಗೊಂಡಿದೆ.

ಈ ಸಂಗ್ರಹದಲ್ಲಿ ನಾವು ಕಾಣುವುದು ಬಿ.ಎಂ.ಶ್ರೀಯವರ ವ್ಯಕ್ತಿವಿಶೇಷವನ್ನು. ಮೈಸೂರಿನ ಪ್ರಜೆಯಾದ ಶ್ರೀಯವರು ರಾಜಮನೆತನದಲ್ಲಿ ಅಪಾರವಾದ ಭಕ್ತಿಯನ್ನು ಹೊಂದಿದವರು. ರಾಜಮನೆತನದ ಬಗೆಗೆ ಗೌರವ, ಶ್ರದ್ಧೆಗಳು, ಅವರ ಹಿತವೇ ನಾಡಿನ ಹಿತ, ಅವರ ಸುಖವೇ ನಾಡಿನ ಸುಖ ಎಂಬ ಗಾಢವಾದ ನಂಬಿಕೆ ಅವರಲ್ಲಿ. ಹತ್ತಾರು ತುಂಡುಗಳಾಗಿ ಹರಿದು ಹಂಚಿಹೋದ ಕನ್ನಡ ನಾಡು ಒಂದಾಗಿ ನಿಂತರೂ ಮೈಸೂರಿನ ಅರಸರೇ ಅದರ ಒಡೆಯರಾಗಬೇಕೆಂಬ ಮನೋಭಾವ ಅವರದು! ಪ್ರಜಾಪ್ರಭುತ್ವ ಹಾಗೂ ವ್ಯಕ್ತಿಸ್ವಾತಂತ್ರ್ಯ–ಸಮಾನತೆಗಳ ನೆಲಗಟ್ಟಿನ ಇಂದಿನ ಸಮಾಜಕ್ಕೆ ಮೆಚ್ಚಿಗೆಯಾಗದ ನಿಲುವು ಇದು! ಆದರೆ ಮೈಸೂರು ಮಹಾರಾಜರಿಂದ ರಾಜಸೇವಾಸಕ್ತರೆಂದು (೧೯೩೮) ಬಿರುದು ಪಡೆದ ವ್ಯಕ್ತಿತ್ವಕ್ಕೆ ಸಹಜವಾದ ಮನೋಭಾವ ಅದು.

ಅಂತೆಯೇ 'ಹೊಂಗನಸುಗಳು' ಸಂಗ್ರಹದ ನಾಲ್ಕು ಕವನ ಮೈಸೂರಿನ ರಾಜಮನೆತನ ಹಾಗೂ ಅರಮನೆಗಳಿಗೆ ಮೀಸಲಾಗಿದೆ.

'ಶ್ರೀಕೃಷ್ಣರಾಜ ರಜತಮಹೋತ್ಸವ ಪ್ರಗಾಥ'ವು ನಾಲ್ಮಡಿ ಕೃಷ್ಣರಾಜರ ರಜತಮಹೋತ್ಸವದ ಸಂದರ್ಭಕ್ಕಾಗಿ ರಚಿತವಾದುದು. (೧೯೨೭), ಇಂಗ್ಲಿಷಿನ 'ಓಡ್' (Ode) ಕನ್ನಡದಲ್ಲಿ ಮೊದಲ ಬಾರಿಗೆ ಇಲ್ಲಿ ರೂಪುತಾಳಿತು. ಸಾಮಾನ್ಯವಾಗಿ

ಯೂರೋಪದ ರಾಜ್ಯಗಳಲ್ಲಿ ಆಸ್ಥಾನಕವಿಗಳು (Poet Laureate) ರಾಜ್ಯೋತ್ಸವ, ರಜತೋತ್ಸವ, ಸುವರ್ಣಮಹೋತ್ಸವಗಳಲ್ಲಿ ಇಂಥ ಕಾವ್ಯಗಳನ್ನು ಬರೆಯುತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಆಸ್ಥಾನಕವಿ ಭಾವೋತ್ಕರ್ಷವನ್ನು ಒತ್ತಾಯದಿಂದಲಾದರೂ ತಂದುಕೊಂಡು ಕಾವ್ಯ ರಚಿಸಬೇಕಾಗುತ್ತಿತ್ತು. ಆಸ್ಥಾನ ಕವಿಯಲ್ಲದಿದ್ದರೂ ಬಿ.ಎಂ.ಶ್ರೀಯವರು ಈ 'ಪ್ರಗಾಥ'ವನ್ನು ರಚಿಸಿದರು. ಸಹಜವಾಗಿಯೇ;

'ಮಂಗಳವೊಳಗಿತು ಮೈಸೂರರಮನೆ; ಸಿಂಗರವಾಯಿತು ಮೈಸೂರು
ಕೃಷ್ಣನ ವೈಭವವೆಲ್ಲವ ತೋರುವ, ಸಾರುವ, ಮೀರುವ ಮೈಸೂರು.

ಇಲ್ಲಿ ವರ್ಣನೆಯ ವೈಭವದಲ್ಲಿ ಹೊಳೆಯುತ್ತದೆ. ಬೆಟ್ಟ, ಕೆರೆ, ಬೀದಿ, ಬನ, ಮನೆ, ಮಹಲು ಎಳೆಯರು-ಹಿರಿಯರು ಕೊಂಡಾಡುವುದು, 'ಕನ್ನಡದೇವಿಯ ಬಯಕೆಯ ಕಳಶದ ಸುಧೆ ಸುರಿದೆತ್ತಲು ಚೆನ್ನಾ'ದ ವರ್ಣನೆ ಶ್ರೀಯವರ ಕವಿತ್ವಶಕ್ತಿಗೆ ಸಾಕ್ಷಿಯಾಗಿ ನಿಲ್ಲುತ್ತವೆ. ರಾಜಮನೆತನದ ಪರಂಪರೆ; ಸಂಗೀತ, ಕಾವ್ಯ, ನೃತ್ಯಗಳಿಗೆ, ಧರ್ಮ, ಆರ್ಥಿಕ ವಿಕಾಸಗಳಿಗೆ ಅವಕಾಶವಾದುದರ ವರ್ಣನೆಗಳೆಲ್ಲವೂ ಭವ್ಯ-ದಿವ್ಯವೆನ್ನುವಂತೆ ಗಂಭೀರವಾದ ದೀರ್ಘ ಸಾಲುಗಳಲ್ಲಿ ಮೂಡಿವೆ. ಐದೈದು ಮಾತ್ರೆಯ ಐದು ಗಣ,. ಮೇಲೆ ಮೂರು ಮಾತ್ರೆಯ ಒಂದು ಗಣದ ಸಾಲುಗಳ ಗಂಭೀರ ನಡಿಗೆ ಹಿಂದಿನ ಮೈಸೂರು ದಸರಾ ಉತ್ಸವದಲ್ಲಿಯ ಗಜರಾಜನ ಗಂಭೀರನಡಿಗೆಯನ್ನೇ ನೆನಪಿಗೆ ತರುತ್ತದೆ. ಅಲ್ಲಲ್ಲಿ ಮಾತ್ರೆಗಳಲ್ಲಿ ಹೆಚ್ಚು ಕಡಿಮೆ ಇದ್ದೂ ಲಯದಲ್ಲಿ ತುಂಬುವ ರೀತಿ ಅದ್ಭುತ!

ಪಡುಗಡಲಿನ ತೆರೆ ಮುದ್ದಾಡುವ ಕರೆ, ಹೊಳೆಹಾಲೀಂಟುವ ಘಟ್ಟದೆಡೆ,
ಪಂಪನ ರನ್ನನ ಪುಟಪಿಡಿಸಿದ ಕಡೆ, ಹಂಪೆಯು ತಾಂಡವವಾಡಿದೆಡೆ,
ಹೊಯ್ಸಳರೆತ್ತಲು ಕಡೆಯಿಸಿ ನಿಲಿಸಿದ ಗುಡಿಗಳ ಸೊಬಗಿನ ಕಣ್ಣಸೆಳೆ,
ಜಲಜಲವುಕ್ಕುವ ಕಾಲುವೆ ಬಯಲಲಿ ಪಚ್ಚೆಯ ಪಯಿರಿನ ತುಂಬುಬೆಳೆ
ಮಂಗಳಮಯ ತಾನೆತ್ತಲು ನಾಡು,
ಸಿಂಗರದಾ ಸಿರಿಗನ್ನಡ ನಾಡು.

ಈ ಸಾಲುಗಳಲ್ಲಿ ನಾಲ್ಕು ಮಾತ್ರೆಯ ಆರು ಗಣಗಳ, ಕೊನೆಯ ಐದು ಮಾತ್ರೆಯ ಸಾಲಿನ ರೀತಿ, ಹಾಗೂ ಕೊನೆಯ ಎರಡು ಕಿರಿ ಸಾಲುಗಳಲ್ಲಿಯ ಕುಣಿತ, ಪ್ರಾಸಗಳು ಕಾವ್ಯಕ್ಕೆ ಮೆರುಗನ್ನೀಯುತ್ತವೆ.

ಈ ಬಗೆಯ ಸಂದರ್ಭದಲ್ಲಿಯೂ ಭಾವನಿರ್ಭರತೆಯನ್ನು ತೋರುವಲ್ಲಿ ಕವಿಯ ರಾಜಭಕ್ತಿ ತಾನೇ ತಾನಾಗಿ ಮೆರೆಯುತ್ತದೆ! ಆದರೆ ಕನ್ನಡದ ಪ್ರೀತಿಗೆ ಕೊರತೆಯಾಗಿಲ್ಲ; ರಾಜಭಕ್ತಿ ಇಲ್ಲದವನೂ

ಕಾಯಿ, ತಾಯಿ, ಕೃಪೆಯ ತೋರಿ
        ನಮ್ಮ ಕೃಷ್ಣನ
ಬೆಳ್ಳಿಬೆಟ್ಟದೊಡತಿ, ಗೌರಿ,
ಬೆಳ್ಳಿಯೊಸಗೆಗೊಸಗೆ ಬೀರಿ
        ಕಾಯಿ ಕೃಷ್ಣನ
'ಏಳುವಾಣಿ, ವೀಣೆದಾಳು
ಅಮೃತವಾಣಿಯಿಂದ ಹೇಳು
ಪುಣ್ಯದರಸು, ಧರ್ಮದಾಳು
        ದೊರೆಯ ಕೃಷ್ಣನ
ಹೊನ್ನು ನಡೆಯ, ಹೊನ್ನು ನುಡಿಯ
ಕನ್ನಡಿಗರ ವಯಿರಮುಡಿಯ
        ಒಡೆಯ ಕೃಷ್ಣನ,

ಎನ್ನುವಂತಾಗುತ್ತದೆ. ನಾಲ್ಮಡಿ ಕೃಷ್ಣರಾಜರು ದಿವಂಗತರಾದಾಗ ಮೂಡಿ ಬಂದುದು 'ಬಾನ್‌ಕೊಂಡ ಕೃಷ್ಣನ್' ಎಂಬ ಶೋಕಗೀತೆ. ಅರಮನೆಯಲ್ಲಿಯ ಉತ್ಸವಗಳ ವರ್ಣನೆಗಳ ಭಾಗಗಳು ಬಂದಂತೆ, ರಾಜನೋ ರಾಜಮನೆತನದ ಬೇರೆಯವರೋ ಸ್ವಾಭಾವಿಕವಾಗಿ ಇಲ್ಲವೆ ಯುದ್ಧದಲ್ಲಿ ಮರಣ ಹೊಂದಿದಾಗ ಶೋಕಭಾವವನ್ನು ವ್ಯಕ್ತಿಪಡಿಸುವ ಪದ್ಯಗಳೂ ಕನ್ನಡ ಮಹಾಕಾವ್ಯಗಳಲ್ಲಿ ಸೃಷ್ಟಿಗೊಂಡಿವೆ. ಪಂಪನ ಮಹಾಕಾವ್ಯಗಳಲ್ಲಿಯೇ ಇದಕ್ಕೆ ದುಷ್ಟಾಂತಗಳಿವೆ. ಆದರೆ ಸ್ವತಂತ್ರವಾಗಿ ಶೋಕಗೀತೆಗಳು (elegy) ಕನ್ನಡದಲ್ಲಿ ಇರಲಿಲ್ಲ. ಈ ಬಗೆಯ ಶೋಕಗೀತೆಗಳನ್ನಾರಂಭಿಸಿದವರೂ ಶ್ರೀಯವರೆ! ಮೃತರ ಗುಣಗಾನವೇ ಪ್ರಧಾನವಾದ ಈ ಕವನದಲ್ಲಿ ರಾಜಭಕ್ತಿಯೂ ವ್ಯಕ್ತವಾಗಿದೆ. ದುಃಖವೂ ಕೋಡಿವರಿದಿದೆ.

"ಆದನೇ ಕೃಷ್ಣನ್!
ಪೋದನೇ ಕೃಷ್ಣನ್!
ಆಯ್ತೆ ಆ ಬಾಳ್ಕೆ!
ಪೋಯ್ತೆ ಪೊನ್ನಾಳ್ಕೆ!
ಕನ್ನಡದ ಕಣ್ಮಣಿ, ಕರ್ನಾಟಕ ಜೀವಮಣಿ ಬೆಳಗದಿನ್ನೆಮಗೆ!
ಧರ್ಮಪಥಮನೆ ತೊಳಗಿ ಬೆಳಗದಿನ್ನೆಮಗೆ
ರಾಜಪಥವನೆ ತೊಳಗಿ ಬೆಳಗದಿನ್ನೆಮಗೆ
ನಡುವಗಲ ನೇಸರನು ಕರ್ಪು ಪಿಡಿದಿಡಿದಂತೆ,
ನೆರೆಯ ಬೆಳದಿಂಗಳನು ಪಾವು ಗಿಡಿದಂತೆ,
ತಿಳಿಯಾದ ಬಾನಿಂದ ಬರಸಿಡಿಲ್ ಸಿಡಿದಂತೆ,
ಬೆನ್ನಿರಿವ ಕಳ್ಳ ಕೊಲೆ ಸುರಗಿಯಂತೆ,
ಎತ್ತಣಿಂದೆರಗಿತ್ತೋ ಮೃತ್ಯು!"

"ನಿಟ್ಟುಸಿರ ಬಿಸಿಯಳಲು ಹುಚ್ಚುಹೊಳೆಯುಕ್ಕಿತ್ತು-
ಅದ ಕೇಳ್ವರಾರು?
ಮೆಲ್ಲೆದೆಯ ಕಲ್ಲೆದೆಯ ಮಾಡಿ ಅದ ತಾಳ್ವರಾರು?"-

ಎಂದಾಗ ಈ ದುಃಖೋದ್ವೇಗವು ಇನ್ನೂ ತೀವ್ರವಾಗುತ್ತದೆ. ಆದರೆ ಕವಿಯ ಆಸೆ 'ಅಳಿ-ಅಮಂಗಳಮೇ - ಮಂಗಳಮೆ, ಗೆಲ್ಲು" ಎಂದು.

ಸ್ವರ್ಗದಲ್ಲಿ ಯದುಭೂಪರೆಲ್ಲ ಈ ರಾಜನನ್ನು ಬರಮಾಡಿಕೊಂಡು 'ಜಯನೊಲವಿ' ಗಾಗಿ ಹಾರಯಿಸುವಲ್ಲಿ ಮುಕ್ತಾಯವಾಗುವ ಗೀತೆ ಅಲ್ಲಲ್ಲಿ ಗದ್ಯದಂತಿದೆ. ಅತ್ತು ಅತ್ತು ಆಗಾಗ ತಣ್ಣಗಾಗುವ 'ಶೋಕದಂತೆ' ಆದರೆ ಶೋಕ ಮತ್ತೂ ತೀವ್ರವಾಗಿ ಕಾವ್ಯವಾಗುತ್ತದೆ.

'ಅಳಿದನೇ ಕೃಷ್ಣನ್ ಅಳಿಯನ್!
ಇರ್ಪನೇ ಕೃಷ್ಣನ್ ಇರ್ಪನ್ -ಧೀರ ಧರ್ಮಾತ್ಮರಲ್ಲಿರ್ಪನ್!'

ಎಂದು ಹೊಸ ತಿರುವು ಪಡೆಯುತ್ತದೆ. ಪದಬಂಧ, ಛಂದಸ್ಸುಗಳು ಶೋಕಾಭಿವ್ಯಕ್ತಿಗೆ ಸ್ಪರ್ಧಿಸುವಂತಿವೆ ಇಲ್ಲಿ.

ಅದೇ 'ಶ್ರೀ ಜಯನ ಬೆಳಕು' ಕವನದಲ್ಲಿ ಭಾವೋತ್ಕರ್ಷವಿಲ್ಲದೆ ಶಬ್ದಗಳ ಆಟಕ್ಕಿಳಿದುದನ್ನು ಕಾಣುತ್ತೇವೆ.

'ಬೆರಗೆನಿಸಿ, ಮುದ್ದೆನಿಸಿ, ಗೆಲುವೆನಿಸಿ, ಚೆಲುವೆನಿಸಿ,
ಅರಿವಾಗಿ, ಅರುಳಾಗಿ, ಅರನಿರಿಯ ತಿರುಳಾಗಿ
ಬೆಳ್ನುಡಿಯ ನೆರಳಾಗಿ ಭಕ್ತಿಯರಳಾಗಿ'

ಹೀಗೆ ಪ್ರಾಸ, ಅನುಪ್ರಾಸ, ಛಂದಸ್ಸಿನಲ್ಲಿಯ ಬೆಡಗಿನಲ್ಲಿ ಕಾವ್ಯಗುಣದ ಕೊರತೆಯೇ ಕಾಣುತ್ತದೆ. ಈ ಕವನದಲ್ಲಿಯೂ 'ಅರಮನೆಯ ಒಸಗೆ' ಕವನದಲ್ಲಿಯೂ ಕಾಣುವುದು ಅರಮನೆ, ರಾಜರ ಬಗೆಗೆ ಕವಿಗಿರುವ ಭಕ್ತಿಗೌರವಗಳು ಮಾತ್ರ. ಇದು ಕಾವ್ಯಸೃಷ್ಟಿ ಎನ್ನುವುದಕ್ಕಿಂತ ಪದ್ಯರಚನೆ ಎನ್ನಬಹುದು.

ಇದೇ ಗುಂಪಿಗೆ ಸೇರಬಹುದಾದ 'ಮೈಸೂರು ಮಕ್ಕಳು' ಗೀತೆಯ ಬೆಡಗೇ ಬೇರೆ. ಸ್ಕೌಟುದಳಗಳ ಕೂಟದಲ್ಲಿ ಹೆಜ್ಜೆಯ ತಾಳಕ್ಕೆ ನಡೆವ ಬೆಡಗಿನ ಈ ಗೀತೆ ಮಕ್ಕಳ ಮನಸ್ಸನ್ನು ಗೆಲ್ಲುತ್ತದೆ. ಜೊತೆಗೆ ನಾಡಿನ ಬಗೆಗೆ ಅಭಿಮಾನವನ್ನೂ ಭಕ್ತಿಯನ್ನೂ ಮೂಡಿಸುತ್ತದೆ.

ನಿಮ್ಮ ನಾಡಾವುದು?
ಮೈಸೂರು
ನಮ್ಮೂರದಾವುದು?
ಮೈಸೂರು

ಕನ್ನಡದ ಕಣ್ಣದು
ಮೈಸೂರು
ನಾಲುಮಡಿ ಕೃಷ್ಣನ
ಮೈಸೂರು.

ಈ ಚಿಕ್ಕಚಿಕ್ಕ ಸಾಲುಗಳಲ್ಲಿ ಕಾಣುವ ಕುಣಿತದ ಓಟ ಮುಂದಿನ ಎಂಟು ಸಾಲುಗಳಲ್ಲಿ ಗಂಭೀರಗತಿಗೆ ಸಹಾಯ ನೀಡುತ್ತದೆ. ಇಲ್ಲಿ ನಾಡಿನ ಹಳ್ಳಿಪಳ್ಳಿಗಳ, ಕೆರೆ, ತೋಟ, ಹೊಲ, ಹರಿವ ಹೊಳೆ-ಹಳ್ಳಗಳ ಬೆಡಗನ್ನೂ ಘಟ್ಟ-ಬೆಟ್ಟಗಳ ಪ್ರಕೃತಿ ಸೌಂದರ್ಯವನ್ನೂ ಎತ್ತಿ ತೋರಲಾಗಿದೆ. ಈ ಕವನದಲ್ಲಿಯೂ ರಾಜಮನೆತನವನ್ನು ಕುರಿತ ಭಕ್ತಿ ಕಡಿಮೆಯಾಗಿಲ್ಲ.

೧೯೧೪ರಲ್ಲಿ ರೂಪುಗೊಂಡ 'ಭರತಮಾತೆಯ ನುಡಿ' ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಬೆಳ್ಳಿಯ ಹಬ್ಬದ ಕವಿಸಮ್ಮೇಳನದಲ್ಲಿ ಓದಿದ (೧೯೪೧) 'ಶುಕ್ರಗೀತೆಗಳ ಭಾವಸಂಪತ್ತು' ವಿಚಾರ ಸಂಪತ್ತುಗಳ ವಿಧಾನವೇ ಬೇರೆ.

ಆದಿಪ್ರಾಸ - ಅಂತ್ಯಪ್ರಾಸಗಳೆರಡನ್ನೂ ಇಟ್ಟುಕೊಂಡೂ ಛಂದಸ್ಸಿನಲ್ಲಿ ಸೊಬಗನ್ನು ತಂದುಕೊಂಡ ಕವನ' ಭಾರತಮಾತೆಯ ನುಡಿ!

'ಭರತಮಾತೆಯೆ, ಭರತಮಾತೆಯೆ ಎಂದು ನೀ ತಲೆಯೆತ್ತುವೆ?
ಎಂದು ಲೋಕದ ಜನದ ಹೃದಯದಿ ನಿನ್ನ ಮಹಿಮೆಯ ಬಿತ್ತುವೆ?'

ಎಂದು ಪ್ರಶ್ನಿಸುವ ಕವಿ, ಗತಕಾಲದ ವೈಭವ, ಪೂರ್ವದ ಋಷಿಗಳು, ಸತ್ಯದ ಕವಿಗಳು, ಧರ್ಮದ ಧಣಿಗಳು, ರಾಜ್ಯಗಳನ್ನು ಕಟ್ಟಿದ ಧೀರರುಗಳೆಲ್ಲ ಈಗೆಲ್ಲಿ? - ಎಂದು ಹೃದಯ ತುಂಬಿ ಕೇಳುತ್ತಾರೆ. ನಮ್ಮ ಪರಂಪರೆ, ನಮ್ಮ ಸಂಸ್ಕೃತಿಗಳ ಭಾರದಲ್ಲಿ ಸಿಕ್ಕು ಕಣ್ಣು ಕಳೆದುಕೊಂಡು ಕೊರಳು ಮುರಿದು ಬಿದ್ದಿದ್ದೇವೆ ಎಂದು ದುಃಖಿಸುತ್ತಾರೆ.

ಇದಕ್ಕೆ ಉತ್ತರವಾಗಿ ಭರತಮಾತೆ ದಿವ್ಯಬೆಳಕನ್ನು ದೇಶಕ್ಕೆ, ಜನತೆಗೆ ನೀಡಿ, ಜೀವಕಲೆಗಳ ಕಲಿಸಿ ಸುಖದಲಿ ಸೊಬಗ ಬೆಳೆಸುತ' ಬಂದುದನ್ನು ಹೇಳುತ್ತಾಳೆ. ಜಾಡ್ಯ ತುಂಬಿದಾಗ, ಚೈತನ್ಯ ಕುಗ್ಗಿದಾಗ, ಹೊರದೇಶಗಳ ದಾಳಿಗಳನ್ನು ತಂದು ಎಚ್ಚರಿಸಿದುದನ್ನೂ ತಿಳಿಸುತ್ತಾಳೆ.

"ಕಡೆಗೆ ನೆನೆದೆನು ನನ್ನ ಮನೆತನ ನೇರವಾಗುವ ತೆರವನು,
ಕಡಲ ರಾಣಿ ಬ್ರಿಟಾನಿಯಳ, ನನ್ನಿನಿಯ ತಂಗಿಯ ನೆರವನು;
ಗೆಲಿದು ನಾಡನು ಬೆಳೆದಳು - ನೆಲ
ದೊಲುಮೆ ಕಟ್ಟನು ಹೊಸೆದಳು".

ಈ ಸಾಲುಗಳು ಹಾಗೂ ಮುಂದಿನ ಭಾಗದಲ್ಲಿ ಬ್ರಿಟಿಷರ ಆಳ್ವಿಕೆಯ ಘನತೆಯನ್ನು

ಕವಿ ಮೆಚ್ಚಿಕೊಂಡುದು ಸ್ಪಷ್ಟವಾಗಿದೆ. 'ಕಡಲರಾಣಿ ಬ್ರಿಟಾನಿಯ' ನಮ್ಮ ಹಿತಕ್ಕಾಗಿ ಬಂದಳೆ? ಅವಳು ದೇಶವನ್ನು ಒಂದುಗೂಡಿಸಿರಬಹುದು. ಅವಳ ಭಾಷೆ ನಮಗೆ 'ಸಕಲ ಜ್ಞಾನವ ತೆರೆಯಿತು' ನಿಜ, ಆದರೆ ಜಾತಿಜಾತಿಗಳಲ್ಲಿ ಭೇದ ಬೆಳೆಸಿ ದೇಶವು ಒಡೆಯಲೂ ಅವಳೇ ಕಾರಣಳಾಗಲಿಲ್ಲವೆ? ಅವಳು ಭಾರತವನ್ನು ತನ್ನ 'ಇನಿಯ ಅಕ್ಕ'ನೆಂದು ಕಂಡಳೆ, ದಾಸಿಯಾಗಿ ಕಂಡಳೆ? ಎನ್ನುವ ವಿಚಾರವು ಮನದಲ್ಲಿ ಮೂಡದೆ ಇರದು. ಆದರೆ ೧೯೧೦ರ ಆ ಕಾಲದಲ್ಲಿ ಬ್ರಿಟಿಷರ ಬಗೆಗೆ ನಮ್ಮ ಜನರಲ್ಲಿದ್ದ ಭಾವನೆಯ ಬಿಂಬವಾಗಿ ಮೂಡಿದ ಕವನವಿದು. ಹೀಗಿದ್ದೂ ಭಾರತವು ಜ್ಞಾನವಿಜ್ಞಾನ ಗಳಲ್ಲಿ, ರಾಜ್ಯಕಟ್ಟುವಲ್ಲಿ ನಾಗರಿಕತೆಯನ್ನು ಬೆಳೆಸಿದುದರಲ್ಲಿ, ಸಂಸ್ಕೃತಿಯ ಸೌಧ ಕಟ್ಟಿದುದರಲ್ಲಿ ಕವಿಗಿರುವ ಅಭಿಮಾನವೂ ಇಲ್ಲಿದೆ. ಮುಂದೆ ನಾವು ತಲೆಯೆತ್ತಿ ಬಾಳುವ ಭರವಸೆಯನ್ನೀವುದನ್ನೂ ಕಾಣುತ್ತೇವೆ. ಅಂತೆಯೆ ಭಾರತಮಾತೆಗೆ

"ನಿನ್ನ ಹಿಂದಿನ ಭಾಗ್ಯವೆಲ್ಲವ ಮರಳಿ ಸಾಧಿಸಿ ಮೆರೆವೆವು!
ನಿನ್ನ ಧರ್ಮಾಮೃತವ ಶೋಧಿಸಿ ಬರಡು ಲೋಕಕ್ಕೆರೆವೆವು;
    ದೈವಚಿತ್ತದಿ ನಿಲುವೆವು – ಸತ್
    ಸೇವೆಗೈಯುತ ಸಲುವೆವು"

ಎಂದು ನಂಬುಗೆಯನ್ನೀಯುತ್ತಾನೆ. ವಿಷಯ, ಅದನ್ನು ಅಭಿವ್ಯಕ್ತಪಡಿಸುವ ವಿಧಾನ, ಮಧುರ ಪದಗಳಲ್ಲಿ ಕಾವ್ಯಬಂಧ, ಛಂದಸ್ಸಿನ ಆವಿಷ್ಕಾರ ಎಲ್ಲವೂ ಅಂದಿನ ಕಾಲಕ್ಕೆ ಹೊಸದು ಎನ್ನುವುದು ಗಮನಾರ್ಹ.

'ಓಂ ಸಹನಾವವತು। ಸಹನೌಭುನಕ್ತು।
ಸಹವೀರ್ಯಂ ಕರವಾವಹೈ। ತೇಜಸ್ವಿನಾವಧೀತಮಸ್ತು
ಮಾವಿದ್ವಿಷಾವಹೈ। ಓಂ ಶಾಂತಿ। ಶಾಂತಿ। ಶಾಂತಿ

ಎಂದು ಶಾಂತಿಮಂತ್ರದಿಂದ ಆರಂಭವಾಗುವ ಈ ಕವನ ('ಶುಕ್ರಗೀತೆ') ಈ ಸಂಗ್ರಹದ ಆಣಿಮುತ್ತು, ಭಾವ, ಭಾಷೆ, ಬಂಧ, ಛಂದ ಎಲ್ಲದರಲ್ಲಿಯೂ ಕವಿ ಹಿರಿಮೆಯನ್ನು ತೋರಿರುವುದು ಇಲ್ಲಿ. ಇಲ್ಲಿ ರಾಜಭಕ್ತಿ ಇಲ್ಲ; ದೇಶಭಕ್ತಿ ಇಲ್ಲ; ಇಲ್ಲಿರುವುದು ಅಪ್ಪಟ ಜ್ಞಾನಭಕ್ತಿ. ಜ್ಞಾನವೇ ಈ ಕವನದ ವಿಷಯ. ಶಾಂತಿಮಂತ್ರವನ್ನು ಪಠಿಸಿದ ಮೇಲೆ ಕವನ ಮೊದಲಾಗುವುದೇ ಹೀಗೆ: ರಸಿಕ ಸಹೃದಯನ ಹೃದಯಬುದ್ಧಿಗಳನ್ನೆಲ್ಲ ಭವ್ಯತೇಜಸ್ಸಿನಲ್ಲಿ ಮುಳುಗಿಸುವಂತೆ;

'ಮೊತ್ತ ಮೊದಲೆ, ಬೆಳಕಾಗಲೆಂದಾಗ, ಬೆಳಕಾಯ್ತು; ಬೆಳಕು ಚೆಲುವಾಯ್ತು;
ಕಿಡಿಸಿಡಿದು ಮಿನುಗಿದುವು ಜ್ಯೋತಿಗಳೆ; ಮುಡಿದರು ಸೂರ್ಯ ಚಂದಿರರು
ಲೋಕಚಕ್ಷುಗಳೆನಿಸಿ, ಸತ್ಯಧರ್ಮಗಳಂತೆ, ಕ್ಷಮೆದಯೆಗಳಂತೆ
ಹಸುರ ಸೊಬಗು ತೊಟ್ಟು, ಹಾಡುತ್ತ, ಬಾನ್‌ಬಯಲೊಳಾಟವಾಡುತ್ತ,
ಸೌಂದರ್ಯದಿಂ ತೀಪಿ, ಭೂದೇವಿ ಬೆಳಗಿದಳು, ಜೀವಪರಮಾತ್ಮರಿಂ ತೊಳಗಿ.'

ಆ ದಿವ್ಯದರ್ಶನಂ ಕಣ್ತುಂಬೆ ನೋಡಿದರ್;
ದಿವಿಜರುಂ, ಋಷಿಗಳುಂ; ನಲಿದು ಕುಣಿದಾಡಿದರ್;
ಪಾಟಮಂ ಪಾಡಿದರ್ –
'ಓಂ, ತತ್ಸವಿತುರ್ವರೇಣ್ಯಂ
ಭರ್ಗೋದೇವಸ್ಯ ಧೀಮಹಿ,
ಧಿಯೋ ಯೋ ನಃ ಪ್ರಚೋದಯಾತ್'

(ಇದು ಗಾಯತ್ರಿಮಂತ್ರ ಹಾಡಿದವರು ದೇವತೆಗಳು – ಋಷಿಗಳು) ಮತ್ತಮವರಿಂತೆಂದು ಬೇಡಿದರ್ –

ಹಿರಣ್ಮಯೇನ್ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಂ;
ತತ್ ತ್ವಂ ಪೂಷನ್ ಅಪಾವೃಣು
ಸತ್ಯ ಧರ್ಮಾಯ ದೃಷ್ಟಯೇ
ಇನ್ನುವೊಂದು ಬಯಸಿ ಪೂಟಮಂ ಪೂಡಿದರ್–
ಅಸತೋ ಮಾ ಸದ್ಗಮಯ,
ತಮಸೋ ಮಾ ಜ್ಯೋತಿರ್ಗಮಯ,
ಮೃತ್ಯೋರ್ ಮಾ ಅಮೃತಂಗಮಯ

ಈ ಮಂತ್ರಗಳ ಅರಿವು, ಅವುಗಳ ಹಿರಿಮೆ–ಗರಿಮೆಗಳನ್ನೆಲ್ಲ ವಿವರಿಸಿ 'ಇಂದಿಗಮೆಮಗದುವೆ ದರ್ಶನಂ' ಎಂದು ಸಾರುವುದೇ ಕವಿಯ ಉದ್ದೇಶವಾಗಿದೆ. ಜ್ಞಾನದ ಬೆಳಕು ಈ ದೇಶದಲ್ಲಿ ಬೆಳಗುತ್ತ, ತೊಳಗುತ್ತ ಬಂದುದನ್ನು ಕಾವ್ಯವಾಗಿ ಮೂಡಿಸಿದರು. ಕೊನೆಗೆ ಅವರು ಹೇಳುವುದು;

ಋತವೊಂದೆ ಗೆಲ್ಲುವುದು, ಅನೃತವಲ್ತು;
ಅಮೃತಮೆನೆ ವಿದ್ಯೆಯೆ, ಅವಿದ್ಯೆಯಲ್ತು;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.

ಈ ದಿವ್ಯಭಾವದಲ್ಲಿ ಕಾವ್ಯ ಕೊನೆಗೊಳ್ಳಬೇಕಿತ್ತು. ಆದರೆ ಕವಿಗೆ ದಾರ್ಶನಿಕ ಉಪದೇಶದ ಚಪಲ ಮೂಡಿತು.

"ಸರ್ವ ಜೀವಂಗಳುಂ ಮುಕ್ತಿಯಂ ಕಾಣ್ಗೆ;
ದೇವರೊಳ್ ಪಡೆವವರ ಕಾಳಗಂ ಮಾಣ್ಗೆ;
ಸಾವುದೆಲ್ಲಾ ಸತ್ತು, ಬಾನಾಕ್ಕೆ ಪೂಣ್ಗೆ."

ಎಂದು ಹಾರೈಸುತ್ತಾರೆ. ದಿವ್ಯ ಜ್ಞಾನಲೋಕದಲ್ಲಿ ಹಾರಾಡುತ್ತಿದ್ದ ಭಾವಪಕ್ಷಿ ಭೂಮಿಗೆ ಇಳಿಯಿತು.

ಜ್ಞಾನಧರ್ಮಂಗಳಿಂ, ತಣ್ಣನಿಳೆ ತಾಳ್ಗೆ' ಎಂಬ ಉದ್ಗಾರ ಬರುತ್ತದೆ. ಇಲ್ಲಿಗೂ ನಿಲ್ಲುವುದಿಲ್ಲ ಕವಿಯ ಭಾವ, ಇನ್ನೂ ಸಂಕೋಚಗೊಂಡು, ಇನ್ನೂ ಕೆಳಗಿಳಿದು

'ಶ್ರೀಜಯನ್ ನಿಡುಬಾಳಿ ನಮ್ಮನೊಲಿದಾಳ್ಗೆ;
ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ'

ಎಂದು ಕವನ ಮುಗಿಯುತ್ತದೆ.

ನಾಡಿನ ಅಭಿಮಾನದಲ್ಲಿ ಮೂಡಿ ಬಂದಿರುವ ಕವನಗಳೆರಡು. ಅವುಗಳಲ್ಲಿ ಸುಂದರ ಚಿತ್ರ 'ಕನ್ನಡ ತಾಯ ನೋಟ'. ಶ್ರೀಕಂಠಯ್ಯನವರು ಕನ್ನಡ ನಾಡನ್ನೆಲ್ಲ ಸುತ್ತಿ ಅದರ ಸೊಬಗನ್ನು ಕಣ್ಣಾರೆ ಕಂಡವರು, ಹಳೆಯ ಮೈಸೂರು, ಮುಂಬಯಿ ಕರ್ನಾಟಕ, ಹೈದರಾಬಾದ ಕರ್ನಾಟಕ, ಮದ್ರಾಸ ಕರ್ನಾಟಕಗಳನ್ನೆಲ್ಲ ಸುತ್ತುವರಿದು ಅದರ ಚಲುವಿಗೆ ಮಾರುಹೋದವರು. ವಿಜಯನಗರ ಸಾಮ್ರಾಜ್ಯದ ಆರುನೂರನೆಯ ವರ್ಷದ ವಿಜೃಂಭಣೆಯ ಉತ್ಸವದ ಸಂದರ್ಭದಲ್ಲಿ (೧೯೩೬) ತಮ್ಮ ಭಾಷಣದ ಭಾಗವಾಗಿ ಓದಿದ ಕವನವಿದು. ಒಂದು ಮೆರವಣಿಗೆ ಮುಗಿದು ಸಭೆಗೆ ಇನ್ನೂ ಕಾಲಾವಕಾಶವಿದ್ದಾಗ ಯಾರಿಂದಲೋ ಒಂದೆರಡು ಬಿಳಿಕಾಗದಗಳನ್ನು ಪಡೆದು ಬರಹಕ್ಕೆ ಇಳಿಸಿದ ಕಾವ್ಯವಿದು. ಆರು ಭಾಗಗಳಲ್ಲಿ ಮೂಡಿರುವ ಈ ಕವನ ಅರ್ಧಕ್ಕೆ ನಿಂತಿದೆಯಂತೆ.

ಐದು ಮಾತ್ರೆಯ ಗಣಗಳೈದರ ಮೇಲೆ ಮೂರು ಮಾತ್ರೆಯ ಗಣದ ಸಾಲುಗಳಿಂದ ಕೂಡಿದ ಈ ಕವನ ಗಾಂಭೀರ್ಯ ತುಂಬಿದುದು.

ಕನ್ನಡನಾಡಿನ ನಿಸರ್ಗಸೌಂದರ್ಯ, ಕಪ್ಪುನೆಲದ ವಿಸ್ತಾರವನ್ನು ವರ್ಣಿಸುವಲ್ಲಿ 'ಕಪ್ಪು' ವರ್ಣಕ್ಕೂ ಸೌಂದರ್ಯವನ್ನು ನೀಡಿರುವುದು ಕಾವ್ಯಕ್ಕೆ ಮೆರುಗನ್ನು ತಂದಿದೆ.

'ಕೆಳಗೆ ಬೆಳೆಹೊಲ ಕಪ್ಪು, ಮೇಲೆ ಬಾಂಬೊಲ ಕಪ್ಪು, ಬೆಟ್ಟಗಳು ಕಪ್ಪು,
ಕಾರ್ಮೋಡಗಳು ಕಪ್ಪು, ಹೊಳೆಕೆರೆಯ ಮಡು ಕಪ್ಪು, ತಾಯಕಾಲ್ ತೊಳೆವ
ಉಪ್ಪು ಕಡಲದು ಕಪ್ಪು, ಜನ ಕಪ್ಪು –ಏನೆಂದೆ? ತಪ್ಪು ತಪ್ಪು:–
ಮೂಡ ಪಡುವಲು ತಿರುಗು, ಬಡಗ ತೆಂಕಲು ತಿರುಗು, ಕರ್ನಾಟದಲ್ಲಿ,
ನಿಮ್ಮೂರ ಹೆಣ್ಣುಗಳ ಕಣ್ನೋಟ, ತಣ್ ನೋಟ ಕರ್ಪು, ಬಲುಕರ್ಪು;
ಕರ್ಪೊ, ಬೆಳ್ಪೋ ಕಾಣೆ, ಕನ್ನಡದ ಕಣ್ನೋಟ – ಕೂರ್ಪು, ಆರ್ಪು;'

ಎಂಬಂತಹ ಸಾಲುಗಳಲ್ಲಿ ಭಾವ–ಬಂಧ–ಭಾಷೆ–ವಿಷಯ–ವರ್ಣನೆ–ನವುರಾದ ಹಾಸ್ಯ ಹದವಾಗಿ ಹೊಂದಿಕೊಳ್ಳುತ್ತವೆ.

ಕಾರ್ವಾರ, ಗೋಕರ್ಣ, ಉಡುಪಿ, ಮಂಗಳೂರು, ಚಾರ್ಮಾಡಿಗಳನ್ನೆಲ್ಲ ಸುತ್ತಿ ಬಂದು ಪಶ್ಚಿಮದ ಕಡಲು ಘಟ್ಟಗಳನ್ನು ವರ್ಣಿಸುತ್ತಾರೆ.

ಕನ್ನಡ ತಾಯಿ ಹಳೆಮುತ್ತೈದೆಯಾಗಿ ಹಿರಿದಾಗಿ ಬಾಳಿದವಳೊಮ್ಮೆ!

ಈಗ 'ನನ್ನ ಮನೆ ಹಾಳು। ನನ್ನ ನುಡಿ ಬೀಳು!' ಎಂದು ಕೊರಗುತ್ತಿದ್ದಾಳೆ. ಇಂಥ ತಾಯಿಯ ಒಲುಮೆಯನ್ನುಂಡವರು ಅವಳನ್ನು ಸಿಂಹಾಸನದಲ್ಲಿರಿಸಬೇಕು.

ಭುವನೇಶ್ವರೀ ದೇವಿ ರಥವನ್ನೇರುವಂತಾಗಬೇಕು. ಆ ರಥವನ್ನು ಹಿರಿಯರು ಕಿರಿಯರು ಎಳೆಯಬೇಕು.

'ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ - ಈ ಹಿರಿಯ ಕೂಗ-
"ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಬಾಳ್ಗೆ-
ಕನ್ನಡದ ತಾಯ ಗೆಲ್ಗೆ, ಬಾಳ್ಗೆ."

ಎಂದು ಕೊನೆಗೊಳ್ಳುವ ದೀರ್ಘಕವನವು ಕನ್ನಡ ಜನತೆಯಲ್ಲಿ ಹಿಂದೆ ಉತ್ಸಾಹ ತುಂಬಿತು; ಇಂದಿಗೂ ತುಂಬಬಲ್ಲುದು. ಶ್ರೀಯವರು ಕನ್ನಡದ ಬಗೆಗೆ ಕಂಡ ಕನಸೆಲ್ಲವೂ ಇಲ್ಲಿ ಕಾಣುತ್ತದೆ. ಅದೇ ತಾಯಿಯ ಧ್ವಜಗೀತೆಯಾಗಿ 'ಕನ್ನಡದ ಬಾವುಟ' ರಚಿತವಾಗಿದೆ.

ಏರಿಸಿ, ಹಾರಿಸಿ, ಕನ್ನಡದ ಬಾವುಟ;
ಓಹೋ ಕನ್ನಡ ನಾಡು, ಆಹ ಕನ್ನಡ ನುಡಿ;
ಹಾರಿಸಿ, ತೋರಿಸಿ, ಕೆಚ್ಚಿದೆಯ ಬಾವುಟ;
ಗಾಳಿಯಲಿ ಪಟಪಟ, ದಾಳಿಯಲಿ ಛಟಛಟ,
ಉರಿಯಿತೋ ಉರಿಯಿತು ಹಗೆಯ ಹಣ ಮನೆ ಮಟ,
ಹಾಳ್ ಹಾಳ್ ಸುರಿಯಿತು ಹಗೆಯ ಬೀಡಕ್ಕಟ!
    ಬಾಳ್ ಕನ್ನಡ ತಾಯ್ ;
    ಏಳ್ ಕನ್ನಡ ತಾಯ್;
    ಆಳ್ ಕನ್ನಡ ತಾಯ್ ;
    ಕನ್ನಡಿಗರೊಡತಿ ಓ ರಾಜೇಶ್ವರೀ;

ಕನ್ನಡಿಗರಲ್ಲಿ ಉತ್ಸಾಹವನ್ನು ತುಂಬಲು, ಕೆಚ್ಚು ತುಂಬಲು ಸಮರ್ಥವಾದುದು ಈ ಗೀತೆ; ತರುಣರಕ್ತವು ಕುದಿಯುವಂತೆ, ಉತ್ಸಾಹದ ಉಗ್ಗಡಣೆಮಾಡುವಂತೆ ಪ್ರೇರಣೆ ನೀಡಬಲ್ಲ ಗೀತೆಯಿದು!

ಇಷ್ಟಾದರೂ ಇದು ಅಲಂಕಾರ - ಬೆಡಗುಗಳೇ ಪ್ರಧಾನವಾದ ಗೀತೆ.

ಈ ಸಂಗ್ರಹದಲ್ಲಿ 'ಧರ್ಮಯುದ್ಧ' ಎಂಬ ಕವನವಿದೆ. ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದೆ. ಹಳೆಯದನ್ನೆಲ್ಲ ಬಿಟ್ಟ ಕವಿ ಮತ್ತೆ ಪರಂಪರೆಗೆ ಏಕೆ ಶರಣು ಹೋದರೋ? ಪರಂಪರೆಯೂ ತನಗೆ ಗೊತ್ತು, ಅದರಲ್ಲಿಯೂ ಸಾಧನೆ ಮಾಡಬಲ್ಲೆ ಎಂದು ಕವಿಯ ವಿಚಾರವಿದ್ದಂತೆ ಕಾಣುತ್ತದೆ ಎಂಬ ಅಭಿಪ್ರಾಯವಿದೆ. ಬಿ.ಎಂ.ಶ್ರೀಯವರ ಹಳೆಗನ್ನಡ -ನಡುಗನ್ನಡ ಕಾವ್ಯಗಳ ಅಭ್ಯಾಸ, ಅಲ್ಲಿಯ ಪ್ರೌಢಿಮೆ ಯಾರಿಗೂ ಅಪರಿಚಿತವಲ್ಲ. ಈ ಕವನ ಬರೆದೇ ಈ ವಿಚಾರವನ್ನು ತಿಳಿಸಬೇಕಾಗಿರಲಿಲ್ಲ. 'ಪಂಪನ ಒರತೆ' ಪಂಪಕವಿಯ ಸಾವಿರ ವರ್ಷದ ಹಬ್ಬದಲ್ಲಿ ಕವಿ ನೀಡಿದ ಗೌರವಯುತ ಕಾಣಿಕೆ. ಆ ಪಿರಿಯ ಕವಿ 'ಪಿರಿಯತನಮನೆ ಮರೆತ ಕಿರಿ ಮಕ್ಕಳನ್' ಹರಸಲಿ ಎಂದೇ ಕವಿಯ ಆಸೆ.

ಶ್ರೀಯವರು ತಮಿಳು ಭಾಷೆಯ ಶಿಲಪ್ಪದಿಗಾರಂ ಎಂಬ ಪ್ರಸಿದ್ಧ ಕಾವ್ಯವನ್ನೂ ಇನ್ನೂ ಕೆಲವು ಮಹಾಗ್ರಂಥಗಳನ್ನೂ ಕನ್ನಡಕ್ಕೆ ಅನುವಾದ ಮಾಡಿದ್ದರಂತೆ. ಧಾರವಾಡದ ನೆಲದಲ್ಲಿ ಅವೆಲ್ಲವೂ ಗೆದ್ದಲಿನ ಪಾಲಾದುವಂತೆ. ಆದರೆ 'ಶಿಲಪ್ಪದಿಗಾರಂ'ಗೆ ಬರೆದ ಮುನ್ನುಡಿಯ ಹದಿನೇಳು ಸಾಲುಗಳು ಹಾಗೂ ಮದರಾಸು ಸಾಹಿತ್ಯ ಸಮ್ಮೇಳನಕ್ಕೆ ಕಳಿಸಿದ 'ಹಾರೈಕೆ' ತಮಿಳು – ಕನ್ನಡಗಳ ಬಾಂಧವ್ಯ ನಿದರ್ಶಕವಾದ ಭಾಷೆಯಲ್ಲಿ ಮೂಡಿಬಂದಿದೆ. 'ಹಾರೈಕೆ' ಯಂತೂ ದ್ರಾವಿಡ ಗಣ–ತ್ರಿಪದಿ ಕುರುಳು ಧಾಟಿಯಲ್ಲಿದೆ.

ಪ್ರಯೋಗಶೀಲತೆ 'ಹೊಂಗನಸುಗಳು' ಸಂಗ್ರಹದ ಪ್ರಧಾನ ಗುಣ. ಒಂದೊಂದೂ ಒಂದೊಂದೂ ಯಶಸ್ವೀ ಪ್ರಯೋಗ. ಈ ಪ್ರಯೋಗದ ಗಂಗೋತ್ರಿ, ಯಮುನೋತ್ರಿ, ಹಾಗೂ ಇತರ ನದಿಮೂಲಗಳಿಂದ ಹೊಮ್ಮಿ ಪೂರ, ಮಹಾಪೂರ, ತಡಸಲಿನ ಆರ್ಭಟ, ಗಂಭೀರ ಗಮನಗಳಿಂದ ಹೊಸಗನ್ನಡ ಕಾವ್ಯಪ್ರವಾಹ ಹರಿದು ಇಂದು ಸಾಗರೋಪಮ ವಾಗಿ ಬೆಳೆದಿದೆ. ಇದಕ್ಕೆಲ್ಲವೂ ಭಗೀರಥನಂತೆ ಕಾವ್ಯ ತಪಸ್ಸು ಗೈದ ಶ್ರೀಯವರ ವ್ಯಕ್ತಿತ್ವಕ್ಕೆ 'ಮಣಿಯದವರು ಆರು?'.

❐

೧೧. ಅಶ್ವತ್ಥಾಮನ್

■ ಡಾ. ರಾ.ಯ. ಧಾರವಾಡಕರ

ಅಸುಹೃತ್ಸೇನೆಗೆ ಸಾಲ್ವನೊರ್ವನೆ ಗಡಂ ರುದ್ರಾವತಾರಂ ಗಡಂ
ನೊಸಲೊಳ ಕಣ್ ಗಡಮೆಂದು ನಚ್ಚಿಪೊರೆದಂ ತಾನಕ್ಕೆ ತಮ್ಮಮ್ಮನ
ಕ್ಕಿಸಲಂಬಂ ತಿರುವಾಯೆ ತಂದರಿವರೇ ತಮ್ಮಿರ್ವರುಂ ಕಯ್ದುವಂ
ಬಿಸುಟರ್ ಜೋಳದ ಪಾಟಿಯಂ ಬಗೆದರಿಲ್ಲಾ ದ್ರೌಣಿಯುಂ ದ್ರೋಣನುಂ॥

– ಎಂದು ಕವಿ ರನ್ನನ 'ಸಾಹಸಭೀಮವಿಜಯ'ದಲ್ಲಿ ಆಕ್ಷೇಪಣೆಗಳಿಗೊಳಗಾದ ದ್ರೋಣಾಶ್ವತ್ಥಾಮರೂ ಒಂದು ವಿಧದಲ್ಲಿ ಕರ್ಣನಷ್ಟೇ ಕಾರುಣ್ಯಕ್ಕೆ ಒಳಗಾಗಬೇಕಾದವರು. ಅಶ್ವತ್ಥಾಮ ಸ್ವತಃ ಶೂರನಾಗಿದ್ದರೂ, ರುದ್ರಾವತಾರನಾಗಿದ್ದರೂ, ಸ್ವಾಮಿಭಕ್ತನಾಗಿದ್ದರೂ, ಚಿರಂಜೀವಿಯಾಗಿದ್ದರೂ, ಅವನಿಗೆ ಕೌರವಸೇನೆಯ 'ಸೈನ್ಯಾಧಿಪತ್ಯದ' ಅವಕಾಶ ಸಿಗುವುದು ಹಿರಿಯರಾದ ಭೀಷ್ಮ, ದ್ರೋಣ ಮೊದಲದವರ ಸರತಿ ಮುಗಿದ ಮೇಲೆ, ಕರ್ಣಾದಿಗಳು ಆದ ಮೇಲೆ, ಕೊನೆಯ ರಾತ್ರಿ ಮಾತ್ರ, ಅಶ್ವತ್ಥಾಮನಿಗೆ ದೊರಕಿದುದು ದಿವಾಳಿಯೆದ್ದ ಸಾಮ್ರಾಜ್ಯದ ಅಧಿಪತ್ಯ. ಅಷ್ಟನ್ನುವದರಲ್ಲಿಯೇ ಕೌರವಸೇನೆಯೆಲ್ಲ ಹತವೇ ಆಗಿತ್ತು. ವೀರಾಧಿವೀರರು ವೀರಸ್ವರ್ಗವನ್ನು ಹೊಂದಿದ್ದರು. ಸ್ವತಃ ಕುರುಪತಿಯೇ ತೊಡೆಹಿಡಿದು, ಮುಕುಟಭಂಗವಾಗಿ ಕುರುಭೂಮಿಯಲ್ಲಿ ನರಳುತ್ತ ಒರಗಿದ್ದನು. ಹಾವು ಎಷ್ಟೇ ಸವೆದರೂ, ವಿಷವನ್ನು ಮಾತ್ರ ಕಳೆದುಕೊಳ್ಳದಂತೆ, ಅವನಲ್ಲಿ ಈಗಲಾದರೂ ಉಳಿದದ್ದು ಕೇವಲ ಪಾಂಡವದ್ವೇಷ ಮಾತ್ರ, ಇಂಥ ಕಾಲಕ್ಕೆ ಅಶ್ವತ್ಥಾಮ ಕೌರವಸೇನೆಯ 'ಅಧಿಪತಿ'ಯಾದ. ಕಾವ್ಯಶಕ್ತಿಯಿದ್ದ ಯಾವ ಬರಹಗಾರನಿಗೂ ಇಂಥ ಸನ್ನಿವೇಶ ಕಾವ್ಯ ರಚನೆಗೆ ಒಂದು ಸದವಕಾಶ. 'ಶ್ರೀ'ಯವರೂ ಅಶ್ವತ್ಥಾಮದಲ್ಲಿ ಇದೇ ಅವಕಾಶವನ್ನು ಉಪಯೋಗಿಸಿಕೊಂಡರು.

ಈ ವಿಷಯವನ್ನು ನಾಟಕ ವಸ್ತುವಾಗಿ ಆಯ್ಕೆ ಮಾಡಿಕೊಳ್ಳುವ ಮೊದಲೇ ಶ್ರೀಕಂಠಯ್ಯನವರ ಮನಸ್ಸು ಹಲವಾರು ಪ್ರಭಾವಗಳಿಗೆ ಒಳಗಾಗಿತ್ತು. ಒಂದು ಕಡೆಗೆ

ಭಾರತೀಯ ಪರಂಪರೆಯ ಮಹಾಭಾರತ; ಇನ್ನೊಂದು ಕಡೆಗೆ ಅವರು ವ್ಯಾಸಂಗ ಮಾಡಿದ್ದ ಪಾಶ್ಚಿಮಾತ್ಯ ಗ್ರೀಕ್ ನಾಟಕಗಳ ಪ್ರಭಾವ, ಇವೆರಡುಗಳ ಜೊತೆಗೆ ಅವರ ಸ್ವಂತ ಜೀವನಾನುಭವ. ಮನುಷ್ಯನ ಜೀವನದಲ್ಲಿ ದೈವ ಪ್ರಧಾನವೋ? ಪುರುಷ ಪ್ರಯತ್ನ ಪ್ರಧಾನವೊ? ಪುರುಷ ಪ್ರಯತ್ನ ಸ್ವಾಭಿಮಾನಗಳು ದೈವವನ್ನು ಎದುರು ಹಾಕಿಕೊಂಡು ನಿಲ್ಲಬಹುದೆ? ಈ ವಿಚಾರಗಳೆಲ್ಲ ಶ್ರೀಯವರ ಮನಸ್ಸಿನ ಕುಲುಮೆಯಲ್ಲಿ ಕುದಿಗೊಳ್ಳುತ್ತಿರಬಹುದು. ಇದೆಲ್ಲದರ ಸಮಷ್ಟಿ ಪರಿಣಾಮವೇ 'ಅಶ್ವತ್ಥಾಮನ್' ನಾಟಕ. ಪ್ರಸ್ತುತ ಪ್ರಬಂಧದಲ್ಲಿ 'ಅಶ್ವತ್ಥಾಮನ್' ನಾಟಕದ ಎಲ್ಲ ಫೈಲುಗಳ ಬಗ್ಗೆಯೂ ವಿವರಿಸದೆ, ಅಶ್ವತ್ಥಾಮನ್ ದುರಂತ ಯಾವ ರೀತಿ ನಡೆಯಿತು, ಅದಕ್ಕೆ ಕಾರಣವೇನು ಎಂಬುದನ್ನು ವಿವರಿಸಲಾಗಿದೆ.

'ಅಶ್ವತ್ಥಾಮನ್' ರಚಿತವಾದುದು ಸನ್ ೧೯೨೯ರಲ್ಲಿ, ಅದರ ಪ್ರಥಮ ಪ್ರಯೋಗವೂ ೧೯೨೯ರಲ್ಲಿಯೇ ನಡೆಯಿತು. ಅದರ ಪ್ರಕಟಣೆ ಆದದ್ದು ಕೂಡ ಅದೇ ವರ್ಷವೇ. ನಾಟಕ ಪ್ರಯೋಗವಾದಂದಿನಿಂದ ಹಲವು ಜನ "ಅಶ್ವತ್ಥಾಮನ್ ನಾಕಟದಷ್ಟು ಉತ್ತಮ ನಾಟಕ ಕನ್ನಡ ಸಾಹಿತ್ಯದಲ್ಲಿ ಈವರೆಗೆ ಬಂದಿಲ್ಲ. ಅದರ ವಿಷಯ, ರೀತಿ, ರಚನೆ, ದೃಷ್ಟಿಗಳಲ್ಲಿರುವ ವಿಶೇಷತೆಯನ್ನು ಗಮನಿಸಿದರೆ, ಅದನ್ನು ನಿರ್ಮಾಣ ಮಾಡಿದವರ ಹಿರಿಮೆಯ ಕ್ರಿಯಾಚೈತನ್ಯವೂ ಎಷ್ಟು ಅದ್ಭುತವೆಂದು ಗೊತ್ತಾಗುತ್ತದೆ" ಎಂದು ಅಭಿಪ್ರಾಯ ವ್ಯಕ್ತಮಾಡಿದರೆ, ಇನ್ನು ಹಲವು ಜನ 'ಅಶ್ವತ್ಥಾಮನ್', ಮಹಾಭಾರತ ಹಾಗೂ "ಎಜಾಕ್ಸ" ನಾಟಕಗಳ ಕಲಸುಮೇಲೋಗರ, ಅದು ಭಾರತೀಯ ಪರಂಪರೆಗೆ ಒಡ್ಡಿದ ಒಂದು ಆಘಾತ" ಎಂಬ ರೀತಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಎರಡೂ ಅಭಿಪ್ರಾಯಗಳಲ್ಲಿ ಸತ್ಯಾಂಶವಿಲ್ಲದೆ ಇಲ್ಲ. ಗ್ರೀಕ್ ನಾಟಕಕಾರ ಸೊಫೋಕ್ಲಿಸನ 'ಏಜಾಕ್ಸ' ನಾಟಕದಿಂದ ಪ್ರಭಾವಿತರಾಗಿದ್ದ ಶ್ರೀಯವರು ಅಲ್ಲಿಯ ದುರಂತ ಕಲ್ಪನೆಯನ್ನು, ನಮ್ಮ ಪರಂಪರೆಯ ಕಥೆಗೆ ಹೇಳಲು ಪ್ರಯತ್ನ ಮಾಡಿದರು. 'ಅವಳ ತೊಡಿಗೆ ಇವಳಿಗಿಟ್ಟು' ಹಾಡಬಯಸಿದರು. ಹೀಗೆ ತೊಡಿಗೆ ಉಡಿಸುವಲ್ಲಿ ಶ್ರೀಯವರು ಮಾಡಿಕೊಂಡ ಮಾರ್ಪಾಡುಗಳು ಯಾವವು ಎಂಬುದನ್ನು ಗಮನಿಸಬೇಕು.

ಭಾರತೀಯ ಪರಂಪರೆಯಲ್ಲಿ ಅಶ್ವತ್ಥಾಮ ಚಿರಂಜೀವಿ, ನಾವು ಚಿಕ್ಕವರಿದ್ದಾಗಿ ನಿಂದಲೂ ಕಂಠಪಾಠ ಮಾಡಿದ ಶ್ಲೋಕ ನಮ್ಮ ಮನಸ್ಸಿನಿಂದ ಹಾರಿಹೋಗದು:

> ಅಶ್ವತ್ಥಾಮಾ ಬಲಿರ್ವ್ಯಾಸಃ ಹನುಮಾಂಶ್ಚ ವಿಭೀಷಣಃ
> ಕೃಪಃ ಪರಶುರಾಮಶ್ಚ ಸಪ್ತೈತೇ ಚಿರಂಜೀವಿನಃ।

ಅಶ್ವತ್ಥಾಮ ಚಿರಂಜೀವಿ ಎಂಬ ವಿಚಾರ ಬರಿಯ ಕಲ್ಪನೆ ಮಾತ್ರವಲ್ಲ; ಈ ವಿಚಾರ ಕನ್ನಡಿಗರಲ್ಲಿಯಂತೂ ಜೀವಂತ ನಂಬುಗೆ. ಪಂಕ್ತಿಯಲ್ಲಿ ಊಟಕ್ಕೆ

ಕುಳಿತುಕೊಳ್ಳುವಾಗ, ಎಲೆಗಾಗಿ ಹೊಡೆದಾಡುತ್ತಿದ್ದ ಒಬ್ಬ ಬಾಲಕನಿಗೆ "ಎಂಥ ಹಠಮಾರಿ ದುರ್ಯೋಧನನಾಗಿರುವಿ?" ಅಂದದ್ದಕ್ಕೆ, ಅದೇ ಪಂಕ್ತಿಯಲ್ಲಿ ಕುಳಿತಿದ ವೃದ್ಧರೊಬ್ಬರು ದುರ್ಯೋಧನನಿಗೆ ಕಲಿಯುಗದಲ್ಲಿ ಕೂಡ ಆದ ಅಪಚಾರಕ್ಕಾಗಿ ಮನನೊಂದು ಕಣ್ಣೀರು ಸುರಿಸಿ ಪಂಕ್ತಿಯಿಂದ ಎದ್ದುಹೋದರಂತೆ. ಹಾಗೆ ಎದ್ದವರೇ ಅಶ್ವತ್ಥಾಮ, ದ್ವಾಪರದಿಂದ ಕಲಿಯುಗದವರೆಗೆ ಬದುಕಿ ಬಂದ ಪರಮಜ್ಞಾನಿಗಳು; ಚಿರಂಜೀವಿಗಳು. ಹೀಗೆ ಪ್ರಾತಃಸ್ಮರಣೀಯರಾದ ಚಿರಂಜೀವಿ ಅಶ್ವತ್ಥಾಮ, ಅವರನ್ನು ಹಿಂಬಾಲಿಸಿ, ಅವರಿಂದ ಆಶೀರ್ವಾದ ಪಡೆದ ನಾರಣಪ್ಪನೇ ಕುಮಾರವ್ಯಾಸ ಭಾರತ ರಚಿಸಿದ. ಅಶ್ವತ್ಥಾಮ ಶ್ರೀಯವರ ನಾಟಕದಲ್ಲಿ ಸಾಯುತ್ತಾನೆ. ಇದು ಸರಿಯೆ? ಇದನ್ನು ದಕ್ಕಿಸಿಕೊಳ್ಳಲು ಮನಸ್ಸು ಸಿದ್ಧವಾಗುತ್ತದೆಯೆ? ಅಷ್ಟೇ ಅಲ್ಲ; ಅವ ಸಾಯುವುದು ಕೂಡ, ಯುದ್ಧದಲ್ಲಿ ಹೋರಾಡಿ ವೀರಮರಣವನ್ನು ಐದುವುದರಿಂದಲ್ಲ; ಖಡ್ಗದ ಮೇಲೆ ಬಿದ್ದು, ಆತ್ಮಹತ್ಯೆ ಮಾಡಿಕೊಳ್ಳುವುದರಿಂದ.

ಎರಡನೆಯದಾಗಿ, ಮಹಾಭಾರತದ ಅಶ್ವತ್ಥಾಮ ನೈಷ್ಠಿಕ ಬ್ರಹ್ಮಚಾರಿ, ಅವಿವಾಹಿತ. ಶ್ರೀಯವರ ನಾಟಕದಲ್ಲಿ ಅವನಿಗೆ ಮದುವೆಯಾಗಿದೆ. ಅಷ್ಟೇ ಅಲ್ಲದೆ, ರುದ್ರಶಕ್ತಿ ಎಂಬ ಮಗನೂ ಇದ್ದಾನೆ.

ಮೂರನೆಯದಾಗಿ, ಭಾರತದ ಅಶ್ವತ್ಥಾಮನನ್ನು ಪಾಲಿಸಿ, ಪೋಷಿಸಿದವರು ಅವನ ತಂದೆ ಆಚಾರ್ಯ ದ್ರೋಣರು ಹಾಗೂ ತಾಯಿ ಕೃಪೆ. ಇಲ್ಲಿ ಎಳೆವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡು ಅಶ್ವತ್ಥಾಮನನ್ನು ಪಾಲಿಸಿ, ಪೋಷಿಸಿದವಳು ಅವನ ಅಜ್ಜಿ ಭಾರ್ಗವಿ.

ನಾಲ್ಕನೆಯದಾಗಿ, ಅಶ್ವತ್ಥಾಮ ಬಿದ್ದು ಸಾಯುವ ಖಡ್ಗ ಅವನಿಗೆ ಅಭಿಮನ್ಯುವಿನಿಂದ ಬಂದದ್ದು. ಇದಕ್ಕೆ ಮೂಲದಲ್ಲಿ ಯಾವ ಆಧಾರವೂ ಇಲ್ಲ.

ಐದನೆಯದಾಗಿ, ಹಲವಾರು ಜನರ ಕಲ್ಪನೆಯಲ್ಲಿ ಕೃಷ್ಣ ಪರಮ ಆತ್ಮ, ಸರ್ವೋತ್ತಮ, ಪರತಮ ನಮಾಧವನ ಸಮೋದೇವ: ಆದರೆ, ಇಲ್ಲಿ ಅವನ ಚಿತ್ರಣ ಬೇರೆಯಾಗಿಯೇ ಬಂದಿದೆ. ಈ ಮಾರ್ಪಾಡಿನ ಬಗ್ಗೆ ಪ್ರೊ. ಎ.ಎನ್. ಮೂರ್ತಿರಾಯರು ಹೇಳಿದ ಮಾತುಗಳು ಗಮನಾರ್ಹವಾಗಿವೆ.

"ಉಳಿದವರಲ್ಲಿ ನಮ್ಮನ್ನು ಹೆಚ್ಚು ಆಕರ್ಷಿಸುವ ವ್ಯಕ್ತಿಯೆಂದರೆ ಕೃಷ್ಣ ಮಹಾಭಾರತದ ಕೃಷ್ಣ ದೇವರ ಅವತಾರ ಎನ್ನುವವರಿದ್ದಾರೆ, ಅವತಾರವಲ್ಲ ಎನ್ನುವವರೂ ಇದ್ದಾರೆ. ಅದು ಹೇಗಾದರೂ ಇರಲಿ, 'ಇವನು ದೇವರ ಅವತಾರ' ಎನ್ನಿಸುವಂಥ ಔನ್ನತ್ಯ ಅವನಲ್ಲಿದೆ. ಇಲ್ಲಾದರೋ ಶ್ರೀಕಂಠಯ್ಯನವರು ಅವನನ್ನು ಇವನು ಮಾನವನ

ಇತಿಮಿತಿಗಳಿಗೆ ಒಳಪಟ್ಟವನು' ಎನ್ನಿಸುವಂತೆ ಚಿತ್ರಿಸಲು ಶ್ರಮವಹಿಸಿದಂತೆ ಕಾಣುತ್ತದೆ. ಹಾಗೆ ಚಿತ್ರಿಸಲು ಅವರಿಗೆ ಹಕ್ಕಿಲ್ಲ ಎನ್ನುವಂತಿಲ್ಲ. ಆದರೆ, ಯಾವ ಮತ ಕೃಷ್ಣನನ್ನು ದೇವರು ಎಂದು ನಂಬಿದೆಯೋ ಅದು ಭಾರತದಲ್ಲಿ ಇನ್ನೂ ಜೀವಂತವಾಗಿರುವ ಮತ. (ಪುರಾತನ ಗ್ರೀಕರ ಮತ ಹೀಗೆ ಜೀವಂತವಾಗಿಲ್ಲ). ಕೋಟಿಗಟ್ಟಲೆ ಜನ 'ಆ ಹೆಸರನ್ನು ಉಚ್ಚರಿಸಿದರೆ ಸಾಕು, ಜನ್ಮ ಸಾರ್ಥಕವಾಗುತ್ತದೆ' ಎಂದು ನಂಬಿದ್ದಾರೆ. ಆದ್ದರಿಂದ, ಇಲ್ಲಿಯ ವಾತಾವರಣದಲ್ಲಿ, ನಮ್ಮ ನಾಟಕದಲ್ಲಿ ಕೃಷ್ಣ ಆಡುವ ಕೆಲವು ಮಾತುಗಳು, ಅವನು ದೇವರಲ್ಲ ಎನ್ನುವವರಿಗೂ ಕೂಡ ಸ್ವಲ್ಪ ವಿಚಿತ್ರವಾಗಿ ಕಾಣುತ್ತವೆ. ಅವನಿಗೆ ಅಶ್ವತ್ಥಾಮನು 'ಅರಿಯ ಪಗೆ' – ಗೆಲ್ಲಲಸಾಧ್ಯವಾದ ಶತ್ರು. ಅವನ (ಕೃಷ್ಣನ) ಬಾಳೂ ನಮ್ಮೆಲ್ಲರ ಬಾಳಿನಂತೆ ಅಶಾಶ್ವತ.

> ಇಂದವನ್, ನಾಳೆ ನಾನ್. ಏನ್ ಪಾಡೊ ಆಳಬಾಳ್।
> ಬೀಸುವ ಬಯಲ್ಗಾಳಿ, ಪರಿದಡಂಗುವ ನೆಳಲ್ ।
> ಓಮಿತ್ರ! ನಾನುಮೆ ಇಂತಾಗೆನೇ ಒಂದು ದಿನಂ॥

ಇಂಥ ಪಂಕ್ತಿಗಳು ಅವನ ಮಾನವತೆಯನ್ನು ಒತ್ತಿಹೇಳುತ್ತವೆ. ಶ್ರೀಕಂಠಯ್ಯನವರು ಈ ಪಾತ್ರಕ್ಕೆ ಬೇರೆ ಯಾವುದಾದರೂ ಹೆಸರನ್ನು (ವಿದುರನ ಹೆಸರನ್ನು?) ಕೊಟ್ಟಿದ್ದರೆ ಚೆನ್ನಾಗಿತ್ತು.[೧] ಇದು ಪ್ರೊ.ಎ.ಎನ್. ಮೂರ್ತಿರಾಯರ ಅಭಿಪ್ರಾಯ. ಇದನ್ನು ಅನುಮೋದಿಸುವವರೂ ಸಾಕಷ್ಟು ಜನ ಇದ್ದಾರೆ.

ಆರನೆಯದಾಗಿ, ದ್ರೋಣಾಶ್ವತ್ಥಾಮರೆಲ್ಲ ಕನ್ನಡ ನಾಡಿನವರು. ಬನವಾಸಿ ಸೀಮೆಯವರು. ಅವರು ತಮ್ಮ ಬೇಡಪಡೆಯೊಂದಿಗೆ ಉತ್ತರಾಪಥ ಕುರುನಾಡಿಗೆ ಕೌರವ ಸೇನೆಗಾಗಿ ಹೋಗುತ್ತಾರೆ. ಅವರಲ್ಲಿ ಕನ್ನಡ ನಾಡಿನ ಬಗೆಗಿನ ಪ್ರಜ್ಞೆ, ಅಭಿಮಾನಗಳು ಇನ್ನೂ ತುಂಬಾ ಉಜ್ವಲವಾಗಿವೆ.....ಇದೇನೋ ಸರಿಯೆ; ಯಾಕಂದರೆ, ಅಯೋಧ್ಯೆಯ ಅರಸನಾದ ಹರಿಶ್ಚಂದ್ರ, ರಾಘವಾಂಕನ ಕಾವ್ಯದಲ್ಲಿ ಕನ್ನಡನಾಡಿನ ಹಂಪೆಗೆ ಬರಲಿಲ್ಲವೆ? ತುಂಗಭದ್ರಾ ನದಿಯನ್ನು ಮೆಚ್ಚಿಕೊಳ್ಳಲಿಲ್ಲವೆ?

ಆದರೆ, ಇದೇ ಸಮರ್ಥನೆಯನ್ನು ಶ್ರೀಯವರು ಮಾಡಿಕೊಂಡ ಇತರ ಮಾರ್ಪಾಡುಗಳ ಬಗ್ಗೆ ಹೇಳುವುದು ಕಠಿಣವಾಗುತ್ತದೆ. ಯಾವುದೇ ನಂಬುಗೆಗಳು ಜೀವಂತವಾಗಿದ್ದ ಪಕ್ಷದಲ್ಲಿ, ಅವನ್ನು ಸಹಜವಾಗಿ ಅಲುಗಾಡಿಸುವುದು ಕಠಿಣಸಾಧ್ಯ. 'ಅಶ್ವತ್ಥಾಮನ್' ನಾಟಕದಲ್ಲಿ ಶ್ರೀಯವರು ಇಂಥ ಸಾಹಸಕ್ಕೆ ಕೈಹಾಕಿದ್ದಾರೆ. ಆ ಪ್ರಯತ್ನ ಎಷ್ಟರ ಮಟ್ಟಿಗೆ ಯಶಸ್ವಿಯಾಯಿತು ಎಂಬುದು ಸಂದೇಹಾಸ್ಪದ. ಅರ್ಥಾತ್, ಯಾವನೇ

---

(೧) ಬಿ.ಎಂ.ಶ್ರೀಕಂಠಯ್ಯ –ಎ.ಎನ್. ಮೂರ್ತಿರಾವ್. ಕನ್ನಡ ಸಾಹಿತ್ಯ ಪರಿಷತ್ತು, ೧೯೮೨, ಪು. ೮೪.

ಲೇಖಕ ತನ್ನ ಮೂಲ ಆಕರಗಳೊಡನೆ ಎಷ್ಟರ ಮಟ್ಟಿನ ಸ್ವಾತಂತ್ರ್ಯವನ್ನು ವಹಿಸಬಹುದು ಎಂಬ ಮೂಲಭೂತವಾದ ಪ್ರಶ್ನೆಯನ್ನು ನಾವು ಎದುರಿಸಬೇಕಾಗುತ್ತದೆ.[೨] ಇನ್ನೊಂದು ಮಾತಿನಲ್ಲಿ ಇದೇ ವಿಚಾರವನ್ನು ಹೇಳಬೇಕೆಂದರೆ, ಶ್ರೀಯವರು 'ಅಶ್ವತ್ಥಾಮನ್'ದಲ್ಲಿ ರೂಪಾಂತರಕ್ಕೆ ಪ್ರಯತ್ನಿಸದೆ, ಭಾಷಾಂತರ ಮಾಡಿದ್ದರೆ, ಹೆಚ್ಚು ಚೆನ್ನಾಗಿ ಆಗುತ್ತಿತ್ತೇನೋ ಎನಿಸುತ್ತದೆ. ಅಂತೆಯೇ, ಅವರ ಮುಂದಿನ ನಾಟಕ 'ಪಾರಸಿಕರು' ಭಾಷಾಂತರವಾಗಿದೆ.

-೨-

ಶ್ರೀಯವರು ಹೀಗೆ ಮಾರ್ಪಾಡುಗಳನ್ನು ಮಾಡಿಕೊಳ್ಳಲು ಕಾರಣವೇನು? ಇದಕ್ಕೆ ಅವರ ಗ್ರೀಕ್ ಸಾಹಿತ್ಯಾಭ್ಯಾಸವೇ ಕಾರಣ. ಅವರು ಸೊಫೊಕ್ಲಿಸ್, ಈಸ್ಕಿಲಸ್, ಯುರಿಪಿಡಿಸ್ ಮೊದಲಾದ ಮಹಾಸಾಹಿತಿಗಳ ಕೃತಿಗಳನ್ನು ಆರ್ದ್ರವಾಗಿ ಓದಿದ್ದರು. ಅವರಲ್ಲಿಯ ಸೋಫೋಕ್ಲಿಸನ 'ಏಜಾಕ್ಸ' ಅವರ ಮನಸ್ಸನ್ನು ಬಲವಾಗಿ ಹಿಡಿದಿತ್ತು. ಅದರಲ್ಲಿ ಬರುವ ದುರಂತನಾಯಕನ ಕಲ್ಪನೆ ಅವರ ಮನಸ್ಸಿನ ಮೇಲೆ ಅಚ್ಚಳಿಯದೆ ಉಳಿದಿತ್ತು. ಅಂಥದೊಂದು ನಾಟಕ ಕನ್ನಡಕ್ಕೆ ಬೇಕೆಂದು ಅವರಿಗೆ ಅನಿಸಿರಬೇಕು.

ಹಾಗಾದರೆ, ಸೊಫೊಕ್ಲಿಸನ 'ಏಜಾಕ್ಸ'ದಲ್ಲಿ ಈ ಕಥೆ ಹೇಗೆ ಬರುತ್ತದೆ ನೋಡೋಣ:

ಗ್ರೀಕ್ ಶೂರರಲ್ಲಿ ಅಕಿಲೀಸ್‌ನನ್ನು ಬಿಟ್ಟರೆ, ಏಜಾಕ್ಸನಷ್ಟು ಶಕ್ತಿವಂತರು ಮತ್ತಾರೂ ಇರಲಿಲ್ಲ. ಅಕಿಲೀಸ್‌ನ ನಂತರದ ಹೆಸರು 'ಏಜಾಕ್ಸನದೇ. ಹೀಗಿರಲಾಗಿ ಅಕಿಲೀಸ್ ತೀರಿಕೊಂಡ ನಂತರ ಅವನ ಚಿಲಕತ್ತು ಸ್ವಾಭಾವಿಕವಾಗಿ ಏಜಾಕ್ಸನಿಗೇ ಬರಬೇಕಾಗಿತ್ತು. ಆದರೆ, ಹಿರಿಯರೆಲ್ಲ ಕೂಡಿ, ಅದನ್ನು ಒಡಿಸ್ಯೂಸನಿಗೆ ಕೊಟ್ಟುಬಿಟ್ಟರು. ಇದರಿಂದ ಕ್ರುದ್ಧನಾದ ಏಜಾಕ್ಸ ಆ ನಾಯಕರನ್ನು ಹಾಗೂ ಒಡಿಸ್ಯೂಸನನ್ನು ನಾಶಮಾಡಿಬಿಡಬೇಕೆಂದು ಆಲೋಚಿಸಿದ. ಆದರೆ, ಪಲ್ಲಸ್ ಆಥೀನ್ ದೇವರೆ ಏಜಾಕ್ಸನಿಗೆ ಬುದ್ಧಿಭ್ರಮಣವಾಗುವಂತೆ ಮಾಡಿದಳು. ತತ್‌ಪರಿಣಾಮವಾಗಿ ಆ ವಿಕಾರದಲ್ಲಿ ಅವನು ಪಾಳೆಯದಲ್ಲಿದ್ದ ಕುರಿ ಮೊದಲಾದ ಪ್ರಾಣಿಗಳನ್ನು ತನ್ನ ವೈರಿಗಳೆಂದೇ ಬಗೆದು ಕೊಂದುಹಾಕಿಬಿಟ್ಟ. ಅವನಿಗೆ ಬುದ್ಧಿ ತಿಳಿದಾಗ, ತಾನು ಮಾಡಿದ ಹೇಯಕೃತ್ಯದ ಬಗ್ಗೆ ಅರಿವಾಯಿತು. ಇಂಥ ವೀರಾಧಿವೀರನೆನಿಸಿಕೊಂಡವನು ಹುಚ್ಚನ ಹಾಗೆ ಕುರಿ ಮೊದಲಾದ ಪ್ರಾಣಿಗಳನ್ನು ವೈರಿಗಳೆಂದು ಬಗೆದು ಕೊಂದು ಹಾಕುವದೆಂದರೇನದು? ತಾನು ಜನರ ತಿರಸ್ಕಾರ

---

(೨) "ಸಾಹಿತ್ಯ ನಿರ್ಮಾಣದಲ್ಲಿ ವಸ್ತುವಿನ ಆಯ್ಕೆಗೂ ಸನ್ನಿವೇಶವನ್ನು ಮೂಡಿಸುವ ರೀತಿಗೂ ಕೃತಿಕಾರನಿಗೆ ಎಂದಿಗೂ ಧಾರಾಳ ಉಂಟು. ಒಲಿದವರು ಒಲಿಯಬಹುದು, ಬಿಡುವವರು ಬಿಡಬಹುದು" ಎಂದು ಪ್ರೊ.ವಿ.ಸೀ. ಅವರು ಹೇಳುತ್ತಾರೆ. (ಅಶ್ವತ್ಥಾಮನ್, ಶಾರದಾಮಂದಿರ, ಮೈಸೂರು, ೧೯೬೮, ಪು.೭) ಮೇಲೆ ವಿವರಿಸಿದ ಪ್ರಶ್ನೆಗೆ ಇದು ಉತ್ತರವಾಗುವುದಿಲ್ಲ. ವಸ್ತುವಿನ ಆಯ್ಕೆ ಹಾಗೂ ಮೂಡಿಸುವ ರೀತಿಯಲ್ಲಿ ಧಾರಾಳವಿದೆಯೇ ಹೊರತು, ಬದಲಿಸುವುದರಲ್ಲಿ ಆ ಧಾರಾಳ ಇರಲಾರದು.

ಹಾಗೂ ಅವಹೇಳನಕ್ಕೆ ಗುರಿಯಾದೆನಲ್ಲ ಎಂದು ವಿಷಣ್ಣನಾಗಿ ಆತ್ಮಹತ್ಯೆಗೆ ಮುಂದಾದನು, ಅಥೀನೆಯ ಕೋಪ ಆ ದಿವಸದ ಮಟ್ಟಿಗಷ್ಟೇ ಇತ್ತು. ಮರುದಿವಸ ಏಜಾಕ್ಸ ಪುನಃ ಎಂದಿನಂತೆಯೇ ಇರಬಹುದಾಗಿತ್ತು. ಇದೆಲ್ಲ ಅರಿತ ಕಾಲ್ಕಾಸ್, ಏಜಾಕ್ಸನ ಮಲತಮ್ಮ ಟ್ಯೂಸರ್‌ನಿಗೆ ಇದನ್ನೆಲ್ಲ ಹೇಳಿದ್ದರಿಂದ, ಅವನು ಏಜಾಕ್ಸನ ದಾಸಿ ಹಾಗು ಪ್ರೇಯಸಿ ಯಾಗಿದ್ದ ಟೆಕ್‌ಮೆಸ್‌ಳಿಗೂ, ಏಜಾಕ್ಸನ ಜೊತೆಗಿದ್ದ ನಾವಿಕರಿಗೂ, ತಾನು ಬರುವವರೆಗೆ ಏಜಾಕ್ಸನನ್ನು ಜಾಗರೂಕವಾಗಿ ಕಾಯಬೇಕೆಂದು ಹೇಳಿದ್ದ. ಆದರೆ, ಅಷ್ಟನ್ನುವದರಲ್ಲಿಯೇ ಏಜಾಕ್ಸ ಎಲ್ಲರ ಕಣ್ಣುತಪ್ಪಿಸಿ ಆತ್ಮಹತ್ಯೆ ಮಾಡಿಕೊಂಡಿದ್ದ.

ಇದು ಗ್ರೀಕ್ ಕಥೆ. ಮಹಾಭಾರತದಲ್ಲಿ ಅಶ್ವತ್ಥಾಮನ್ ಕಥೆ ಹೆಚ್ಚಾಗಿ ಸೌಪ್ತಿಕ ಪರ್ವದಲ್ಲಿ ಬರುತ್ತದೆ. ಮೇಲೆ ವಿವರಿಸಿದ ಕಥೆಯಲ್ಲಿಯೇ, ನಾವು ಕೆಲವು ಸಾದೃಶ್ಯಗಳನ್ನು ನೋಡುತ್ತೇವೆ. ಏಜಾಕ್ಸ ವೈರಿಗಳೆಂದು ಕುರಿ ಮೊದಲಾದ ಪ್ರಾಣಿಗಳನ್ನು ಕೊಂದು ಹಾಕಿದ ಹಾಗೆ, ಮಹಾಭಾರತದ ಅಶ್ವತ್ಥಾಮನೂ ಕೂಡ ಪಾಂಡವರೇ ಎಂದು ಭಾವಿಸಿ ಪಾಂಡವಸೂನುಗಳ ತಲೆಯನ್ನು ಕತ್ತರಿಸಿ ತಂದು, ದುರ್ಯೋಧನನೆದುರು "ಕೊಳ್ ನಿನ್ನ ನೆಚ್ಚಿನ ಪಾಂಡವರ ತಲೆಗಳಂ" ಎಂದು ಬಿಸಾಕುತ್ತಾನೆ. ಗ್ರೀಕ್ ಕಥೆಯಲ್ಲಿ ಅಥೀನೆಯಿಂದ ಅವನಿಗೆ ಬುದ್ಧಿ ನಷ್ಟವಾಗಿದೆ. ಅಶ್ವತ್ಥಾಮನೂ ದೈವವಿಹೀನ. ಪ್ರತಿಕೂಲದೈವಿ. ಈ ಸಾದೃಶ್ಯದ ಜಾಡನ್ನು ಓಡಿದು ಶ್ರೀಯವರು ಅಶ್ವತ್ಥಾಮನ್ ನಾಟಕ ರಚಿಸಿದರು.

–೩–

ಶ್ರೀಯವರು ಮಾಡಿಕೊಂಡ ಮಾರ್ಪಾಡುಗಳ ವಿಷಯವೇನೇ ಇರಲಿ, ಒಂದು ಸಲ ಅವರು ಆ ವಸ್ತುವನ್ನು ಆ ರೀತಿ ಆಯ್ಕೆ ಮಾಡಿಕೊಂಡ ಮೇಲೆ, ಅದನ್ನು ಹೇಗೆ ವಿಸ್ತರಿಸಿದ್ದಾರೆ? ಹೇಗೆ ಕಥೇ ಬೆಳೆಸಿದ್ದಾರೆ? ಯಾವ ಜೀವನ ಸಂದೇಶ ಕೊಡಬೇಕೆಂದು ಬಯಸಿದ್ದಾರೆ? ಯಾವ ರೀತಿ ಪಾತ್ರಗಳನ್ನು ಕಂಡರಿಸಿದ್ದಾರೆ, ಪೋಷಿಸಿದ್ದಾರೆ, ಯಾವ ಶೈಲಿಯಲ್ಲಿ ಇದು ನಮ್ಮ ಹೃದಯಕ್ಕೆ ಮುಟ್ಟುವಂತೆ ಮಾಡಿದ್ದಾರೆ ಎಂಬುದು ಈಗ ಮುಖ್ಯ ಪ್ರಶ್ನೆ. ಕವಿ ತಾನು ಆಯ್ದುಕೊಂಡ ಭಿತ್ತಿಯಲ್ಲಿ ಯಾವ ರೀತಿಯ ಕುಸುರಿ ಕೆಲಸವನ್ನು ಮಾಡಿದ್ದಾನೆ ಎಂಬುದರ ಮೇಲೆ ಅವನ ಯಶಾಪಯಶಗಳ ಪ್ರತಿಭೆ ನಿಂತಿವೆ.

ಈ ರೀತಿ ನೋಡಿದಾಗ 'ಅಶ್ವತ್ಥಾಮನ್' ಒಂದು ಅದ್ಭುತ ಕಲಾಕೃತಿ. ಮನುಷ್ಯನಲ್ಲಿ ಎಷ್ಟೇ ಪ್ರತಿಭೆಯಿರಲಿ, ಸಾಹಸವಿರಲಿ, ಸತ್ವವಿರಲಿ, ಚಾರಿತ್ರ್ಯವಿರಲಿ, ಸಂಪನ್ನತೆಯಿರಲಿ, ಅವನು ದೈವಹೀನನಾದನೆಂದರೆ, ಕ್ಷೀಣೆ ಪುಣ್ಯೇ, ನೆಲಕ್ಕಿಳಿಯುತ್ತಾನೆ; ಅಧೋಗತಿ ಕಾಣುತ್ತಾನೆ..... ಅಶ್ವತ್ಥಾಮ ಅಂಥ ಶೂರ; ಕಲಿಗಳೊಳ್ ಕಲಿ; ವೀರಾಧಿವೀರ,

ರುದ್ರಾವತಾರ; ರುದ್ರನೋಳ್ ಪೋರ್ದವ. ಆಚಾರ್ಯಸುತನಾಗಿ ಧರ್ಮವನ್ನು ಅರಿತವ; ಸ್ವಾಮಿಭಕ್ತ. ತನ್ನ ದೊರೆಯಾದ ದುರ್ಯೋಧನನಿಗೆ ಉಂಟಾದ ದೀನಾವಸ್ಥೆಯನ್ನು ಕಂಡು, ಮನಸ್ಸು ಕರಗುತ್ತದೆ; ರೋಷ ಕುದಿದೇಳುತ್ತದೆ. ತನ್ನ ದೊರೆಗೆ ಈ ಪರಿಯ ಅವಸ್ಥೆಯನ್ನು ಉಂಟು ಮಾಡಿದವರನ್ನು ಸವರಿಹಾಕಿಬಿಡಬೇಕೆಂದು ನಿಶ್ಚಯಿಸುತ್ತಾನೆ. ಇದೆಲ್ಲ ಸ್ವಾಭಾವಿಕ..... ಆದರೆ, ಇದರಲ್ಲಿ ಒಂದು ಮಾತ್ರ ಚಿಕ್ಕ ತಪ್ಪು ಘಟಿಸುತ್ತದೆ. ಅಶ್ವತ್ಥಾಮ ತನ್ನ ಸ್ವಂತ ಪೌರುಷಬಲವನ್ನೇ ಹೆಚ್ಚು ನಚ್ಚುತ್ತಾನೆಯೇ ಹೊರತು, ಈವರೆಗೆ ತನ್ನನ್ನು ರಕ್ಷಿಸಿದ, ನಡೆಸಿಕೊಂಡು ಬಂದ, ದೈವೀಶಕ್ತಿಯನ್ನು, ರುದ್ರಶಕ್ತಿಯನ್ನು, ಉಪೇಕ್ಷಿಸುತ್ತಾನೆ. ಒರೆಯಿಂದ ತನ್ನ ಇರ್ಬಾಯ ಖಡ್ಗವನ್ನು ಹೊರತೆಗೆದು, ಪಾಂಡವರ ಪಾಳೆಯಕ್ಕೆ ನುಗ್ಗುತ್ತಿರುವಾಗ, ರುದ್ರದೇವ ಪ್ರತ್ಯಕ್ಷವಾಗಿ "ಪ್ರಿಯವೀರ, ದಾರಿಯೇನ್? ವರಮೆ ಆವುದೀವೆನ್" ಎಂದು ತಾನಾಗಿಯೇ ಕೇಳಿದಾಗ, "ಪಾಂಡವರ ಲೋಕಕೆನ್ನಿನ್ ಪ್ರಳಯಮೆ" ಘೋಷಿಸುತ್ತಾನೆ. "ಕೆಲರ್ ಉಳಿದು....." ಎಂದು ರುದ್ರ ಹೇಳಿದರೆ, ತನ್ನ ಸ್ವಸಾಮರ್ಥ್ಯವನ್ನೇ ನಚ್ಚಿದ ಅಶ್ವತ್ಥಾಮ:

> **"ನೋಡುತಿರು, ನೋಡುತಿರು, ಎಲೆ ರುದ್ರ, ದೂರದೊಳ್**
> **ನೋಡುತಿರು, ವೀರ್ಯಂ ಮಾನುಷಮೆ ಅದೆಂತಿರ್ಕುಮ್**
> **ಎಂಬುದನ್"**

ಎಂದು ಉಗ್ಗಡಿಸುತ್ತಾನೆ. ಅಷ್ಟೇ ಅಲ್ಲ, ರುದ್ರ ಹೇಳಿದ ಹಾಗೆ – **"ಮದಿಸಿ ತಾ ನಕ್ಕನ್; ಆನ್ ನಕ್ಕೆನ್"** ಎಂಥ ಭಯಂಕರ ಸಾಲುಗಳಿವು. ಅಶ್ವತ್ಥಾಮ ಸ್ವಪೌರುಷವನ್ನು ನಚ್ಚಿ ಮದಿಸಿ ತಾನ್ ನಕ್ಕರೆ, ಪರಮ ಜ್ಞಾನಿಯಾದ ರುದ್ರ ತಾನೂ ನಗುತ್ತಾನೆ. ಎರಡೂ ನಗೆಗಳೇನೋ ನಿಜ; ಆದರೆ, ಒಂದು ಸ್ವಪರಾಕ್ರಮವನ್ನು ನಂಬಿಕೊಂಡಿದ್ದ ಹುಚ್ಚ ನಗು; ಮತ್ತ ನಗು. ಇನ್ನೊಂದು ಪ್ರಪಂಚದ ಆದಿ–ಅಂತ್ಯಗಳನ್ನು ಬಲ್ಲ ಸರ್ವಜ್ಞ, ಸರ್ವಶಕ್ತ, ಸರ್ವವ್ಯಾಪಿ ರುದ್ರಪರಮಾತ್ಮನು ಹೀಗಳೆವ ನಗು. ಆನ್ ನಕ್ಕೆನ್ – ದೈವವೇ ಮನುಷ್ಯನನ್ನು ಕಂಡು ನಕ್ಕ ಮೇಲೆ, ಅವನಿಗೆ ಉಳಿಗಾಲವೆಲ್ಲಿ? ಅದಕ್ಕಾಗಿ ರುದ್ರ ಅಶ್ವತ್ಥಾಮನಿಗೆ ಮಾಯೆಯನ್ನು ಜೀಸಿ ಅವನನ್ನು ಸೈನ್ಯದ ಹೊರಭಾಗಕ್ಕೆ ತಂದು ಬಿಡುತ್ತಾನೆ. ಕ್ರೋಧಾವಿಷ್ಟನಾದ ಅಶ್ವತ್ಥಾಮ, ತುಪ್ಪಳು ತರಿವಂತೆ ತರಿಯುತ್ತಾನೆ, ಕಡಿಯುತ್ತಾನೆ, ಕೊರೆಯುತ್ತಾನೆ, ಸವರುತ್ತಾನೆ, ಮದಿಸಿ ನಗುತ್ತಾನೆ, ಗಹಗಹಿಸುತ್ತಾನೆ. ಆದರೆ, ತಾನು ತರಿದುದು ಯಾರನ್ನು, ಏನನ್ನು, ಎಂಬ ಪರಿಜ್ಞಾನವೇ ಅವನಲ್ಲಿ ಉಳಿದಿರುವುದಿಲ್ಲ.

"ಅಹ, ಏನ್ ಆರ್ಭಟಂ! ಅಹ ಏನ್‌ಚೀತ್ಕಾರಂ! ಏನ್ ಕೊಲ್ವ ಗರ್ವಂ... ಮೇಲ್ವಿರ್ದು ತುರುಗಳನ್ ತರಿದನ್. ಎವ್ವಿಟ್ಟೆ ಪೆಣ್ಗಳನ್ ಪೋಳ್ದನ್. ದಾದಿವಿ ಪಸುಳೆಯನ್ ಬಾಳಮೊನೆಗೆ ಚುರ್ಚಿದನ್, ಬಿರ್ಚಿದನ್, ಕೊಯ್ದನ್.....ಅಹ, ಧೃಷ್ಟದ್ಯುಮ್ನ ಗುರುವನ್

(ಆಚಾರ್ಯ ದ್ರೋಣನನ್) ಇಂತಲ್ತೆ ಕೊರೆದು ಪುಣ್ಯಂಗೊಂಡೆ, ಎಂದೊಂದು ಕುದುರೆಯನ್ ಕೊರಲೌಂಕಿ ಕೊರೆದನ್". ಎಲ್ಲದಕ್ಕೂ ಹೆಚ್ಚು ಅಶ್ವತ್ಥಾಮನ ಪರಮವೈರಿಗಳು – ಭೀಮಸೇನ ಮತ್ತು ಕಪಟನಾಟಕ ಸೂತ್ರಧಾರಿ ಕೃಷ್ಣ. ಅವರನ್ನು ಕೊಂದ ಬಗೆ ಹೇಗೆ?... ಆನೆಯೊಂದನೆ ತಬ್ಬಿ, ಭೀಮಸೇನಂ ಗೆತ್ತು, "ರಾಕ್ಷಸಾ, ದೈತ್ಯಾ, ಕೌರವೇಂದ್ರನ ಜಿದ್ದಿ ಚಕ್ರವರ್ತಿಯ ಮುಡಿಯನ್ ಒದೆದ ಕಾಲ್ ಎಲ್ಲಿ? ಎಲ್ಲಿ ತೋರ್ವು ಎಂದು ಕಾಲ್ ಮುರಿದು, ಬಲ್ವೆಣನನ್ ಒದೆದೊದೆದು, ಬಿಸುಟನ್; ಕಡೆಗೆ ಎಲ್ಲರನ್ ಕೊಂದೆನ್ ಎಂದೆಣಿಸಿ, ಕೌಂಕುಳೊಳ್, ಕುರಿಯೊಂದನ್ ಇರುಕಿ, ಬಾ, ಕೃಷ್ಣ ಯುದ್ಧಮನ್ ಪೊತ್ತಿಸಿದ ಮಾಯಾವಿ, ಫಲಮನ್ ಉಣ್‌ಬಾರ, ...ಎನುತೆ ಬೀಡಿಂಗುಯ್ದು ಹಿಂಸಿಸುತ್ತಿರ್ದನ್." ಎಂಥ ಹುಚ್ಚು! ಎಂಥ ಮತ್ತು!! ಮದಿಸಿ ತಾನ್ ನಕ್ಕನ್, ಆನ್ ನಕ್ಕೆನ್. ಇಷ್ಟಕ್ಕೂ ಸಾಲದೆಂಬಂತೆ, ರುದ್ರ, ಅಶ್ವತ್ಥಾಮನನ್ನು ತನ್ನ ಬಿಡಾರದಿಂದ ಹೊರಕರೆದು ಅವನ ಅಪಮಾನಕಾರಕ ಸ್ಥಿತಿಯನ್ನು ಕೃಷ್ಣನಿಗೆ ತೋರಬೇಕೆಂದಿದ್ದಾನೆ. ಅದೂ ಕರೆಯುವಲ್ಲಿ ವ್ಯಂಗ್ಯವೆಂಥದು! "ಬಾರ, ವೀರರ ವೀರ, (ಕುರಿಕೊಂದವ ವೀರರ ವೀರ), ದೈವಮನ್ ಲೆಕ್ಕಿಸದ ರುದ್ರಾವತಾರ" ಎಂದು ಕರೆಯುತ್ತಾನೆ.

ಅಶ್ವತ್ಥಾಮನ ಮತ್ತು ಇನ್ನೂ ಇಳಿದಿಲ್ಲ. ಎರಡನೆಯ ಸಲ ರುದ್ರ ಕರೆದಾಗ, ಹೊರಬಂದ ಅಶ್ವತ್ಥಾಮನಿಗೆ ಎಲ್ಲ ಪಾಂಡವರನ್ನೂ ಕೊಂದು ಹಾಕಿದೆಯಾ ವೀರ, ಇನ್ನವರು ಹುಟ್ಟರೇ ಎಂದು ಕೇಳಿ ಎಲ್ಲರಕ್ಕಿಂತ ಹೆಚ್ಚು –

> "ಆ ಪಾಂಡವ ಪ್ರಾಣಮೆ ಎಂದಿರ್ದನೇ
> ಅವನ ಗತಿ ಏನಾಯ್ತು? ಕೈ ನುಣ್ಚಿಕೊಂಡನೋ?"

ಎಂದು ಕೇಳುತ್ತಾನೆ ಅದಕ್ಕೆ ಅಶ್ವತ್ಥಾಮ – ಏನಾದನ್, ಆ ಗುಳ್ಳೆನರಿ ಎಂದು ಕೇಳ್ದೆಯಾ? ಅಹ! ಒಳಗಿರ್ಪನ್! ಸವಿಯ ಸವಿ ಎನಗೆ, ಅವನನ್ ಈಗಲೆ ಕೊಲ್ಲೆನ್, ಎನ್ನ ದೊರೆ, ...ಎನ್ನ ಗೂಡಾರದ ಕಂಬಕ್ಕೆ ಬಿಗಿದು...(ಬಿಗಿದು), ಈ ಚಿಮ್ಮಟಿಗೆ ಸುಲಿದು ಬೆನ್ ಪಸುರ್ಗಟ್ಟಿ – (ರುದ್ರ : ಪಾಪ, ರಾಸಕ್ರೀಡೆಯಾಡುವೊನ್ ಪೆಣ್ದಿರೊಳ್!) ಇಂತೆ ಸಾಯವೇಟ್ಕಿಂ ತಂತ್ರಿ – ಎಂದು ತಾನು ತಂದ ಕುರಿಯನ್ನು ಹಿಂಸಿಸಬೇಕೆನ್ನುತ್ತಾನೆ. ಪಾಪ ಅಶ್ವತ್ಥಾಮನಿಂದ ಘಟಿಸಿದ ಅಲ್ಪ ತಪ್ಪಿಗೆ, ಇದು ಘೋರ ದಂಡನೆಯಲ್ಲವೆ? ಆದರೂ ಈ ಮುಗ್ಧಜೀವಿ ಅಶ್ವತ್ಥಾಮ "ಒಂದನ್ ಎರೆವೆನ್ ರುದ್ರ, ಇಂದಿನವೊಲ್ ಏಗಳುಂ ಕಯ್ಬಿಡದೆ ಕಾಪಾಡು" ಎಂದು ಕೇಳುವಲ್ಲಿ ದೈವ ದುರ್ವಿಲಾಸವಿದೆ; ನಾಟಕೀಯ ವ್ಯಂಗ್ಯವಿದೆ;

ಅಶ್ವತ್ಥಾಮನ ಈ ಕರುಣಾಪೂರ್ಣ ಸ್ಥಿತಿಯನ್ನು ಕಂಡ ರುದ್ರನು ಸಹ "ಏನ್

ಪಿರಿದು, ನೋಡಿದೆಯ, ದೈವಬಲಂ, ಎಲೆಕೃಷ್ಣ, ಆರ್ ಇರ್ವರ್ ಈತನಿಂ ಜ್ಞಾನಿಯುಂ ಶೂರನುಂ?" ಎಂದು ಉದ್ಗಾರ ತೆಗೆಯುವಂತಾಗುತ್ತದೆ. ದೈವದ ವ್ಯಾಘ್ರ ನಖದಲ್ಲಿ ಸಿಕ್ಕ ಮನುಷ್ಯನ ಬಾಳೇ ಹೀಗೆ. ನಖ ಚಿಡುತ್ತದೆ, ಮತ್ತೆ ಹೊಡೆಯುತ್ತದೆ. ಹೊಡೆಹೊಡೆದು ಹಿಂಸಿಸಿ ಕೊಲ್ಲುತ್ತದೆ. ಸ್ವತಃ ಕೃಷ್ಣನಿಗು ಸಹ ಅಶ್ವತ್ಥಾಮನ ಈ ಸ್ಥಿತಿಯನ್ನು ಕಂಡು ಕನಿಕರವುಂಟಾಗುತ್ತದೆ. "ಅವನ ಗತಿಯಂ ಕಂಡು, ಎನ್ನ ಪಗೆಯಾದೊಡಂ, ವಿಧಿವಶದೆ ಕಾಲ್ ತೊಡರ್ದು ಬಿದ್ದಿಂಗೆ ಮರುಗುವೆನ್" ಅಷ್ಟೇ ಅಲ್ಲ; ದೈವ – ಮಾನುಷ ಸಂಬಂಧವೇ ಹೀಗೆ. ಕೃಷ್ಣ ಹೇಳಿದ ಹಾಗೆ "ಇಂದವನ್, ನಾಳೆ ನಾನ್, ಏನ್ ಪಾಡೊ ಆಳ ಬಾಳ್! ಬೀಸುವ ಬಯಲ್ ಗಾಳಿ, ಪರಿದಡಂಗುವ ನೆಟಿಲ್!" ಮನುಷ್ಯನ ಜೀವನ ಬೀಸುವ ಗಾಳಿ, ಹರಿದು ಅಡಗುವ ನೆರಳು! ರುದ್ರ ಹೇಳಿಬಿಡುತ್ತಾನೆ. "ದೈವದೊಳ್ ಸೊರ್ಕುನುಡಿ ನುಡಿಯದಿರ್; ಕೊರ್ಬದಿರ್, ನಿನಗೊರ್ಮೆ ಸಿರಿಯೆನಿತು, ಬಲಮೆನಿತು, ಕಯ್ಯೆನಿತು ನಡೆದೊಡಂ!

> "ಒಂದು ಪಗಳ್ ಎತ್ತುವುದು, ಒಂದು ಪಗಳ್ ಉರುಳಿಪುದು,
> ಮಾನುಷಮನ್ ಎಲ್ಲಮನ್ : ಮಿತಿಯರಿದು ನೆಗೞ್ವರ್ದೆ
> ದೇವರ್ಕಳ್ ಒಸೆದಪರ್ – ಮುರಿದಪರ್ ಮಿಕ್ಕರನ್"

ಹೀಗೆ ದೈವದ ಮುರಿತಕ್ಕ ಒಳಗಾದವ ಅಶ್ವತ್ಥಾಮ. ರಾತ್ರಿಯ ಪ್ರಾಕೃತಿಕ ಕಾವಳದಲ್ಲಿ, ದೈವೀಪಾಶದ ಮಾನಸಿಕ ಕಾವಳದಲ್ಲಿ, ಈ ದುರ್ಧರ ಘಟನೆ ನಡೆದುಹೋಗುತ್ತದೆ. ಉಡಾಳ ಮಕ್ಕಳು ತಮ್ಮ ಆಟಕ್ಕಾಗಿ ನೊಣಗಳನ್ನು ಹಿಂಸಿಸುವಂತೆ, ದೈವ ಅಶ್ವತ್ಥಾಮನನ್ನು ಹಿಂಸಿಸಿರುತ್ತದೆ. ಮೇಳದವರಿಗೆ, ಭಾರ್ಗವಿಗೆ, ಇವನ ಪೊಲ್ಲ ಕೆಲಸ ಗೊತ್ತಾಗಿ, ಅಯ್ಯೋ! ವೀರಾಧಿವೀರ ಅಶ್ವತ್ಥಾಮ ಕೀರ್ತಿಯ ಕೊರಲನ್ನು ಮುರಿದನಲ್ಲ, ಯೋಧನಾಗುವ ಬದಲು ಪಶುಗಳನ್ನು ಕೊಂದ ಕಟುಕನಾದನಲ್ಲ ಎನಿಸುತ್ತದೆ. ರುದ್ರ ಬೀಸಿದ ಮಾಯೆ ಹರಿದಾಗ, ಮನಸ್ಸು ತಿಳಿಗೊಂಡು ಸ್ತಿಮಿತವಾದಾಗ, ಕದಡಿದ ನೀರು ತಿಳಿಯಾದಾಗ, ಎಲ್ಲವನ್ನೂ ಅರಿತ ಅಶ್ವತ್ಥಾಮ ತನ್ನ ಹೇಯ ಕಾರ್ಯಕ್ಕಾಗಿ ತಾನೇ ಪಶ್ಚಾತ್ತಾಪ ಪಡುತ್ತಾನೆ. ಇದಕ್ಕೆ ಪರಿಹಾರವೆಂತು? ಪಾಪಕ್ಷಾಲನ ಮಾರ್ಗ ಯಾವುದು, ಹೇಗೆ? ...ಸ್ವಂತ ತೋಳಬಲದ ವಿಶ್ವಾಸದಲ್ಲಿ, ದೈವವನ್ನು ತಿರುಗಿಹಾಕಿಕೊಂಡರೆ, ಎಂಥ ದುರ್ದೆಸೆ ಒದಗುತ್ತದೆಂಬುದು ಈ ನಾಟಕದ ಮೊದಲ ಸಂದೇಶ.

ಎರಡನೆಯದಾಗಿ, ಸಾವು ಯಾವಾಗಲೂ ಸಾವಲ್ಲ. ಅದು ನೊಂದ ಜೀವದ ವಿಮೋಚನೆಯೂ ಆಗಬಹುದು. ಪ್ರಸ್ತುತ, ಅಶ್ವತ್ಥಾಮ ಏನು ಮಾಡಿದರೂ, ಯಾವ ಸಾಗರದ ಎಷ್ಟು ನೀರಿನಿಂದ ತನ್ನ ಕೈಯನ್ನು ತೊಳೆದುಕೊಂಡರೂ, ಅದಕ್ಕಂಟಿದ ಕಾಳಿಮೆಯನ್ನು ತೆಗೆದು ಹಾಕಲಾರ. ಅವನು ಬಾನವರ, ಮಾನವರ ಕಣ್ಣಲ್ಲಿ

ನಗೆಗೀಡಾಗಿದ್ದಾನೆ. ಪಶುಗಳಲ್ಲಿ ಪಶುವಾಗಿದ್ದಾನೆ. ಆದ್ದರಿಂದ ಈ ಕೌರವಭೂಮಿಯ ನ್ನಾದರೂ ಬಿಟ್ಟು, ತವರು ನಾಡಿಗೆ ಹೋಗಬೇಕೆಂದರೆ – (ಎಂಥ ನಾಡು ಅದು!

ಓವೊ, ಕನ್ನಡದ ನಾಡೇ
ಮುನ್ನೀರ ಮೊಟಿಂಗು ಕರ್‌ನಾಡೇ,
ಮಲೆನಾಡೇ, ಪೊನಲ್‌ನಾಡೆ, ಬಯಲಪೊನ್‌ನಾಡೇ)

ಅಲ್ಲಿಯೂ ಹೋಗಲು ಸಾಧ್ಯವಿಲ್ಲ. ತನ್ನ ಕಾರ್ಯದ ಮೂಲಕ ಇಂತಪ್ಪನ್. ಇಲ್ಲೆಮೆ ಎಂದಾದವ, ಈಗ ಇಂತಪ್ಪನ್ ಇಲ್ಲಮೆಂದೇ ಆಗಿದ್ದಾನೆ. ಪುಡಿಯೊಳಗೆ ಪುಡಿಯ ಪುಡಿ! ನಾಣ ನುಡಿ!!

ಎಂಥವೀರ! ಎಂಥ ತಂದೆಯ ಎಂಥಮಗ! ತಂದೆ ದ್ರೋಣ "ಪೂಜ್ಯರೊಳ್ ಪೂಜ್ಯನ್! ರಾಜಗುರು, ಧರ್ಮಶುಚಿ, ಶಿಷ್ಯಶತಭಕ್ತನ್, ಯೋಧಾಗ್ರಣ್ಯನೆ, ಬ್ರಹ್ಮಜ್ಞರೊಳ್ ತಾನೆ ಬ್ರಹ್ಮನ್, ಸೌಮ್ಯನ್, ಇಂತವನ್ ಜಗಮೆರಗೆ ನೆಗಳ್ದಿನ್". ಅಂಥವರ ಮಗನಾಗಿ ತನಗೆ ಈ ಗತಿಯೆ? ಎಂದಿಗೂ ತನ್ನ ಬಾಳು ಓಗೆಯೇ ಆಯಿತಲ್ಲ! ನಾನು ಇಷ್ಟು ಕಲಿತನವನ್ನು ತೋರಿದರೂ, ಸ್ವಾಮಿಭಕ್ತಿಯನ್ನು ಮೆರೆದರೂ, ಒಡೆಯ ದುರ್ಯೋಧನನಿಗೆ "ಆನಲ್ತು ಮೊದಲೊಲ್ಮೆ, ಕರ್ಣನ್, ಸೇನಾಧಿಪತ್ಯವೇ ಕರ್ಣನ್; ಶೃಂಗಾರಮೇ ಕರ್ಣನ್; ಎಂಜಲ್ ನನಗೆ ಸಿಡುಕಂಗೆ" ತಂದೆ ಇಲ್ಲದೆ, ಕ್ಷಾತ್ರವಿಲ್ಲದೆ, ಹುಟ್ಟಿದ ಮಗುವಿಗೆ ಅಂಜುಕುಳಿ ಮಾದರಿಯಾಗಿ, ತವರುನಾಡಿಗೆ ಹೋಗುವದೆ? ಛೆ ಛೆ! ಸಾಧ್ಯವಿಲ್ಲ. ಸಾಹಸಮನ್ ಏನಾನುಮೊಂದೆಸಗಿ, ಮಗನ್ ಅರಿಯ ಕಲಿಯೆ, ಎರ್ದೆಯುರ್ಕಿನ್ ತಾನ್ ಅಟಿದನೆಂಬುದನ್ ತೋರಲೇವೇಟ್ಕುಂ ಎಮ್ಮಯ್ಯಂಗೆ ಗುರುಗೆ," ತಕ್ಕನ್, ತಕ್ಕವೊಲ್ ಬಾಳ್ದಪನ್ ತಕ್ಕವೊಲ್ ಸತ್ತಪಂ. ಸಭಾವಿತಸ್ಯ ಚ ಅಪಕೀರ್ತಿ: ಮರಣಾದ್ ಅತಿರಿಚ್ಯತೇ. ನಮ್ಮ ಶಾಸನಗಳು ಹೇಳುವ ಹಾಗೆ – ಮೃತ್ಯುಸ್ತತ್ರ ಕ್ಷಣಿಕೋ ದುಃಖಂ ಮಾನಭಂಗಂತು ದಿನೇ ದಿನೇ. ಅವನ ಮನಸ್ಸು ಈಗ ಗಟ್ಟಿಯಾಗಿದೆ. ಮರಣವೇ ಮಹಾನವಮಿ. ಹುಚ್ಚಾಗಿ, ಮಬ್ಬಾಗಿ, ಕಲಿಯಾಗಿ, ಕೊನೆಗೆ ಹೇಡಿಯಾಗಿಯಾದರೂ ಎಲ್ಲಿಯಾದರೂ ಬಾಳಪ್ಪಾ ಮಗು ಎಂದು ಅಜ್ಜಿ ಭಾರ್ಗವಿ ಹೇಳಿದ ಮಾತು ಅವನ ಕಿವಿಯಲ್ಲಿ ಹೋಗುವುದೇ ಇಲ್ಲ. ತನ್ನ ಕಲಿತನ, ಸ್ಥೈರ್ಯ, ದೃಢನಿಶ್ಚಯ, ತನ್ನ ಚಿಕ್ಕ ಮಗು ರುದ್ರಶಕ್ತಿ ಕಲಿಯಬೇಕೆಂದು, ಅವನನ್ನು ಕರೆಸಿ

"ಬಾ ರುದ್ರಶಕ್ತಿ, ಪಿಡಿ, ಈ ಬಿಲ್ಲನ್, ಅಂಬುಮನ್, ಪಿರಿಯ
ದೇವತೆಗಳಿನ್ ಬಂದುದಿದು – ಪರಶುರಾಮನದು, ದ್ರೋಣನದು – ನಿನ್ನ
ತಂದೆಯದು – ಮೆಲ್ಲಯ್ಯಗಳಿನ್ ಪಿಡಿಯ ಈ ದಿವ್ಯಧನುವನ್ –
ಅಹ! ಎಲ್ಲಿ? ...ಪೂಡು...ಪೂಡು?. ?.. ಒಂದಂಬನ್...
ಇಂತಿಂತು...? ನಲ್ಲದಹ!!ನಲ್ಲದು!! ಗೆಲ್ ! ಗೆಲ್ !"

ಎಂದು ಆ ಪುಟ್ಟ ಮಗುವಿಗೆ ಧನುರ್ವಿದ್ಯೆ ಹೇಳಿ,

ತಂದೆಯಿನ್, ಕಂದ, ಮೇಲಾಗು ಅದೃಷ್ಟದೊಳ್!
ಮಿಕ್ಕೆಲ್ಲ ನಡತೆಯೊಳಮೆ ಅವನಂತೆ ಆಗು!!
ಪಟ್ ತೊಡದ ಪಿರಿಯ ಪೆಸರಾಗು"

ಎಂದು ಅವನನ್ನು ಆಶೀರ್ವದಿಸಿ ದೇವತೆಗಳಿಗೆ ಮತ್ತು ತನಗೆ ಇದ್ದ ಪುಣ್ಯ ಹರಿದುಹೋಯಿತೆಂದು ಆತ್ಮಾರ್ಪಣೆಗೆ, ಸಿದ್ಧನಾಗುತ್ತಾನೆ. ಇಲ್ಲ ನಿನ್ನ ಪಾಪ ಪ್ರಕ್ಷಾಳನೆಗೆ ತವರಿನ ಅಡವಿನೆಳಲಲ್ಲಿ ತಪದಿಂದ ಮುರಿದ ರೆಕ್ಕೆಯ ಆತ್ಮವನ್ನು ಸುಧಾರಿಸೋಣ ಎಂದು ಹೇಳಿದ್ದಕ್ಕೆ –ತಪಂ! ಏನ್ ತಪಂ?ಏತಟ್ಕೆ? ಆರ್ಗೆ? ಬಾಳ್ ಬಟಿಯದಾದಂದು, ಸಾವು ತಾನ್ ಪೂರ್ಣಂ – ಎಂದು ಹೇಳಿ, ಎಲ್ಲರನ್ನೂ ಕಳುಹಿ, ಅಭಿಮನ್ಯು ತನಗೆ ಕೊಟ್ಟಿದ್ದ ಖಡ್ಗದ ಮೇಲೆ ಬಿದ್ದು ತನ್ನ ಪ್ರಾಣವನ್ನು ಬಿಡುತ್ತಾನೆ. ನೊಂದ ಜೀವ ತಣ್ಣಗಾಗುತ್ತದೆ. (ಇಷ್ಟರ ಮಟ್ಟಿನ ಅಪಮಾನದಿಂದ ದಂದಹ್ಯಮಾನವಾದ ಮನಸ್ಸಿನವನಿಗೆ ಬದುಕೆಂಬುದೆಲ್ಲಿ? ಷೇಕ್ಸ್‌ಪಿಯರ್‌ನ ಲಿಯರ್ ದೊರೆ, ಹೀಗೆಯೇ ಸಾಯಲಿಲ್ಲವೆ? ಆಗಲೂ ಸಹ, ಅವನನ್ನು ಉಳಿಸಬೇಕೆಂಬ ಜನಕ್ಕೆ Stretch him no longer on the rack of this earth. ಅಥವಾ ಷೆಲ್ಲಿ ಕವಿ ಹೇಳಿದ ಹಾಗೆ:

Life Like a dome of many coloured glass
Stains the white radiance of Eternity
Until Death tramples it to fragments - Die,
If thou would'st be with that
Which thou dos't seek

ಒಂದರ್ಥದಲ್ಲಿ 'ಅಶ್ವತ್ಥಾಮನ್' ನಾಟಕ ೬೭೪ನೆಯ ಸಾಲಿಗೇ ಮುಗಿದು ಹೋಯಿತು. ವೀರಾಧಿವೀರ ಅಶ್ವತ್ಥಾಮ ಅವಮಾನ ಜರ್ಝರಿತವಾಗಿ ಆತ್ಮಾರ್ಪಣೆ ಮಾಡಿದಾಗಲೇ ನಾಟಕ ಪರಿಣಾಮಶಿಖರವನ್ನು ಮುಟ್ಟಿಬಿಟ್ಟಿತು. ಅಂಥವೀರ ಮೃತಿ ಹೊಂದಿದ ಮೇಲೆ, ಅವನ ಶವಸಂಸ್ಕಾರದ ವಿಚಾರ ಏನು ಮೊದಲಾದುವು ಅಮುಖ್ಯವೆನಿಸುತ್ತವೆ.

ಭೀಮಸೇನ ಕೌರವನಿಗೆ ತೋರಿದ ಪ್ರತೀಕಾರ ಶ್ರೀಯವರ ಮನಸ್ಸಿನಲ್ಲಿ ಇನ್ನೂ ಉಳಿದಂತೆ ಕಾಣುತ್ತದೆ. ಆದ್ದರಿಂದ, ನಾಟಕ ಮುಂದೆ ಎಳೆದುಕೊಂಡು ಹೋಗುತ್ತದೆ. ಆದರೂ, ಈ ಭಾಗದಲ್ಲಿ ಬರುವ ಅಶ್ವತ್ಥಾಮನ್ ಅಹಂಕಾರ ವರ್ಣನೆ–ದೇವತೆಯ ಒಲುಮೆ ಇರ್ದೊಡಯ್ಯ, ಪೇಡಿಯುಂ ಗೆಲ್ದಪನ್; ಅವರ್ಗಳ ನೆರಂಬಾರದೆ ಆ ಗೆಲ್ಲವೆಣ್ಣ ಮುಂದಲೆಯನ್ ಈರ್ದೆನ್! ಅಶ್ವತ್ಥಾಮನ್ ಇರ್ದ ಮೊನೆ ಮುರಿಯದು– ಎಂದು ಮೊದಲಾಗಿ ದೇವರ ಆಳಾಗಿ ಹುಟ್ಟಿ, ಆಳಿಗೆ ಮೀರಿದ ಮಾತುಗಳನ್ನು ಅಶ್ವತ್ಥಾಮನು ಆಡುವುದನ್ನು ಗಮನಿಸದಿರೆವು.

ಆದರೆ, ಅದಕ್ಕೂ ಹೆಚ್ಚು ಶ್ರೀಕಂಠಯ್ಯನವರಿಗೆ ಇಲ್ಲಿ ಕೋಪದ ಉದ್ವಿಗ್ನತೆಯ, ಯುದ್ಧದ ನಿರರ್ಥಕತೆಯನ್ನು ಸಾರಬೇಕೆಂದು ಇದ್ದಂತಿದೆ. ಎಲ್ಲಿಯೋ ಕಿಡಿಯಾಡಿದ ಹೊಗೆ, ಭುಗಿಲೆಂದು ಪ್ರಜ್ವಲಿಸಿ ಇಡೀ ಭಾರತವನ್ನೇ ತನ್ನ ಕೆನ್ನಾಲಗೆಯಿಂದ ನೆಕ್ಕಿತು. ಯುದ್ಧದ ಈ ಹೆಸರಿಲ್ಲಿ ಅನೇಕ ವೀರಾಧಿವೀರರು ಹತರಾದರು. ಭಾರತ ಭರತಮಯ ವಾಗಿ ಮಹಾ–ಭಾರತವಾಯಿತು. ಎಲ್ಲಿ ಈ ಯುದ್ಧದ ಉಗಮ? "ದ್ರೋಣ, ದ್ರುಪದನಿಗೆ ಮರೆಯದಿರಣ್ಣಾ, ಆಮುಂ ನೀಮುಂ ಒಡನ್ ಓದಿದೆವೆಂಬುದುಂ" ಎಂಬುದರಿಂದ ಪ್ರಾರಂಭವಾಯಿತೆ? ಅಥವಾ ಬೆಂಕಿಯಲ್ಲಿಯೇ ಹುಟ್ಟಿದ ಅಗ್ನಿಕನ್ಯೆ ದ್ರೌಪದಿ ಈ ಪ್ರಕರಣಗಳಿಗೆಲ್ಲ ಕಾರಣಳಾದಳೆ?.... ಏನೇ ಆಗಲಿ, ಸಾವಿರಾರು ವರ್ಷದಿಂದ ಪ್ರಾರಂಭವಾದ ಈ ಯುದ್ಧಕ್ರಮ ಇಂದಿಗೂ ನಿಂತಿಲ್ಲ. ಯುದ್ಧಗಳು ಮುಗಿದರೂ, ಯುದ್ಧತ್ವ ಅರ್ಬುದ ರೋಗದ ಹಾಗೆ, ಉಳಿದುಕೊಂಡೇ ಬಂದಿದೆ. ಒಂದು ನುಡಿ, ಒಂದು ಕಿಡಿಯಿಂದ ಪ್ರಾರಂಭವಾಗುವ ಮನಸ್ತಾಪ ಕೊನೆಗೆ ಕಾಳ್ಗಿಚ್ಚಾಗುತ್ತದೆ. ಮೊದಲಗಿತ್ತಿಯಂತೆ ಮೆರೆಯುತ್ತಿರುವ ಈ ಭೂ ದೇವಿ, ಸಾಗರಸಾಗರದಷ್ಟು ರಕ್ತವನ್ನು ಕುಡಿದರೂ ಇನ್ನೂ ಬೇಕು ಇನ್ನೂ ಬೇಕು ಎಂದು ರಕ್ತರಾಕ್ಷಸಿಯಂತೆ ಕಿರುಚುತ್ತಿದ್ದಾಳೆ. ಮೇಳದವರು ಹೇಳಿದ ಹಾಗೆ:

ಮಾಡಿದನ್ ಆರ್ ಮೊದಲ್ ಯುದ್ಧಮನ್ ...
ಕೂಡಿರ್ದ್ವರೊಳ್ ಕಲಹಮ್ ಒಡ್ಡಿದನ್ ...
    ಓಪೊಲ್ಲ ಯುದ್ಧಮೇ, ಎಂದು ನಿಲ್ವಯ್
    ಓ ತಾಯಿ ಶಾಂತಿಯೇ ಎಂದು ಗೆಲ್ವಯ್ !!
ಪೇರಾಟೆಗಿಕ್ಕರೇ ನರಕದೊಳ್ ಗಿಡಿದು,
ಯುದ್ಧಮನ್ ನೆಲಕೆ ಬಿತ್ತಿದ ಪರಮಪಾಪಿಯನ್ !
ಸರ್ವದುರಿತಗ್ಗಳನ್ ಬಿತ್ತಿದಾ ಪಾಪಿಯನ್
ಆ ಪಾಪಿ ಕಿಡಿಸಿದನ್ ಚೆಲ್ವಾದ ಬಾಳ್ಕೆಯನ್
ಆಟಪಾಟಂಗಳನ್,ಪಲಸಿರಿಯ ಮಾಳ್ಕೆಯನ್ :
    ಕರ್ಮಮೆ ಈ ಪರಿ ಮಟಿಗೆ ಮಟಿ ಇಕ್ಕುತಿರ್ಕಂ;
    ಕ್ಷಮೆಯಿಂದೆ ಸವೆಯದಿರೆ ಮಮಿಕೊಳಿಸುತಿಕ್ಕುಂ.

ಅಶ್ವತ್ಥಾಮ ಈ ಯುದ್ಧಚಕ್ರದಲ್ಲಿ ಸಿಕ್ಕು ನುಚ್ಚುನುರಿಯಾದ ಒಬ್ಬ ಜ್ಞಾನಿ; ಒಬ್ಬ ವೀರ. ಈ ಯುದ್ಧಗಳು ನಿಲ್ಲಬೇಕಾದರೆ, ಇನ್ನೂ ಎಷ್ಟು ಜನ ಕರ್ಣಾಶ್ವತ್ಥಾಮರು ಈ ಮಾರಿಗೆ ಬಲಿಯಾಗಬೇಕೋ!

ನಾವೂ ಮೇಳದವರ ಹಾಗೆ ಕೃಷ್ಣನಿಗೆ ಶಾಂತಿಯನು ಕಲಿಸು ಬಾ, ನಿಲಿಸು ಬಾ ತಂದೆ. ಭಾರತದಿ ಶಾಂತಿಯನು ನಿಲಿಸು ಬಾ ಮುಂದೆ – ಎಂದು ಪ್ರಾರ್ಥಿಸ ಬೇಕೆನಿಸುತ್ತದೆ.

ಕೆಳೆಯಂಗೆ ಸೋಲ್ವುದೆ ಜಯಂ
ಕ್ಷಮೆಯೆ ತಾನ್ ಜಯಂ
ಕ್ರೋಧಮನ್ ತುಳಿದಿಟ್ಟು
ಬಿಲ್ವಿಡಿದು ಧರ್ಮಮನ್,
ಬಗೆಯೊಡನೆ ಪೋರಾಡುವುದೆ ಜಯಂ!!

೧೨. ಪಾರಸಿಕರು

■ ಪ್ರೊ. ವಿ.ಎಂ. ಇನಾಂದಾರ್

ಮೊದಲಿನಿಂದಲೂ ಗ್ರೀಕ್ ದುರಂತನಾಟಕ ಪರಂಪರೆಯನ್ನು ಮೆಚ್ಚಿಕೊಂಡಿದ್ದ ಶ್ರೀಕಂಠಯ್ಯನವರಿಗೆ ನಾಟಕ ದುರಂತವಾಗಿ ಕೊನೆಗಾಣಬಾರದೆಂಬ ನಮ್ಮಲ್ಲಿಯ ನಿರ್ಬಂಧ ಅನಗತ್ಯವಲ್ಲದೆ ಮನಸ್ಸನ್ನು ಸಂಸ್ಕರಿಸಬಲ್ಲ ಒಂದು ಉದಾತ್ತ ಭಾವಾನುಭವಕ್ಕೆ ಎರವಾಗಿಸುವುದಾಗಿ ಕಂಡಿತು. ಅಂಥ ಅನುಭವದ ಪರಿಚಯವನ್ನು ಮಾಡಿಕೊಡುವ ದೃಷ್ಟಿಯಿಂದ ಮೊದಲು ರನ್ನನ ಗದಾಯುದ್ಧ ಕಾವ್ಯದಲ್ಲಿಯ ದುರ್ಯೋಧನನನ್ನು ಒಂದು ದುರಂತ ಪಾತ್ರವನ್ನಾಗಿ ಕಾಣುವ ಯತ್ನವನ್ನು ಮಾಡಿದರು. ಸೊಪೋಕ್ಲೀಸನ ಏಜಾಕ್ಸ್ ನಾಟಕದ ಭಾರತೀಯ ರೂಪಾಂತರವಾಗಿ ಅಶ್ವತ್ಥಾಮನ್ ನಾಟಕವನ್ನು ರಚಿಸಿದರು. ಕೊನೆಯಾಗಿ ಗ್ರೀಕ್ ದುರಂತ ನಾಟಕದ ಜನಕನೆನ್ನಲಾದ ಈಸ್ಕಿಲಸ್‌ನ "ಪರ್ಸಿ" ನಾಟಕವನ್ನು "ಪಾರಸಿಕರು" ಎಂದು ನೇರವಾಗಿ ಅನುವಾದಿಸಿದರು. ಈ ಮೂರನೆಯದರ ವಿಚಾರವಾಗಿ ಕೆಲವು ಮಾತುಗಳನ್ನು ಇಲ್ಲಿ ಹೇಳಬೇಕೆಂದಿದ್ದೇನೆ.

ಶ್ರೀಕಂಠಯ್ಯನವರು ಬರೆದ ಮೂರನೆಯ ನಾಟಕ "ಪಾರಸಿಕರು" ೧೯೩೫ರಲ್ಲಿ ಪ್ರಕಟವಾಯಿತು. ಗ್ರೀಕ್ ರುದ್ರ ನಾಟಕದ ಮಹೋನ್ನತಿಯನ್ನು ಮನಸಾರೆ ಮೆಚ್ಚಿದ್ದ ಅವರು ಆ ನಾಟಕ ಪರಂಪರೆಯಲ್ಲಿ ಮಹೋನ್ನತನೆನಿಸಿದ ಈಸ್ಕಿಲಸ್ ಮೊದಲಿಗ. ಆತನನ್ನು ದುರಂತ ನಾಟಕದ ಸೃಷ್ಟಿಕರ್ತನೆಂದು ಹೇಳಲಾಗಿದೆ. ದೇವತೆಯ ಸ್ತುತಿಪರವಾದ ಮೇಳಗೀತೆಯಿಂದ ಉದಯಿಸಿದ ಆ ನಾಟಕಪ್ರಕಾರ ನಾಟಕದ ರೂಪವನ್ನು ಸ್ಪಷ್ಟವಾಗಿ ತಾಳಿದ್ದು ಈಸ್ಕಿಲಸ್‌ನಲ್ಲಿ. ಮೇಳದಿಂದ ಬೇರ್ಪಟ್ಟು ನಿಂತ ಮೇಳನಾಯಕನ ಜೊತೆಗೆ ಮತ್ತೊಂದು ಪಾತ್ರವನ್ನು ಸೇರಿಸಿ, ಸಂಭಾಷಣೆಗೆ ಅವಕಾಶವನ್ನು ಒದಗಿಸಿದ ನಂತರ ಮತ್ತೂ ಒಂದು ಪಾತ್ರವನ್ನು ಸೇರಿಸಿ ಮೇಳಗೀತಕ್ಕೆ ಒಂದು ಕಾಲಕ್ಕಿದ್ದ ಪ್ರಾಧಾನ್ಯವನ್ನು ತಗ್ಗಿಸಿ ನಾಟಕದ ಶ್ರವ್ಯಭಾಗಕ್ಕೆ ಸರಿಸಮವಾಗಿ ದೃಶ್ಯ ಭಾಗವನ್ನು ಹೆಚ್ಚಿಸಿ ನಾಟಕಪ್ರಕಾರವನ್ನು

ಬೆಳೆಯಿಸಿದವ ಆತ. ಇದೊಂದಲ್ಲದೆ ನಾಟಕದಲ್ಲಿ ಕ್ರಿಯಾಭಾಗಕ್ಕೆ ಹೆಚ್ಚಿನ ಮಹತ್ವವನ್ನು ಕೊಡದೆ ಆ ಕ್ರಿಯೆಯಿಂದ ನಿಷ್ಪನ್ನವಾಗುವ ಜೀವನ ಧರ್ಮದ ವಿಚಾರಕ್ಕೆ, ಅಲ್ಲಿ ಸೂಚಿತವಾಗುವ ಧರ್ಮದೃಷ್ಟಿಗೆ ಹೆಚ್ಚಿನ ಮಹತ್ವವನ್ನು ಕೊಡುವುದು ಆತನ ವಿಶೇಷ. ಇಷ್ಟಲ್ಲದೆ ಈಸ್ಕಿಲಸ್ ದೊಡ್ಡ ಕವಿ. ಹೀಗೆ ನಾಟಕ ಕ್ರಿಯೆಯ ದೃಷ್ಟಿಯಿಂದ ಆತನ ನಾಟಕಗಳು ಬಡವಾಗಿ ಕಂಡರೂ ಅಲ್ಲಿಯ ಕಾವ್ಯಸಾಮರ್ಥ್ಯ ಮತ್ತು ಚಿತ್ರಿಸಿದ ಸನ್ನಿವೇಶದಲ್ಲಿಯೇ ಒಡಮೂಡಿ ನಿಲ್ಲುವ ಸ್ಪಷ್ಟವಾದ ಧರ್ಮತತ್ವ ಆತನ ನಾಟಕಗಳಿಗೆ ವಿಶಿಷ್ಟವಾದ ಶಕ್ತಿಯನ್ನು ತಂದು ಕೊಡುತ್ತವೆ. ಆತನ ನಾಟಕಗಳನ್ನು ಗ್ರೀಕ್ ರುದ್ರ ನಾಟಕದ ಪ್ರಾರಂಭದೆಸೆಯ ಪ್ರತಿನಿಧಿಗಳೆಂದರೂ ಅವುಗಳಲ್ಲಿಯ ಕಾವ್ಯಸಂಪತ್ತು ಮತ್ತು ಆಳವಾದ ಜೀವನದರ್ಶನ ಇಂದಿಗೂ ಅವನ್ನು ಆ ನಾಟಕ ಪರಂಪರೆಯ ಉದಾತ್ತ ನಿದರ್ಶನಗಳಾಗಿ ಉಳಿಯುವಂತೆ ಮಾಡಿವೆ." ಇಲ್ಲಿ ಅನುವಾದಿತವಾದ ನಾಟಕದ ಗುಣವಿಶೇಷಗಳನ್ನು ಗುರುತಿಸುವುದರಲ್ಲಿ ಈಸ್ಕಿಲಸ್‌ನನ್ನು ಕುರಿತಂತೆ ಮೇಲಿನ ಮಾತುಗಳನ್ನು ನೆನೆಯಬೇಕಾಗುತ್ತದೆ.

ರನ್ನನ ಗದಾಯುದ್ಧದಲ್ಲಿ ದುರ್ಯೋಧನನನ್ನು ಒಂದು ದುರಂತ ಪಾತ್ರವಾಗಿ ಕಾಣುವ ಸಾಧ್ಯತೆಯನ್ನು ಶ್ರೀಕಂಠಯ್ಯನವರು ಗುರುತಿಸಿದ್ದನ್ನು ಆಗಲೆ ಹೇಳಿಯಾಗಿದೆ. ಅದರ ನಂತರ ಸೊಫೊಕ್ಲೀಸನ ನಾಟಕದ ರೂಪಾಂತರವೆಂದರೂ ಒಂದು ಸ್ವತಂತ್ರ ದುರಂತ ನಾಟಕವಾಗಿ ನಿಲ್ಲುವಂತೆ "ಅಶ್ವತ್ಥಾಮನ್"ನಲ್ಲಿ ಒಂದು ಅಪೂರ್ವ ಸಾಧನೆಯನ್ನು ತಮ್ಮದಾಗಿಸಿಕೊಂಡರು. ಅಷ್ಟಾದ ಮೇಲೆ ಈಸ್ಕಿಲಸ್ಸನ ಉಪಲಬ್ಧ ನಾಟಕಗಳಲ್ಲಿ ಅಷ್ಟೇನೂ ಶ್ರೇಷ್ಠವಲ್ಲದ ಇದನ್ನು ಅನುವಾದಕ್ಕೆಂದು ಯಾಕೆ ಎತ್ತಿಕೊಂಡರೊ ಎನ್ನುವುದು ಕೇಳಬೇಕಾದ ಪ್ರಶ್ನೆಯಲ್ಲ. ಕನ್ನಡ ಓದುಗರು ತಿಳಿದಿರಬೇಕು ಎಂದು, ಅವರು ಅಂದುಕೊಂಡ ಕೆಲವು ಅಂಶಗಳನ್ನು ಅವರು ಈ ನಾಟಕದಲ್ಲಿ ಕಂಡಿರಬೇಕು. ಆ ದೃಷ್ಟಿಯಿಂದ ಎರಡು ವಿಧದಲ್ಲಿ ಅವರ ಉದ್ದೇಶವನ್ನು ಕುರಿತು ಊಹಿಸುವುದು ಸಾಧ್ಯವಿದೆ, ಒಂದು ಈ ನಾಟಕವನ್ನು ಭಾವೋತ್ಕಟವಾಗುವಂತೆ ಮಾಡುತ್ತಾರೆ. ಮೇಳದವರಾಗಲಿ ಅವರು ಹೇಳುವ ಗೀತಗಳಾಗಲಿ ನಮ್ಮ ನಾಟಕಪರಂಪರೆಗೆ ಹೊಸದು. ಅವನ್ನು ಎಷ್ಟು ವಿಧವಾಗಿ, ಎಷ್ಟು ಪರಿಣಾಮಕಾರಿಯಾಗಿ, ರಸಸಾಧಕವಾಗಿ ಬಳಸಬಹುದು ಎನ್ನುವುದನ್ನು ಈ ನಾಟಕ ತೋರಿಸುತ್ತದೆ. ಎರಡನೆಯದಾಗಿ, ಮೊದಲಿನ ತಮ್ಮ ಎರಡು ನಾಟಕಗಳು ಸೂಚಿಸಿದ ಜೀವನದರ್ಶನವನ್ನೇ ಈ ನಾಟಕ ಇನ್ನೂ ಸ್ಪಷ್ಟವಾಗಿ – ಒಂದು ವ್ಯಕ್ತಿಯ ಜೀವನದಲ್ಲಿ ಮಾತ್ರವಲ್ಲ, ಒಂದು ಸಾಮ್ರಾಜ್ಯದ ಚರಿತ್ರೆಯಲ್ಲಿ – ವಿಶೇಷವಾದ ಯಾವ ನಾಟಕಕ್ರಿಯೆಯ ವಿಸ್ತರಣವಿಲ್ಲದೆ ಹೇಗೆ ಒತ್ತಿಹೇಳುತ್ತದೆ, ವಿಶದಪಡಿಸುತ್ತದೆ, ಎನ್ನುವುದು. ಅಥವಾ ಈಸ್ಕಿಲಸ್‌ನ ಒಂದು ನಾಟಕ ಕನ್ನಡದಲ್ಲಿ ಬರಲಿ ಎಂದುಕೊಂಡಿರಬಹುದು. (ಹಾಗಿದ್ದರೆ ಆತನ ಶ್ರೇಷ್ಠತಮವಾದ

"ಅಗೆಮೆಮ್ನಾನ್" ನಾಟಕವನ್ನು ಅನುವಾದಿಸಿದ್ದರೆ ಚೆನ್ನಾಗಿತ್ತು ಎಂದು ಹೇಳಬಹುದು.) ಆದರೆ ಇದೆಲ್ಲ ಬಹುದುಗಳ ಮಾತು. ನಮ್ಮೆದುರಿಗಿರುವುದು "ಪಾರಸಿಕರು" ಎಂಬ ಕನ್ನಡ ಅನುವಾದ. ಈಸ್ಕಿಲಸ್‌ನ "ಪರ್ಸಿ" ಅದಕ್ಕೆ ಮೂಲ.

ಕ್ರಿಪೂ. ೪೮೦ರಲ್ಲಿ ಪಾರಸಿಕರು ತಮ್ಮ ದೊರೆಯಾಗಿದ್ದ ಕ್ಷಯಾರ್ಷನ ನೇತೃತ್ವದಲ್ಲಿ ಗ್ರೀಕರ ಮೇಲೆ ದಂಡೆತ್ತಿ ಬಂದಾಗ ನಡೆದ ಯುದ್ಧದ ಕಥೆಯನ್ನು ನಾಟಕ ಹೇಳುತ್ತದೆ. ಗ್ರೀಕರು ಪಾರಸಿಕರ ಹಡಗುಪಡೆಯನ್ನು ಕಾಲಾಳುಗಳನ್ನು ಪೂರ್ತಿಯಗಿ ಧ್ವಂಸಮಾಡಿ ಚಕ್ರವರ್ತಿಯಾಗಿದ್ದ ಕ್ಷಯಾರ್ಷ ಸೋತು ಹೇಗೋ ಬದುಕಿಕೊಂಡು ಹರಕುಬಟ್ಟೆಯನ್ನು ಹಾಕಿಕೊಂಡು ಮೈಗಾಪಿನವನೂ ಇಲ್ಲದೆ ಹಿಂದಿರುಗುವಂತೆ ಮಾಡುತ್ತಾರೆ. ಸಾಲಾಮಿಸ್‌ನಲ್ಲಿ ನಡೆದ ಈ ಯುದ್ಧದಲ್ಲಿ ಈಸ್ಕಿಲಸ್ ಭಾಗವಹಿಸಿದ್ದನಾದರೂ ಅದನ್ನು ಕುರಿತು ಬರೆದ ನಾಟಕವನ್ನು ಗ್ರೀಕರ ಜಯಗೀತೆಯನ್ನಾಗಿಸದೆ ಪಾರಸಿಕರ ಶೋಕಗೀತೆಯನ್ನಾಗಿಸುತ್ತಾನೆ ಎನ್ನುವುದು ಈ ನಾಟಕದ ವಿಶೇಷವಾಗಿದೆ. ತನ್ನ ನಾಡಿನ ಗೆಲವು ಅಭಿಮಾನವನ್ನು ಉಕ್ಕಿಸಬಲ್ಲದ್ದಾಗಿದ್ದರೂ ನಾಟಕವನ್ನು ಬರೆಯಬೇಕೆಂದಾಗ ಕಲೆಯ ದೃಷ್ಟಿಯಿಂದ ಆತನಿಗೆ ಪಾರಸಿಕರ ಸೋಲಿನ ದುರಂತವೇ ಹೆಚ್ಚು ಅರ್ಥಪೂರ್ಣವಾಗಿ ಕಂಡಿರಬೇಕು. ಪಾರಸಿಕರು ಯುದ್ಧದಲ್ಲಿ ಸೋತದ್ದು ತಮ್ಮ ದೊರೆಯ ಅಹಂಕಾರಮದ (ಹ್ಯೂಬ್ರಿಸ್)ದ ಫಲವಾಗಿ. ಕ್ಷಯಾರ್ಷನ ತಂದೆ ಹಿಂದೊಮ್ಮೆ ಗ್ರೀಕರ ಮೇಲೆ ಬಿದ್ದು ಮರಾಥಾನ್‌ನಲ್ಲಿ ಸೋಲಿನ ಕಹಿಯನ್ನು ಉಂಡಿದ್ದ. ಅದರ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಎಂದೋ ತನ್ನ ಚಕ್ರಾಧಿಪತ್ಯದ ಮದದಿಂದ ಕೊಬ್ಬಿಯೋ ಅಂತೂ ತನಗೆ ಅಧೀನರಾಗಿದ್ದ ಹತ್ತಾರು ಮಾಂಡಲೀಕರ ಸಹಾಯ ಸಹಕಾರದಿಂದ ನಾವಿಕರ ಒಂದು ದೊಡ್ಡ ಪಡೆಯನ್ನೂ ಕಾಲಾಳುಗಳ ಒಂದು ದೊಡ್ಡ ಸೈನ್ಯವನ್ನೂ ಕೂಡಿಸಿಕೊಂಡು ಗ್ರೀಕರ ಮೇಲೆ ಬಿದ್ದು ಪೂರ್ತಿಯಾಗಿ ಸೋತು ಹೋಗುತ್ತಾನೆ. ಈ ಸೋಲಿನ ಕಥೆಯೇ ಇಲ್ಲಿಯ ನಾಟಕಕ್ಕೆ ವಿಷಯ. ಆದರೆ ಆ ಸೋಲನ್ನು ಪ್ರದರ್ಶಿಸು-ವುದಕ್ಕಿಂತ ಅದರಿಂದ ನಿಷ್ಪನ್ನವಾಗುವ ಧರ್ಮತತ್ತ್ವವನ್ನು ವಿಶದಪಡಿಸುವುದು ನಾಟಕದ ಉದ್ದೇಶವಾಗಿದೆ.

ನಾಟಕ ಪ್ರಾರಂಭವಾಗುವ ಪಾರಸಿಕರ ಚಕ್ರವರ್ತಿ ಕ್ಷಯಾರ್ಷ ಗ್ರೀಕ್‌ರೊಡನೆ ಯುದ್ಧದಲ್ಲಿ ತೊಡಗಿ ಕೆಲ ಕಾಲವಾಗಿದೆ. ಹಿಂದುಳಿದ ಹಿರಿಯರು, ಮಂತ್ರಿಗಳು, – ಅವರೇ ನಾಟಕದಲ್ಲಿಯ ಮೇಳದವರು – ಅದನ್ನು ಕುರಿತೇ ಚಿಂತಿಸುತ್ತಿದ್ದಾರೆ. ತಮ್ಮ ಸೈನ್ಯದ ವಿಷಯದಲ್ಲಿ ವಿಶ್ವಾಸವಿದ್ದರೂ ದೈವ ಮೋಸ ಮಾಡಿದರೆ ಹೇಗೆ ಎಂದು ಆತಂಕ ಪಡುತ್ತಿದ್ದಾರೆ. ಹೋದ ವೀರರು ಹಿಂದಿರುಗುತ್ತಾರೆಯೋ ಇಲ್ಲವೋ ಎಂಬ ಭಯ ಅವರ ಹೃದಯವನ್ನು ಇರಿಯುತ್ತಿದೆ. ಅಂಥದೇ ಆತಂಕಕ್ಕೆ ಸಿಲುಕಿದ್ದ ಚಕ್ರವರ್ತಿಯ ತಾಯಿ, ಹುತೌಷ, ಪ್ರವೇಶಿಸಿ ತನ್ನ ಎದೆಯಲ್ಲಿಯ ಹೆದರಿಕೆಯನ್ನು ಹೇಳಿಕೊಳ್ಳುತ್ತಾಳೆ.

ದುರ್ಯವುಷನ ಕಾಲದಲ್ಲಿಯ ಸಾಮ್ರಾಜ್ಯವೈಭವ ತನ್ನ ಮಗನ ದುಡುಕಿನಿಂದಾಗಿ ಎಲ್ಲಿ ಅಳಿಯುತ್ತದೆಯೋ ಎಂಬ ಭೀತಿ ಆಕೆಯನ್ನು ಆವರಿಸಿದೆ. ಅದಕ್ಕೆ ಸರಿಯಾಗಿ ಅಶುಭ ಸೂಚಕವಾದ ಕನಸನ್ನು ಕಂಡಿದ್ದಾಳೆ. ಕನಸಿನಲಿ ಇಬ್ಬರು ಚೆಲುವೆಯರನ್ನು ಕಂಡಿರುತ್ತಾಳೆ. ಒಬ್ಬಳು ಏಷ್ಯದವಳು, ಇನ್ನೊಬ್ಬಳು ಡೋರಿಕಳು (ಹೆಲಾಸಿನವಳು). ಅವರಿಬ್ಬರೂ ಜಗಳಕ್ಕೆ ತೊಡಗಿದಾಗ ಕ್ಷಯಾರ್ಷ ಅವರನ್ನು ರಥಕ್ಕೆ ಹೂಡುತ್ತಾನೆ. ಏಷ್ಯದವಳು ಹಿಗ್ಗಿನಿಂದಿರುತ್ತಾಳೆ. ಇನ್ನೊಬ್ಬಳು ಹೇರಿದ ನೊಗವನ್ನು ಸಹಿಸದೆ, ಜಗ್ಗಿ ಒದೆದಾಡಿ, ಕಡಿವಾಣವನ್ನು ಹರಿದು, ಮೂಕಿಯನ್ನು ಮುರಿದು ಕ್ಷಯಾರ್ಷ ರಥದಿಂದ ಕೆಳಕ್ಕುರುಳುವಂತೆ ಮಾಡುತ್ತಾಳೆ. ಇದಿಷ್ಟು ಸಾಲದೆಂಬಂತೆ ಹುತೌಷ ಬೆಳಗಿನಲ್ಲಿ ಮಿಥ್ರ (ಸೂರ್ಯ) ದೇವನ ಪೂಜೆಗೆಂದು ಹೋದಾಗ ಗರುಡಪಕ್ಷಿಯೊಂದು ವೇದಿಕೆಯ ಮೇಲೆ ಬೀಳುತ್ತದೆ. ಸಣ್ಣ ಗಿಡುಗವೊಂದು ಅದನ್ನು ಬೆನ್ನಟ್ಟಿ ಬಂದು ಗರುಡನನ್ನು ಕುಕ್ಕುತ್ತದೆ. ರಾತ್ರಿಯ ಕನಸು ಮತ್ತು ಬೆಳಗಿನ ಈ ಉತ್ಪಾತ ಆಕೆಗೆ ಮುಂಬರುವ ಸೋಲಿನ ಸೂಚನೆಗಳಾಗಿ ಕಂಡದ್ದರಿಂದ ಆಕೆ ಮತ್ತೂ ಹೆದರಿಕೊಂಡಿರುತ್ತಾಳೆ. ಎಲ್ಲಿದೆ ಈ ಅಥೆನ್ಸ್? ಯಾರವರು? ಅವರಿಗೆ ದೊರೆ ಯಾರು? ಎಂದು ಮುಂತಾಗಿ ಮೇಳದವರನ್ನು ತಿರಸ್ಕಾರದಿಂದಲೇ ಕೇಳುತ್ತಾಳೆ. ಮೇಳದವರಿಗೆ ವಿಷಯ ಗೊತ್ತು. ಒಬ್ಬ ದೊರೆಗೆ ಆಳುಗಳಾಗಿ ಇರುವವರು ಅವರಲ್ಲ, ತಮ್ಮನ್ನು ತಾವೇ ಆಳುವವರು. ಎಂದು ತಿಳಿಸುತ್ತಾರೆ. ಅಂಥವರು ಕ್ಷಯಾರ್ಷನಂಥ ದೊರೆಯನ್ನು ಹೇಗೆ ಎದುರಿಸ ಬಲ್ಲರು? ಎಂದುದಕ್ಕೆ ಮೇಳದವರು "ದುರ್ಯವುಷನೆ ಬಲ್ಲನದನು" ಎಂದು ಹೇಳಿ ಹಿಂದೆ ಅನುಭವಿಸಿದ ಸೋಲಿನ ನೆನಪನ್ನು ತಂದುಕೊಡುತ್ತಾರೆ.

ಕಂಗಾಲಾದ ದೂತನೊಬ್ಬ ಪ್ರವೇಶಿಸಿ ಕ್ಷಯಾರ್ಷ ಸೋಲಿನ ಸಮಾಚಾರವನ್ನು ತಿಳಿಸುತ್ತಾನೆ. ಗ್ರೀಕರ ಹೂಟವನ್ನು ತಿಳಿಯದೆ, ಅವರು ಹೇಡಿಗಳೆಂದು ಅವರ ಮೇಲೆ ಬಿದ್ದ ತಮ್ಮ ಹಡಗುಪಡೆ ಪುಡಿಪುಡಿಯಾಯಿತೆಂದೂ, ವೀರರೆಲ್ಲರೂ ಮಡಿದರೆಂದೂ ಅಳಿದುಳಿದ ಸೈನ್ಯ ದಿಕ್ಕುಕೆಟ್ಟು ಹಿಮ್ಮೆಟ್ಟಿದಾಗ ಎದುರಿಸಬೇಕಾಗಿ ಬಂದ ವಿಪತ್ತುಗಳಿಗೆ ಈಡಾಗಿ ನಾಶವಾಯಿತೆಂದೂ ಕ್ಷಯಾರ್ಷನೊಬ್ಬ ಬದುಕಿಕೊಂಡು ದುಃಖಾರ್ತನಾಗಿ ಹಿಂದಿರುಗುವನೆಂದೂ ಯುದ್ಧದ ವಿವರಗಳನ್ನು ಸಾದ್ಯಂತವಾಗಿ ತಿಳಿಸುತ್ತಾನೆ. ಶೋಕಾಕುಲರಾದ ಮೇಳದವರು ಮತ್ತು ಹುತೌಷ ಹಿಂದೆ ದೊರೆಯಾಗಿದ್ದ ದುರ್ಯವುಷನ ಪ್ರೇತವನ್ನು ಆಹ್ವಾನಿಸಿ ಆತನ ಸಲಹೆ ಪಡೆಯುವುದೆಂದು ಆತನಿಗೆ ಪೂಜೆ ಸಲ್ಲಿಸಿ ಬರಮಾಡಿಕೊಂಡು ಕೇಳುತ್ತಾರೆ. ದುರ್ಯವುಷ ಸಮಾಧಿಯಿಂದೆದ್ದು ಮಗನ ದುಡುಕಿನಿಂದ ಸೋಲುಂಟಾಯಿತೆಂದು ಹೇಳುತ್ತಾನಲ್ಲದೆ ಸಾಲಾಮಿಸ್‌ನಲ್ಲಿ ಅನುಭವಿಸಿದ ಆ ಸೋಲು ಕೊನೆಯದಲ್ಲ ಎಂದೂ ಎಚ್ಚರಿಸುತ್ತಾನೆ.

ದುರ್ಯವೃಷನ ಪ್ರೇತ ಹೊರಟುಹೋದ ಮೇಲೆ ಮೇಳದವರು ಮುಂದಿನ ಗತಿಯನ್ನು ಕುರಿತು ಚಿಂತಿಸಿ ಆತಂಕ ಪಡುತ್ತಿದ್ದಾಗ ಹರಕು ಚಿಂದಿ ಬಟ್ಟೆಗಳನ್ನುಟ್ಟು ಕೊಂಡು ಶೋಕಾರ್ತನಾದ ಕ್ಷಯಾರ್ಷ ಪ್ರವೇಶಿಸುತ್ತಾನೆ. ಆತನನ್ನು ಸಹಾನುಭೂತಿ ಯಿಂದ ಬರಮಾಡಿಕೊಳ್ಳಬೇಕೆಂದು ತಾಯಿ ತಂದೆಗಳಿಬ್ಬರೂ ಹೇಳಿದ್ದರೂ ನಾಡಿನ ವೀರರೆಲ್ಲರನ್ನೂ ಕಳೆದುಕೊಂಡು ಶೋಕತಪ್ತರಾಗಿದ್ದ ಮೇಳದವರು ಸಹಾನುಭೂತಿ ಇದ್ದರೂ ಆತನನ್ನು ಮೂದಲಿಸುವಂತೆ ಅವನೇನಾದ, ಇವನೇನಾದ, ಎಂದು ವಿಚಾರಿಸುತ್ತಿದ್ದಾಗ ಆತ ಅದೆಲ್ಲವನ್ನು ಕೇಳುವುದಕ್ಕಿಂತ ತನ್ನ ಕೊರಲನ್ನು ಕೊಯ್ಯಬಾರದೇ ಎಂದು ಹಲುಬುತ್ತಾನೆ. ಇಬ್ಬರೂ ಬಗೆಬಗೆಯಾಗಿ ಮಡಿದ ವೀರರಿಗಾಗಿ ಶೋಕವನ್ನು ತೋಡಿಕೊಳ್ಳುತ್ತಾರೆ. ಮತ್ತೆ ರಾಜ್ಯ ಮೆರೆಯುವುದೆ, ಬೆಳೆಯುವುದೆ, ಎಂದು ಕ್ಷಯಾರ್ಷ ಕೇಳಿದ್ದಕ್ಕೆ ಮೆರೆಯಲಿ, ಬೆಳೆಯಲಿ, ಎಂದು ಮೇಳದವರು ತಮ್ಮ ಆಕಾಂಕ್ಷೆಯನ್ನು ಹೇಳುತ್ತಾರಲ್ಲದೆ, ಯಾವ ಭರವಸೆಯನ್ನೂ ಹೇಳುವುದಿಲ್ಲ. ಸಾಮ್ರಾಜ್ಯಕ್ಕೆ ಗತಿ ದೇವರು, ಅದನ್ನು ಕಾಯುವುದು ಧರ್ಮ, ಎಂದು ಶ್ರೀಯವರು ಅವರ ಬಾಯಿಂದ ಹೇಳಿಸಿದ ಮಾತುಗಳೊಂದಿಗೆ ನಾಟಕ ಮುಗಿಯುತ್ತದೆ.

ರಂಗಸ್ಥಳದ ಮೇಲೆ ಕುತೂಹಲಕಾರಿಯಾದ ಸನ್ನಿವೇಶಗಳನ್ನು ಬೆಳೆಯಿಸಿಕೊಂಡು ನಾಟಕವನ್ನು ರಚಿಸುವ ವಿಧಾನ ಈಸ್ಕಿಲಸ್‌ನದಲ್ಲ. ಸಾಮಾನ್ಯವಾಗಿ ಯಾವುದೋ ಒಂದು ಘಟನೆಯ ಸುತ್ತ ಆತನ ನಾಟಕ ಬೆಳೆಯುತ್ತದೆ. ಆ ಘಟನೆ ಒಂದು ಅಪಕೃತ್ಯವಾಗಿರುತ್ತದೆ. ಅದು ಕೂಡ ನಾಟಕ ಪ್ರಾರಂಭವಾಗುವ ಮೊದಲೇ ನಡೆದುಹೋಗಿರುತ್ತದೆ. ನಾಟಕ ತೋರಿಸುವುದು ಅದರ ಪರಿಣಾಮ ಪರಂಪರೆಯನ್ನು, ಅದರಿಂದಾಗಿ ರೂಪುಗೊಳ್ಳುವ ದುರಂತವನ್ನು. ಆತನ ಅತ್ಯುತ್ತಮ ನಾಟಕವಾದ "ಅಗೆಮೆಮ್ನಾನ್" ನಲ್ಲಿಯಂತೆ ಇಲ್ಲಿಯಾದರೂ ದುರಂತಕಾರಕವಾದ ಘಟನೆ ಆಗಲೆ ನಡೆದು ಹೋಗಿದೆ. ತೊಡಗಿದ ಯುದ್ಧ ಮುಗಿದುಹೋಗಿದೆ. ಅದರ ಪರಿಣಾಮವನ್ನು ತಿಳಿಯುವುದಕ್ಕಾಗಿ ಕಾತರದಿಂದ ಕಾಯುತ್ತಿದ್ದ ಮೇಳದವರೊಂದಿಗೆ ನಾಟಕ ಮೊದಲಾಗುತ್ತದೆ. ನಾಟಕದಲ್ಲಿ ಹೆಚ್ಚಿನದೇನೂ ನಡೆಯುವುದಿಲ್ಲ. ಯುದ್ಧಕ್ಕೆ ಹೋದವರ ಗತಿಯೇನಾಯಿತು, ಅವರು ಹಿಂದಿರುಗುವರೋ ಇಲ್ಲವೋ ಎಂದು ಮೇಳದವರು ಮತ್ತು ಹುತೌಷ ಶಂಕಾತುರಗಳಿಂದ ಕಾಯುತ್ತಿರುವಾಗ ದೂತ ಪ್ರವೇಶಿಸಿ ತಮ್ಮ ಪಾಲಿಗೆ ಬಂದ ಘೋರ ಅಪಜಯದ ಕಥೆಯನ್ನು ಸಾದ್ಯಂತವಾಗಿ ಹೇಳುತ್ತಾನೆ. ಈ ಸಂತಪ್ತರ ಆರಾಧನೆ ಆಹ್ವಾನಗಳಿಗೆ ಉತ್ತರವಾಗಿ ಹಿಂದಿನ ದೊರೆ ದರ್ಯವೃಷನು ಸಮಾಧಿಯಿಂದ ಮೇಲೆದ್ದು ಸೋಲುಂಟಾದ ಕಾರಣವನ್ನು ವಿವರಿಸುತ್ತಾನೆ. ಅದರ ನಂತರ ಪ್ರವೇಶಿಸುವ ಕ್ಷಯಾರ್ಷ ಮೇಳದವರನ್ನು ಸೇರಿಕೊಂಡು ತಾನು ತಂದುಕೊಂಡ ಪರಾಭವಕ್ಕಾಗಿ ಪರಿತಪಿಸುತ್ತಾನೆ. ಒಟ್ಟು ನಾಟಕದಲ್ಲಿ ನಡೆಯುವುದು ಇಷ್ಟು ಮಾತ್ರ.

ಇದ್ದಷ್ಟು ನಾಟಕಕ್ರಿಯೆಯನ್ನು (ಅಂದರೆ ರಂಗಸ್ಥಳದ ಮೇಲಿನ ಬೆಳವಣಿಗೆಗಳನ್ನು) ನಾಲ್ಕು ಹಂತಗಳಲ್ಲಿ ಕಾಣಬಹುದು. ಮೊದಲನೆಯ ಹಂತದಲ್ಲಿ ಹಿಂದುಳಿದ ಹಿರಿಯರ ಮತ್ತು ಚಕ್ರವರ್ತಿಯ ತಾಯಿಯ (ತಮ್ಮ ಸೈನ್ಯದವರ ಬಗೆಯಲ್ಲಿಯ ಅಭಿಮಾನ ಧೈರ್ಯಗಳನ್ನೂ ತಗ್ಗಿಸುವ) ಆತಂಕ, ಭಯ: ಎರಡನೆಯದರಲ್ಲಿ ದೂತನಿಂದ ಸೋಲಿನ ಸಮಗ್ರವಾದ ವಿವರಣೆ; ಮೂರನೆಯದರಲ್ಲಿ ದುರ್ಯವುಷನ ಪುನರುತ್ಥಾನ ಮತ್ತು ಸೋಲಿನ ಕಾರಣ ಮೀಮಾಂಸೆ; ಕೊನೆಯದರಲ್ಲಿ ಮೇಳದವರಿಂದ ಮತ್ತು ಕ್ಷಯಾರ್ಷನಿಂದ ತಮ್ಮ ಸೋಲಿಗಾಗಿ ಪರಿತಾಪ, ಶೋಕ. ಇಡೀ ನಾಟಕದಲ್ಲಿ ಕೆಲಮಟ್ಟಿಗಾದರೂ ನಾಟಕ ಸತ್ವವನ್ನು ಒಳಗೊಂಡ ಒಂದೇ ಒಂದು ಸನ್ನಿವೇಶವೆಂದರೆ ಕ್ರಿಯೆಯ ಮೂರನೆಯ ಹಂತದಲ್ಲಿ ದುರ್ಯವುಷನು ಸಮಾಧಿಯಿಂದ ಮೇಲೆದ್ದು ಬಂದು ನಡೆದದ್ದು ನಡೆದುದೇಕೆ ಎಂದು ವಿವರಿಸಿ ಆಶಾದಾಯಕವಲ್ಲದ ಭವಿಷ್ಯವನ್ನು ಸೂಚಿಸಿ ಮತ್ತೆ ಮರೆಯಾಗುವುದು. ಮೊದಲಿನಿಂದ ಕೊನೆಯವರೆಗೆ ಪ್ರಭಾವಶಾಲಿಯಾಗಿ ನಾಟಕ ಕ್ರಿಯೆಯನ್ನು ಮುನ್ನಡೆಸಿಕೊಂಡು ಹೋಗುವ ಕೇಂದ್ರ ವ್ಯಕ್ತಿ ಇಲ್ಲ. ಯಾವೊಂದು ಬಗೆಯ ನೈತಿಕ ಸಂಘರ್ಷವಾಗಲಿ, ಕೈಕೊಳ್ಳಬೇಕಾದ ನಿರ್ಣಯವನ್ನು ಅವಲಂಬಿಸುವ ಪರಿಣಾಮ ಪರಂಪರೆಯಾಗಲಿ ನಾಟಕದ ಸನ್ನಿವೇಶದಲ್ಲಿ ಹುಟ್ಟಿಕೊಳ್ಳುವುದಿಲ್ಲ. ಯುದ್ಧದ ನಿರ್ಣಯವನ್ನು ಆಗಲೆ ಕೈಕೊಂಡು ಯುದ್ಧವನ್ನು ತೊಡಗಿಯಾಗಿದೆ. ನಾಟಕ ಪ್ರಾರಂಭವಾಗುವಷ್ಟರಲ್ಲಿ (ನಾಟಕದಲ್ಲಿಯ ಪಾತ್ರಗಳಿಗೆ ಆ ವಿಷಯ ತಿಳಿದಿರದಿದ್ದರೂ) ಯುದ್ಧ ಮುಗಿದೂ ಹೋಗಿದೆ. ಮುಗಿದ ಯುದ್ಧದ ವರ್ತಮಾನ ತಿಳಿಯದ ಸನ್ನಿವೇಶವೇ ಆತಂಕಕ್ಕೆ ಕಾರಣವಾಗಿ ನಾಟಕದಲ್ಲಿ ಕುತೂಹಲವನ್ನು ಉಂಟುಮಾಡುವ ಅಂಶವಾಗಿದೆ. ಎಲ್ಲವೂ ಆಗಲೇ ನಡೆದು ಹೋಗಿದ್ದು. ನಡೆದು ಹೋದದ್ದನ್ನು ತಿಳಿಯಬೇಕೆಂಬ ಕಾತರದಿಂದ ಪ್ರಾರಂಭವಾದ ನಾಟಕ, ಅದು ತಿಳಿದಾಗ ಉಂಟಾಗುವ ಶೋಕ ಪರಿತಾಪಗಳಲ್ಲಿ ಮುಕ್ತಾಯವಾಗುತ್ತದೆ. ಹೀಗಿದ್ದರೂ, ನಾಟಕಕ್ರಿಯೆ ಇಷ್ಟರಮಟ್ಟಿಗೆ ಪರಿಮಿತವಾಗಿದ್ದರೂ ಸನ್ನಿವೇಶ ನಾಟಕೀಯವಾಗಿ ಬೆಳೆಯುತ್ತದೆ. ಕುತೂಹಲವನ್ನು ಉಳಿಸಿಕೊಂಡು ನೋಟಕರನ್ನು ಸೆರೆಹಿಡಿಯುತ್ತದೆ.

ಮೊದಲ ಹಂತದಲ್ಲಿಯ ಮೇಳದವರ ಗೀತಗಳಲ್ಲಿ ಮತ್ತು ನಂತರ ಪ್ರವೇಶಿಸುವ ಹುತೌಷಳ ಮಾತುಗಳಲ್ಲಿ ಎದ್ದು ಕಾಣುವುದು ಭಯದ ಆತಂಕ ಮತ್ತು ಅನಿಶ್ಚಿತತೆ. ಮೇಳದವರಲ್ಲಿ ತಮ್ಮ ದೊರೆಯ ಬಗೆಯಲ್ಲಿ ಅಭಿಮಾನವಿದೆ. ತಮ್ಮ ಸೈನ್ಯದ ವಿಷಯದಲ್ಲಿ ವಿಶ್ವಾಸವಿದೆ. "ಏಷ್ಯದ ತಿರುಳೆಲ್ಲ ಪೋಯ್ತು". "ಪೋದವನಾ ಪೋರಾಣ್ಮನ್" ಪೋದವರಾ ಪೊನ್ನಾಳ್ಗಳ್, ಬಾರದೆ ಬಗೆ ಬೆದರುತಿಹುದು" ಎಂದು ಆತಂಕ ಪಡುತ್ತಿದ್ದ ತಮ್ಮ ಹೃದಯಗಳಿಗೆ ತಾವೇ ಸಮಾಧಾನ ಹೇಳಿಕೊಳ್ಳುತ್ತಿರುವಂತೆ ಮೇಳದವರು ತಮ್ಮ ಸೈನ್ಯದ ಹಿರಿಮೆಯನ್ನು ಕುರಿತು ಹೆಮ್ಮೆ ಪಡುತ್ತಾರೆ. ಎಷ್ಟೆಲ್ಲ ಕಡೆಯಿಂದ ತಮ್ಮ

ದೊರೆಯ ಕರೆಗೆ ಸರಿಯಾಗಿ ಬಂದವರು, ಎಷ್ಟೊಂದು ಬಗೆಯ ಶಕ್ತಿ ಸಾಮರ್ಥ್ಯಗಳನ್ನುಳ್ಳವರು – ಎಲ್ಲರೂ ಸೇರಿದ ಪಾರಸಿಕರ ಬಲ ಅಜೇಯವಾಗಿದೆ, ಅದರ ಬಲ ಅಕ್ಷಯ ಸಾಮ್ರಾಜ್ಯ ಬಲ. "ಪರ್ಸದೆದೆ ವಜ್ರದೆದೆ" ಇಂಥ ಸೈನ್ಯ ಕಡಲ ತೆರೆಯಂತೆ ಯವನರ ಉಕ್ಕನ್ನು ಮುರಿಯಲು "ಸಾಸಿರ ಸತ್ರಪರ ಮೊರೆ"ಯಾಗಿದ್ದ "ಐಶ್ವದ ಸಾಮ್ರಾಜ್ಯ, ಸಾರ್ವಭೌಮನ" ನಾಯಕತ್ವದಲ್ಲಿ ಮುನ್ನುಗ್ಗಿದಾಗ ಜಯ ಸಹಜಯವಾಗಿಯೇ ಬರಬೇಕಾದದ್ದು ಎಂಬ ಆತ್ಮ ವಿಶ್ವಾಸವಿದ್ದರೂ ದೈವ ವಂಚಿಸಬಹುದು; ದೈವ ಪ್ರತಿಕೂಲವಾದರೆ ಮನುಷ್ಯ ಏನು ಮಾಡಬಲ್ಲ ಎಂಬ ಭಯದ ಇರಿತ ಅಳುಕಿಗೆ ಕಾರಣವಾಗಿದೆ.

"ದೈವ ವಂಚಿಸಲು
ಬುದ್ಧಿ ಬಲದಿಂದಾರು ಬದುಕಬಹುದು?
ಒಡ್ಡಿದಾ ಹೆಬ್ಬಲೆಯ ಹಾರಬಹುದು?"

ಮಾನುಷ ವ್ಯಾಪಾರಗಳ ಮೇಲೆ ಸದಾಕಾಲವೂ ನಡೆಯುತ್ತಿರುವ ದೈವದ ಅಧಿಪತ್ಯ ಗ್ರೀಕ್ ದುರಂತ ನಾಟಕಗಳಲ್ಲಿಯ ಒಂದು ಅತ್ಯಂತ ಪ್ರಮುಖವಾದ ವಿಚಾರವಾಗಿದೆ. ಈ ವಿಚಾರ ಮೇಳದವರ ಹೃದಯಗಳನ್ನು ತಲ್ಲಣಿಸುವಂತೆ ಮಾಡಿದೆ. ಅವರ ಭಯವನ್ನು ಹುತೌಷಳು ಕಂಡ ಕನಸು, ನೋಡಿದ ಉತ್ಪಾತ, ಬಲಪಡಿಸುತ್ತವೆ. ಹೆದರಿದ ಆಕೆಗೆ ಅವರು ಧೈರ್ಯ ಹೇಳಬೇಕು. ಆದರೆ ಯಾವ ಭರವಸೆಯ ಮಾತನ್ನು ಹೇಳಬಹುದು? "ಬೇಡ ಹೆಚ್ಚು ಹೆದರಿಕೆ, ಹೆಚ್ಚು ನೆಚ್ಚಿಕೆಯೂ ಬೇಡ; ಪೋಗು ಬೇಡು ದೇವರನ್–" ಎಂದು ಮಾತ್ರ ಹೇಳಬಲ್ಲವರಾಗುತ್ತಾರೆ. ಯೋಚನೆ ಮಾಡಿದ ಹಾಗೆ ಅವರಲ್ಲಿ ಹೆದರಿಕೆ ಬೆಳೆಯುತ್ತಿದ್ದ ಹಾಗೆ ಕಾಣುತ್ತದೆ. ಪ್ರಾರ್ಥನೆಯೊಂದೇ ಪರಿಹಾರವಾಗಿ ಕಾಣುತ್ತದೆ. ಪರಿಸ್ಥಿತಿಯಲ್ಲಿಯ ಈ ಸಂದಿಗ್ಧವೇ ಸನ್ನಿವೇಶವನ್ನೂ ಕುತೂಹಲಕಾರಿಯಾಗಿಸುತ್ತದೆ. ಮೇಳದವರಂತೆ, ಹುತೌಷಳಂತೆ, ಪ್ರೇಕ್ಷಕನಾದರೂ ಮುಂದೇನು ಎಂದು ಕಾತರದಿಂದ ಕಾಯುವಂತಾಗುತ್ತದೆ.

ಕುತೂಹಲವನ್ನು ಬೆಳೆಯಿಸಿ ಉಸಿರುಕಟ್ಟುವಂತೆ ಸನ್ನಿವೇಶವನ್ನು ರೂಪಿಸುವುದು ಈಸ್ಕಿಲಸ್ಸನ ನಾಟಕದ ರೀತಿಯಲ್ಲ. ಮುಂದೇನು ಎಂದು ಕುತೂಹಲವೆನಿಸುತ್ತಿದ್ದಂತೆಯೇ ದೂತ ಪ್ರವೇಶಿಸಿ ಮೊದಲ ಮಾತಿನಲ್ಲಿಯೇ ಬಂದ ಸೋಲಿನ ಸಮಾಚಾರವನ್ನು ತಿಳಿಸುತ್ತಾನೆ. ಹುತೌಷಳ ಪ್ರಶ್ನೆಗಳಿಗೆ ಉತ್ತರವಾಗಿ ದೂತ ಉಂಟಾದ ಸೋಲಿನ ವಿವರಗಳನ್ನು ತಿಳಿಸುತ್ತಾನೆ. ಆತನ ವಿವರಣೆ ಎಲ್ಲವೂ ಕಣ್ಣೆದುರು ನಡೆದಂತೆ ಚಿತ್ರವನ್ನು ಕಟ್ಟುತ್ತದೆ. ಆಕೆಯ ಪ್ರತಿಕ್ರಿಯೆಯನ್ನು ನೆನೆಯುತ್ತಿದ್ದಂತೆ ಮೊದಲಿನಿಂದ ಆಕೆ ಅಷ್ಟನ್ನು ನಿರೀಕ್ಷಿಸಿಯೇ ಇರಬೇಕೆಂದು ಎನ್ನಿಸುತ್ತದೆ. ತನ್ನ ದುಡುಕಿನಿಂದ ಎಲ್ಲಿ ತನ್ನ ಮಗ ಸಾಮ್ರಾಜ್ಯದ ಸಿರಿಯನ್ನು ಮೂಳುಗೆಯ್ಯುತ್ತಾನೆಯೊ ಎಂಬ ಹೆದರಿಕೆ ಆಕೆಯಲ್ಲಿ

ಮೊದಲಿನಿಂದಲೂ ಇದೆ. ಆಕೆಗೆ ಆಶ್ಚರ್ಯವೆನಿಸುವುದು ಸೋಲಿಗಿಂತ ಹೆಚ್ಚಾಗಿ ಇಂಥ ದೊಡ್ಡ ಸೈನ್ಯಕ್ಕೆ ಇಂಥ ಭಯಂಕರವಾದ ಸೋಲು ಹೇಗಾಯಿತು, ಅಂಥದು ಆಗಲಾರದ ಮಾತು, ಎನ್ನುವುದು. ದೂತ ಹೇಳುವ ಉತ್ತರ ಮತ್ತೆ ದೈವದ ಅಧಿಪತ್ಯವನ್ನೇ ಹೇಳುತ್ತದೆ.

"ಆಳ್ ಮಾಳ್ಪುದೆಲ್ಲವುಂ ಮಾಡಿದೆವು. ದೈವಂ
ಕೆಡಿಸಿದುದು ಸರಿಯಾಗಿ ತೂಗದೆಯ ತೊಲೆಯನ್"

ಯುದ್ಧದ ಬಗೆಯಲ್ಲಿಯ ಕುತೂಹಲ ಈ ರೀತಿ ಬಯಲಾದರೂ ನಾಯಕನಾಗಿ ಹೋಗಿದ್ದ ಕ್ಷಯಾರ್ಷ ಬದುಕಿದ್ದಾನೆ, ಎಂಬ ವರ್ತಮಾನ ನೋಟಕನ ಕುತೂಹಲವನ್ನು ಆತನತ್ತ ತಿರುಗಿಸುತ್ತದೆ – ಸಾರ್ವಭೌಮ ಅರಸು ಆತ, ಆತನ ಗತಿ ಏನಾಯಿತು ಎಂದು. ತನ್ನ ವಿವರಣೆಯ ಕೊನೆಯ ಭಾಗದಲ್ಲಿ ರಾಜಕುವರರ ದುರಂತವನ್ನು, ಹಿಮ್ಮೆಟ್ಟುತ್ತಿದ್ದ ಸೈನ್ಯ ನಾಶವಾದದ್ದನ್ನು ತಿಳಿಸುತ್ತಿರುವಾಗಲೂ ದೂತ ಕ್ಷಯಾರ್ಷನ ವಿಚಾರವನ್ನು ವಿಶದಪಡಿಸುವುದಿಲ್ಲ. "ನಮ್ಮಳವೆ ಆ ದೈವಚಿತ್ತಂ?" ಎಂದು ಸೋಲಿನ ಕಥೆಯನ್ನು ಮುಗಿಸಿದಾಗ ಕನಸು ತನಗೆ ತೋರಿಸಿದ ಮುಂಗಾಣ್ಕೆ ನಿಜವಾಯಿತು, ಆ ಸಂದರ್ಭದಲ್ಲಿ ನಾಡಿನ ಹಿರಿಯರು ಮಾಡಬೇಕಾದ ಮುಖ್ಯ ಕೆಲಸವೆಂದರೆ ಜನಗಳ ನಂಬುಗೆಯನ್ನು ಉಳಿಸಿಕೊಳ್ಳುವುದು, ಅಷ್ಟರಲ್ಲಿ ಮಗ ಹಿಂದಿರುಗಿದರೆ ಆತನನ್ನು ಮೆಲ್ನುಡಿಗಳಿಂದ ಸಂತಯಿಸಿ ಕರೆತರುವುದು, ಎಂದು ಹೇಳಿ ಹುತೌಷ ಹೊರಟು ಹೋಗುತ್ತಾಳೆ. ಆದರೂ ಆಕೆಯ, ಅಂತೆಯೆ, ಮೇಳದವರ ಮೊದಲ ಯೋಚನೆ ಸಾಮ್ರಾಜ್ಯದ ಗತಿ ಏನು ಎನ್ನುವುದರತ್ತ ಹರಿಯುತ್ತದೆ. "ನೀನ್ ಮುರಿದೆ ಪಾರಸಿಕರುಕ್ಕನ್, ಮೊದಲೆತ್ತಿ ಸಾಮ್ರಾಜ್ಯ ಸುಖವಿತ್ತು, ಮುನಿದೀಗ ನೀ ಮುರಿದೆ ಸೊಕ್ಕನ್" ಎಂದು ಹೇಳಿಕೊಳ್ಳುವ ಮೇಳದವರಿಗೆ ತಮ್ಮ ದೊರೆಯ ಗತಿ ಏನಾಯಿತು ಎಂಬ ಯೋಚನೆಗಿಂತ ಯುದ್ಧದಲ್ಲಿ ಮಡಿದ ವೀರರ ನೆನಹೇ ಹೃದಯವನ್ನು ಕೊರೆಯುತ್ತದೆ. "ಪರ್ಸಕಿನ್ನಾರ್ ಪೂಜೆ ಸಲಿಪರು? ಪೆರ್ಮೆಮುಗಿಯಿತ್ತು." ಹೀಗೆ ಹುತೌಷ ಮತ್ತೆ ಪ್ರವೇಶಿಸುವವರೆಗೆ ಅವರ ಹಾಡೆಲ್ಲವೂ ಸಾಮ್ರಾಜ್ಯಕ್ಕೆ ಒದಗಿದ ದುರಂತವನ್ನು ಕುರಿತದ್ದು, ಸತ್ತು ಹೋದ ವೀರರು ಹಿಂದೆ ಬಿಟ್ಟು ಹೋದ ದುಃಖಪರಂಪರೆಯನ್ನು ಕುರಿತದ್ದಾಗುತ್ತದೆ. ಒಂದು ಕಡೆ ಮುಂದೇನು ಎಂದು ತಿಳಿಯದ ಕುತೂಹಲವಾದರೆ, ಇನ್ನೊಂದು ಕಡೆ ಕ್ಷಯಾರ್ಷನನ್ನು ಕುರಿತ ಯೋಚನೆ ಮುಂದಿನ ಬೆಳವಣಿಗೆಗಾಗಿ ನೋಟಕನನ್ನು ಕಾಯುತ್ತಿರುವಂತೆ ಮಾಡುತ್ತದೆ.

ನಾಟಕಕ್ರಿಯೆಯ ಮೂರನೆಯ ಹಂತವಾದ ದುರ್ಯವುಷನ ಪುನರುತ್ಥಾನ ಎಲ್ಲ ದೃಷ್ಟಿಯಿಂದಲೂ ನಾಟಕದ ಕೇಂದ್ರ ಸನ್ನಿವೇಶ. ಸಮಾಧಿಯ ಎದುರಿನಲ್ಲಿ ಮೇಳದವರು

ಸಲ್ಲಿಸುವ ಪ್ರಾರ್ಥನೆ, ದುರ್ಯವುಷನ ಬರವಿಗಾಗಿ ಅವರು ಮಾಡುವ ಅವಾಹನೆ, ಕಾತರದಿಂದ ಕಾಯುತ್ತಿದ್ದ ಆತನ ಮಡದಿ ಹುತೌಷ, ಹಿಂದೆ ದೊರೆಯಾಗಿ ಸಾಮ್ರಾಜ್ಯದ ವೈಭವವನ್ನು ಮೆರೆದಿದ್ದ ದುರ್ಯವುಷನ ಪ್ರೇತ ಸಮಾಧಿಯಿಂದ ನಿಧಾನವಾಗಿ ಮೇಲಕ್ಕೆ ಬರುವುದು, ಈ ಎಲ್ಲವೂ ಸೇರಿ ನಾಟಕದ ದೃಶ್ಯಭಾಗ ಕುತೂಹಲಕಾರಿಯಾಗಿ ಕಳೆಗಟ್ಟುವಂತೆ ಮಾಡುತ್ತವೆ. ಆದರೆ ಈಸ್ಕಿಲಸ್ ಈ ದೃಶ್ಯದ ಯೋಜನೆಯನ್ನು ಅಷ್ಟಕ್ಕಾಗಿಮಾತ್ರ ಮಾಡಲಿಲ್ಲ. ಅಂಥ ಭಯಂಕರ ಸೋಲು ಏಕೆ ಮತ್ತು ಹೇಗೆ ಸಂಭವಿಸಿತು ಎನ್ನುವುದನ್ನು ಸಾಮ್ರಾಜ್ಯದ ಪ್ರತಿನಿಧಿಗಳಾಗಿದ್ದ ಮೇಳದವರಿಗೆ, ಹಿರಿಯಳಾಗಿ ಉಳಿದಿದ್ದ ಹುತೌಷಳಿಗೆ ತಿಳಿಯಬೇಕಾಗಿದೆ. ಮುಂದೆ ಸಾಮ್ರಾಜ್ಯದ ಗತಿ ಏನು ಎನ್ನುವುದನ್ನಲ್ಲದೆ ಅದರ ಒಳಿತಿನ ಭರವಸೆಯನ್ನು ಪಡೆಯಬೇಕಾಗಿದೆ. ಹಿಂದಿನ ದೊರೆಯನ್ನು ಅವರು ಆಹ್ವಾನಿಸಿದ್ದು ಅಷ್ಟಕ್ಕಾಗಿ, ಅದನ್ನು ಹೇಳಬಲ್ಲವನೆಂದರೆ ಎಲ್ಲರನ್ನೂ ಸುತ್ತುವರಿದ ರಾಗದ್ವೇಷಾದಿಗಳಿಂದ, ಕೋಪತಾಪಗಳಿಂದ, ದೂರವಾಗಿದ್ದ ದುರ್ಯವುಷ ಒಬ್ಬನೇ. ಸೋಲನ್ನು ಚಿತ್ರಿಸುವುದಕ್ಕಿಂತ ಅದರ ಕಾರಣವನ್ನ ವಿವರಿಸುವುದೇ ಈಸ್ಕಿಲಸ್‌ನ ಉದ್ದೇಶವಾಗಿರುವುದರಿಂದ ಮುಂಬರುವ ಸನ್ನಿವೇಶ ನಾಟಕದ ಆಶಯವನ್ನು ವಿಶದಪಡಿಸಲು ಅನುಕೂಲವಾಗುತ್ತದೆ. ದುರ್ಯವುಷನ ಮಾತುಗಳಲ್ಲಿ ಈಸ್ಕಿಲಸ್ ನಾಟಕದ ಅರ್ಥಗರ್ಭವನ್ನು ಅಡಗಿಸಿದ್ದಾನೆ. ಯುದ್ಧದಲ್ಲಿ ಮಗ ಸೋತುಹೋದ ಸಮಾಚಾರವನ್ನು ಕೇಳಿ "ಕೇಡಿಗೋಡಲೆಳಸಲೊಬ್ಬ ದೈವವವನ ತಳ್ಳುದು" ಎಂದು ಸೋಲಿನ ಕಾರಣವನ್ನು ವಿವರಿಸುತ್ತಾನೆ.

"ಅರಿಯದ ಮಗ, ಸಾಹಸಕ್ಕೆ, ಯೌವನಮದ ಸೊಕ್ಕಿಸೆ,
ಕೆಯ್ಯನಿಟ್ಟು, ದಿವ್ಯ ಹೆಲೆಸ್ಪಾಂಟನೊತ್ತಿ ಕಟ್ಟುವೆ
ದಾಸನಂತ ತೊಡರ್ಗಳಿಂದ, ಬಾಸ್ಫೊರಸಿನ ಶಕ್ತಿಯನ್
ತೆರೆಯ ತಡೆದು ಕುಗ್ಗಿಸುವೆ, ಪಿರಿಯ ಪಡೆಗೆ ತೆರಪುಮಾಡಿ
ಸೃಷ್ಟಿ ಸಹಜ ಭೂತಬಲವ ಮೆಟ್ಟಿ ನಾನು ಮೀರಿಸುವೆ
ಎಂದು ಪೊಣ್ಬು, ಸಾವ ಮರ್ತ್ಯನಾ ಅಮರ್ತ್ಯರೆಲ್ಲರೊಡನೆ...
ಸೆಣಸಿ ತಾನೆ ಕೆಟ್ಟನು..."

"ಅಳವು ಮೀರಿ ಆತ್ಮಗೆಟ್ಟ" ಮಗ ಮಾಡಿದ ಅಕೃತ್ಯ ಅದು. ಅಷ್ಟು ಮಾತ್ರವಲ್ಲ. ಅವರ ಜೊತೆಯಲ್ಲಿ ಹೋದವರು ಮಾಡಿದ ಅಕೃತ್ಯಗಳಿಗಾಗಿಯೂ ಶಿಕ್ಷೆಯಾಗಬೇಕಿತ್ತು.

"ಹೆಲಸಿಂಗೆ ಹೋದವರು ಭಯ ಮರೆತು ಕೊಬ್ಬಿನಲಿ
ದೇವಾಲಯಂಗಳ್ಗೆ ಕಿಚ್ಚಿಕ್ಕಿ ಸೂರೆಗೆಯ್ದರ್.
ಭಕ್ತಿಯೆಂಬುದ ಕಾಣೆ -ಬಲಿಪೀಠಗಳನೊಡೆದು
ಪ್ರತಿಮೆಗಳ ಕಿತ್ತೆಸೆದು, ಪೂಜೆ ಸಾಮಗ್ರಿಗಳ-
ನಿಟ್ಟಾಡಿ, ಹೊಲೆಗೆಯ್ದರೆಲ್ಲಮನ್. ಮಾಡಿದೀ

ಪಾಪಂಗಳುಣ್ಣದೇ ಪೋಕುಮೆ? ಉಣುತೀರ್ಪರ್
ಇನ್ನುಮುಣುವರ್, ಕಟ್ಟಿದಾ ಬುತ್ತಿ ಸಮೆಯರೆಯೆ."

ಅಷ್ಟಲ್ಲದೆ, ಪಾರಸಿಕರು ಮತ್ತೆ ಹೆಲಾಸಿನ ಮೇಲೆ ದಾಳಿ ಮಾಡಿದ್ದಾದರೆ ಡೋರಿಕರ ಕೈಯೀಟಿಗಳ ಇರಿತಕ್ಕೆ ಈಡಾಗುವವರ ಹೆಣಗಳು ಮರೆಯಲಾಗದ ಪಾಠವನ್ನು ಹೇಳಿಕೊಡುತ್ತವೆ– "ಆಳ್ಗಲ್ಲ, ಮರ್ತ್ಯರಿಗೆ, ಹೆಮ್ಮೆ ಬಗೆ, ಎಚ್ಚರಿಕೆ ಎಂದು." ದೇವತೆಗಳಿಗೆ ಅಧೀನರಾಗಿ, ಅವರು ಕೊಟ್ಟದ್ದರಿಂದ ತೃಪ್ತರಾಗಿ, ಅವರಿಗೆ ಇದಿರು ನಿಲ್ಲದಿರುವುದೇ ವಿವೇಕವಲ್ಲದೆ ಧರ್ಮ ಎಂಬ ಮಾತನ್ನು ಇಡೀ ನಾಟಕದ ಆಶಯವಾಗಿ ಈಸ್ಕಿಲಸ್ ದುರ್ಯವುಷನ ಬಾಯಿಂದ ಹೇಳಿಸುತ್ತಾನೆ.

"ಅವೊನುಂ ಹೆಬ್ಬಯಕೆಗಲವತ್ತು, ಮಿತಿ ಮೀರಿ,
ಕಯ್ಗೆ ಬಾರದ ಗುರಿಗೆ ಕಟ್ಟೊಲ್ಮೆಯನ್ ತೆತ್ತು,
ಕಳೆಯಬಾರದು ದೇವರಿಶ್ಶೊಂದು ಭಾಗ್ಯವನ್.
ಗಗನಕ್ಕೆ ನೆಗೆದಡರುವರು ಹಮ್ಮುಗಳ ಮೆಟ್ಟಿ ತಕ್ಕ ಕಾಲದೆ
ತಕ್ಕ ಕಾಲದೆ ಕೊಬ್ಬನಿಳಿಸದಿರನ್ ಆ ಸ್ಯೂಸ್..."

ದುರ್ಯವುಷನ ಮಾತುಗಳು ಪಾರಸಿಕರನ್ನು ಎರಗಿದ ಕೇಡನ್ನು ಅರ್ಥವಿಸಿ ಹೇಳುತ್ತವೆ. ಈ ಮಾತುಗಳನ್ನಲ್ಲದೆ ಈಗ ಬಂದ ಕೇಡು ಕೊನೆಯದಲ್ಲ ಎಂಬ ಮುಂದಿನ ಅನಿಷ್ಟ ಸೂಚನೆಯನ್ನು ಕೇಳಿದ ಮೇಳದವರು ಹಿಂದಿನ ಸಾಮ್ರಾಜ್ಯ ವೈಭವವನ್ನು ನೆನೆದುಕೊಳ್ಳುವಂತಾಗುತ್ತದೆ. ದುರ್ಯವುಷನ ಆಳುತ್ತಿದ್ದಾಗ ರಾಜ್ಯ ವಿಸ್ತರಿಸಿತು. ಜನರು ನೆಮ್ಮದಿಯಿಂದಿದ್ದರು. ದೊರೆ ದೇವಸಮನಾಗಿದ್ದ "ಆಳಿದನು ಧರ್ಮದಲಿ, ನ್ಯಾಯದಲಿ, ನೀತಿಯಲಿ/ಬಾಳಿದರು ಪ್ರಜೆಯೆಲ್ಲ ಭಕ್ತಿಯಲಿ, ಭೀತಿಯಲಿ..." ಆದರೆ ಈಗ.

"ಇನ್ನೆಲ್ಲ ಮಾಯವಾಯ್ತು, ಹೆಬ್ಬಯಕೆ ಮಿಂಚಿ ಹೋಯ್ತು,
ಏರುಗಡಲಿಳಿತವಾಯ್ತು, ಮತ್ತೆ ತಲೆಯೆತ್ತದಾಯ್ತು."

ಇದಾದ ನಂತರ ನಾಟಕ ಕ್ರಿಯೆಯಲ್ಲಿ ಅಳಿದುಳಿದ ಕುತೂಹಲ ಕ್ಷಯಾರ್ಷನಿಗೆ ಸಂಬಂಧಿಸಿದ್ದು. ಕೊನೆಯ ಹಂತದಲ್ಲಿ ಚಿಂದಿಬಟ್ಟೆಗಳನ್ನು ತೊಟ್ಟ ಚಕ್ರವರ್ತಿ ಪ್ರವೇಶಿಸಿದಾಗ ಸೋಲಿನ ದುರಂತ ಪೂರ್ತಿಯಾಗಿ ನೋಟಕನ ಕಣ್ಣು ಹೃದಯ ಗಳೆರಡನ್ನೂ ತಟ್ಟುತ್ತದೆ. ದುಃಖವನ್ನು ತಡೆಯಲಾಗದ ಮೇಳದವರು ನಾಡಿಗುಂಟಾದ ನಷ್ಟವನ್ನೆ ನೆನೆನೆನೆಯುತ್ತ ಮತ್ತೆ ಮತ್ತೆ ಆದ ಸೋಲುಸಾವುಗಳ ವಿವರಗಳನ್ನು ಕೇಳುತ್ತಾರೆ. "ಇರಿಯಲ್ ಪೋದಾ ಪಡೆಯೇನಾಯ್ತಯ್/ಪರ್ಸದ ಪೂಜ್ಯತೆ ಬಯಲಾಯ್ತೆ?" ಎಂದು ಅರ್ಧ ದುಃಖದಲ್ಲಿ, ಅರ್ಧ ಅಸಹಾನುಭೂತಿಯಲ್ಲಿ ಕೇಳಿದ್ದಕ್ಕೆ ಆತ "ನಾನೇ ನಾನೇ ರಾಜ್ಯವಳಿದೋನ್/ಲಜ್ಜೆ ಕುಲಕ್ಕೆ, ನಾಡಿಗೆ ಕೊಡಲಿ/ಆಳಿ ನನಗಾಗಿ ಅರ್ಹತೆಗೆಟ್ಟೋನ್"

ಎಂದು ಪರಿತಪಿಸುತ್ತಾನೆ. ಕೊನೆಯವರೆಗೆ ಈ ಪರಿತಾಪವೇ ಬಗೆಬಗೆಯಾಗಿ ಇಬ್ಬರಲ್ಲಿಯೂ ಬಾಯ್ಬಿಡುತ್ತದೆ. ತನ್ನ ನಾಡಿಗೇ ತಾನು ಬೇಡದವನೆಂಬ ದುಃಖಭರದಲ್ಲಿ ಕಾಲೆಳೆಯುತ್ತಿದ್ದ ಕ್ಷಯಾರ್ಷನನ್ನು ತಾಯಿಯ ಕಡೆಗೆ ಮೇಳದವರು ಕರೆದೊಯ್ಯುತ್ತಿದ್ದಂತೆ ನಾಟಕ ಮುಗಿಯುತ್ತದೆ. ಮೇಳದವರ ಗೀತದ ಕೊನೆಯ ಭಾಗದಲ್ಲಿ "ದೈವ ಕಾವ ಧರ್ಮವೇ" ಸಾಮ್ರಾಜ್ಯವನ್ನು ಕಾಯಬೇಕು ಎಂದು ನಾಟಕದ ಆಶಯವನ್ನು ಸಂಕ್ಷೇಪವಾಗಿ ಶ್ರೀಕಂಠಯ್ಯನವರು ಸೇರಿಸಿ ಒತ್ತಿ ಹೇಳುತ್ತಾರೆ.

ಸೋತು ನಿರ್ವಿಣ್ಣನಾಗಿ, ಶೋಕತಪ್ತನಾಗಿ, ಗತಿಗೆಟ್ಟವನಾಗಿ ನಾಟಕದ ಕೊನೆಯಲ್ಲಿ ಮೊದಲ ಬಾರಿಗೆ ಯುದ್ಧರಂಗದಿಂದ ಹಿಂದಿರುಗಿ ಬಂದು ಪರಿತಪಿಸುವ ಕ್ಷಯಾರ್ಷನನ್ನು ಈ ದುರಂತ ನಾಟಕದ ನಾಯಕನೆನ್ನಬಹುದೆ ಎಂದು ಕೇಳುವಂತಾಗುತ್ತದೆ. ಆತ ಈ ನಾಟಕದ ನಾಯಕನೆ ಎಂಬ ಪ್ರಶ್ನೆಯನ್ನೇ ಕೇಳಬಹುದು. ಆತ ಶೂರನಾಗಿದ್ದಿರ ಬಹುದು. ಆದರೆ ಅದು ನಾಟಕದಲ್ಲಿಯಾಗಲಿ (ದೂತ ಕೊಡುವ ಯುದ್ಧದ ವಿವರಣೆಯಲ್ಲಾಗಲಿ) ಕಾಣಸಿಗುವುದಿಲ್ಲ. ಶೌರ್ಯಕ್ಕಿಂತ ಹೆಚ್ಚಾಗಿ, ಮಹತ್ವಾಕಾಂಕ್ಷೆ, ದುಡುಕು, ಆತನಲ್ಲಿ ಎದ್ದುಕಾಣುತ್ತದೆ. ಹಿಂದಿನವರು ಸಾಮ್ರಾಜ್ಯವನ್ನು ಕಟ್ಟಿದರು, ಸಂಪತ್ತನ್ನು ತಂದರು, ನೀನೇನು ಮಾಡಿದೆ, ಎಂಬ ಕೆಲವರ ಮೂದಲಿಕೆಯ ಮಾತು ಆತನ ದುಡುಕಿಗೊಂದು ಪ್ರೇರಣೆಯಾಗುತ್ತದೆ. ಮಿತಿಯರಿಯದ ಆತನ ಕೊಬ್ಬು ದೇವತೆಗಳ ಕೋಪವನ್ನು ಕೆರಳಿಸುತ್ತದೆ. ನಾಟಕದಲ್ಲಿ ನಾಯಕಪಾತ್ರಕ್ಕೆ ಅರ್ಹತೆಯನ್ನು ತಂದುಕೊಡುವ ಯಾವ ವಿಶೇಷ ಯೋಗ್ಯತೆಯನ್ನೂ ಆತ ತೋರಿಸುವುದಿಲ್ಲ. ಮಾತ್ರವಲ್ಲ, ಸೋಲು ಬಂದಾಗ, ಅದನ್ನು ಎದುರಿಸುವ ಚೈತನ್ಯ ಎಷ್ಟು ಮಾತ್ರವೂ ಆತನಲ್ಲಿ ಇಲ್ಲವೆನ್ನುವುದನ್ನು ಆತ್ಮಾನುಕಂಪ ತುಂಬಿದ ಆತನ ಪರಿತಾಪದ ರೋಧನ ಒತ್ತಿ ಒತ್ತಿ ಹೇಳುತ್ತದೆ. ಸೋತರೂ ದೊಡ್ಡವನಾಗಿ ಕಾಣುವ ದುರಂತನಾಯಕನಲ್ಲಿಯ ಹಿರಿಯ ಸತ್ವದ ಯಾವ ಲಕ್ಷಣವೂ ಆತನಲ್ಲಿ ಕಾಣಸಿಗುವುದಿಲ್ಲ. ದುರ್ಯವುಷನ ಮಗನಾಗಿದ್ದರಿಂದ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿದ್ದ ಆತನಿಗೆ ಸೋಲಿಗೆ ಮೊದಲು ಸಲ್ಲುತ್ತಿದ್ದ ಗೌರವ ಆತನ ಸ್ಥಾನಕ್ಕೆ ಸೇರಿದ್ದೇ ಎಂದುಕೊಳ್ಳುವಂತಾಗುತ್ತದೆ. ಸೋಲಿನ ನಂತರವಂತೂ ಆತನ ತಂದೆತಾಯಿಗಳ ಹೊರತು ಯಾರೂ ಆತನ ಬಗೆಯಲ್ಲಿ ಹೆಚ್ಚು ಸಹಾನುಭೂತಿಯನ್ನು ತೋರಿಸಿದಂತೆ ಕಾಣುವುದಿಲ್ಲ. ಮೇಳದವರು ಚುಚ್ಚಿ ಚುಚ್ಚಿ ಪ್ರಶ್ನೆಗಳನ್ನು ಕೇಳುತ್ತಾರೆ. ತಾಯಿ ಹುತೌಷ ಆತನನ್ನು ಎದುರುಗೊಳ್ಳುವುದಕ್ಕೂ ಬರುವುದಿಲ್ಲ.

ಹಾಗಾದರೆ ನಾಟಕದಲ್ಲಿ ಕ್ಷಯಾರ್ಷನ ಸ್ಥಾನ ಯಾವುದು? ಎಂಬ ಪ್ರಶ್ನೆಗೆ ಒಂದೇ ಉತ್ತರ ಸಾಧ್ಯ. ಈಸ್ಕಿಲಸ್ ಇಲ್ಲಿ ಚಿತ್ರಿಸಬೇಕೆಂದದ್ದು ಕ್ಷಯಾರ್ಷನ ದುರಂತವನ್ನಲ್ಲ. ಆತ ಚಿತ್ರಿಸಿರುವುದು ಪಾರಸಿಕರ ಸಾಮ್ರಾಜ್ಯದ ದುರಂತವನ್ನು, ಆ ದುರಂತಕ್ಕೆ ಕ್ಷಯಾರ್ಷ

ಒಂದು ನಿಮಿತ್ತಮಾತ್ರವಾಗುತ್ತಾನೆ. ಅವನ ದುಡುಕು ಹೆಮ್ಮೆ ಆತನನ್ನು ಗ್ರೀಕರೊಡನೆ ಯುದ್ಧಕ್ಕೆ ತಳ್ಳುತ್ತದೆ. ಸೈನ್ಯವನ್ನು ನಡೆಸಿಕೊಂಡು ಹೋಗುತ್ತಾನೆ. ಆದರೆ ನಿಜವಾದ ನಾಯಕತ್ವವನ್ನು ವಹಿಸಿ ಅದನ್ನು ವಿಜಯದತ್ತ ನಡೆಸಬಲ್ಲ ನಾಯಕಸತ್ವ ಆತನಲ್ಲಿರಲಿಲ್ಲವಾದ್ದರಿಂದಲೇ ಗ್ರೀಕರ ಹೂಟಕ್ಕೆ ಬಲಿಯಾಗುತ್ತಾನೆ; ಸೈನ್ಯವನ್ನು ಅಪಾಯಕ್ಕೀಡು ಮಾಡಿ ಸೋಲನ್ನು ತಂದುಕೊಳ್ಳುತ್ತಾನೆ. ಆತನ ಮೂಲಕ ಪಾರಸಿಕರ ಸಾಮ್ರಾಜ್ಯ ವಿನಾಶಕ್ಕೀಡಾಗುತ್ತದೆ. ಸೋಲಿನ ವರ್ತಮಾನ ಬಂದ ನಂತರ ಮೇಳದವರು ಶೋಕಿಸುವುದು ಕಣ್ಮರೆಯಾದ ನಾಡವೀರರಿಗಾಗಿ, ಅಳಿದುಹೋದ ಸಾಮ್ರಾಜ್ಯಕ್ಕಾಗಿ, ಕ್ಷಯಾರ್ಷನಿಗಾಗಿ ಯಾರೂ ದುಃಖಿಸುವುದಿಲ್ಲ. "ಆ ಪೋದ ವೀರರನ್ ನೆನೆನೆನೆದು ಪಾಡುವೆನು ಕಟ್ಟಳಲ ಕೂರಳಲ ಪಾಡನ್" ಎಂದಲ್ಲದೆ "ಪರ್ಸಕಿನ್ನಾರ್ ಪೂಜೆ ಸಲಿಪರು? ಪೆರ್ಮೆ ಮುಗಿಯಿತ್ತು" ಎಂದು ಮೇಳನಾಯಕ ಪರಿತಪಿಸುತ್ತಾನೆ. ಈ ಮೇಳದವರು ನಾಡಿನ ಹಿರಿಯರು, ಮಂತ್ರಿಗಳು. ಮೊದಲು ಹೋದ ಸೈನ್ಯಕ್ಕಾಗಿ ಭಯ ಆತಂಕಗಳನ್ನು ಅನುಭವಿಸುವವರು, ಸೋಲನ್ನು ತಿಳಿದಾಗ ದುಃಖಪಟ್ಟು ಸಾಮ್ರಾಜ್ಯದ ಗತವೈಭವವನ್ನು ನೆನೆದುಕೊಳ್ಳುವರು, ಮುಂದೆ ಗತಿ ಏನು ಎಂದು ಚಿಂತೆಗೊಳಗಾಗಿ ದುರ್ಯವೃಷನ ಸಲಹೆಯನ್ನು ಪಡೆಯಬಯಸಿ ಆತನನ್ನು ಪ್ರೇತರಾಜ್ಯದಿಂದ ಆಹ್ವಾನಿಸಿದವರು, ಮೊದಲಿನಿಂದ ಕೊನೆಯವರೆಗೆ ರಂಗಸ್ಥಳದ ಮೇಲಿದ್ದ ಮೇಳದವರೇ ಸಾಮ್ರಾಜ್ಯದ ಪ್ರತಿನಿಧಿಗಳಾಗಿ ಕಾಣಿಸಿಕೊಳ್ಳುತ್ತಾರೆ. ಮಾನಸಿಕವಾಗಿ ಅವರೊಡನೆ ಹೊಂದಿಕೊಂಡಿದ್ದ ಹುತೌಷಳಿಗಾದರೂ ಮೊದಲ ಯೋಚನೆ ಮಗನಿಗಿಂತ ಹೆಚ್ಚಾಗಿ ಸಾಮ್ರಾಜ್ಯದ ವೈಭವದ್ದು. ಆಕೆಗೆ ಮಗನ ದುಡುಕು ಗೊತ್ತಿದೆ. "ಬಾಳದು ಆಳಿಲ್ಲದ ಸಿರಿ" ಎನ್ನುವುದನ್ನೂ ಆಕೆ ತಿಳಿದಿದ್ದಾಳೆ. ಹೀಗೆ ಎಲ್ಲ ಕಡೆಯಿಂದಲೂ ಒತ್ತು ಬೀಳುವುದು ಪಾರಸಿಕರ ಸಾಮ್ರಾಜ್ಯ ವೈಭವದ ಮೇಲೆ. ಅದು ಅಳಿದುಹೋಯಿತು ಎನ್ನುವುದು ಇಲ್ಲಿಯ ದುರಂತ – ಒಂದು ವ್ಯಕ್ತಿಯ ಸ್ವಭಾವ ದೋಷದಿಂದಾಗಿ ಒಂದು ಸಾಮ್ರಾಜ್ಯವೇ ಅಳಿಯಿತು ಎನ್ನುವ ದುರಂತ. ಇಲ್ಲಿರುವುದು ಪಾರಸಿಕರ ಕಥೆ. ಅವರ ಸಾಮ್ರಾಜ್ಯದ ಕಥೆ, ಕ್ಷಯಾರ್ಷನದಲ್ಲ, ಎನ್ನುವುದನ್ನು ನಾಟಕದ ಹೆಸರೇ ತಿಳಿಸುತ್ತದೆ.

ಸಾಲ್‌ಮಿಸ್‌ನಲ್ಲಿಯ ವಿಜಯ ಗ್ರೀಕರಿಗೆ ಹೆಮ್ಮೆ ತರುವಂಥದಾಗಿದ್ದರೂ ಗ್ರೀಕನೇ ಆಗಿದ್ದ ಆ ಯುದ್ಧದಲ್ಲಿ ಭಾಗವನ್ನೂ ವಹಿಸಿದ್ದ ಈಸ್ಕಿಲಸ್ ಹೆಮ್ಮೆಗೆ ಅವಕಾಶಕೊಡದ ರೀತಿಯಲ್ಲಿ ಯುದ್ಧವನ್ನು ಪಾರಸಿಕರ ದೃಷ್ಟಿಯಿಂದ ಕಂಡು ನಾಟಕವನ್ನು ಬರೆದಿದ್ದಾನೆ. ದುರಂತ ಪಾರಸಿಕರ ದೃಷ್ಟಿಯಿಂದ. ಆದ್ದರಿಂದ ಯುದ್ಧದಲ್ಲಿಯ ಸೋಲನ್ನು ಅವರ ದೃಷ್ಟಿಯಿಂದ ಕಂಡು ನಾಟಕವನ್ನು ಬರೆಯಬೇಕಾದದ್ದು ಅನಿವಾರ್ಯವೇ. ಆದರೆ ಹಾಗೆ ಮಾಡುವುದರಲ್ಲಿ ಸಾಧಿಸಬೇಕೆಂಬ ಪರಿಣಾಮವನ್ನು ಹೆಚ್ಚು ಕಲಾತ್ಮಕವಾಗಿ ಸಾಧಿಸಬಹುದೆನ್ನುವ ಯೋಚನೆ ಮತ್ತೂ ದೊಡ್ಡದಾಗಿ ಕಂಡಿತು. ಸೋತವರು ಮಾತ್ರವಲ್ಲದೆ ಗೆದ್ದವರೂ ಅರಿತಿರಬೇಕಾದ ಪಾಠ ಅದು. ಸೊಕ್ಕು ಸಲ್ಲದು; ದುಡುಕು

ಸಲ್ಲದು. "ಆಳ್ಗಲ್ಲ, ಮರ್ತ್ಯರಿಗೆ ಹೆಮ್ಮೆ ಬಗೆ" ಎನ್ನುವುದೇ ಆ ಪಾಠ. ತನ್ನ ನಾಡಿನ ವಿಜಯವನ್ನೇ ನಾಟಕಕ್ಕೆ ವಿಷಯವನ್ನಾಗಿಸಿಕೊಂಡಿದ್ದರೆ ತಿಳಿಸಬೇಕೆಂದ ಈ ಧರ್ಮತತ್ತ್ವವನ್ನು ತಿಳಿಸುವುದು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ಸೋತವರ ಸೋಲಿನ ಕಥೆಯಲ್ಲಿ ಗೆದ್ದವರ ಗೆಲವು ಪರೋಕ್ಷವಾಗಿ ವ್ಯಕ್ತವಾಗಿಯೇ ಆಗುತ್ತದೆ ಎನ್ನುವ ಸೂಕ್ಷ್ಮವನ್ನು ತಿಳಿದಿದ್ದ ಈಸ್ಕಿಲಸ್ ತನ್ನ ನಾಟಕದಲ್ಲಿ ಸಂದರ್ಭಸಿಕ್ಕಾಗ ಸೋತವರ ಬಾಯಿಂದಲೇ ಗೆದ್ದವರ ಪ್ರಶಂಸೆಯನ್ನು ಒಂದಿಲ್ಲೊಂದು ರೀತಿಯಲ್ಲಿ ಹೇಳಿಸಿ ತನ್ನ ನಾಡಿನವರ ಗುಣಗೌರವವನ್ನು ಹೆಚ್ಚು ಕಲಾತ್ಮಕವಾಗಿ ವ್ಯಕ್ತಪಡಿಸಿದ್ದಾನೆ. ಆದರೆ ಆತನ ದೃಷ್ಟಿಯಲ್ಲಿ ಅದು ಮುಖ್ಯವಲ್ಲದ ವಿಚಾರ. ಮುಖ್ಯ ವಿಚಾರ ದುರಂತದ ಮೂಲಕ ಮನಗಾಣಬೇಕಾದ ಧರ್ಮತತ್ತ್ವ ತಪ್ಪಿಗೆ ಶಿಕ್ಷೆ ತಪ್ಪಿದ್ದಲ್ಲ. ವಿಧಿಯನ್ನು ಮೀರಿದವರಿಲ್ಲ, ಎಂಬ ಎರಡು ವಿಚಾರಗಳನ್ನು ಆಧರಿಸಿಯೇ ಗ್ರೀಕ್ ರುದ್ರ ನಾಟಕ ಪರಂಪರೆ ಬೆಳೆದಿದೆ. ಈ ಎರಡೂ ವಿಚಾರಗಳನ್ನು ಈ ನಾಟಕದಲ್ಲಿ ಕಾಣುತ್ತೇವೆ. ಕ್ಷಯಾರ್ಷ ತನ್ನ ಸಾಮ್ರಾಜ್ಯವನ್ನು ಕಳೆದುಕೊಂಡ ಎನ್ನುವುದಕ್ಕಿಂತ ಅವನ ಮೂಲಕ ಒಂದು ಮಹಾಸಾಮ್ರಾಜ್ಯವೇ ಅಳಿಯಿತು ಎನ್ನುವುದು ಮತ್ತೂ ಹೆಚ್ಚಿನ ಅರ್ಥವ್ಯಾಪ್ತಿಯನ್ನುಳ್ಳ ದುರಂತವಾಗುತ್ತದೆ. "ಮಿತಿಯರಿದು ನೆಗಳ್ವರ್ಗೆ ದೇವರ್ಕಳ್ ಒಸೆದಪರ್, ಮುರಿದಪರ್ ಮಿಕ್ಕರನ್" ಎಂದು "ಅಶ್ವತ್ಥಾಮನ್" ನಾಟಕದಲ್ಲಿ ರುದ್ರ ಹೇಳಿದ ಮಾತು ನೆನಪಿಗೆ ಬರುತ್ತದೆ. "ದೈವದ ಮುಂದೆ ನಾವಲ್ತು" ಎಂದು "ಗದಾಯುದ್ಧ"ದಲ್ಲಿ ದುರ್ಯೋಧನ ಹೇಳಿದ ಕೊನೆಯ ಮಾತು ನೆನಪಾಗುತ್ತದೆ. ಈ ನಾಟಕವಾದರೂ ತತ್ತ್ವಮನಾದ ಜೀವನ ದರ್ಶನವನ್ನು ಒಳಗೊಂಡಿದೆ ಎಂಬ ಕಾರಣಕ್ಕಾಗಿಯೇ ಶ್ರೀಕಂಠಯ್ಯನವರು ಇದನ್ನು ಅನುವಾದಕ್ಕಾಗಿ ಆಯ್ದುಕೊಂಡಿರುವುದು ಸಾಧ್ಯವಿದೆ.

ಒಟ್ಟು ನಾಟಕದ ಪರಿಣಾಮದ ದೃಷ್ಟಿಯಿಂದ ನೋಡಿದಾಗ ಈ ನಾಟಕದಲ್ಲಿಯ ಮೇಳಗೀತಗಳಿಗೆ ಒಂದು ಪ್ರಧಾನವಾದ ಸ್ಥಾನವಿದೆ ಎನ್ನುವುದು ಸಹಜವಾಗಿಯೇ ಗಮನಿಸಬಹುದಾದ ಅಂಶವಾಗಿದೆ. ಮೇಳದವರು ಮೊದಲಿನಿಂದ ಕೊನೆಯವರೆಗೆ ರಂಗಸ್ಥಳದ ಮೇಲಿರುತ್ತಾರೆ ಎನ್ನುವುದು ಒಂದು ವಿಶೇಷ. ಮೊದಲು ಬರೀ ಮೇಳಗೀತವೇ ಆಗಿದ್ದು ನಾಟಕದ ರೂಪ[illegible]ನ್ನು ತಳೆದದ್ದು ಮೇಳನಾಯಕನನ್ನು ಬೇರ್ಪಡಿಸಿ ಆತನನ್ನು ಹೊಸದಾಗಿ ಸೇರಿ[illegible]ದ ಇನ್ನೊಂದು ಪಾತ್ರದೊಡನೆ ಸಂಭಾಷಣೆಯಲ್ಲಿ ತೊಡಗಿಸಿದ್ದರಿಂದ. ಈ ಬದಲಾವಣೆಯನ್ನು ಮಾಡಿದವ ಈಸ್ಕಿಲಸ್ ಎನ್ನುವುದನ್ನು ಮತ್ತು ಈ ನಾಟಕ ಆತನ ಮೊದಲ ರಚನೆಗಳಲ್ಲಿಯ ಒಂದು ಎನ್ನುವುದನ್ನು ನೆನೆದಾಗ ಈ ನಾಟಕ ಗ್ರೀಕ್ ರುದ್ರ[illegible]ಟಕದ ಪ್ರಾರಂಭದ ಅವಸ್ಥೆಯನ್ನು ಕೆಲಮಟ್ಟಿಗೆ ಸೂಚಿಸುವಂಥದಾಗಿದೆ ಎನ್ನುವುದನ್ನು ತಿಳಿ[illegible]ಬಹುದು. ದುರ್ಯವೃಷನನ್ನು ಸಮಾಧಿಯಿಂದ ಆಹ್ವಾನಿಸುವ ಒಂದು ಸನ್ನಿವೇಶ[illegible]ಲ್ಲಿಯಲ್ಲದೆ ಮೇಳದವರು ನಾಟಕಕ್ರಿಯೆಯ ಮುಂದುವರಿಕೆಯಲ್ಲಿ ನೇರವಾಗಿ ಭಾಗವಹಿಸುವುದಿಲ್ಲ. ವಹಿಸುವುದಕ್ಕೆ

ಅವಕಾಶವೂ ಇಲ್ಲ. ಕ್ರಿಯೆಯಿಂದ ಉದ್ದಕ್ಕೂ ದೂರವಾಗಿಯೋ ನಿಲ್ಲುತ್ತಾರೆ. ಆದರೆ ಪಾರಸಿಕರ ಜನಾಂಗವನ್ನು ಪ್ರತಿನಿಧಿಸುವ ಒಂದು ಸಮುದಾಯ ಪಾತ್ರವಾಗಿ ಹಿಂದಿನದರ ಬಗೆಯಲ್ಲಿ ಅಭಿಮಾನವನ್ನು, ಇಂದಿನದರ ಬಗೆಯಲ್ಲಿ ಶೋಕಪರಿತಾಪಗಳನ್ನು, ಮುಂದಿನದರ ಬಗೆಯಲ್ಲಿ ಆತಂಕವನ್ನು ವ್ಯಕ್ತಪಡಿಸುವ ಕೆಲಸವನ್ನು ಮಾಡುತ್ತಾರೆ. ಇಡೀ ನಾಟಕದಲ್ಲಿಯ ಅರ್ಧದಷ್ಟು ಪದ್ಯಪಂಕ್ತಿಗಳನ್ನು ಮೇಳದವರೇ ಹೇಳುತ್ತಾರೆ. ಅದರಲ್ಲಿಯ ಅರ್ಧದಷ್ಟು ಆಯಾಯ ಸನ್ನಿವೇಶಗಳಿಗೆ ತಕ್ಕಂತೆ ಹಾಡುಗಳಾಗಿ, ಭಾವಗೀತೆಗಳಾಗಿ, ಹೊಮ್ಮುತ್ತವೆ. ಮೇಳದವರು ಹಾಡುವ ಈ ಗೀತಭಾಗ, ಅದರಲ್ಲಿಯೂ ವಿಶೇಷವಾಗಿ ಅವರು ಎರಡು ಭಾಗವಾಗಿ ನಿಂತು ಒಂದೊಂದು ಭಾವದ ಬೇರೆ ಬೇರೆ ಪರಿಗಳನ್ನು ಹಾಡುಗಳಾಗಿ ಹೇಳಿಕೊಳ್ಳುವ ಭಾಗ, ನಾಟಕಕ್ರಿಯೆಯ ಅಭಾವವನ್ನು ತುಂಬಿಕೊಳ್ಳುವುದರಲ್ಲಿ ಸಹಾಯಕವಾಗುತ್ತದೆ. ಗೀತದ ಮೂಲಕ ನೋಟಕರ ಭಾವಾನುಭವವನ್ನು ವಿಸ್ತರಿಸಿ ಆಳವಾಗಿಸುತ್ತದೆ. ಕ್ರಿಯೆಯ ಅಭಾವವನ್ನು ಮರೆಯುವಂತೆ ಮಾಡುತ್ತದೆ. ಈ ಹಾಡುಗಳಲ್ಲಿಯ ಪದಯೋಜನೆ, ಭಾವದ ಮಿಡಿತಕ್ಕೆ ಸಂವಾದಿಯಾಗಿ ಅದು ನುಡಿಯುವ ಬಗೆ ದ್ರುತವಾಗಿಯೋ ವಿಲಂಬಿತವಾಗಿಯೋ ಅದು ಮುನ್ನಡೆಯುವ ರೀತಿ, ಭಾವಕ್ಕೆ ಪೋಷಕವಾಗಿ ಕೆಲಸಮಾಡುತ್ತದೆ. ತೀವ್ರತೆಯನ್ನು ಹೆಚ್ಚಿಸುತ್ತದೆ. ಇಲ್ಲಿಯ ಅನೇಕ ಭಾವಗೀತೆಗಳು ಅನುವಾದಗಳೆಂದು ಗುರುತಿಸಲಾಗದ ಮಟ್ಟಿಗೆ ಸ್ವಂತಿಕೆಯನ್ನು ಸಾಧಿಸಿವೆ. ಗದ್ಯ ಮಾತ್ರದಿಂದ ಸಾಧಿಸಲಾಗದ, ಸನ್ನಿವೇಶದ ರೂಪಣದಿಂದ ಮಾತ್ರ ಸಿದ್ಧಿಸದ ಬೇರೊಂದು ಬಗೆಯ ಭಾವಾವರಣವನ್ನು ಗೀತಭಾಗ ನಾಟಕದಲ್ಲಿ ಸೃಷ್ಟಿಸಬಲ್ಲದು, ನಾಟಕದ ಅನುಭವಕ್ಕೆ ಕಾವ್ಯದ ಶ್ರೀಮಂತಿಕೆಯನ್ನು ತಂದುಕೊಡಬಲ್ಲದು ಎನ್ನುವುದಕ್ಕೆ ಈ ನಾಟಕದಲ್ಲಿ ಮೇಳಗೀತಗಳು ಮಾಡುವ ಕೆಲಸ ಒಂದು ಒಳ್ಳೆಯ ನಿದರ್ಶನವಾಗಬಲ್ಲದು. ಶ್ರೀಕಂಠಯ್ಯನವರಿಗೆ ಈ ನಾಟಕವನ್ನು ಎತ್ತಿಕೊಳ್ಳುವುದಕ್ಕೆ ಇದೂ ಒಂದು ಆಕರ್ಷಣೆಯಾಗಿರಬಹುದು. ಮೇಳಗಾನ ಗ್ರೀಕ್ ನಾಟಕ ಪರಂಪರೆಯ ಒಂದು ವಿಶಿಷ್ಟವಾದ ಸಂಪ್ರದಾಯ. "ಅಶ್ವತ್ಥಾಮನ್" ನಾಟಕದ ಕ್ರಿಯೆಯ ವಿನ್ಯಾಸದಲ್ಲಿ ಅದಕ್ಕೆ ಈಗ ಒದಗಿಸಿದ್ದಕ್ಕಿಂತ ಹೆಚ್ಚಿನ ಸ್ಥಾನವನ್ನು ಒದಗಿಸುವುದು ಸಾಧ್ಯವಿರಲಿಲ್ಲ. ಹೆಚ್ಚಿನ ಸ್ಥಾನವಿರಬಹುದಾದರೆ ಅದರ ಮೂಲಕ ಕ್ರಿಯೆಗೆ ಹೊರತಾಗಿ ಬೇರೊಂದು ಬಗೆಯ ಪರಿಣಾಮವನ್ನು ಸಾಧಿಸಬಹುದು ಎನ್ನುವುದನ್ನು ಈ ನಾಟಕದಲ್ಲಿಯ ಮೇಳ ತೋರಿಸಿಕೊಡುತ್ತದೆ.

❐

೧೩. ಬಿ.ಎಂ.ಶ್ರೀ. ಅವರ ಸಾಹಿತ್ಯ ಚರಿತ್ರೆಯ ವಿಚಾರಗಳು

■ *ಡಾ. ಎಂ.ಎಂ. ಕಲಬುರ್ಗಿ*

'ರಾಜವಿಟಚೋರ ಚರಿತ್ರೆ'ಗಳನ್ನು ಬರೆಯುತ್ತ ಬಂದ ಪ್ರಾಚೀನ ಕನ್ನಡಿಗರಲ್ಲಿ 'ಕವಿಚರಿತ್ರೆ' ಬರೆಯುವ ಹವ್ಯಾಸ ಬೆಳೆದು ಬರಲಿಲ್ಲ. ಇಂದು ನಾವು ಕವಿಗಳೆಂದು ಪರಿಗಣಿಸುವ ಬಸವಣ್ಣ, ಪ್ರಭುದೇವರಂಥವರನ್ನು ಅವರು ಕಾವ್ಯಾರಂಭದ ಕವಿಸ್ತುತಿಪ್ರಸಂಗದಲ್ಲಿ ತಪ್ಪಿಯೂ ಹೆಸರಿಸಲಿಲ್ಲ. ಶುದ್ಧಕವಿಗಳಾದ ಹರಿಹರನನ್ನು ಕುರಿತು ರಾಘವಾಂಕ, ರಾಘವಾಂಕನನ್ನು ಕುರಿತು ಸಿದ್ಧನಂಜೇಶ ಚರಿತ್ರೆ ಬರೆದರೂ ಅವರನ್ನು ಮತೀಯ ದೃಷ್ಟಿಯಿಂದ ನೋಡಿದರೇ ಹೊರತು ಕವಿಗಳೆಂದು ಗುರುತಿಸಲಿಲ್ಲ. ವ್ಯಕ್ತಿಗತ ಕವಿಚರಿತ್ರೆಯ ಗತಿಯೇ ಹೀಗಿರುವಾಗ ನಮ್ಮ ಪ್ರಾಚೀನರಿಂದ ಇತಿಹಾಸಕ್ರಮದಲ್ಲಿ ಕವಿಗಳ ಚರಿತ್ರೆಯನ್ನು, ಅದಕ್ಕಿಂತ ಸಾಹಿತ್ಯ ವಾಹಿನಿಯ ಚರಿತ್ರೆಯನ್ನು ಬಯಸುವುದು ವ್ಯರ್ಥನಿರೀಕ್ಷೆ. ಹೀಗಾಗಿ ಕನ್ನಡದಲ್ಲಿ ಶುದ್ಧಕವಿಚರಿತ್ರೆ ಮತ್ತು ಶುದ್ಧಸಾಹಿತ್ಯ ಚರಿತ್ರೆಗಳ ಬರವಣಿಗೆಯೆನ್ನುವುದು ಆಂಗ್ಲರಿಂದ ಆಕಾರ ಪಡೆದ ಇತ್ತೀಚಿನ ಹೊಸ ಪ್ರಕಾರವಾಗಿದೆ.

ವಿಲ್ಸನ್, ವೀಗಲ್, ಕಿಟೆಲ್, ಬಿ.ಎಲ್.ರೈಸ್, ಕೆ.ಬಿ. ಪಾಠಕ, ಮೊದಲಾದವರ ಪ್ರಾರಂಭದ ಪ್ರಯತ್ನಗಳನ್ನು ಒಳಗೊಂಡು ಮತ್ತು ಮೀರಿ ಕರ್ನಾಟಕ ಕವಿಚರಿತೆಯ ಸಂಪುಟಗಳನ್ನು ಪ್ರಕಟಿಸುವುದರ ಮೂಲಕ ಆರ್. ನರಸಿಂಹಾಚಾರ್ ಅವರು ಕನ್ನಡ ಕವಿಕೃತಿಗಳ ಸಂಖ್ಯಾಸಂಪತ್ತನ್ನು ಎತ್ತಿತೋರಿಸಿದರು. ಅಲ್ಲಲ್ಲಿ ರಸನಿರ್ದೇಶನಕ್ಕೆ ಎಡೆ ಲಭಿಸಿದ್ದರೂ ಹೆಸರೇ ಸೂಚಿಸುವಂತೆ 'ಕರ್ನಾಟಕ ಕವಿಚರಿತ್ರೆ' ಕವಿಗಳನ್ನು ಪರಿಚಯಿಸುವ ಪ್ರಯತ್ನವಾಗಿದೆ. ಹೀಗೆ ಇಪ್ಪತ್ತನೆಯ ಶತಮಾನದ ಆದಿ ದಶಕಗಳಲ್ಲಿ ನಮ್ಮ ಕವಿಗಳನ್ನು 'ಚರಿತ್ರೆದೃಷ್ಟಿ'ಯಿಂದ, ಕೃತಿಗಳನ್ನು 'ರಸದೃಷ್ಟಿ' ಯಿಂದ ನೋಡುವ ಒಲವು ಪ್ರಧಾನ ವಾಗಿದ್ದಿತು. ಇದು ನಮ್ಮ ಸಾಹಿತ್ಯಚರಿತ್ರೆ ಬರವಣಿಗೆಯ ಇತಿಹಾಸದಲ್ಲಿ ಪ್ರಥಮ ಘಟ್ಟವಾಗಿದೆ. ಈ ಘಟ್ಟದ ಅಂತ್ಯದಲ್ಲಿ ಮೂಡಿಬಂದ ಬಿ.ಎಂ.ಶ್ರೀಯವರು ಇದಕ್ಕಿಂತ

ಭಿನ್ನರೀತಿಯಲ್ಲಿ ವ್ಯಕ್ತಪಡಿಸಿದ, ಇಲ್ಲವೆ ವಿಭಿನ್ನ ರೀತಿಯಲ್ಲಿ ಮುಂದುವರಿಸಿದ ಸಾಹಿತ್ಯಚರಿತ್ರೆಯ ವಿಚಾರಗಳನ್ನೂ ಈ ಬಗ್ಗೆ ಬರೆದ – ಬರೆಯಿಸಿದ ಸಾಹಿತ್ಯವನ್ನೂ ಇಲ್ಲಿ ವಿವೇಚಿಸಬೇಕಾಗುತ್ತದೆ.

ಬಿ.ಎಂ.ಶ್ರೀ ಒರೆದದ್ದು ಹೆಚ್ಚು; ಬರೆದದ್ದು ಕಡಿಮೆ. ಈ ಬರವಣಿಗೆಯಲ್ಲಿ ಗಳಗನಾಥ, ಕೈಲಾಸಂ, ಮಾಸ್ತಿಯವರಂತೆ ಅವರದೇ ಆದ ವಿಶಿಷ್ಟ ಸಾಹಿತ್ಯ ಪ್ರಕಾರವೊಂದು ಎದ್ದು ಕಾಣುವುದಿಲ್ಲ. ಹೀಗಾಗಿ ಬಿ.ಎಂ.ಶ್ರೀ ಕವಿಗಳೇ? ನಾಟಕಕಾರರೇ? ಸಂಶೋಧಕರೇ? ವಿಮರ್ಶಕರೇ? ಎಂದು ಕೇಳಿದರೆ ತಟ್ಟನೇ ಉತ್ತರಿಸುವುದು ಕಷ್ಟವಾಗುತ್ತದೆ. ವಸ್ತುಸ್ಥಿತಿ ಹೀಗಿದ್ದರೂ ಅವರ ಪರಿಮಿತ ಬರವಣಿಗೆಯಲ್ಲಿ ಸೃಜನಸಾಹಿತ್ಯಪ್ರಧಾನ, ಸೃಜನೇತರ ಸಾಹಿತ್ಯಗೌಣ. ಆದುದರಿಂದ ಸೃಜನೇತರ ವಿಭಾಗದ 'ಸಾಹಿತ್ಯ ಚರಿತ್ರೆಯ ವಿಚಾರ' ಅವರ ಗೌಣ ಕಾಣಿಕೆಗಳ ವರ್ಗಕ್ಕೆ ಸೇರುತ್ತದೆ. ಬಹುಶಃ ಈ ಕಾರಣದಿಂದಾಗಿಯೇ ಕನ್ನಡ ಕೈಪಿಡಿ ಮಾಲೆಯಲ್ಲಿ ಅವರು ಇನ್ನೂರು ಪುಟ ವ್ಯಾಪ್ತಿಯ 'ಕನ್ನಡ ಸಾಹಿತ್ಯ ಚರಿತ್ರೆ' ಹೆಸರಿನ ಸ್ವತಂತ್ರಕೃತಿ ಬರೆದಿದ್ದರೂ, ಅದು ಬಹಳ ಜನರಿಗೆ ಗೊತ್ತಿಲ್ಲ. ಹಿಂಡುಹಿಂಡಾಗಿ ಒಳ್ಳೆಯ ಪದ್ಯಗಳನ್ನು ಮಾತ್ರ ಎತ್ತಿತಂದು, ಗದ್ಯದಲ್ಲಿ ಪ್ರಶಂಸೆ ರೂಪದ ವಿಮರ್ಶೆ ಬರೆದಿರುವ ತಂತ್ರದಿಂದಾಗಿ ಈ ಕೃತಿ 'ಗದ್ಯಪದ್ಯಮಯೀ' ಹರಿಕಥೆಯಂತೆ ರಮ್ಯನಿರೂಪಣೆಯ ಸರಳದಾರಿ ಹಿಡಿದಿದೆ. ಕಾವ್ಯದ ಅನುಸಂಧಾನ, ವಿಷಯದ ವ್ಯವಸ್ಥೆ, ಪ್ರಮಾಣ ಪ್ರಜ್ಞೆ, ನಿರೂಪಣೆಯ ರೀತಿ ಇತ್ಯಾದಿ ದೃಷ್ಟಿಗಳಿಂದಲೂ ಈ ಅಪೂರ್ಣಕೃತಿ, ಈ ಕಡೆ ಸಂಶೋಧನೆಯೂ ಅಲ್ಲದ ಆ ಕಡೆ ವಿಮರ್ಶೆಯೂ ಅಲ್ಲದ ಅಪಕ್ವ ಪ್ರಯತ್ನವೆನಿಸಿದೆ.

ಕವಿಚರಿತ್ರೆಯ ಬರವಣಿಗೆಯಲ್ಲಿ ಕಿಟೆಲ್‌ರಿಗೆ ಎರಡನೆಯವರು ಆರ್. ನರಸಿಂಹಾಚಾರ್. ಸಾಹಿತ್ಯ ಚರಿತ್ರೆಯ ಬರವಣಿಗೆಯಲ್ಲಿ ಇ.ಪಿ.ರೈಸ್ ಅವರಿಗೆ ಎರಡನೆ ಯವರು ಬಿ.ಎಂ.ಶ್ರೀ. ಆದರೆ ಈ ಕಾರ್ಯದಲ್ಲಿ ನರಸಿಂಹಾಚಾರ್ ನಿಸ್ಸಂದೇಹವಾಗಿ ಗೆದ್ದರೆ, ಬಿ.ಎಂ.ಶ್ರೀ. ನಿಸ್ಸಂದೇಹವಾಗಿ ಸೋತಿದ್ದಾರೆ. ಈ ಸೋಲನ್ನು ಡಾ.ಹಾ.ಮಾ. ನಾಯಕ ಅವರು –"ಕನ್ನಡ ಸಾಹಿತ್ಯವನ್ನಷ್ಟೇ ಅಲ್ಲದೆ ಅನೇಕ ಸಾಹಿತ್ಯಗಳನ್ನು ಚೆನ್ನಾಗಿ ಬಲ್ಲವರಾಗಿದ್ದ (ಶ್ರೀಕಂಠಯ್ಯ) ಅವರು ಶ್ರೇಷ್ಠ ಸಾಹಿತ್ಯ ಚರಿತ್ರೆಯನ್ನು ರಚಿಸಬಲ್ಲ ಸಮರ್ಥರಾಗಿದ್ದರು. ಆದರೆ ಉದಾಹರಣೆಗಳ ಭಾರದಿಂದ ಕುಸಿದಿರುವ ಪ್ರಕಟಿತಭಾಗ ಮಾತ್ರ ಈ ಸಾಹಿತ್ಯ ಚರಿತ್ರೆ ಅತ್ಯುತ್ತಮವಾಗಿರುತ್ತಿತ್ತೆಂಬುದನ್ನೇನೂ ತೋರಿಸುವುದಿಲ್ಲ." ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಒಟ್ಟಿನಲ್ಲಿ ಶ್ರೀಯವರು ಕವಿತೆ ಬರೆದೂ ಶ್ರೇಷ್ಠ ಕವಿಗಳಲ್ಲ; ನಾಟಕ ಬರೆದೂ ಶ್ರೇಷ್ಠ ನಾಟಕಕಾರರಲ್ಲ. ಇದೇ ರೀತಿ ಸಾಹಿತ್ಯ ಚರಿತ್ರೆ ಬರೆದೂ ಶ್ರೇಷ್ಠ ಸಾಹಿತ್ಯಚರಿತ್ರೆಕಾರರಲ್ಲ. ಹಾಗಿದ್ದರೆ ಬಿ.ಎಂ.ಶ್ರೀ. ಅವರ ಕಾಣಿಕೆ

'ಸಾಹಿತ್ಯ ಚರಿತ್ರೆಗೆ' ಏನೂ ಇಲ್ಲವೆ? ಎಂದು ಕೇಳಬಹುದು. ಒಂದು ದೃಷ್ಟಿಯಿಂದ ಇಲ್ಲ; ಒಂದು ದೃಷ್ಟಿಯಿಂದ ಇದೆ. ಅಂದರೆ ಬಿ.ಎಂ.ಶ್ರೀ ಮೂಲತಃ ಪ್ರಥಮದರ್ಜೆಯ ಒಬ್ಬ ಲೇಖಕರಲ್ಲ; ಪ್ರಪ್ರಥಮ ದರ್ಜೆಯ ಒಂದು ಪ್ರೇರಣೆ. ಹೀಗಾಗಿ ಕನ್ನಡ ಸಾಹಿತ್ಯವನ್ನು ಕುರಿತು ಅವರು ಬರೆದ ಗ್ರಂಥ ಲೇಖನಗಳಿಗಿಂತ ವ್ಯಕ್ತಪಡಿಸಿದ ವಿಚಾರಗಳು, ತೆರೆದ ನೂತನ ದಾರಿಗಳು ಕೆಲಮಟ್ಟಿಗೆ ಮೌಲಿಕವಾಗಿವೆ; ಮಾರ್ಗದರ್ಶಿಯಾಗಿವೆ. ಆದುದರಿಂದ ಬಿಡಿ ಲೇಖನಗಳಲ್ಲಿ ಮಡುಗಟ್ಟಿರುವ ಅವರ ಸಾಹಿತ್ಯ ಚರಿತ್ರೆಯ ವಿಚಾರಗಳ ಅಧ್ಯಯನ ಇಲ್ಲಿ ಮುಖ್ಯವೆನಿಸುತ್ತದೆ.

ಬಿ.ಎಂ.ಶ್ರೀ ಬದುಕಿದ್ದ ಕಾಲದಲ್ಲಿ ಪ್ರಾಚೀನ ಕನ್ನಡ ಕೃತಿಗಳ ಪರಿಷ್ಕರಣ ಮತ್ತು ಪ್ರಕಟನೆಗೆ ಇನ್ನೂ ಬಾಲ್ಯಾವಸ್ಥೆ. ಈ ಕಾರ್ಯ ಆದಷ್ಟು ಬೇಗ ಪೂರ್ಣಪ್ರಮಾಣದಲ್ಲಿ ಜರುಗಬೇಕೆಂಬುದು ಅವರ ಅಪೇಕ್ಷೆಯಾಗಿದ್ದಿತು.

"ದೇಶದಲ್ಲಿ ಹುಳುತಿಂದು ಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು... ಈ ಗ್ರಂಥಗಳೆಲ್ಲಾ ಅಚ್ಚಾದ ಮೇಲೆ ಎಲ್ಲವನ್ನೂ ಶೋಧಿಸಿ ಹೊಸದಾಗಿ ಲಕ್ಷಣಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು. ಇವು ಯಾವುದೆಂದರೆ ಭಾಷೆಯ ಚರಿತ್ರೆ, ಹಳ-ಹೊಸಗನ್ನಡದ ವ್ಯಾಕರಣ, ನಿಘಂಟು, ರಸ, ಅಲಂಕಾರ, ಕಾವ್ಯಸ್ವರೂಪ, ಕಾವ್ಯವಿಮರ್ಶೆ, ಛಂದಸ್ಸು, ಕಾವ್ಯಮಾಲೆಯ ಚರಿತ್ರೆ...."

೧೯೧೧ ಡಿಸೆಂಬರ್ ತಿಂಗಳು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಮಾಡಿದ ಐತಿಹಾಸಿಕ ಭಾಷಣದ ಸಾಲುಗಳಿವು. ಇಲ್ಲಿಯ 'ಕಾವ್ಯಮಾಲೆಯ ಚರಿತ್ರೆ'ಯು ಸಾಹಿತ್ಯಚರಿತ್ರೆಯಾಗಿದ್ದು, ಪ್ರಥಮದಲ್ಲಿ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ, ಪರಿಷ್ಕರಣ, ಪ್ರಕಟನ ಕಾರ್ಯ ಜರುಗಬೇಕೆಂದೂ, ಇವುಗಳನ್ನು ಆಧಾರವಾಗಿಟ್ಟುಕೊಂಡು ಬರೆಯಬೇಕಾದ 'ಸಾಹಿತ್ಯ ಚರಿತ್ರೆ'ಯ ಅವಶ್ಯಕತೆಯಿದೆಯೆಂದೂ ಅಷ್ಟು ಪೂರ್ವದಲ್ಲಿಯೇ ಶ್ರೀಯವರು ಮನಗಂಡಿದ್ದರು. ೧೯೦೭ರಲ್ಲಿ ಕರ್ನಾಟಕ ಕವಿಚರಿತ್ರೆ ಭಾಗ-೧ ಪ್ರಕಟವಾಗಿದ್ದರೂ ಅದು ಕವಿ ಪರಂಪರೆಯ ಚರಿತ್ರೆ; ಬಿ.ಎಂ.ಶ್ರೀ. ಬಯಸುವುದು ಕಾವ್ಯಪರಂಪರೆಯ ಚರಿತ್ರೆ. ಅವರ ಈ ಬಯಕೆಯನ್ನು ತಕ್ಕಮಟ್ಟಿಗೆ ಪೂರೈಸುವ ರೀತಿಯಲ್ಲಿ ಎಂಟು ವರ್ಷಗಳ ತರುವಾಯ ಇ.ಪಿ. ರೈಸ್ ಬರೆದ "Kanarese Literature" (೧೯೧೫) ಪುಸ್ತಕವನ್ನು ವಿಮರ್ಶಿಸುತ್ತ:

"We have great pleasure in welcoming Mr. Rice`s book as an attempt to give the Kannada People a real history of their literature as distinguished from the catalogue and cronology.... It is no mear Compendium that we have before us; the writer has avoided the easy

method of enumerating a long series of little-known writers, ...and taken the study, a step forward-by treating the literature as product of kannada people, in relation to their religious, political and Cultural history."

ಎನ್ನುವಲ್ಲಿ ಬಿ.ಎಂ.ಶ್ರೀ ಅವರು ಅಪ್ರತ್ಯಕ್ಷವಾಗಿ ಆರ್. ನರಸಿಂಹಾಚಾರ್ ಅವರದು ಕವಿ ಎಣಿಕೆಯ ಸರಳಪದ್ಧತಿಯೆಂದೂ ರೈಸ್ ಅವರದು ಜನಾಂಗದ ಸೃಷ್ಟಿಯಾದ ಸಾಹಿತ್ಯದ ಮೌಲ್ಯವಿವೇಚನ ಪದ್ಧತಿಯೆಂದೂ ಗುರುತಿಸಿದ್ದಾರೆ. ಇಲ್ಲಿ ಕವಿಗಳ ಮೇಲಿನ ಒತ್ತು ಕಾವ್ಯದ ಮೇಲೆ ಬರಬೇಕೆಂಬ ಸೂಚನೆಯಿದೆ. ಕವಿಗಳಿಗಿರುವಂತೆ ಕಾವ್ಯಗಳಿಗೂ ಒಂದು ಪರಂಪರೆ ಇರುವುದೆಂಬ, ಅಂಥ ಅಖಂಡ ಪರಂಪರೆಯನ್ನು ಶೋಧಿಸುವ, ರೂಪಿಸುವ ಕೆಲಸ ಕನ್ನಡದಲ್ಲಿ ನಡೆಯಬೇಕೆಂಬ ಸಂಗತಿಯ ಕಡೆಗೆ ಬಿ.ಎಂ.ಶ್ರೀ ಇಲ್ಲಿ ಬೆರಳು ತೋರುತ್ತಾರೆ.

ಬಿ.ಎಂ.ಶ್ರೀ ಕೇವಲ ಇಂಥ ಸಾಹಿತ್ಯಚರಿತ್ರೆಯ ಅವಶ್ಯಕತೆಯನ್ನು ಕಂಡವರಲ್ಲ; ಅದರ ನೀಲಿನಕ್ಷೆಯನ್ನು ಕಂಡರಿಸಿದವರು. 'ರನ್ನಕವಿ ಪ್ರಶಸ್ತಿ'ಗೆ ಮುನ್ನುಡಿ ಬರೆಯುತ್ತ ಅವರು ಹೇಳಿದ ಮಾತುಗಳು ಇಲ್ಲಿ ಮನನೀಯವಾಗಿವೆ. "ಕನ್ನಡ ಕಾವ್ಯರಾಶಿಯನ್ನು ಹೊರಕ್ಕೆ ತಂದು ಹೆಮ್ಮೆಪಟ್ಟದ್ದಾಯಿತು. ಈಗ ಬೇಕಾದುದು ಅದರ ಯೋಗ್ಯತೆಯನ್ನು ಗೊತ್ತು ಮಾಡುವ ವಿಮರ್ಶೆ... ಇದು ಒಬ್ಬಿಬ್ಬರ ಕೆಲಸವಲ್ಲ; ಕನ್ನಡದಲ್ಲಿ ಅಕ್ಕರೆ ಒಂದೇ ಇದಕ್ಕೆ ಸಾಧನವಲ್ಲ; ಒಮ್ಮುಖವಾದ ಸಂಸ್ಕಾರವುಳ್ಳವರಾಗಲೀ, ಜಾತಿಮತಗಳ ವೀರಾವೇಶವುಳ್ಳರಿಂದಾಗಲೀ ಇದು ನಿರ್ವಹಿಸಬಹುದಾದ ವಿಷಯವಲ್ಲ. ಇದು ಸರ್ವರಿಗೂ ಸೇರಿದ ಸಾಹಿತ್ಯದ ವಿಷಯ; ಸಾಹಿತ್ಯ ಕಲಾದೃಷ್ಟಿಯಿಂದಲೇ ಈ ವಿಮರ್ಶೆ ನಡೆಯತಕ್ಕದ್ದಾಗಿದೆ. ಎರಡು ಮೂರು ಸಾಹಿತ್ಯಗಳನ್ನಾದರೂ ಚೆನ್ನಾಗಿಬಲ್ಲ, ವಿಶಾಲರುಚಿಗಳಾದ ಪೂರ್ವದ ಮತ್ತು ನೂತನ ಕಾಲದ ಅಂತಸ್ಸಾರವನ್ನು ಅನುಭವಕ್ಕೆ ತಂದುಕೊಂಡಿರುವ ಅಖಂಡ ಕರ್ನಾಟಕದ ವಿದ್ವಾಂಸರೆಲ್ಲರೂ ಈ ವಿಮರ್ಶೆಯ ಕಾರ್ಯವನ್ನು ಕೈಕೊಳ್ಳತಕ್ಕದ್ದು..... ನಮ್ಮ ಸಾಹಿತ್ಯದ ಗುಣಗಳು ಯಾವುವು? ನ್ಯೂನತೆಗಳು ಯಾವುವು? ಜನಜೀವನಕ್ಕೂ ಸಾಹಿತ್ಯಕ್ಕೂ ಇರತಕ್ಕ ಸಂಬಂಧವೇನು? ಇವೇ ಮೊದಲಾದ ಅಂಶಗಳನ್ನು ತಿಳಿವಳಿಕೆಯಿಂದ ನಿಷ್ಪಕ್ಷಪಾತವಾಗಿ ವಿಚಾರಮಾಡಿ ಸ್ವಲ್ಪ ಹೆಚ್ಚುಕಡಿಮೆ ಒಂದು ನಿರ್ಣಯಕ್ಕೆ ಬರುವುದು ಈಗ ಅತ್ಯಾವಶ್ಯಕವಾದ ಕೆಲಸವಾಗಿದೆ." ೧೯೨೮ರಲ್ಲಿ ಹೇಳಿದ ಈ ಮಾತು[illegible]ದರ್ಶ ಕನ್ನಡ ಸಾಹಿತ್ಯ ಚರಿತ್ರೆಯ ಸ್ವರೂಪ ಲಕ್ಷಣಗಳೆನಿಸಿವೆ.

'ಸಾಹಿತ್ಯಚರಿತ್ರೆ'ಯ ಮುಖ್ಯಲಕ್ಷಣಗ[illegible] ಎರಡು: ಒಂದು ವಿಮರ್ಶೆ, ಇನ್ನೊಂದು

ಚರಿತ್ರೆ. ಇಲ್ಲಿ ಚಾರಿತ್ರಿಕವಾಗಿ ವಿಮರ್ಶೆ ಮುನ್ನಡೆಯಬೇಕಾಗುತ್ತದೆ. ಆದರೆ ಸಾಹಿತ್ಯದ ಅಖಂಡ ವಿಮರ್ಶೆಗೆ ಶಕ್ತಿಸಾಲದೆ ಬಿ.ಎಂ.ಶ್ರೀ ಕೃತಿಯ ಖಂಡವಿಮರ್ಶೆಗೆ ಅದರಲ್ಲಿಯೂ ಕಲಾಮೌಲ್ಯ ವಿಮರ್ಶೆಗೆ ನಿಂತುಬಿಡುತ್ತಾರೆ. ಅದಕ್ಕಾಗಿಯೇ ಅವರ 'ಕನ್ನಡ ಸಾಹಿತ್ಯ ಚರಿತ್ರೆ' ಪಂಪ, ರನ್ನ, ಮೊದಲಾದವರನ್ನು ಕುರಿತು ಬರೆದ ಬಿಡಿ ವಿಮರ್ಶಾ ಲೇಖನಗಳ ಸಂಗ್ರಹವಾಯಿತೇ ಹೊರತು ಅದಕ್ಕೆ ಇತಿಹಾಸದ ನಿರಂತರತೆಯ ಲಕ್ಷಣ ಪ್ರಾಪ್ತವಾಗಲಿಲ್ಲ.

ಬಿ.ಎಂ.ಶ್ರೀ ಅವರದು ಪುರಾತನ-ನೂತನ, ಪೂರ್ವ-ಪಶ್ಚಿಮ ವಿಚಾರಗಳ ಸಂಗಮ ವ್ಯಕ್ತಿತ್ವ, ಹೀಗಾಗಿ ಅವರು ಭಾರತೀಯ 'ಕಾವ್ಯ ಮೀಮಾಂಸೆ'ಗೆ ಪಾಶ್ಚಾತ್ಯ ವಿಮರ್ಶೆಯ ಕಸಿಕಟ್ಟಿದ್ದರು. ಇದರಿಂದಾಗಿ ಈಗಾಗಲೇ ಕವಿಯಿಂದ ಸರಿದು, ಕೃತಿಯ ಮೇಲೆ ಬಂದಿದ್ದ ಅಧ್ಯಯನ ಈಗ ಭಾರತೀಯ ರಸವಿಮರ್ಶೆಯ ಜೊತೆಗೆ ಪಾಶ್ಚಾತ್ಯ ರೂಪವಿಮರ್ಶೆಯನ್ನೂ ಮೈಗೂಡಿಸಿಕೊಂಡಿತು. ಅಂದರೆ ಕಲಾಮೌಲ್ಯವನ್ನೇ ಆಧಾರ ವಾಗಿಟ್ಟುಕೊಂಡು ಕಾವ್ಯವನ್ನು ನವರಸದೃಷ್ಟಿಯಿಂದ ನೋಡುವುದರೊಂದಿಗೆ ವಸ್ತು, ಕಥೆ, ಘಟನೆ, ತಂತ್ರ, ಪಾತ್ರ, ಶೈಲಿ ಇತ್ಯಾದಿ ದೃಷ್ಟಿಯಿಂದಲೂ ನೋಡುವುದನ್ನು ಬಿ.ಎಂ.ಶ್ರೀ ತೆರೆದು ತೋರಿಸಿದರು. ಇದರಿಂದಾಗಿ ಕನ್ನಡ ಸಾಹಿತ್ಯ ವಿಮರ್ಶೆಯ ಅಧ್ಯಯನದಲ್ಲಿ ರೂಢವಾಗಿದ್ದ ಸಂಶ್ಲೇಷಣಾತ್ಮಕ ದೃಷ್ಟಿ ವಿಶ್ಲೇಷಣಾತ್ಮಕವಾಗಿ ಪರಿಣಮಿಸಿತು. ಕೃತಿಯನ್ನು ಸ್ವತಂತ್ರ ಘಟಕವನ್ನಾಗಿಟ್ಟುಕೊಂಡು ವಿಮರ್ಶಿಸುವ ಹೊಸ ಅಭ್ಯಾಸಪದ್ಧತಿ ರೂಢವಾಯಿತು. ಈ ನವೀನಪದ್ಧತಿಯ ಉಜ್ವಲ ಕಾಣಿಕೆ, ಕನ್ನಡ ಕಾವ್ಯಗಳಲ್ಲಿ ದುರಂತ ಪಾತ್ರಗಳ ಶೋಧ. 'A tragic Ravan' ಹೆಸರಿನ ಲೇಖನ, ಮತ್ತು ಅಶ್ವತ್ಥಾಮನ್ ಗದಾಯುದ್ಧ, ಪಾರಸೀಕರು ಹೆಸರಿನ ನಾಟಕಗಳ ಮೂಲಕ ಅವರು ಮುಚ್ಚಿಹೋಗಿದ್ದ ಹಳಗನ್ನಡ ಸಾಹಿತ್ಯಕೃತಿಗಳ ಪ್ರವೇಶದ್ವಾರಗಳನ್ನು ತೆರೆದುಕೊಟ್ಟರು. ಇಂಥ ಅನೇಕ ದೃಷ್ಟಿದಾನಗಳಿಂದಾಗಿ ಮಾತ್ರ ಸಾಹಿತ್ಯಚರಿತ್ರೆಯ ವಿಮರ್ಶಾಭಾಗಕ್ಕೆ ಅವರ ಕಾಣಿಕೆ ಅಮೂಲ್ಯವೆನಿಸುತ್ತದೆ.

ಆಧುನಿಕ ಈ ವಿಮರ್ಶಾಕಾರ್ಯ ನಮ್ಮಲ್ಲಿ ಹಳಗನ್ನಡ ಕೃತಿಗಳ ವಿಮರ್ಶೆಯಿಂದಲೇ ಪ್ರಾರಂಭವಾಯಿತು. ಬಿ.ಎಂ.ಶ್ರೀ ನೇತೃತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಹಳಗನ್ನಡ ಕಾವ್ಯಗಳನ್ನು ಸಂಗ್ರಹಿಸಿ ಪ್ರಕಟಿಸುವ ಯೋಜನೆಯನ್ನು ಪ್ರಾರಂಭಿಸಿದುದು ಇಲ್ಲಿ ಗಮನಿಸತಕ್ಕ ಸಂಗತಿಯಾಗಿದೆ. ಎ.ಆರ್.ಕೃ ಅವರು ಹರಿಶ್ಚಂದ್ರ ಕಾವ್ಯಸಂಗ್ರಹಕ್ಕೆ ಎಂ.ಆರ್.ಶ್ರೀಯವರು ಪ್ರಭುಲಿಂಗಲೀಲೆ ಸಂಗ್ರಹಕ್ಕೆ ಬರೆದ ಮುನ್ನುಡಿ ರೂಪದ ಕವಿಯ ಕಾಲ, ದೇಶ, ಪರಿಸರಗಳ ಚರಿತ್ರೆ ಮತ್ತು ಕಾವ್ಯದ ರಸ, ವಸ್ತು, ಪಾತ್ರಗಳ ವಿಮರ್ಶೆಗಳು ನಮ್ಮ ಸಾಹಿತ್ಯಚರಿತ್ರೆಯ ಬೆಲೆಯುಳ್ಳ ಭಾಗಗಳಾಗಿವೆ. ಈ ಮಾಲೆಗೆ ಬಿ.ಎಂ.ಶ್ರೀ ಹೆಸರಿಗೆ ಮಾತ್ರ ಪ್ರಧಾನ ಸಂಪಾದಕರಾಗಿರಲಿಲ್ಲ. ಪಶ್ಚಿಮಸಾಹಿತ್ಯದ ಆಳವಾದ

ಅಧ್ಯಯನದೊಂದಿಗೆ ಮೇಳವಿಸಿದ್ದ ಪ್ರಾಚೀನ, ಕನ್ನಡ, ತಮಿಳು, ಸಂಸ್ಕೃತಗಳ ಸಾಹಿತ್ಯಗಳ ಆಳವಾದ ಜ್ಞಾನ ಇಲ್ಲಿ ನೆರವಾಗಿ ನಿಂತಿದೆ, ನೇತೃತ್ವವಹಿಸಿದೆ.

ಕೊನೆಯ ಮಾತು: ಬಿ.ಎಂ.ಶ್ರೀಯವರಿಗೆ ಪ್ರಾಚೀನ ಸಾಹಿತ್ಯದ ಬಲ-ದೌರ್ಬಲ್ಯಗಳ ಸ್ಪಷ್ಟ ಅರಿವೂ, ಆಧುನಿಕ ಸಾಹಿತ್ಯ ಬೆಳೆಯಬೇಕಾದ ರೀತಿಯ ರಹಸ್ಯವೂ ಚೆನ್ನಾಗಿ ಗೊತ್ತಿದೆ. ಏಕಕಾಲಕ್ಕೆ ಗತವೈಭವವನ್ನೂ, ಅಗತ್ಯ ಭವಿಷ್ಯವನ್ನೂ ಕಾಣಿಸುವ ಉಭಯದ್ವಾರಗಳನ್ನು ತೆರೆಯುವುದರ ಮೂಲಕ 'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಎಂಬ ಮಾತು ಈ ಶತಮಾನದಲ್ಲಿ ಬಿ.ಎಂ.ಶ್ರೀ ಅವರ ವೈಚಾರಿಕತೆಯನ್ನು ಆಳುತ್ತಿದೆ. ಇಂಥ 'ಆವೇಶ ಪ್ರತಿಭೆ' ಯಿಂದಾಗಿ ವಿಮರ್ಶೆಯಲ್ಲಿ ಅವರು ತೂಕ ತಪ್ಪುತ್ತಾರೆ; ಅಭಿವ್ಯಕ್ತಿಯಲ್ಲಿ ಒಳ್ಳೆಯ ಶಬ್ದಗಳಿಂದ ಬರವಣಿಗೆಯನ್ನು ಸಿಂಗರಿಸುತ್ತಾರೆ. 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀಲೇಖಕಿಯರಲ್ಲಿ ತೇಜಸ್ವಿಗಳಾದವರು ಇಬ್ಬರು. ಅಕ್ಕಮಹಾದೇವಿ ಒಬ್ಬಳು... ಹೊನ್ನಮ್ಮ ಇನ್ನೊಬ್ಬಳು' - ಇದು ತೂಕತಪ್ಪಿದ ವಿಮರ್ಶೆ. 'ಜನವಾಣಿ ಬೇರು, ಕವಿವಾಣಿ ಹೂವು' ಇದು ತೂಕದ ವಿಮರ್ಶೆಯಾದರೂ ಅಲಂಕಾರಿಕ ಅಭಿವ್ಯಕ್ತಿ. ಇಂಥವುಗಳಿಂದಾಗಿ ಅವರ ವಿಮರ್ಶೆ ಬಹಳಷ್ಟು ಸಲ ಗುರಿ ಕಳೆದುಕೊಳ್ಳುತ್ತದೆ. ಗುರಿಸಾಧಿಸಿದರೂ ಮೊನಚು ಕಳೆದುಕೊಂಡು ನಾಟಕವೇ ನಿಂತುಬಿಡುತ್ತದೆ. ಎರಡನೆಯದಾಗಿ ಅವರ ಬರವಣಿಗೆ ತುಂಡು ವಿಮರ್ಶೆಯಲ್ಲಿ ವಿರಮಿಸುತ್ತದೆಯೇ ಹೊರತು ಅಖಂಡ ಚರಿತ್ರೆಯ ವಿಸ್ತಾರಕ್ಕೆ ಹಿಗ್ಗುವುದಿಲ್ಲ. ಹೀಗಾಗಿ ಬಿ.ಎಂ.ಶ್ರೀ ನಮ್ಮ ಸಾಹಿತ್ಯಚರಿತ್ರೆಯ ಗಣ್ಯಭಾಗವಾಗಿದ್ದರೂ 'ಸಾಹಿತ್ಯ ಚರಿತ್ರೆ'ಗೆ ಸಂದ ಅವರ ಕಾಣಿಕೆ ಗಣ್ಯವಾದುದೇನಲ್ಲ.

❐

೧೪. 'ಯುಗಪ್ರವರ್ತಕ'*

■ *ಚೆನ್ನವೀರ ಕಣವಿ*

ಕರ್ನಾಟಕ ಸಾಹಿತ್ಯ ಅಕಾಡೆಮಿ ಕೆಲವು ಅಪೂರ್ವವಾದ ಯೋಜನೆಗಳನ್ನು ಕೈಕೊಂಡು, ಅತ್ಯಂತ ಸಮರ್ಥವಾದ ರೀತಿಯಲ್ಲಿ ನಡೆಸಿಕೊಂಡು ಬಂದಿರುವುದನ್ನು ನಾವೆಲ್ಲ ಕಂಡಿದ್ದೇವೆ. ಅದಕ್ಕಾಗಿ ಅದರ ಅಧ್ಯಕ್ಷರಾದ ಡಾ.ಹಾ.ಮಾ. ನಾಯಕ ಅವರಿಗೆ ನಮ್ಮ ಅಭಿನಂದನೆಗಳು ಸಲ್ಲಬೇಕು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಆಚಾರ್ಯ ಬಿ.ಎಂ.ಶ್ರೀಕಂಠಯ್ಯನವರ ಸಮಗ್ರ ಕೃತಿಸಂಪುಟ 'ಶ್ರೀ ಸಾಹಿತ್ಯ'ವನ್ನು ಪ್ರಕಟಿಸಿ, ಶ್ರೀಯವರ ಶತಮಾನೋತ್ಸವ ಕಾರ್ಯಕ್ರಮಕ್ಕೆ ಅವರು ಈ ಮೊದಲೇ ನಾಂದಿ ಹಾಕಿದ್ದಾರೆನ್ನಬಹುದು.

ಶ್ರೀಯವರು ತಮ್ಮ ಕೊನೆಗಾಲವನ್ನು ಧಾರವಾಡದಲ್ಲಿ ಕಳೆದದ್ದು, ಒಂದು ದೃಷ್ಟಿಯಲ್ಲಿ ಉತ್ತರ ಕರ್ನಾಟಕದ ಬಗ್ಗೆ ಅವರಿಗಿದ್ದ ಪ್ರೀತಿ, ಅಭಿಮಾನಗಳ ದ್ಯೋತಕವೆಂದು ನಾನು ಭಾವಿಸಿದ್ದೇನೆ. ೧೯೪೪ ರಿಂದ ೧೯೪೬ರ ಅವಧಿಯಲ್ಲಿ ಧಾರವಾಡದಲ್ಲಿ ಅವರ ಭಾಷಣಗಳನ್ನು ಕೇಳಿ ಪುಳಕಿತಗೊಂಡವರಲ್ಲಿ ನಾನೂ ಒಬ್ಬನಾಗಿದ್ದೆ. ಅದು ನಾನು ಹೈಸ್ಕೂಲಿನಲ್ಲಿ ಕೊನೆಯ ಎರಡು ವರ್ಷ ಹಾಗೂ ಕಾಲೇಜಿನಲ್ಲಿ ಮೊದಲವರ್ಷ ವಿದ್ಯಾರ್ಥಿಯಾಗಿದ್ದಾಗಿನ ಅವಧಿ. ಇದೇ ವಿದ್ಯಾವರ್ಧಕ ಸಂಘದಲ್ಲಿ ಅವರು ಒಮ್ಮೆ ಭಾಷಣವನ್ನು ಮಾಡುತ್ತಿದ್ದಾಗಿನ ದೃಶ್ಯ(೧೯೪೫) ಇನ್ನೂ ನನ್ನ ಕಣ್ಣಮುಂದೆ ಕಟ್ಟಿದಂತಿದೆ. ಶ್ರೀಯುತರಾದ ಆರ್.ಸಿ. ಹಿರೇಮಠ ಹಾಗೂ ಆರ್.ವಿ. ಕುಲಕರ್ಣಿ (ರಾಕು) ಅವರು ಎಂ.ಎ. ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ವಿಷಯವನ್ನಾಗಿಟ್ಟುಕೊಂಡು ಮುಂಬಯಿ ವಿಶ್ವವಿದ್ಯಾಲಯದಿಂದ ಪ್ರಥಮ ತರಗತಿಯಲ್ಲಿ ಪಾಸಾದುದಕ್ಕಾಗಿ ಅವರಿಗೆ ಸನ್ಮಾನವನ್ನು

---

* ಎರಡನೇ ಗೋಷ್ಠಿಯ ಅಧ್ಯಕ್ಷ ಭಾಷಣ.

ಏರ್ಪಡಿಸಿದ ಸಭೆ ಅದು. ಅಂದಿನ ಸಭೆಯ ಅಧ್ಯಕ್ಷ ಭಾಷಣವೇ ಶ್ರೀಯವರದು. 'ಕನ್ನಡ ಭುವನೇಶ್ವರಿಯ ತೇರು ಇಗೊ ಹೊರಟಿದೆ. ಸಾವಿರಾರು ಕೈಗಳು ಅದರ ಮಿಣಿಯನ್ನು ಹಿಡಿದು ಮುಂದೆ ಸಾಗಬೇಕು' ಎಂದು ಭಾವಪೂರ್ಣವಾಗಿ ಅವರು ಆಡಿದ ಒಂದು ಮಾತು ನನ್ನ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೆ ಉಳಿದಿದೆ. ಆ ವಾಣಿಯ ಮೊಳಗು ಕಿವಿಯಲ್ಲಿ ಇನ್ನೂ ನಿಮಿರಿಸುವಂತಿದೆ. ಪದಗಳನ್ನು ಆತಂಕವಿಲ್ಲದೆ ಆಯ್ದು ಆಯ್ದು ಅರ್ಥವಂತಿಕೆಯಿಂದ ಕೂಡಿ, ಭಾವವನ್ನು ಪ್ರಕಾಶಗೊಳಿಸುವ ರೀತಿ ಅವರದಾಗಿತ್ತು. ಮಾತಿನ ಎಂಥ ಶಕ್ತಿ ಸಂಪತ್ತನ್ನು ಇವರು ತಮ್ಮ ತಲೆಯಲ್ಲಿ ಅಡಗಿಸಿಕೊಂಡಿರಬಹುದು ಎಂದು ನಾನು ಆಗ ಆಶ್ಚರ್ಯಪಟ್ಟಿದ್ದೆ. ಆ ವಾಗ್ವೈಭವವನ್ನು ಈಗ ಇನ್ನೆಲ್ಲಿ ಕಾಣಬಹುದು?

"ಶ್ರೀಕಂಠಯ್ಯನವರು ಮಾತಾಡಿದ್ದು ಹೆಚ್ಚು; ಬರೆದದ್ದು ಕಡಮೆ. ಮಾತಾಡಿದ್ದೆಲ್ಲ ಗಾಳಿಯಲ್ಲಿ ತೇಲಿಹೋಗಿದೆ; ಬರೆದಷ್ಟು ಮಾತ್ರ ಚೊಕ್ಕ ಚಿನ್ನವಾಗಿ ಉಳಿದಿದೆ" ಎಂದು ಡಾ. ಹಾ.ಮಾ. ನಾಯಕರು ಒಂದೆಡೆ ಬರೆದಿರುವದು ಒಂದು ದೃಷ್ಟಿಯಿಂದ ನಿಜ ವಿರಬಹುದು. ಆದರೆ ಅವರ ಭಾಷಣದಿಂದ ಕೇಳುಗರಲ್ಲಿ ಉಂಟಾಗುತ್ತಿದ್ದ ಸ್ಫೂರ್ತಿ, ಉತ್ಸಾಹ, ಪ್ರೇರಣೆಗಳನ್ನು ಬೇರೆ ಯಾವುದರಿಂದ ತಂದುಕೊಡುವದು ಸಾಧ್ಯ? ಅದೊಂದು ಜೀವಂತ ಸ್ಪರ್ಶ. ಆ ಪ್ರಭಾವ ಅನುಪಮವಾದದ್ದು. ಕನ್ನಡದ ಸತ್ವಸಾರವನ್ನು ಮಾತಿನಲ್ಲಿ ಹೊರಹೊಮ್ಮಿಸುವ, ಜನಸಮೂಹಕ್ಕೆ ಅದನ್ನು ವಿಶದಪಡಿಸುವ ಆ ಭಾವವೈಖರಿ ಅನ್ಯಾದೃಶವಾಗಿತ್ತು. ಆ ಮಾತು ಯಾವ ಯಾವ ಮನಸ್ಸಿನಲ್ಲಿ ಇಂಗಿ, ಮೋಡವಾಗಿ ಕಟ್ಟಿ, ಮಳೆಯಾಗಿ ಇಳಿದು ನೆಲದಲ್ಲಿ ಏನೇನು ಬೆಳೆಯಿತೊ ಹೇಗೆ ಹೇಳುವದು? ಈ ದೃಷ್ಟಿಯಿಂದ ಅವರು ಮಾತಾಡಿದ್ದೆಲ್ಲ ಗಾಳಿಯಲ್ಲಿ ತೇಲಿಹೋಗಿರ ಲಾರದು ಎಂದು ನನ್ನ ಭಾವನೆ.

ಅವರ 'ಇಂಗ್ಲೀಷ್ ಗೀತಗಳು' ಪ್ರಭಾವ ಬೀರಿದ್ದು ಮೊದಲನೆಯ ತಲೆಮಾರಿನ ಕವಿಗಳಿಗೆ. ಅದರ ಮುಂದಿನ ತಲೆಮಾರಿನ ನನ್ನಂಥವರಿಗೆ ಅವರು ಸಂಪಾದಿಸಿದ 'ಕನ್ನಡ ಬಾವುಟ' ಒಂದು ನಿಧಿ ದೊರಕಿಸಿಕೊಟ್ಟಂತಾಗಿತ್ತು. ಹಾಯ್‌ಸ್ಕೂಲಿನ ನಾಲ್ಕನೆಯ ವರ್ಗದಲ್ಲಿದ್ದಾಗ ಒಂದು ರೂಪಾಯಿ ಬೆಲೆಯ ಆ ಪುಸ್ತಕವನ್ನು ನಾನು ಕೊಂಡಿದ್ದೆ. (೧೯೪೦ರಲ್ಲಿ ಪ್ರಕಟವಾದ ದ್ವಿತೀಯ ಮುದ್ರಣದ ಅದರ ಪ್ರತಿ ಇನ್ನೂ ನನ್ನ ಬಳಿಯಲ್ಲಿದೆ). ಆಧುನಿಕ ಕಾವ್ಯದ ಪ್ರಮುಖ ಕವಿಗಳ ಕವಿತೆಗಳನೇಕ ಅದರಲ್ಲಿದ್ದುದು ನಮ್ಮ ಕುತೂಹಲವನ್ನು ತಣಿಸಲು ಕಾರಣವಾಯಿತು. ಇಂದು 'ಶ್ರೀ ಸಾಹಿತ್ಯ' ಸಂಪುಟವನ್ನು ಕೇವಲ ಹತ್ತು ರೂಪಾಯಿಗಳಿಗೆ ಕೊಳ್ಳುವಾಗ ಅಂದು 'ಕನ್ನಡ ಬಾವುಟ' ಪಡೆದಾಗಿನ ನೆನಪು ತಾನಾಗಿ ಮರುಕಳಿಸಿತು.

ಶ್ರೀಯವರು ತೀರಿಕೊಂಡ ಎರಡು-ಮೂರು ವರ್ಷಗಳ ನಂತರ ನಾನು 'ಶ್ರೀಯವರನ್ನು ಕುರಿತು' ಒಂದು ಸಾನೆಟ್ ಬರೆದೆ. ಅವರ 'ಶುಕ್ರಗೀತೆ'ಯಲ್ಲಿಯ ಒಂದು ಸಾಲು - 'ಸಾವುದೆಲ್ಲಾ ಸತ್ತು ಬಾನಾಳ್ಕೆ ಪೂಣ್ಗೆ', ನನ್ನ ಮನಸ್ಸಿನ ಮೇಲೆ ಎಷ್ಟೊಂದು ಪ್ರಭಾವ ಬೀರಿತ್ತೆಂದರೆ, ಆ ಸಾಲನ್ನೇ ಮೊದಲು ಮಾಡಿಕೊಂಡು ನಾನೊಂದು ಬೇರೆ ಕವಿತೆಯನ್ನೇ ಬರೆದೆ. ಈ ಎರಡೂ ಕವಿತೆಗಳು ನನ್ನ 'ಆಕಾಶಬುಟ್ಟಿ' ಕವನ ಸಂಗ್ರಹದಲ್ಲಿವೆ. ಇದಿಷ್ಟು ವೈಯಕ್ತಿಕ ಮಾತುಗಳನ್ನು ಆಡದೆ ಈ ಸಂದರ್ಭದಲ್ಲಿ ಮುಂದುವರಿಯುವುದು ಸಾಧ್ಯವಿರಲಿಲ್ಲ. ಅದಕ್ಕಾಗಿ ತಾವು ಕ್ಷಮಿಸುತ್ತೀರೆಂದು ಭಾವಿಸಿದ್ದೇನೆ.

ಈ ಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳು ಅಭ್ಯಾಸಪೂರ್ಣವಾಗಿದ್ದು ವಿಮರ್ಶೆಯನ್ನು ತಕ್ಕಮಟ್ಟಿಗೆ ಒಳಗೊಂಡಿರುವುದರಿಂದ ಅವುಗಳ ಬಗ್ಗೆ ಯಾವ ಹೆಚ್ಚಿನ ಮಾತುಗಳನ್ನೂ ಜೋಡಿಸುವ ಅವಶ್ಯಕತೆ ನನಗೆ ತೋರುತ್ತಿಲ್ಲ. ಡಾ. ಧಾರವಾಡಕರ ಅವರೂ, ಪ್ರೊ. ಇನಾಂದಾರ ಅವರೂ 'ಅಶ್ವತ್ಥಾಮನ್' ಮತ್ತು 'ಪಾರಸಿಕರು' ನಾಟಕಗಳ ಬಗ್ಗೆ ಸಮರ್ಥವಾಗಿ ಮಾತನಾಡಿದ್ದಾರೆ. ಮನುಷ್ಯ ತನ್ನ ಶಕ್ತಿಯ ಬಗ್ಗೆ ಒಮ್ಮೊಮ್ಮೆ ಬಹಳ ಹೆಮ್ಮೆಯನ್ನು ತಾಳುವುದುಂಟು. ಎಡಸೊಕ್ಕಿನಿಂದ ಮರೆಯುವುದುಂಟು. ಆ ಸಂದರ್ಭದಲ್ಲಿ ಅವನ ಎಣಿಕೆಯನ್ನು ಬುಡಮೇಲು ಮಾಡಿ ದೈವ ಅದನ್ನು ಮುರಿಯುತ್ತದೆ ಎಂಬ ಭಾವವನ್ನು ಇವೆರಡೂ ಕೃತಿಗಳು ನಮಗೆ ವಿಶದಪಡಿಸುತ್ತವೆ. ಅಲ್ಲದೆ ಅವು ನೀಡುವ ಮುಖ್ಯ ಸಂದೇಶಗಳನ್ನು ಕಲಾತ್ಮಕವಾಗಿ ನಾಟಕದ ಒಡಲಿನಿಂದಲೇ ಮೂಡಿಸಲಾಗಿದೆಯೆನ್ನುವುದು ನಿಜ. 'ಅಶ್ವತ್ಥಾಮನ್'ದಲ್ಲಿ ಘಟನೆಗಳು ಒಂದರ ಮೇಲೊಂದು ಸಂಭವಿಸುತ್ತವೆ. ಕಥೆ ತುಂಬಿಕೊಂಡು ಒಂದು ತೀವ್ರತೆಯನ್ನು ಪಡೆದಿದೆ. ಅದೇ 'ಪಾರಸಿಕರು' ಕವಿತೆಯ ಪ್ರವಾಹಕ್ಕೆ ಹೆಚ್ಚು ಇಂಬುಗೊಟ್ಟಿದೆ. 'ಅಶ್ವತ್ಥಾಮನ್' ನಾಯಕನ ಸ್ವಹತ್ಯೆಯೊಡನೆ ನಾಟಕ ಮುಗಿಯದಿದ್ದರೆ ಚೆನ್ನಾಗಿತ್ತು ಎಂಬ ವಾದವಿದೆ. 'ಮಾನ, ಅಭಿಮಾನ ಲೋಕದಲ್ಲಿ ದೊಡ್ಡವು. ಮಾನವನ್ನು ಉಳಿಸಿಕೊಳ್ಳುವುದಕ್ಕಾಗಿ ಈ ನಾಟಕದ ಅಶ್ವತ್ಥಾಮನ್ ತೀರಿಕೊಂಡನೆಂದು ಭಾವಿಸಬೇಕು' ಎಂದು ವಿ.ಸೀ.ಯವರು ಹೇಳಿದ್ದುಂಟು. ನಾಟಕದಲ್ಲಿಯೇ ಈ ಮಾತು ಬರುತ್ತದೆ: "ತಕ್ಕನ್ ತಕ್ಕವೊಲ್ ಬಾಳ್ದಪನ್, ತಕ್ಕವೊಲ್ ಸತ್ತಪನ್." ಇವೆರಡೂ ನಾಟಕಗಳನ್ನು ಶ್ರೀಯವರು ಹಳಗನ್ನಡದಲ್ಲಿ ಬರೆದು ಅದರ ಶಕ್ತಿಯನ್ನೂ ಬಿಗುವನ್ನೂ ತೋರಿಸುವುದರ ಜೊತೆಗೆ ಆ ಭಾಷಾರೂಪದ ಬಗೆಗಿನ ತಮ್ಮ ವಿಶೇಷ ಒಲವನ್ನೂ ವ್ಯಕ್ತಪಡಿಸಿದಂತಿದೆ.

ಶ್ರೀಯವರ ಸಾಹಿತ್ಯ ಚರಿತ್ರೆ ವಿಚಾರಗಳನ್ನು ಕುರಿತು ಡಾ. ಕಲಬುರ್ಗಿಯವರು ಕೆಲವು ಮನನೀಯವಾದ ಆದರೆ ಇನ್ನೂ ಆ ಬಗ್ಗೆ ವಿಚಾರ ಮಾಡಬಹುದಾದ

ಕೆಲವು ಮಾತುಗಳನ್ನು ಹೇಳಿದ್ದಾರೆ. ಸತ್ಯಾನ್ವೇಷಿಯಾದ ಸಂಶೋಧಕನ ಅಭಿಪ್ರಾಯಗಳಿವು ಎನ್ನುವುದರಲ್ಲಿ ಸಂದೇಹವಿಲ್ಲ. ಸಾಹಿತ್ಯ ಚರಿತ್ರೆಗೆ ಪ್ರಪ್ರಥಮ ಪ್ರೇರಣೆಯನ್ನು ಅವರು ಶ್ರೀಯವರಲ್ಲಿ ಕಂಡುದು ಯೋಗ್ಯವೇ ಆಗಿದೆ. ಅವರ ಸಾಹಿತ್ಯ ಚರಿತ್ರೆ ಒಂದುಕಡೆ ಚರಿತ್ರೆಯೂ ಎನಿಸಿಕೊಳ್ಳದೆ, ಇನ್ನೊಂದು ಕಡೆ ವಿಮರ್ಶೆಯೂ ಆಗದೆ ಪರಿಣಮಿಸಿದೆ ಎಂಬ ಅವರ ಮಾತಿನಲ್ಲಿ ತಥ್ಯಾಂಶವಿಲ್ಲದೆಯಿಲ್ಲ. ಆದರೆ 'ಅದು ಅಪಕ್ವವಾದ ಬರವಣಿಗೆ' ಎಂಬುದನ್ನು ಒಪ್ಪಲಿಕ್ಕಾಗದು. ಈ ಮಾತು ಹೆಚ್ಚಾಯಿತು ಎಂದು ಅವರಿಗೇ ಹಿಂದಿನಿಂದ ಅನಿಸಬಹುದು. ಇಂದು ನಾವು 'ಸಾಹಿತ್ಯ ಚರಿತ್ರೆ' ಎಂದಾಗ ಯಾವ್ಯಾವ ಲಕ್ಷಣಗಳನ್ನು ಅದರಲ್ಲಿ ಕಾಣಲು ಬಯಸುತ್ತೇವೆಯೋ ಆ ಲಕ್ಷಣಗಳು ಶ್ರೀಯವರ ಸಾಹಿತ್ಯ ಚರಿತ್ರೆಯಲ್ಲಿ ಕಂಡು ಬರಲಿಕ್ಕಿಲ್ಲ. ಅದನ್ನು ಬರೆಯುವಾಗ ಅವರು ಇಟ್ಟುಕೊಂಡ ದೃಷ್ಟಿಯೇ ಬೇರೆ, ಉದ್ದೇಶವೇ ಬೇರೆ. ಇಂದು ಬೆಂಗಳೂರು ವಿಶ್ವವಿದ್ಯಾಲಯದ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಹಾಗೂ ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ಸಾಹಿತ್ಯ ಚರಿತ್ರೆ'ಯ ಸಂಪುಟಗಳನ್ನು ಕಂಡಾಗ ಈ ಅಂತರ ಇನ್ನೂ ಒಡೆದು ಕಾಣಬಹುದು. ಈ ದೃಷ್ಟಿಯಿಂದ ಶ್ರೀಯವರ ಸಾಹಿತ್ಯ ಚರಿತ್ರೆ 'ಅಸಮಗ್ರ' ಎನ್ನಬಹುದೇ ಹೊರತು 'ಅಪಕ್ವ' ಎನ್ನಲಿಕ್ಕಾಗದು. ಆದರೆ ಅವರೇ ಹೇಳಿದಂತೆ 'ಕಡೆಗೆ ಉಳಿಯುವದು ಅಭಿಮಾನವಲ್ಲ, ಸತ್ಯ' ಎಂಬುದು ಸಾಹಿತ್ಯ ವಿಮರ್ಶೆಗೆ ತಕ್ಕ ಸೂತ್ರವಾಗಿಯೇ ಪರಿಣಮಿಸಿದೆ.

ಹಾಗೆ ನೋಡಿದರೆ ನಮ್ಮ ಹಿಂದಿನ ಸಾಹಿತ್ಯ ರೂಪದಲ್ಲಿ ಬದಲಾವಣೆಯನ್ನು ಪಡೆಯುತ್ತ ಬಂತೇ ಹೊರತು ತಿರುಳಿನಲ್ಲಿ ಅಂಥ ಯಾವ ಹೊಸತನವನ್ನೂ ತೋರಿಸಿಲ್ಲ. ವಚನಕಾರರ ವೈಚಾರಿಕ ಕ್ರಾಂತಿಯಿಂದ ಕೆಲಮಟ್ಟಿಗೆ ಹೊಸ ತಿರುವನ್ನು ಪಡೆಯಿತು. ಆಮೇಲೆ ಒಮ್ಮೆಲೇ ಆಧುನಿಕತೆ, ಕಾಲಿಕ್ಕಿದಾಗಲೇ ಅದಕ್ಕೆ ಶ್ರೀಯವರೇ ಕಾರಣಕರ್ತ ರಾಗಿರುವುದನ್ನು ಇಲ್ಲಿ ನೆನೆಯಬೇಕು. 'ಆ ಪಂಪನೆಲ್ಲಿ, ಈ ಗಾಂಪನೆಲ್ಲಿ' ಎಂದು ತಮ್ಮ ವಿನಯವನ್ನು ಅವರು ಮೆರೆದಿದ್ದರೂ ಆಧುನಿಕ ಕನ್ನಡ ಸಾಹಿತ್ಯದ ಸಾರೋದಯವೇ ಅವರಾಗಿದ್ದರು ಎಂದರೆ ತಪ್ಪಾಗದು. ನಮ್ಮ ಸಾಹಿತ್ಯದ ಪರಂಪರೆ, ಹಾಗೂ ಅದರಲ್ಲಿ ಆಗಾಗ ನಡೆದು ಬಂದ ಪ್ರಯೋಗಗಳನ್ನು ಪರಿಶೀಲಿಸಿದಾಗ 'ಹೀರಿ ಹೊಮ್ಮುವದು, ಮರಳಿ ಮರಳಿ ಪುನರುಜ್ಜೀವನ' ಎಂದು ಶ್ರೀಯವರು ಕಂಡುಕೊಂಡ ಕನ್ನಡದ ಸಾರ ಮಾತ್ರ ಎಷ್ಟೊಂದು ಅರ್ಥಪೂರ್ಣ ಎನ್ನಿಸದಿರದು.

ಶ್ರೀಯವರ ಸ್ವತಂತ್ರ ಕವನ ಸಂಗ್ರಹ 'ಹೊಂಗನಸುಗಳು' ಬಗ್ಗೆ ಪ್ರೊ. ಬಾಗೋಜಿಯವರು ವಸ್ತುನಿಷ್ಠವಾಗಿ ಮಾತನಾಡಿದ್ದಾರೆ. ಮುಖ್ಯ ಕವನಗಳಾದ 'ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ', 'ಕನ್ನಡ ತಾಯನೋಟ' ಹಾಗೂ 'ಶುಕ್ರಗೀತೆ'ಗಳನ್ನು ಕುರಿತು ಮೆಚ್ಚುಕೆಯ ನುಡಿಗಳನ್ನು ಆಡಿದ್ದಾರೆ. ಇಂಗ್ಲೀಷಿನ 'ಓಡ'ನ್ನು

ಶ್ರೀಯವರು 'ಪ್ರಗಾಥ'ವಾಗಿಸಿದರು. 'ಉದ್ಗೀತೆ' ಎನ್ನಬಹುದಿತ್ತೇನೊ ಎಂದು ವಿ.ಸೀ. ಸೂಚಿಸಿದ್ದರೂ ವೈದಿಕ ಛಂದಸ್ಸಿನ ಅದರ ರೀತಿ ಬೇರೆ ಎಂದು ಅವರಿಗೇ ಅನಿಸಿದೆ. ಈ ಕವನಗಳ ಭಾವವೆಲ್ಲ ಗಂಭೀರವಾದದ್ದು. ಭಾವಗೀತೆಗಳನ್ನು ರಚಿಸಬಲ್ಲ ಅವರ ಕಾವ್ಯಶಕ್ತಿ ಬಹುಶಃ ಇಂಗ್ಲೀಷ್ ಗೀತಗಳ ಅನುವಾದಕ್ಕೇ ಸಂಪೂರ್ಣವಾಗಿ ವಿನಿಯೋಗವಾಗಿರುವಂತೆ ತೋರುತ್ತದೆ.

ಆಧುನಿಕ ಸಾಹಿತ್ಯದ ಹೊಸ ದಾರಿಯನ್ನು ತೆರೆದು ತೋರಿಸಿದ 'ಇಂಗ್ಲಿಷ್ ಗೀತಗಳು' ಬಗ್ಗೆ ಡಾ. ವೇಣುಗೋಪಾಲ ಅವರು ಪ್ರತಿಪಾದಿಸಿದ ವಿಷಯ ತುಂಬ ಮಹತ್ವದ್ದು. ಒಂದು ಹೊಸ ಮನೋಧರ್ಮ, ಛಂದಸ್ಸಿನ ಹೊಸ ಹೊಸ ಪ್ರಯೋಗಗಳು ಈ ಕವಿತೆಗಳ ಎದ್ದುಕಾಣುವ ಗುಣಗಳು. ಹೊಸ ಬರಹಗಾರರ ಮೇಲೆ ಇದರಿಂದಾದ ಪ್ರಭಾವ ಅಷ್ಟಿಷ್ಟಲ್ಲ. ೧೯೧೧ರಲ್ಲಿ ಶ್ರೀಯವರು ಇದೇ ವಿದ್ಯಾವರ್ಧಕ ಸಂಘದಲ್ಲಿ 'ಕನ್ನಡ ಮಾತು ತಲೆ ಎತ್ತುವ ಬಗೆ' ಎಂಬ ವಿಷಯ ಕುರಿತು ಭಾಷಣ ಮಾಡಿದ್ದರು. ನವೋದಯ ಕಾಲದ ಸಮಸ್ಯೆಗಳನ್ನು ಅವರು ಕಂಡುಕೊಂಡ ಬಗೆ, ಆ ಪರಿಸ್ಥಿತಿಯಲ್ಲಿ ತಾವು ಸಾಗಬೇಕಾದ ದಾರಿ, ಇಟ್ಟುಕೊಂಡ ಗುರಿ–ಇವೆಲ್ಲವೂ ಸ್ಪಷ್ಟವಾಗಿ ಆ ಭಾಷಣದಲ್ಲಿ ಪ್ರತಿಪಾದಿತವಾಗಿವೆ. ಈ ಹಿನ್ನೆಲೆಯಲ್ಲಿ ನೋಡಿದಾಗಲೂ 'ಇಂಗ್ಲಿಷ್ ಗೀತಗಳು' ಹೊಸ ಯುಗದ ಹೊಂಗಿರಣಗಳೊಂದಿಗೆ ಕಂಗೊಳಿಸಿ ತನ್ನ ಚಾರಿತ್ರಿಕ ಮಹತ್ವವನ್ನು ಎತ್ತಿತೋರಿಸುತ್ತಿದೆ.

"ಇಂಗ್ಲಿಷಿನ ಶ್ರೇಷ್ಠವಾದ ಕವನಗಳನ್ನು ಅನುವಾದಕ್ಕೆ ಆರಿಸಿಕೊಳ್ಳಬಹುದಿತ್ತು; ಎಲ್ಲ ಕವನಗಳನ್ನು ರೊಮ್ಯಾಂಟಿಕ್ ಕವಿಗಳಿಂದಲೇ ಆಯ್ದುಕೊಳ್ಳಲಾಗಿದೆ" – ಇತ್ಯಾದಿ ಅಭಿಪ್ರಾಯಗಳನ್ನು ಈಚೆಗೆ ಕೆಲವು ವಿಮರ್ಶಕರು ಆಡಿದ್ದುಂಟು. ಹೀಗೆ ಹೇಳುವವರು ಶ್ರೀಯವರು ಉದ್ದೇಶಪಟ್ಟಿರದಿದ್ದುದನ್ನು ಆರೋಪಿಸಿದಂತಾಗುತ್ತದೆ. ಬಹು ಶ್ರೇಷ್ಠವಾದ ಕವನಗಳನ್ನು ಆರಿಸಿಕೊಂಡಿರುವುದೆಂದಾಗಲಿ, ಇಂಗ್ಲೀಷಿನ ಶ್ರೇಷ್ಠ ಕವಿಗಳೆಲ್ಲ ಇಲ್ಲಿ ಸೇರಿದ್ದಾರೆಂದಾಗಲಿ ಅವರು ಹೇಳಿಲ್ಲ. ಅವರ ಮನಸ್ಸಿಗೆ ಯಾವ ಕವಿತೆಗಳು ಹಿಡಿಸಿದ್ದವೊ, ಪ್ರಿಯವಾಗಿದ್ದವೂ ಮತ್ತು ತಮ್ಮ ಶಕ್ತಿಗೆ ಎಟಕುವಂಥವನ್ನು ಆರಸಿಕೊಂಡಿರುವುದಾಗಿ ಅವರು ಹೇಳಿದ್ದಾರೆ. ಇವು ಯಾವುವೂ ಬರಿ ಅನುವಾದಗಳಲ್ಲ; ಭಾವಾನುವಾದಗಳು. ಇವು ಸ್ವತಂತ್ರ ಕವನಗಳೆನ್ನುವ ರೀತಿಯಲ್ಲಿಯೇ ಓದುಗರ ಮನಸ್ಸನ್ನು ಸೆಳೆದುಕೊಂಡು ಅವರಿಗೆ ವಿಶಿಷ್ಟವಾದ ಅನುಭವವನ್ನು ನೀಡಿದವು. ಪದಗಳ ಆಯ್ಕೆ ಮತ್ತು ಛಂದಸ್ಸಿನ ನಿರ್ವಹಣೆಯಲ್ಲಿ ಶ್ರೀಯವರು ಹೆಚ್ಚು ಸ್ವಾತಂತ್ರ್ಯವನ್ನು ವಹಿಸಿದ್ದರಿಂದ ಎಷ್ಟೋ ಕಡೆಗಳಲ್ಲಿ ಮೂಲಕ್ಕಿಂತ ಹೆಚ್ಚಿನ ಸೊಗಸು, ಹೊಸ ಹೊಳಪು ಕಂಡಬರುತ್ತಿದೆ. 'ನನ್ನ ಪ್ರೇಮದ ಹುಡುಗಿ', 'ಕರುಣಾಳು ಬಾ ಬೆಳಕೆ', 'ದುಃಖ ಸೇತು' – ಹೀಗೆ ಹಲವಾರು

ಉದಾಹರಣೆಗಳನ್ನು ಇಲ್ಲಿ ಕೊಡಬಹುದು. ಇನ್ನು ಕೆಲವೆಡೆಗಳಲ್ಲಿ ಮೂಲವನ್ನು ಬಿಟ್ಟು ಬೇರೆ ಕಡೆಗೇ ಸಾಗಿದ್ದನ್ನೂ ಕಾಣುತ್ತೇವೆ.

ಹೀಗೆ ಕನ್ನಡ ಸಾಹಿತ್ಯದಲ್ಲಿ ನವೋದಯ ಯುಗವನ್ನು ಪ್ರಾರಂಭಿಸಿದ 'ಇಂಗ್ಲಿಷ್ ಗೀತಗಳು' ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶ್ರೀಯವರ ಹೆಸರನ್ನು ಚಿರಸ್ಥಾಯಿಗೊಳಿಸಿದೆ. ಆದರೆ ಈ ಯುಗ ಶ್ರೀ ಎಲ್.ಎಸ್. ಶೇಷಗಿರಿರಾಯರು ಹೇಳುವಂತೆ "ಪ್ರತಿಭಟನೆಯಿಂದ ಹುಟ್ಟಲಿಲ್ಲ. ಹಿಂದಿನ ಕವಿಗಳ ವಿರುದ್ಧದ ದಂಗೆಯ ಬಾವುಟವನ್ನು ಏರಿಸಲಿಲ್ಲ; ಇದು ಏರಿಸಿದ್ದು ಕನ್ನಡ ಬಾವುಟವನ್ನು". ಹಿಂದಿನ ಕವಿಗಳಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಿ ಶ್ರೀಯವರು ತಮ್ಮ ಹೆಜ್ಜೆಯನ್ನು ಮುಂದಿಟ್ಟರು.

ಒಟ್ಟಿನಲ್ಲಿ ಡಾ. ಹಾ.ಮಾ. ನಾಯಕರ ಸಾರವತ್ತಾದ ಮಾತಿನಲ್ಲಿ ಹೇಳುವುದಾದರೆ "ಯುಗಪ್ರವರ್ತಕ ಎಂಬ ಹೆಸರಿಗೆ ಶ್ರೀಯವರು ಹೇಳಿ ಮಾಡಿಸಿಟ್ಟ ವ್ಯಕ್ತಿ ೨೦ನೇ ಶತಮಾನದ ಕನ್ನಡ ಸಾಹಿತ್ಯಕ್ಕೆ ಅವರು ಅಡಿಗಲ್ಲು, ಸ್ತಂಭ, ದೀಪ, ಕೈಮರ." ('ಶ್ರೀ ಸಾಹಿತ್ಯ'ದ ಮುನ್ನುಡಿಯಲ್ಲಿ).

ಈಗ್ಗೆ ಮುವತ್ತಾರು ವರ್ಷಗಳ ಹಿಂದೆ ಶ್ರೀಯವರನ್ನು ಕುರಿತು ಬರೆದ ನನ್ನ ಸುನೀತವೊಂದನ್ನು ಓದಿ ತಮ್ಮ ಅಪ್ಪಣೆ ಪಡೆಯುತ್ತೇನೆ:

ಕಂನಾಡ ಬಾನಿನಲಿ ಶ್ರೀಕಾರ ಬರೆದಂತೆ
'ಶ್ರೀ' ಬೆಳ್ಳಿಚಿಕ್ಕೆ ಲಕಲಕಿಸಿ ಬೆಳ್ಗಂಗೆಡೆಯ,
ನಾಡ ನಾಡಿಗಳಲ್ಲಿ ಚೈತನ್ಯ ಸೆಲೆಯೊಡೆಯೆ,
ಬಾವುಟವನೆತ್ತಿ ದಿಗ್ವಿಜಯಮಂ ಪಡೆದಂತೆ
ದಂಡಯಾತ್ರೆಯ ಗಯದ ವಾಗ್ವಿವದುನ್ನತಿಯು.
ತುಂಬು-ವಿದ್ಯೆಯ ತುಂಬು ಗಾಂಭೀರ್ಯದಲಿ ಮೆರೆದು
ಕನ್ನಡದ ಸಾರ ಸರ್ವಸ್ವ ಕಡಲಂ ಕಡೆದು
ನವನೀತಮಂ ತೆಗೆದ ಹಿರಿಗೌರವದ ಪರಿಯು
ಥೇಮ್ಸನದಿ, ಕಾವೇರಿ ಸಂಗಮಿಸಿ ಹರಿಯುವೊಡೆ-
ನಿಮ್ಮ ಗೀತಸ್ರೋತ, ಏನಿದಚ್ಚರಿಯೆಂದು
ಕಂದೆರೆದು ನೋಡುತಿರೆ ಆ ಪ್ರವಾಹದಿ ಮಿಂದು
'ಸಿರಿಗನ್ನಡಂ ಗೆಲ್ಗೆ' ಎಂದು ಮುನ್ನಡೆದ ಪಡೆ
'ಬೀಳ್ಕೊಡಿಂ' ಎನಲೇಕೆ? ಕರುಣಾಳು ಬಾ ಬೆಳಕ
ಸದ್ಗುರು ಪರಂಪರೆಯ ಪುಣ್ಯ ಶ್ರೀಕಂಠಿಕೆ.

❒

ಅನುಬಂಧ-೧

ಬಿ.ಎಂ. ಶ್ರೀಕಂಠಯ್ಯ ಜೀವನ ಪಥ

೩-೧-೧೮೮೪	–	ಜನನ, ಸಂಪಿಗೆ, ತುಮಕೂರು ಜಿಲ್ಲೆ. ತಾಯಿಯ ತೌರುಮನೆಯಲ್ಲಿ. ಸ್ವಂತಊರು: ಬೆಳ್ಳೂರು ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.
೧೯೦೨	–	ವರೆಗೆ ಬಾಲ್ಯ, ಪ್ರಾಥಮಿಕ ಶಿಕ್ಷಣ.
೧೯೦೩	–	ಎಫ್.ಎ., ಶಿಕ್ಷಣ ಶ್ರೀರಂಗಪಟ್ಟಣ, ಮೈಸೂರು.
೧೯೦೪	–	ಮದುವೆ, [ಹೆಂಡತಿ : ದೇವಮ್ಮ (ಗುಂಡಮ್ಮ) ಅವರೊಂದಿಗೆ
೧೯೦೬	–	ಬಿ.ಎ., ಬೆಂಗಳೂರು (೨೨ನೆಯ ವಯಸ್ಸು)
೧೯೦೭	–	ಬಿ.ಎಲ್, ಮದರಾಸು (೨೩ನೆಯ ವಯಸ್ಸು)
೧೯೦೯	–	ಎಂ.ಎ., (೨೫ನೆಯ ವಯಸ್ಸು)
೧೨-೧-೧೯೧೦	–	ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲೀಷ್ ಅಧ್ಯಾಪಕ.
೧೯೧೧	–	'ಕನ್ನಡ ಮಾತು ತಲೆಯೆತ್ತುವ ಬಗೆ' ಕುರಿತು ಧಾರವಾಡದಲ್ಲಿ ಭಾಷಣ.
೧೯೧೨	–	'Rhetoric Notes' ರಚನೆ.
೧೯೧೪	–	ಇಂಗ್ಲಿಷ್ ಅಸಿಸ್ಟೆಂಟ್ ಪ್ರೊಫೆಸರ್.
೧೯೧೫	–	ಪತ್ನಿ ದೇವಮ್ಮ ನಿಧನ. [ಮಕ್ಕಳು : ಶಾರದಮ್ಮ, ತಂಗಮ್ಮ, ತಮ್ಮಯ್ಯ.]
೧೯೧೯	–	ಇಂಗ್ಲಿಷ್ ಜೂನಿಯರ್ ಪ್ರೊಫೆಸರ್.
೧೯೨೧	–	'ಇಂಗ್ಲಿಷ್ ಗೀತಗಳು' ಪ್ರಕಟಣೆ.
೧೯೨೩	–	ಎರಡನೆ ದರ್ಜೆ ಇಂಗ್ಲಿಷ್ ಪ್ರೊಫೆಸರ್

೧೯೨೬ – 'ಗದಾಯುದ್ಧ ನಾಟಕಂ' ಪ್ರಕಟಣೆ

೧೯೨೬-೩೦ – ಮೈಸೂರು ವಿಶ್ವವಿದ್ಯಾನಿಲಯ ರಿಜಿಸ್ಟ್ರಾರ್

೧೯೨೭ – ಕನ್ನಡದ ಗೌರವಪ್ರಾಧ್ಯಾಪಕ

೧೯೨೮ – ಕಲಬುರ್ಗಿಯಲ್ಲಿ ನಡೆದ ೧೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ

೧೯೨೯ – 'ಅಶ್ವತ್ಥಾಮನ್' ನಾಟಕ ಪ್ರಕಣೆ

೧೯೩೦ – ಮೊದಲದರ್ಜೆ ಇಂಗ್ಲಿಷ್ ಪ್ರೊಫೆಸರ್, ಅಳಿಯ ಗುಂಡಪ್ಪ ನಿಧನ

೧೯೩೧ – ಮೈ.ವಿ.ವಿ. ಗ್ರಂಥಮಾಲೆ ಪ್ರಾರಂಭ, ಅದರ ಪ್ರಧಾನ ಸಂಪಾದಕ

೧೯೩೪ – ಪುತ್ತೂರು ದಸರಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೩೫ – 'ಪಾರಸಿಕರು' ಪ್ರಕಟಣೆ

೧೯೩೮ – 'ರಾಜ ಸೇವಾಸಕ್ತ' ಬಿರುದು, ಶ್ರೀಕೃಷ್ಣರಾಜ ಒಡೆಯರ್ ಅವರಿಂದ

೧೯೩೮-೪೩ – ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ .'ಕನ್ನಡ ನುಡಿ' ವಾರಪತ್ರಿಕೆ ಪ್ರಾರಂಭ, ಕ.ಸಾ.ಪ.ದಲ್ಲಿ ಮಹಿಳಾ ಶಾಖೆ ಪ್ರಾರಂಭ

೧೯೩೯ – ಮೈಸೂರು ಜೈನ ಅಸೋಸಿಯೇಷನ್‌ನಿಂದ ಸನ್ಮಾನ, ಕ.ಸಾ.ಪ. ದಲ್ಲಿ ೭೨೦೦ರೂ.ಗಳ ಸ್ವಂತ ಕೊಡುಗೆಯಿಂದ 'ಬಿ.ಎಂ.ಶ್ರೀ ಅಚ್ಚುಕೂಟ' ಪ್ರಾರಂಭ

೧೯೪೧ – 'ಸಂಭಾವನೆ' ಗೌರವ ಗ್ರಂಥ ಸಮರ್ಪಣೆ

೧೯೪೨ – ವಿ.ವಿ.ಯಿಂದ ನಿವೃತ್ತಿ, ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ

೧೯೪೩ – 'ಹೊಂಗನಸುಗಳು' ಪ್ರಕಟಣೆ

೧೯೪೪ – ಧಾರವಾಡ ಕೆ.ಇ.ಬೋರ್ಡ್ (ಜೆಎಸ್‌ಎಸ್ ಕಾಲೇಜು) ಕಲಾ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ.

೫-೧-೧೯೪೬ – ಧಾರವಾಡದಲ್ಲಿ ನಿಧನ. (೬೨ರ ವಯಸ್ಸಿನಲ್ಲಿ)

೧೯೪೮ – 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ', 'ಇಸ್ಲಾಂ ಸಂಸ್ಕೃತಿ', (ಮಹಮ್ಮದ್ ಅಬ್ಬಾಸ್ ಷೂಫಿ ಅವರ ಗ್ರಂಥದ ಅನುವಾದ,) ಪ್ರಕಟಣೆ

೬-೫-೧೯೭೯ – ಬೆಂಗಳೂರಿನಲ್ಲಿ 'ಬಿಎಂಶ್ರೀ ಪ್ರತಿಷ್ಠಾನ' ಸ್ಥಾಪನೆ, ಪ್ರೊ.ಎಂ.ವಿ. ಸೀತಾರಾಮಯ್ಯ ಅವರಿಂದ

೧೯೮೩ – 'ಶ್ರೀ ಸಾಹಿತ್ಯ' ಸಮಗ್ರ ಕೃತಿ ಸಂಪುಟ ಪ್ರಕಟಣೆ (ಮೈ.ವಿ.ವಿ)

೧೯೮೪ – ರಾಜ್ಯಾದ್ಯಂತ ಜನ್ಮಶತಮಾನೋತ್ಸವ ಆಚರಣೆ, 'ಶ್ರೀನಿಧಿ' 'ಶ್ರೀಉತ್ಸವ' ಸಂಸ್ಮರಣ ಸಂಪುಟಗಳ ಪ್ರಕಟಣೆ.

೧೯೯೫ – ಬೆಳ್ಳೂರಿನಲ್ಲಿ ಆಚಾರ್ಯ ಬಿ.ಎಂ.ಶ್ರೀ. ಶತಮಾನ ಭವನ ನಿರ್ಮಾಣ, ಬಿ.ಎಂ.ಶ್ರೀ. ಪ್ರತಿಷ್ಠಾನದಿಂದ

೨೦೦೨ – ಬೆಂಗಳೂರಿನಲ್ಲಿ ಬಿ.ಎಂ.ಶ್ರೀ. ಲೋಹದ ಪುತ್ಥಳಿ ಸ್ಥಾಪನೆ, ಸಾಹಿತಿ ಕಲಾವಿದರ ಬಳಗದಿಂದ (ಬಸವನಗುಡಿ ನ್ಯಾಷನಲ್ ಕಾಲೇಜ್ ವೃತ್ತದಲ್ಲಿ)

೨೦೦೩ – ಬೆಳ್ಳೂರಿನಲ್ಲಿ ಬಿ.ಎಂ.ಶ್ರೀ ಶಿಲಾಪುತ್ಥಳಿ ಸ್ಥಾಪನೆ, ಬಿ.ಎಂ.ಶ್ರೀ. ಪ್ರತಿಷ್ಠಾನದ ಸ್ಥಳೀಯ ಸಮಿತಿಯಿಂದ (ಬಸ್‌ನಿಲ್ದಾಣದಲ್ಲಿ)

೨೦೦೪ – ಬೆಂಗಳೂರಿನಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ರಜತೋತ್ಸವ ಮತ್ತು ಬಿ.ಎಂ.ಶ್ರೀ. ಲೋಹದ ಪುತ್ಥಳಿ ಅನಾವರಣ ಹಾಗೂ ಬಿ.ಎಂ.ಶ್ರೀ ಕಲಾಭವನ ಲೋಕಾರ್ಪಣೆ.

❐

ಅನುಬಂಧ–೨

ಬಿ.ಎಂ.ಶ್ರೀ ಅವರ ಕೃತಿಸೂಚಿ

೧. The Improvement of Kannada (1915,1987 -ಬಿ.ಎಂ.ಶ್ರೀ ಪ್ರತಿಷ್ಠಾನದಿಂದ

೨. A Hand Book of Rhetoric (1919)
(ಸು. ೧೯೧೨ರಲ್ಲಿ ಪ್ರಕಟವಾಗಿದ್ದುದರ ಪರಿಷ್ಕೃತ ಆವೃತ್ತಿ)

೩. **ಇಂಗ್ಲಿಷ್ ಗೀತಗಳು** (೧೯೨೧, ೧೯೨೬, ೧೯೫೩, ೧೯೫೬, ೧೯೬೬, ೧೯೭೮) ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು (೧೯೮೩)

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ೧೯೮೬–೧೯೯೦–೨೦೦೫ ಮೂಲ ಇಂಗ್ಲಿಷ್ ಕವನಗಳೊಂದಿಗೆ.

೪. **ಗದಾಯುದ್ಧ ನಾಟಕಂ** (೧೯೨೬, ೧೯೩೦, ೧೯೩೬, ೧೯೫೪, ೧೯೫೮, ೧೯೭೫) (೧೯೮೨) ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು

೫. **ಅಶ್ವತ್ಥಾಮನ್** (೧೯೨೯, ೧೯೪೧, ೧೯೫೩, ೧೯೬೮) ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು (೧೯೭೯)

೬. **ಪಾರಸಿಕರು** (೧೯೩೫, ೧೯೪೯) ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು (೧೯೭೬)

೭. **ಕನ್ನಡ ಛಂದಸ್ಸಿನ ಚರಿತ್ರೆ** (೧೯೩೬. ೧೯೫೫. ೧೯೬೫, ೧೯೭೧) (ಕನ್ನಡ ಕೈಪಿಡಿ ಭಾಗ ೧ರಲ್ಲಿದೆ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (೧೯೭೫)

೮. **ಕನ್ನಡ ಬಾವುಟ** (ಸಂ) (೧೬೩೮, ೧೯೪೦, ೧೯೪೮, ೧೯೫೪, ೧೯೫೪, ೧೯೫೮, ೧೯೬೮, ೧೯೭೨)ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು(೧೯೭೯).

೯. **ಹೊಂಗನಸುಗಳು** (೧೯೪೩, ೧೯೪೮)
ಶಾರದಾ ಮಂದಿರ, ರಾಮಯ್ಯರ್ ರಸ್ತೆ, ಮೈಸೂರು. (೧೯೭೬)

೧೦. **ಕನ್ನಡ ಸಾಹಿತ್ಯ ಚರಿತ್ರೆ** (೧೯೪೭, ೧೯೫೩, ೧೯೬೦, ೧೯೬೭)
(ಕನ್ನಡ ಕೈಪಿಡಿ ಭಾಗ-೨)
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (೧೯೭೦)

೧೧. **ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ** (೧೯೪೮, ೧೯೫೧, ೧೯೬೨)
ಕಾವ್ಯಾಲಯ, ಮೈಸೂರು. (೧೯೭೦)

೧೨. **ಕನ್ನಡ ಭಾಷೆಯ ವಿಚಾರಗಳು** (೧೯೧೩)
(ಕನ್ನಡ ಮಾತು ತಲೆಯೆತ್ತುವ ಬಗೆ ಮತ್ತು ಕನ್ನಡಿಗರಿಗೆ ಒಂದು ಕಟ್ಟು ಭಾಷಣಗಳ ಸಂಗ್ರಹ)

೧೩. **ಇಸ್ಲಾಂ ಸಂಸ್ಕೃತಿ** (ಅನು) (೧೯೪೮)
(ಮಹಮದ್ ಅಬ್ಬಾಸ ಷೂಫಿ ಅವರ ಗ್ರಂಥ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು(೧೯೭೦)

೧೪. ಶ್ರೀ ಸಾಹಿತ್ಯ (ಸಮಗ್ರ ಕೃತಿ ಸಂಪುಟ) (೧೯೮೩, ೧೯೯೦)
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೫. **ಶ್ರೀ ವಾಣಿ** (ಶ್ರೀ ಸೂಕ್ತಿ ಸಂಗ್ರಹ) (೧೯೮೪)
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೧೬. **ಶ್ರೀಯವರ ಆಯ್ದ ಕವನಗಳು** (೧೯೮೪)
(ಇಂಗ್ಲಿಷ್ ಗೀತಗಳು ಮತ್ತು ಹೊಂಗನಸುಗಳಿಂದ ಆಯ್ದು ಕವನಗಳ ಸಂಕಲನ)
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೧೭. **ಶ್ರೀಸಾಹಿತ್ಯಮಣಿಮಾಲೆ** (೨೦೦೮): ಬಿಡಿ ಬರಹಗಳು (ಶ್ರೀ ಸಾಹಿತ್ಯದಲ್ಲಿ ಸೇರ್ಪಡೆಯಾಗದಿರುವುವು) ಸಂ : ಟಿ.ವಿ. ವೆಂಕಟಾಚಲಶಾಸ್ತ್ರೀ ಪ್ರ: ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

❐

ಅನುಬಂಧ–೩

ಬಿ.ಎಂ.ಶ್ರೀ ಅವರನ್ನು ಕುರಿತ ಕೃತಿ ಸೂಚಿ

೧. **ಸಂಭಾವನೆ** (ಸಂಭಾವನಾ ಗ್ರಂಥ): (ಸಂ) ಮಾಸ್ತಿ ವೆಂಕಟೇಶ ಅಯ್ಯಂಗಾರ್ (೧೯೪೧, ೧೯೭೯) ಕನ್ನಡ ಸಾಹಿತ್ಯ ಪರಿಷತ್ತು..................

೨. **ಅಶ್ವತ್ಥಾಮನ್** : ವಿ.ಸೀತಾರಾಮಯ್ಯ (೧೯೪೬, ೧೯೬೮, ೧೯೭೩)

೩. **ಕಾಣಿಕೆ** : ವಯಸ್ಕರ ಶಿಕ್ಷಣ ಸಮಿತಿ, ಮೈಸೂರು (೧೯೪೬)

೪. **ಅಶ್ವತ್ಥಾಮನ್ – ಒಂದು ಹಕ್ಕಿ ನೋಟ** : ಎನ್. ಅನಂತರಂಗಾಚಾರ್ (೧೯೫೪, ೧೯೭೧).

೫. ಬಿ.ಎಂ. ಶ್ರೀಕಂಠಯ್ಯ : ಜಿ.ಶ್ರೀ. ಪಾಂಡುರಂಗರಾವ್ (೧೯೭೧) ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೬. ***B.M. Srikantaia*** *: S.V. Ranganna (1972)*
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ

೭. ***B.M Srikantayya*** *: A.N. Murthy Rao (1974)*

೮. ***B.M Srikantayya*** *:* (ಅನುವಾದ ; ಹಿಂದಿ) ***Giridhar Rathi***

೯. ***B.M Srikantayya*** *:* (ಅನುವಾದ : ಮಲೆಯಾಳು) **Pudupalli Raghavan**

೧೦. ***B.M Srikantayya*** *:* (ಅನುವಾದ : ತಮಿಳು) **R. Madhivana n**

೧೧. ***B.M Srikantayya*** *:* (ಅನುವಾದ : ತೆಲುಗು) **P. Dakshinamurthy**
೭–೧೧ರ ಪ್ರ: ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ,

೧೨. ಬಿ.ಎಂ.ಶ್ರೀಕಂಠಯ್ಯ : ಎ.ಎನ್. ಮೂರ್ತಿರಾವ್ (೧೯೭೫)
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩. ಬಿ.ಎಂ.ಶ್ರೀಕಂಠಯ್ಯ : ಎಸ್. ಚನ್ನಪ್ಪ (೧೯೭೫) ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು.

೧೪. ಬಿ.ಎಂ.ಶ್ರೀ ಅವರ ಬದುಕು-ಬರಹ ಸಂ; ಜಿ. ಶಂಕರಯ್ಯ (೧೯೭೯) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೫. ಬಿ.ಎಂ.ಶ್ರೀಕಂಠಯ್ಯ : ಪಿ.ಎಂ. ಇನಾಂದಾರ್ (೧೯೮೪) ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೬. **ಶ್ರೀ ಸ್ಮರಣೆ** : ಜೆ.ಎಸ್.ಎಸ್. ಕಾಲೇಜು, ಧಾರವಾಡ (೧೯೮೪)

೧೭. **ಶ್ರೀ ನಮನ**: ರಾ.ಯ. ಧಾರವಾಡಕರ, ಧಾರವಾಡ (೧೯೮೪)

೧೮. **ಶ್ರೀನಿಧಿ** : (ಸಂ) ಡಾ॥ ಜಿ.ಎಸ್. ಶಿವರುದ್ರಪ್ಪ, ಬಿ.ಎಂ.ಶ್ರೀ ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (೧೯೮೪)

೧೯. **ಶ್ರೀಗಂಧ** : (ಸಂ) ಜಿ.ಶ್ರೀನಿವಾಸರಾಜು, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (೧೯೮೪)

೨೦. **B.M.S.** : The Man And His Mission : (ಸಂ) ರಾಮಚಂದ್ರಶರ್ಮ ಬಿ.ಎಂ.ಶ್ರೀ ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (೧೯೮೪)

೨೧. **ನಾಡೋಜ ಬಿ.ಎಂ.ಶ್ರೀ.** : ಎಂ.ವಿ.ಸೀತಾರಾಮಯ್ಯ, ರಾಘವ ಪ್ರಕಾಶನ ಬೆಂಗಳೂರು (೧೯೮೪)

೨೨. **ಶ್ರೀ ಸಂಚಿಕೆ** : ಪ್ರಬುದ್ಧ ಕರ್ನಾಟಕ ವಿಶೇಷಾಂಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (೧೯೮೪)

೨೩. **ಶ್ರೀ ವಿಶೇಷಾಂಕ – ಲೋಚನ** : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (೧೯೮೪)

೨೪. **ಶ್ರೀ ಸಂಚಿಕೆ** : ಪುಸ್ತಕ ಪುರವಣಿ, ಮೈಸೂರು (೧೯೮೪)

೨೫. **ಮೂರು ದತ್ತಿ ಉಪನ್ಯಾಸಗಳು** : ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (೧೯೮೪)

೨೬. **ಆಚಾರ್ಯ ಬಿ.ಎಂ.ಶ್ರೀ.** : ಎಲ್.ಎಸ್. ಶೇಷಗಿರಿರಾವ್, ಬಿ.ಎಂ.ಶ್ರೀ ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (೧೯೮೪)

೨೭. **ಕನ್ನಡದ ಕಣ್ವ ಬಿ.ಎಂ.ಶ್ರೀ.** : ಹೋ. ಶ್ರೀನಿವಾಸಯ್ಯ, ಬಿ.ಎಂ.ಶ್ರೀ ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು (೧೯೮೪)

೨೮. **ಶ್ರೀಕಂಠಿಕೆ** (ಶ್ರೀ ಪದಕ ವಿಜೇತ ಕವನ ಸಂಕಲನ) : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು (೧೯೮೪)

೨೯. **ಶ್ರೀ ನೂರರ ನೆನಪು** : ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (೧೯೮೪)

೩೦. **ಶ್ರೀ ಪರಿಚಯ** : ರಿಸರ್ವ್ ಬ್ಯಾಂಕ್ ಕನ್ನಡ ಸಂಘ, ಬೆಂಗಳೂರು(೧೯೮೪)

೩೧. **ಇಂಗ್ಲಿಷ್ ಗೀತಗಳು** (ಮೂಲದೊಂದಿಗೆ) ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು ೧೯೮೪, ೨೦೦೬.

೩೨. **ಗದಾಯುದ್ಧ ನಾಟಕ** (ಸರಳ ಕನ್ನಡಾನುವಾದ) ಬಿ.ಎಂ.ಶ್ರೀ ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. (೧೯೮೫)

೩೩. **ಅಶ್ವತ್ಥಾಮನ್** (ಸರಳ ಕನ್ನಡಾನುವಾದ- ಡಾ. ಪಿ.ವಿ.ನಾರಾಯಣ) ಬಿ.ಎಂ.ಶ್ರೀ ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ೧೯೮೫.

೩೪. **ಪಾರಸಿಕರು** (ಸರಳ ಕನ್ನಡಾನುವಾದದೊಂದಿಗೆ) ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ೧೯೮೫.

೩೫. **ಶ್ರೀ ಉತ್ಸವ** : ಸಂ; ಶ್ರೀಮತಿ ವಿಶಾಲಾಕ್ಷಿ ವಿಶ್ವೇಶ್ವರಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

೩೬. **ಬಿ.ಎಂ.ಶ್ರೀಕಂಠಯ್ಯ** : ಡಾ॥ ರಾಮಚಂದ್ರಶರ್ಮ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

೩೭. **ಇಂಗ್ಲಿಷ್‌ಗೀತಗಳು-ಮುಖಾಮುಖಿ** : ಸಂ: ಡಾ॥ ರಹಮತ್ ತರೀಕೆರೆ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭.

೩೮. **ಬಿ.ಎಂ.ಶ್ರೀ ಮತ್ತು ಕನ್ನಡ ಸಂಸ್ಕೃತಿ** - ಡಾ. ನಾ. ಗೀತಾಚಾರ್ಯ, ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೨೦೦೯.

❒

ಲೇಖಕರು

೧. **ಪ್ರೊ. ಕೆ.ಎಸ್. ದೇಶಪಾಂಡೆ**
ರಾ.ಹ.ದೇ. ಸಾಂಸ್ಕೃತಿಕ ಕೇಂದ್ರ
'ರಾಮಚಂದ್ರ ಕೃಪಾ' ಮಾಳಮಡ್ಡಿ
ಧಾರವಾಡ - ೫೮೦ ೦೦೭

೨. **ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ**
ನಂ.೬೮/ಬಿ,
ಆಶ್ರಮದ ರಸ್ತೆ, ಜಯಲಕ್ಷ್ಮೀಪುರಂ,
ಮೈಸೂರು - ೫೭೦ ೦೧೨.

೩. **ಡಾ. ಬಿ.ಬಿ. ಹೆಂಡಿ**

೪. **ಡಾ. ಜಿ.ಎಸ್. ಕಾಪಸೆ**
ದುರ್ಗಾದೇವಿ ಕಾಲನಿ,
ಸಾರಸ್ವತಪುರ, ಧಾರವಾಡ

೫. **ಡಾ. ಸಿ.ವಿ. ವೇಣುಗೋಪಾಲ**
ರಾಣಿಚೆನ್ನಮ್ಮ ನಗರ,
ಧಾರವಾಡ

೬. **ಡಾ. ಎಂ.ಎಂ. ಕಲಬುರ್ಗಿ**
ನಿವೃತ್ತ ಕುಲಪತಿಗಳು,
ಕಲ್ಯಾಣನಗರ,
ಧಾರವಾಡ - ೫೮೦ ೦೦೭.

೭. **ಡಾ. ಚನ್ನವೀರ ಕಣವಿ**
'ಚೆಂಬೆಳಕು', ೯ನೇ ಕ್ರಾಸ್,
ಕಲ್ಯಾಣನಗರ,
ಧಾರವಾಡ - ೫೮೦ ೦೦೭.

೮. **ಡಾ. ನಾ. ಗೀತಾಚಾರ್ಯ**
ನಂ.೨೩/೨, ೫ನೆಯ ಅಡ್ಡರಸ್ತೆ,
ಕೆಂಪೇಗೌಡನಗರ,
ಬೆಂಗಳೂರು - ೫೬೦ ೦೧೯

ಗೌರವಪೂರ್ವಕ ಸ್ಮರಣೆಯೊಂದಿಗೆ

೯. **ಡಾ. ಡಿ.ಎಂ. ನಂಜುಂಡಪ್ಪ**

೧೦. **ಡಾ. ಆರ್.ಸಿ.ಹಿರೇಮಠ**

೧೧. **ಶ್ರೀ ಎನ್.ಕೆ. ಕುಲಕರ್ಣಿ**

೧೨. **ಪ್ರೊ. ಕೆ. ವೆಂಕಟರಾಮಪ್ಪ**

೧೩. **ಡಾ.ರಾ.ಯ. ಧಾರವಾಡ**

೧೪. **ಪ್ರೊ. ವಿ.ಎಂ. ಇನಾಂದಾರ್**

ಕನ್ನಡಿಗರ ಆತ್ಮಗೌರವ ಮತ್ತು ಕ್ರಿಯಾಶಕ್ತಿಗಳು ಸಾಕಾರವಾದಂತೆ ಮೂಡಿಬಂದ ಆಚಾರ್ಯ 'ಶ್ರೀ' ಅವರು ತಮ್ಮ ಬದುಕನ್ನು ಪ್ರತಿಭೆಯನ್ನು ಕನ್ನಡ ನಾಡುನುಡಿಗಳಿಗೆ ಧಾರೆ ಎರೆದರು. ಅವರು ಕಣ್ಮರೆಯಾಗಿ ಸುಮಾರು ನಲವತ್ತು ವರ್ಷಗಳ ನಂತರ, ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಕನ್ನಡ ನಾಡಿನ ಹನ್ನೆರಡು ಮಂದಿ ವಿದ್ವಾಂಸರು ಈ ವಿದ್ವತ್ಪ್ರಬಂಧಗಳಲ್ಲಿ ಪುನರ್ಮೌಲ್ಯೀಕರಣದ ಮಹತ್ವದ ಪ್ರಯತ್ನವನ್ನು ಮಾಡಿದ್ದಾರೆ. ಅರ್ಥವತ್ತಾದ ಅಧ್ಯಯನ ನಮನವನ್ನು ಸಲ್ಲಿಸಿದ್ದಾರೆ. ಶ್ರೀ ಅವರ ವ್ಯಕ್ತಿತ್ವ, ಸಾಹಿತ್ಯ ಸಾಧನೆ, ನಾಡಸೇವೆ ಎಲ್ಲವನ್ನು ಅತ್ಯಂತ ಗೌರವದಿಂದ ವಿಮರ್ಶಾತ್ಮಕ ದೃಷ್ಟಿಯಿಂದ ಇಲ್ಲಿ ಸ್ಮರಿಸಲಾಗಿದೆ.

■ ಪ್ರೊ. ಎಲ್.ಎಸ್. ಶೇಷಗಿರಿರಾವ್

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಎಂ.ವಿ.ಸೀ. ಸಂಶೋಧನಾ ಕೇಂದ್ರ
ಬಿ.ಎಂ.ಶ್ರೀ. ಕಲಾಭವನ
3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ
ಬೆಂಗಳೂರು - 560 019